ಶನಿವಾರ, ಮಾರ್ಚ್ 5, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭೂಮಿಕಾ**

ಆನ್‌ಲೈನ್ ತರಗತಿಯಿಂದ ಆಫ್‌ಲೈನ್ ತರಗತಿಗೆ ಒಗ್ಗಿಕೊಂಡಿರುವ ಮಕ್ಕಳು ಪರೀಕ್ಷೆಗೆ ಸಿದ್ಧರಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ತಾಯಿ ಹಾಗೂ ಮಕ್ಕಳ ಸಿದ್ಧತೆ ಹೇಗಿರಬೇಕು?

Jio

ಇದು ಭಾರತದ ಹಕ್ಕು

JioPhone Next

CREATED WITH Google

₹1,999* ನಲ್ಲಿ

ಮಾಸಿಕ ರಿಚಾರ್ಜ್ ಯೋಜನೆ ಸೇರಿದಂತೆ ಸುಲಭ ಇಎಮ್
ಆಯ್ ಜೊತೆಗೆ ₹6,499 ರ ಮುಂಗಡ ಬೆಲೆಯಲ್ಲಿ ಲಭ್ಯವಿದೆ.

ಅನುವಾದ ಮಾಡಿ
ಜೋರಾಗಿ ಓದಿ
ಕಡಿಮೆ ಬೆಳಕಿನ ಛಾಯಾಗ್ರಹಣ
ಧ್ವನಿ ಮೊದಲ ಸಾಮರ್ಥ್ಯಗಳು

*ನಿಯಮ ಮತ್ತು ಷರತ್ತುಗಳು ಅನ್ವಯ.

ಹೆಚ್ಚು ತಿಳಿಯಿರಿ : jio.com/next

ಇಲ್ಲಿ ಲಭ್ಯವಿದೆ: Reliance digital PERSONALISING TECHNOLOGY | reliancedigital.in | SHOP ANY ELECTRONICS AT MY JIO STORE Jio DIGITAL LIFE | JioMart digital | JioMart.com | POORVIKA

ಎಲ್ಲಾ ಪ್ರಮುಖ ಮೊಬೈಲ್ ಫೋನ್
ಸಣ್ಣ ಮಳಿಗೆಗಳಲ್ಲಿ ಸಹ ಲಭ್ಯವಿದೆ.

### ಭಾರತಕ್ಕೆ ತೆರಳಲು ಸೂಚಿಸಿದ ಪುಟಿನ್ ಸರ್ಕಾರ ● ಉಕ್ರೇನ್‌ನಿಂದ ಕರ್ನಾಟಕಕ್ಕೆ ಬಂದ 92 ವಿದ್ಯಾರ್ಥಿಗಳು

# ರಷ್ಯಾದಿಂದಲೂ ವಿದ್ಯಾರ್ಥಿಗಳು ವಾಪಸ್

ಪ್ರಜಾವಾಣಿ ವಾರ್ತೆ

**ದೇವನಹಳ್ಳಿ:** ಯುದ್ಧ ಪ್ರಾರಂಭವಾದ ಬಳಿಕ ಇಷ್ಟು ದಿನಗಳ ಕಾಲ ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯ ವಿದ್ಯಾರ್ಥಿಗಳು ತಾಯ್ನಾಡಿಗೆ ಮರಳಲು ಕಾತರಿಸುತ್ತಿದ್ದರು. ಈಗ ರಷ್ಯಾದಿಂದಲೂ ವಿದ್ಯಾರ್ಥಿಗಳು ಕರ್ನಾಟಕಕ್ಕೆ ಬರಲಾರಂಭಿಸಿದ್ದಾರೆ.

ಇತಿಶ್ರೀ

ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ರಷ್ಯಾದಲ್ಲಿ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದ ಬೆಂಗಳೂರಿನ ವಿದ್ಯಾರ್ಥಿನಿ ಇತಿಶ್ರೀ ಆಗಮಿಸಿದರು.

‘ಯುದ್ಧದಿಂದ ರಷ್ಯಾದಲ್ಲಿ ಯಾವುದೇ ತೊಂದರೆಯಿಲ್ಲ. ಆದರೆ, ಮುಂದಿನ ದಿನಗಳಲ್ಲಿ ವಿಮಾನ ಟಿಕೆಟ್ ರದ್ದಾಗುವ ಭೀತಿಯಿದೆ. ಪರಿಸ್ಥಿತಿ ಹದಗೆಡುವ ಮುನ್ನವೇ ತಾಯ್ನಾಡಿಗೆ ವಾಪಸ್ ಆಗುತ್ತಿದ್ದೇವೆ’ ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಕೋವಿಡ್ ಸಂಕಷ್ಟದ ಕಾಲದಲ್ಲಿ ವಂದೇ ಭಾರತ್ ಮಿಷನ್‌ನಡಿ ಭಾರತಕ್ಕೆ ಬಂದಿದ್ದೆವು. ಸೋಂಕು ಕ್ಷೀಣಿಸಿದಾಗ ಮತ್ತೆ ರಷ್ಯಾಕ್ಕೆ ತೆರಳಿದ್ದೆವು. ಸುರಕ್ಷತೆ ದೃಷ್ಟಿಯಿಂದ ಮುಂಜಾಗ್ರತೆಯಾಗಿ ವಿದ್ಯಾರ್ಥಿಗಳು ಭಾರತಕ್ಕೆ ಆಗಮಿಸುತ್ತಿದ್ದಾರೆ. ಉಕ್ರೇನ್ ಸರ್ಕಾರ ಅಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳ ರಕ್ಷಣೆಯ ಜವಾಬ್ದಾರಿ ಹೊತ್ತಿತ್ತು. ಆದರೆ, ಅದು ಸಾಕಾರಗೊಂಡಿಲ್ಲ. ಅಂತಹ ಪರಿಸ್ಥಿತಿ ರಷ್ಯಾದಲ್ಲಿ ನಿರ್ಮಾಣವಾಗುವ ಮುನ್ನ ಮನೆಗೆ ಬರುವುದು ಉತ್ತಮ’ ಎಂದು ಹೇಳಿದರು.

‘ನಮ್ಮ ಸುರಕ್ಷತೆಯನ್ನು ನಾವೇ ನೋಡಿಕೊಳ್ಳಬೇಕು. ವ್ಲಾಡಿಮೀರ್ ಪುಟಿನ್ ಸರ್ಕಾರ ಭಾರತೀಯರು ತವರಿಗೆ ತೆರಳಲು ಅವಕಾಶ ಕಲ್ಪಿಸಿದೆ. ಕಾಲೇಜಿನ ಆಡಳಿತ ಮಂಡಳಿಗೆ ಈ ಬಗ್ಗೆ ಮಾಹಿತಿ ನೀಡಿದ್ದೇವೆ. ವಿದ್ಯಾಭ್ಯಾಸದ ದೃಷ್ಟಿಯಿಂದ ಆನ್‌ಲೈನ್ ತರಗತಿಗಳು ನಡೆಯಲಿವೆ. ರಷ್ಯಾದ ಸುರಕ್ಷತೆಗೆ ಅಧ್ಯಕ್ಷ ಪುಟಿನ್ ನಿರ್ಧಾರದ ಬಗ್ಗೆ ಅಲ್ಲಿನ ಜನರಿಗೆ ನಂಬಿಕೆಯಿದೆ. ಆದರೂ, ಪ್ರತಿಪಕ್ಷಗಳು ಪ್ರತಿಭಟಿಸುತ್ತಿವೆ. ಮುಂದಿನ ದಿನಗಳ ಬಗ್ಗೆ ಅನಿಶ್ಚಿತತೆ ಇದೆ. ಹಾಗಾಗಿ, ತಾಯ್ನಾಡಿಗೆ ವಾಪಸ್ ಬಂದಿದ್ದೇನೆ ' ಎಂದು ವಿವರಿಸಿದರು.

**92 ವಿದ್ಯಾರ್ಥಿಗಳು ವಾಪಸ್:** ಉಕ್ರೇನ್ ನಲ್ಲಿ ಸಿಲುಕಿದ್ದ ಕರ್ನಾಟಕದ 92 ವಿದ್ಯಾರ್ಥಿಗಳು ಬೆಂಗಳೂರಿಗೆ ಸುರಕ್ಷಿತವಾಗಿ ಬಂದಿಳಿದಿದ್ದಾರೆ. ಇಲ್ಲಿಯವರೆಗೂ ‘ಆಪರೇಷನ್ ಗಂಗಾ’ ಕಾರ್ಯಾಚರಣೆ ಮೂಲಕ ಒಟ್ಟು 282 ಜನರು ರಾಜ್ಯಕ್ಕೆ ಮರಳಿದ್ದಾರೆ.

ಈ ಪೈಕಿ ಕೆಲವರು ನಾಗರಿಕ ವಿಮಾನದಲ್ಲಿ ಪ್ರಯಾಣ ಮಾಡಿದ್ದರೆ, ಹಲವು ವಿದ್ಯಾರ್ಥಿಗಳು ಭಾರತೀಯ ವಾಯುಸೇನೆಯ ವಿಮಾನಗಳಲ್ಲಿ ದೆಹಲಿ ತಲುಪಿ ಅಲ್ಲಿಂದ ಬೆಂಗಳೂರಿಗೆ ಬಂದಿದ್ದಾರೆ.

ಪೋಲೆಂಡ್‌ನ ದಿ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಜೈಕಾರ ಹಾಕಿದ ವಿದ್ಯಾರ್ಥಿಗಳು

## ಆಶ್ರಮದಲ್ಲಿ ವಿದ್ಯಾರ್ಥಿಗಳ ವಾಸ್ತವ್ಯ

**ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ):** ರಬಕವಿ- ಬನಹಟ್ಟಿ ತಾಲ್ಲೂಕಿನ ಮದಬಾವಿ ಗ್ರಾಮದ ಪ್ರಜ್ವಲ್‌ಕುಮಾರ ತಿಮ್ಮಾಪುರ ಹಾಗೂ ಅವರೊಂದಿಗಿರುವ ಕರ್ನಾಟಕದ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ರವಿಶಂಕರ ಗುರೂಜಿ ಅವರ ಪೋಲೆಂಡ್‌ನ ದಿ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಶುಕ್ರವಾರ ಉಳಿದುಕೊಂಡಿದ್ದಾರೆ.

ಮದಬಾವಿಯಲ್ಲಿರುವ ಅವರ ತಂದೆಗೆ ವ್ಯಾಟ್ಸ್‌ಆ್ಯಪ್ ಮೂಲಕ ಧ್ವನಿ ಸಂದೇಶ ಕಳುಹಿಸಿರುವ ಪ್ರಜ್ವಲ್‌ಕುಮಾರ, ‘ಎಲ್ರಿಗೂ ಉಪಹಾರ, ಊಟ ವ್ಯವಸ್ಥೆ ಆಗಿದೆ. ನಿದ್ರೆ ಚೆನ್ನಾಗಿ ಆಗಿದೆ. ವೈಫೈ ಸಂಪರ್ಕವೂ ಇದೆ. ಹುಡುಗರಿಗೆ, ಹುಡುಗಿಯರಿಗೆ ಪ್ರತ್ಯೇಕ ಕೊಠಡಿ ನೀಡಿದ್ದಾರೆ. ಇಲ್ಲಿನ ವ್ಯವಸ್ಥೆ ಚೆನ್ನಾಗಿದೆ’ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ಇದೇ ವೇಳೆ ವಿಡಿಯೊ ಒಂದನ್ನು ಕಳುಹಿಸಿರುವ ವಿದ್ಯಾರ್ಥಿಗಳು, ‘ಉಕ್ರೇನ್‌ನಿಂದ ಬಂದಿರುವ 20ರಿಂದ 30 ಕನ್ನಡಿಗರು ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಆಶ್ರಯ ಪಡೆದಿದ್ದೇವೆ. ಎಲ್ಲರೂ ಸುರಕ್ಷಿತವಾಗಿದ್ದೇವೆ’ ಎಂದು ಹೇಳಿ, ‘ಜೈ ಕರ್ನಾಟಕ, ಜೈ ಗುರೂಜಿ’ ಎಂದು ಜೈಕಾರ ಹಾಕಿದರು.

## ‘ರೈಲು ಹತ್ತಲು ಬಿಡದೆ ಹಿಂಸಿಸಿದರು’

**ಚೇಳೂರು (ಚಿಕ್ಕಬಳ್ಳಾಪುರ ಜಿಲ್ಲೆ):** ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿದ್ದು ಪಟ್ಟಣದ ವೈದ್ಯಕೀಯ ವಿದ್ಯಾರ್ಥಿನಿ ಐಮನ್ ಬೂಶ್ರಾ ಶುಕ್ರವಾರ ಸುರಕ್ಷಿತವಾಗಿ ಊರು ಸೇರಿದ್ದಾರೆ.

ಐಮನ್ ಬೂಶ್ರಾ

‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ನಾವು ಉಳಿದುಕೊಂಡಿದ್ದ ಕೀವ್ ನಗರ ಬಿಟ್ಟು ಲಿವಿವ್ ಸಿಟಿಗೆ ಬಂದು ಸೇರಿಕೊಳ್ಳುವಂತೆ ಭಾರತೀಯ ರಾಜತಾಂತ್ರಿಕ ಅಧಿಕಾರಿಗಳಿಂದ ಕರೆ ಬಂತು. ನಾವು ಇದ್ದ ಕಡೆಯಿಂದ 500 ಕಿ.ಮೀ. ದೂರದ ಲಿವಿವ್ ಸಿಟಿಗೆ ಉಕ್ರೇನ್ ಸರ್ಕಾರ ಉಚಿತವಾಗಿ ವಿಶೇಷ ರೈಲು ವ್ಯವಸ್ಥೆ ಮಾಡಿತ್ತು’ ಎಂದರು.

‘ರೈಲು ಹತ್ತಲು ಹೋದಾಗ ಉಕ್ರೇನ್ ಪ್ರಜೆಗಳು ನಮಗೆ ಅವಕಾಶ ನೀಡಲಿಲ್ಲ. ಭಾರತ ಉಕ್ರೇನ್ ಪರ ನಿಲ್ಲಲಿಲ್ಲ ಎಂಬುದು ಅವರ ಆಕ್ರೋಶಕ್ಕೆ ಕಾರಣವಾಗಿತ್ತು. ಸುಮಾರು 12 ಗಂಟೆ ರೈಲು ಹತ್ತಲು ಬಿಡದೆ ಹಿಂಸೆ ನೀಡಿದರು’ ಎಂದು ಕಹಿ ಅನುಭವವನ್ನು ಹಂಚಿಕೊಂಡರು.

‘ಅವರ ಕಣ್ತಪ್ಪಿಸಿ ರೈಲು ಹತ್ತಿ ಲಿವಿವ್ ಸಿಟಿ ಸೇರಿದವು. ಆದರೆ, ಅಲ್ಲಿನ ಹೋಟೆಲ್‌ನಲ್ಲಿ ವಾಸ್ತವ್ಯಕ್ಕೂ ನಮಗೆ ಅವಕಾಶ ಸಿಗಲಿಲ್ಲ. ಉಕ್ರೇನ್ ಪ್ರಜೆಗಳಿಗೆ ಮೊದಲ ಆದ್ಯತೆ ನೀಡಿದರು. ಹಾಗಾಗಿ, ಅಲ್ಲಿಂದ ನಾವು ಪೋಲೆಂಡ್ ಗಡಿಗೆ ಹೋಗಲು ತಲಾ ₹ 15 ಸಾವಿರ ನೀಡಿದೆವು. ಅಲ್ಲಿಗೆ ಹೋದ ಮೇಲೆ ಭಾರತೀಯರು ನಮ್ಮನ್ನು ಬರಮಾಡಿಕೊಂಡರು’ ಎಂದರು.

‘ಪೋಲೆಂಡ್‌ನಿಂದ ಭಾರತೀಯ ರಕ್ಷಣಾ ಪಡೆಯ ವಿಮಾನದಲ್ಲಿ ಗುರುವಾರ ಬೆಳಿಗ್ಗೆ 6.30ಕ್ಕೆ ದೆಹಲಿಯ ವಾಯುನೆಲೆಗೆ ಬಂದೆವು. ಅಲ್ಲಿಂದ ಕರ್ನಾಟಕ ಭವನದಲ್ಲಿ ವಿಶ್ರಾಂತಿ ಪಡೆದು ಬಳಿಕ ಬೆಂಗಳೂರಿಗೆ ಬಂದೆವು. ನಾವು ಸುರಕ್ಷಿತವಾಗಿ ತಾಯ್ನಾಡು ತಲುಪಲು ಶ್ರಮಿಸಿದ ಕೇಂದ್ರ ಸರ್ಕಾರಕ್ಕೆ ನಾನು ಆಭಾರಿಯಾಗಿದ್ದೇನೆ’ ಎಂದು ಹೇಳಿದರು.

## ಸುದ್ದಿ 2 ನಿಮಿಷ

## ಸಿದ್ಧೇಶ್ವರ ಶ್ರೀ ಗುಣಮುಖ, ನಾಳೆಯಿಂದ ಪ್ರವಚನ

**ಬೆಳಗಾವಿ:** ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬಸವನಾಳಗಡ್ಡೆಯ ಭಕ್ತರ ತೋಟದ ಮನೆಯಲ್ಲಿ ಈಚೆಗೆ ಆಕಸ್ಮಿಕವಾಗಿ ಬಿದ್ದು ಗಾಯಗೊಂಡಿದ್ದ ವಿಜಯಪುರ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ ಬಹುತೇಕ ಗುಣಮುಖರಾಗಿದ್ದಾರೆ.

ನೆರೆಯ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಕನ್ಹೇರಿಯಲ್ಲಿರುವ ಸಿದ್ಧಗಿರಿ ಮಠದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ಕೆಲವು ದಿನಗಳ ಹಿಂದೆ ಅಲ್ಲಿಯೇ ಅವರು ಒಂದು ತಾಸು ಪ್ರವಚನ ನೀಡಿದ್ದರು.

ಶುಕ್ರವಾರ ಅವರು ನಿಪ್ಪಾಣಿಯ ವಿರೂಪಾಕ್ಷಲಿಂಗ ಸಮಾಧಿ ಮಠಕ್ಕೆ ಭೇಟಿ ನೀಡಿದ್ದರು. ಅವರನ್ನು ನೋಡಲು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು. ಈ ಮಠದ ಆವರಣದಲ್ಲಿ ಶ್ರೀಗಳು ಮಾರ್ಚ್ 6ರಿಂದ ಬೆಳಿಗ್ಗೆ 6.30ರಿಂದ 7.30ರವರೆಗೆ ಪ್ರವಚನ ನೀಡಲಿದ್ದಾರೆ. ಗಾಯಗೊಂಡ ಘಟನೆಯ ಬಳಿಕ ಇದೇ ಮೊದಲ ಬಾರಿಗೆ ಬಹಿರಂಗ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳುತ್ತಿದ್ದಾರೆ.

ಚಿಕ್ಕೋಡಿ ತಾಲ್ಲೂಕಿನ ಕೇರೂರ ಗ್ರಾಮದಲ್ಲಿ ‘ಆಧ್ಯಾತ್ಮಿಕ ಪ್ರವಚನ ಸೇವಾ ಸಮಿತಿ’ಯಿಂದ ಆಯೋಜಿಸಿದ್ದ ಪ್ರವಚನ ಕಾರ್ಯಕ್ರಮಕ್ಕೆಂದು ಬಂದಿದ್ದ ಅವರು, ಜ.10ರಂದು ತಮಗೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದ್ದ ಭಕ್ತರೊಬ್ಬರ ತೋಟದ ಮನೆಯಲ್ಲಿ ಜಾರಿ ಬಿದ್ದಿದ್ದರು. ಬಲ ಭುಜ ಹಾಗೂ ತೊಡೆಯ ಮೇಲ್ಭಾಗದ ಮೂಳೆ ಮುರಿತವಾಗಿತ್ತು. ಇದರಿಂದ ಭಕ್ತರು ಆತಂಕಕ್ಕೆ ಒಳಗಾಗಿದ್ದರು.

ಗಾಯಗೊಂಡಾಗಿನಿಂದಲೂ ಶ್ರೀಗಳು ಕನ್ಹೇರಿ ಮಠದಲ್ಲೇ ಇದ್ದಾರೆ.

## ಚಿತ್ರೋತ್ಸವ: ಸಾವರ್ಕರ್, ಪಟೇಲ್ ಕಟೌಟ್‌ಗೆ ಆಕ್ಷೇಪ

**ಬೆಂಗಳೂರು:** 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಾವರ್ಕರ್ ಮತ್ತು ವಲ್ಲಭಭಾಯ್ ಪಟೇಲ್ ಅವರ ಕಟೌಟ್ ಪ್ರದರ್ಶನಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಸಾಂಸ್ಕೃತಿಕ ಕಾರ್ಯಕ್ರಮದ ಕೊನೆಯಲ್ಲಿ ಈ ಇಬ್ಬರ ಕಟೌಟ್ ಪ್ರದರ್ಶಿಸುವ ಔಚಿತ್ಯ ಏನು ಎಂದು ಹಿರಿಯ ಚಿತ್ರ ನಿರ್ದೇಶಕ ಬಿ.ಎಸ್.ಲಿಂಗದೇವರು ಪ್ರಶ್ನಿಸಿದ್ದಾರೆ.

ಚಿತ್ರೋತ್ಸವಕ್ಕೂ ಸಾವರ್ಕರ್, ಪಟೇಲ್ ಅವರಿಗೂ ಏನು ಸಂಬಂಧ? ಬೇಕಿದ್ದರೆ ದೇಶಭಕ್ತಿ ಸಂಬಂಧಿಸಿದ ಚಿತ್ರಗಳನ್ನು ಪ್ರದರ್ಶಿಸಬೇಕಿತ್ತು. ಅಂಥ ಸಾಕಷ್ಟು ಚಿತ್ರಗಳಿವೆ. ಇಂಥ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸುವುದಾದರೆ ಚಿತ್ರೋತ್ಸವದ ಉದ್ದೇಶವಾದರೂ ಏನು ಎಂದು ಅವರು ಕೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗೆ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಅವರು ಸಂಪರ್ಕಕ್ಕೆ ಸಿಗಲಿಲ್ಲ.

## ಉಗ್ರರ ಬಂಧನ

**ಶ್ರೀನಗರ:** ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಖುದ್‌ಪೋರಾದಲ್ಲಿ ಎಲ್‌ಇಟಿ ಸಂಘಟನೆಯ ಮೂವರನ್ನು ಜಮ್ಮು-ಕಾಶ್ಮೀರ ಪೊಲೀಸರು ಬಂಧಿಸಿದ್ದಾರೆ.

### ಚಿನಕುರಳಿ

ಪ್ರಕಾಶ್ ಶೆಟ್ಟಿ


ಒಮ್ಮೆ ಉಕ್ರೇನ್‌ನಲ್ಲಿ ಶಾಂತಿ ನೆಲಸಿದ್ರೆ ಸಾಕಾಗಿದೆಪ್ಪಾ!.. ಈ ಚಾನೆಲ್‌ಗಳಿಂದ ತಲೆ ಚಿಟ್ಟು ಹಿಡಿದುಬಿಟ್ಟಿದೆ...

## ‘ಮಂತ್ರಾಲಯ ಸದಾ ಜಾಗೃತ ತಾಣ’

ಪ್ರಜಾವಾಣಿ ವಾರ್ತೆ

**ರಾಯಚೂರು:** ಮಂತ್ರಾಲಯ ಶ್ರೀರಾಘವೇಂದ್ರ ಸ್ವಾಮಿಗಳ ಮಠವು ಸದಾ ಜಾಗೃತ ತಾಣವಾಗಿದೆ ಎಂದು ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ದೇವಸ್ಥಾನದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಮಂತ್ರಾಲಯದಲ್ಲಿ ಶುಕ್ರವಾರದಿಂದ ಆರಂಭವಾದ ಗುರು ವೈಭವೋತ್ಸವದ ರಾಯರ ಪಟ್ಟಾಭಿಷೇಕ ಮಹೋತ್ಸವದಲ್ಲಿ ಅವರು ಮಾತನಾಡಿದರು.

‘ದೇವರ ಕಣ್ಣು ತಪ್ಪಿಸಿ ಮನುಷ್ಯ ಯಾವುದೇ ಕಾರ್ಯ ಮಾಡುವುದಕ್ಕೆ ಆಗುವುದಿಲ್ಲ. ಕಣ್ಣಿಗೆ ಕಾಣದ ಶಕ್ತಿ ಸದಾ ಜಾಗೃತವಾಗಿಯೇ ಇರುತ್ತದೆ. ಅದನ್ನು ದೇವರೆಂದು ಪೂಜಿಸುತ್ತಾರೆ’ ಎಂದರು.

ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ಸುದ್ದಿಗಾರರೊಂದಿಗೆ ಮಾತನಾಡಿ, ‘ವೈದ್ಯಕೀಯ ಶಿಕ್ಷಣದಲ್ಲಿ ಸೌಲಭ್ಯಗಳನ್ನು ಮತ್ತಷ್ಟು ವಿಸ್ತರಣೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಲಾಗುವುದು’ ಎಂದು ಹೇಳಿದರು.

ಸಂಜೆ ನಡೆದ ಸಮಾರಂಭದಲ್ಲಿ ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಮಂತ್ರಾಲಯ ಶ್ರೀಸುಬುಧೇಂದ್ರ ತೀರ್ಥರು 'ಗುರು ವೈಭವೋತ್ಸವ ಪ್ರಶಸ್ತಿ' ನೀಡಿ ಗೌರವಿಸಿದರು.

ಮಾರ್ಚ್ 9ರವರೆಗೂ ಕಾರ್ಯಕ್ರಮ ನಡೆಯಲಿವೆ.

ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ಧರ್ಮಸ್ಥಳ ಶ್ರೀಮಂಜುನಾಥೇಶ್ವರ ದೇವಸ್ಥಾನದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ಶುಕ್ರವಾರ 'ಗುರು ವೈಭವೋತ್ಸವ–2022' ಪ್ರಶಸ್ತಿ ನೀಡಿ ಗೌರವಿಸಿದರು

## ‘ಮೂರು ದಿನಾ ಆತ್ರಿ ಮಗಾ ಊಟ ಮಾಡಿಲ್ಲ...’

**ರಬಕವಿ ಬನಹಟ್ಟಿ (ಬಾಗಲಕೋಟೆ ಜಿಲ್ಲೆ):** ‘ಮೂರು ದಿವಸ ಆತ್ರಿ ಮಗ ಊಟ ಮಾಡಿಲ್ಲ. ಇಟ್ಟುಕೊಂಡಿದ್ದ ಬಿಸ್ಕತ್ತು, ಚಾಕೊಲೆಟ್ ಕೂಡ ಮುಗದಾವಂತ್ರಿ, ಯಾವುದೊ ತರಕಾರಿ ಸೂಪ್ ಕುಡಿದಾನಂತ್ರಿ...ಅಷ್ಟರ ಮ್ಯಾಲ ನಮ್ಮ ಮಗಾ ಅದಾನ್ರಿ’ ಎಂದು ಉಕ್ರೇನ್ ನಲ್ಲಿರುವ ಕಿರಣ ಸವದಿ ಅವರ ತಾಯಿ ಮಹಾದೇವಿ ಅಳಲು ತೋಡಿಕೊಂಡರು.

ಶುಕ್ರವಾರ ನಾವಲಗಿ ಗ್ರಾಮದ ಕಿರಣ ಸವದಿಯವರ ಮನೆಗೆ ಭೇಟಿ ನೀಡಿದಾಗ ಅವರು 'ಪ್ರಜಾವಾಣಿ' ಪ್ರತಿನಿಧಿ ಜೊತೆಗೆ ಮಾತನಾಡಿದರು.

‘ಯುದ್ಧ ಪ್ರಾರಂಭವಾದಾಗಿನಿಂದ ಮಗನದ್ದೇ ಚಿಂತೆಯಾಗೈತ್ರೀ, ಪ್ರತಿ ಗಂಟೆಗೊಮ್ಮೆ ಫೋನ್ ಮಾಡಿ ಮಾತಾಡ್ತಾನ್ರೀ. ಫೋನ್‌ನಲ್ಲಿ ಅವನ ಮುಖಾ ನೋಡಿದ ಕೂಡಲೇ ಕಣ್ಣಾಗ ನೀರು ತುಂಬ್ತಾವ್ರಿ’ ಎಂದರು. ತಂದೆ ಲಕ್ಷ್ಮಣ ಮಗನ ಜೊತೆ ಮಾತನಾಡಿ, 'ದೇವರ ಧ್ಯಾನ ಮಾಡು, ಅವನ ಮೇಲೆ ಭಾರ ಹಾಕು. ಅವನೆ ಕಾಪಾಡ್ತಾನೆ ಧೈರ್ಯದಿಂದ ಇರು' ಎಂದು ಮಗನಿಗೆ ತಿಳಿಸಿದರು.

‘ಮಧ್ಯರಾತ್ರಿಯವರೆಗೂ ಟಿ.ವಿ ಮೂಲಕ ಯುದ್ಧದ ಪರಿಸ್ಥಿತಿಯನ್ನು ಮನೆಯವರೆಲ್ಲ ಕುಳಿತು ನೋಡ್ತೀವಿ, ಮನೆಯ ಜನರಿಗೆ ಊಟ ರುಚಿ ಹತ್ತುತ್ತಿಲ್ಲ’ ಎಂದು ಅವರು ಬೇಸರಿಸಿದರು.

ಲಕ್ಷ್ಮಣ ಸವದಿ ಹಾಗೂ ಮಹಾದೇವಿ, ಉಕ್ರೇನ್ ನಲ್ಲಿ ಸಿಲುಕಿರುವ ಮಗ ಕಿರಣ ಸವದಿ ಅವರೊಂದಿಗೆ ವಿಡಿಯೊ ಕರೆ ಮಾಡಿ ಮಾತನಾಡಿದರು

## ರಾಜ್ಯಮಟ್ಟದ ಭಜನಾ ಸ್ಪರ್ಧೆ ಏ.3ರಿಂದ

**ಹುಬ್ಬಳ್ಳಿ:** ಇಲ್ಲಿನ ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಸಮಿತಿಯು ಏ.3ರಿಂದ 8ರವರೆಗೆ ಏಳನೇ ವರ್ಷದ ರಾಜ್ಯಮಟ್ಟದ ಭಜನಾ ಸ್ಪರ್ಧೆ ಆಯೋಜಿಸಿದೆ.

ಪ್ರತಿ ತಂಡ ತಲಾ ಮೂರು ಪದ್ಯಗಳನ್ನು ಹಾಡಬೇಕು. ಇದರಲ್ಲಿ ಎರಡು ಪದ್ಯಗಳು ಕೈವಲ್ಯ ಸಾಹಿತ್ಯದ ಮೇಲೆ ಇರಬೇಕು. ಮೊದಲ ಸ್ಥಾನ ಪಡೆದವರಿಗೆ ₹95 ಸಾವಿರ, ದ್ವಿತೀಯ (₹75 ಸಾವಿರ) ಮತ್ತು ತೃತೀಯ (₹65 ಸಾವಿರ) ಬಹುಮಾನ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಆಸಕ್ತರು 9620693060 ಸಂಪರ್ಕಿಸಿ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಜಲ ಜೀವನ್ ಮಿಷನ್ ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾ) ಕುರಿತಂತೆ ದಕ್ಷಿಣ ಭಾರತ ರಾಜ್ಯಗಳ ಪ್ರಾದೇಶಿಕ ಸಮ್ಮೇಳನ

**ಭಾಗವಹಿಸುವ ರಾಜ್ಯಗಳು:** ಆಂಧ್ರ ಪ್ರದೇಶ, ಕರ್ನಾಟಕ, ಕೇರಳ, ಮಧ್ಯಪ್ರದೇಶ ತಮಿಳುನಾಡು, ತೆಲಂಗಾಣ, ಲಕ್ಷದ್ವೀಪ ಮತ್ತು ಪುದುಚೇರಿ ರಾಜ್ಯ / ಕೇಂದ್ರಾಡಳಿತ ಪ್ರದೇಶ

ದಿನಾಂಕ: 5ನೇ ಮಾರ್ಚ್ 2022 | ಸ್ಥಳ : ವಿಧಾನ ಸೌಧ ಸಮ್ಮೇಳನ ಸಭಾಂಗಣ

: ಉದ್ಘಾಟನೆ :
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ

: ಅಧ್ಯಕ್ಷತೆ :
ಶ್ರೀ ಗಜೇಂದ್ರ ಸಿಂಗ್ ಶೇಖಾವತ್
ಮಾನ್ಯ ಸಚಿವರು, ಜಲಶಕ್ತಿ ಮಂತ್ರಾಲಯ
ಭಾರತ ಸರ್ಕಾರ

: ಮುಖ್ಯ ಅತಿಥಿಗಳು :
ಶ್ರೀ ಕೆ.ಎಸ್. ಈಶ್ವರಪ್ಪ
ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪರವರು ಇಲಾಖಾ ಕಾರ್ಯಕ್ರಮದಲ್ಲಿ ದೀಪ ಬೆಳಗುತ್ತಿರುವುದು.

ಸ್ವಚ್ಛ ಭಾರತ್ ಮಿಷನ್ (ಗ್ರಾ)
- ಒಟ್ಟು 74.00 ಲಕ್ಷಕ್ಕೂ ಅಧಿಕ ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣ
- 1600ಕ್ಕೂ ಅಧಿಕ ಸಮುದಾಯ ಶೌಚಾಲಯಗಳ ನಿರ್ಮಾಣ
- ಪ್ರಸ್ತುತ 3562 ಗ್ರಾಮ ಪಂಚಾಯಿತಿಗಳಲ್ಲಿ "ಸ್ವಚ್ಛ ಸಂಕೀರ್ಣ" ಘಟಕಗಳಲ್ಲಿ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಳ ಕಾರ್ಯಾಚರಣೆ ಆರಂಭ.
- ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ "ಗ್ರಾಮೀಣ ನೈರ್ಮಲ್ಯ ನೀತಿ, ಕಾರ್ಯತಂತ್ರ ಮತ್ತು ಉಪವಿಧಿಗಳ 2019" ರ ಅನುಷ್ಠಾನ

ಜಲಜೀವನ್ ಮಿಷನ್ (ಮನೆ ಮನೆಗೆ ಗಂಗೆ)
- ಇಲ್ಲಿಯವರೆಗೆ 46.00 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಕೊಳಾಯಿ ನೀರಿನ ಸಂಪರ್ಕ ವ್ಯವಸ್ಥೆ
- 259 ಗ್ರಾಮ ಪಂಚಾಯಿತಿಗಳು ಹಾಗೂ 2970 ಗ್ರಾಮಗಳಲ್ಲಿ ಶೇ.100% ಮನೆಗಳಿಗೆ ಕೊಳಾಯಿ ನೀರಿನ ಸೌಲಭ್ಯ
- 95000 ಶಾಲೆ, ಅಂಗನವಾಡಿ ಕೇಂದ್ರಗಳಿಗೆ ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯದ ವ್ಯವಸ್ಥೆ
- ನೀರಿನ ಗುಣಮಟ್ಟ ಪರೀಕ್ಷೆಗಾಗಿ 77 ಪ್ರಯೋಗಾಲಯಗಳ ಸ್ಥಾಪನೆ

ಮಾಸ್ಕ್ ಧರಿಸಿ
ವ್ಯಕ್ತಿಗತ ಅಂತರ ಕಾಪಾಡಿ
ಆರೋಗ್ಯದಿಂದಿರಿ

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಪರಿಹಾರ parihara

ನೈರ್ಮಲ್ಯ ಮತ್ತು ನೀರಿನ ಸಮಸ್ಯೆಗಳ ಕುರಿತಾದ ಕುಂದು ಕೊರತೆಗಳಿಗೆ ಪರಿಹಾರ ಸಹಾಯವಾಣಿಯನ್ನು ಸಂಪರ್ಕಿಸಿ
94809 85555
parihara.rdwsd@gmail.com
GovtOfKarnatakaRdpr
gokRDPR
www.swachhamevajayate.org

ಶನಿವಾರ, ಮಾರ್ಚ್ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 64 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಎಸ್‌ಪಿಗೆ ಬಂಗಾಳಿ ಬೆಂಬಲದ ಹಂಬಲ 5
ಸ್ಪಿನ್ ಮಾಂತ್ರಿಕ ಶೇನ್ ವಾರ್ನ್ ನಿರ್ಗಮನ 15

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 54,334 | 16,245 | ₹53,350 (ಬೆಂಗಳೂರು) | ₹69,800 (ಬೆಂಗಳೂರು) | 76.17 |



# ಸಕಲರಿಗೂ ಕೊಡುಗೆಯ ಗುರಿ
# ಚುನಾವಣಾ ತಯಾರಿ

## ಪ್ರಮುಖ ಘೋಷಣೆಗಳು

- ಕರಾವಳಿ, ಮಲೆನಾಡಿನಲ್ಲಿ ನಾರಾಯಣಗುರುಗಳ ವಸತಿ ಶಾಲೆ
- ಕೃಷಿ ಯಂತ್ರೋಪಕರಣ ಉತ್ತೇಜನಕ್ಕೆ 'ರೈತ ಶಕ್ತಿ' ಯೋಜನೆ
- ಹಾಲು ಉತ್ಪಾದಕರಿಗಾಗಿ 'ಕ್ಷೀರ ಸಮೃದ್ಧಿ ಸಹಕಾರಿ ಬ್ಯಾಂಕ್'
- ಮೇಕೆದಾಟು ಯೋಜನೆಗೆ ₹1 ಸಾವಿರ ಕೋಟಿ ಅನುದಾನ
- ರಾಜ್ಯದ ಪ್ರಮುಖ ನಗರಗಳಲ್ಲಿ 438 'ನಮ್ಮ ಕ್ಲಿನಿಕ್'
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಕೋಚಿಂಗ್‌ಗಾಗಿ 'ಮುಖ್ಯಮಂತ್ರಿ ವಿದ್ಯಾರ್ಥಿ ಮಾರ್ಗದರ್ಶಿನಿ'
- ಅಸ್ಪೃಶ್ಯತೆ ನಿವಾರಣೆಗೆ 'ವಿನಯ ಸಾಮರಸ್ಯ ಯೋಜನೆ' ಜಾರಿ
- ಹಿಂದುಳಿದ ವರ್ಗದವರ ಕೌಶಲ ತರಬೇತಿಗೆ 'ಅಮೃತ ಮುನ್ನಡೆ'
- ಜೀವನೋಪಾಯ ವರ್ಷ' ಅಭಿಯಾನಕ್ಕೆ ₹1100 ಕೋಟಿ
- ಎಸ್‌ಸಿ, ಎಸ್ಟಿ ವಿದ್ಯಾರ್ಥಿಗಳಿಗಾಗಿ 100 ಅಂಬೇಡ್ಕರ್ ವಸತಿ ನಿಲಯ
- ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳ ಸರ್ವಾಂಗೀಣ ಅಭಿವೃದ್ಧಿಗೆ ₹3,000 ಕೋಟಿ ಮೀಸಲು

### ಉದ್ದಿಮೆಗಳ ಖಾಸಗೀಕರಣ

ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುವ ಪ್ರಸ್ತಾಪವನ್ನು ಬೊಮ್ಮಾಯಿ ಬಜೆಟ್‌ನಲ್ಲಿ ಮಾಡಿದ್ದಾರೆ.

ಸರ್ಕಾರಿ ಉದ್ದಿಮೆಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಿ, ಲಾಭದಾಯಕತೆ ಹಾಗೂ ಕಾರ್ಯದಕ್ಷತೆ ಹೆಚ್ಚಿಸುವ ಭರವಸೆ ನೀಡಿರುವ ಅವರು, 'ಎರಡು ಸರ್ಕಾರಿ ಉದ್ದಿಮೆಗಳಲ್ಲಿ ಬಂಡವಾಳ ಹಿಂತೆಗೆಯುವಿಕೆ ಪ್ರಕ್ರಿಯೆ ಪ್ರಾರಂಭಿಸುವ' ಎಂದು ಘೋಷಣೆ ಮಾಡಿದ್ದಾರೆ.

### ತೆರಿಗೆ ಬರೆ ಹಾಕದ ನಡೆ

ಕೋವಿಡ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಜನಸಮುದಾಯಕ್ಕೆ ಬಜೆಟ್‌ನಲ್ಲಿ ಯಾವುದೇ ತೆರಿಗೆಯ ಹೊರೆ ಹಾಕಿಲ್ಲ.

ರಾಜ್ಯದ ಆರ್ಥಿಕತೆ ಚೇತರಿಕೆಯ ಹಾದಿಯಲ್ಲಿದ್ದು, ಇಂತಹ ಸನ್ನಿವೇಶದಲ್ಲಿ ಜನಸಾಮಾನ್ಯರ ಮೇಲೆ ಇನ್ನಷ್ಟು ತೆರಿಗೆ ಹಾಕುವುದಿಲ್ಲ ಎಂದು ಹೇಳಿರುವ ಮುಖ್ಯಮಂತ್ರಿ, ತೆರಿಗೆ ಸಂಗ್ರಹ ಮಾಡುವ ಎಲ್ಲ ಇಲಾಖೆಗಳಲ್ಲಿ ಹೆಚ್ಚಿನ ದಕ್ಷತೆ ತರುವ ಮೂಲಕ ಸಂಪನ್ಮೂಲ ಸಂಗ್ರಹಣಾ ಗುರಿ ಸಾಧಿಸಲಾಗುವುದು ಎಂದಿದ್ದಾರೆ.

- ಮಂಜುನಾಥ ಹೆಬ್ಬಾರ್

**ಬೆಂಗಳೂರು:** ಸಂಪನ್ಮೂಲ ಸಂಗ್ರಹದ ಪರಿಮಿತಿಯೊಳಗೆ ತಮ್ಮ ಮೊದಲ ಬಜೆಟ್‌ನಲ್ಲಿ 'ನವ ಕರ್ನಾಟಕ' ನಿರ್ಮಾಣದ ಕನಸು ಬಿತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪರಿಶಿಷ್ಟರು, ಹಿಂದುಳಿದವರು, ರೈತರು, ಮಹಿಳೆಯರೂ ಸೇರಿಕೊಂಡಂತೆ ಅಲಕ್ಷಿತ ಸಮುದಾಯದವರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳುವ ಕಾರ್ಯಕ್ರಮಗಳಿಗೆ ಮುನ್ನುಡಿ ಬರೆದಿದ್ದಾರೆ.

ಎಲ್ಲ ಸಮುದಾಯಗಳಿಗೆ ಭರಪೂರ ಕೊಡುಗೆಯ ಗರಿ–ಗುರಿಯನ್ನು ಘೋಷಿಸಿರುವ ಅವರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ರಾಜಕೀಯ ನೆಲೆ ಭದ್ರಗೊಳಿಸುವ ಕಣವನ್ನು ಹದಗೊಳಿಸುವ ಪ್ರಯತ್ನಕ್ಕೂ ಕೈ ಹಾಕಿದ್ದಾರೆ.

ಕವಿ ಎಂ.ಗೋಪಾಲಕೃಷ್ಣ ಅಡಿಗರ 'ಇರುವೆಲ್ಲವನು ಎಲ್ಲ ಜನಕ್ಕೆ ತೆರವಾಗಿಸುವ ಸಮಬಗೆಯ ಸಮಸುಖದ ಸಮದುಃಖದ ಸಾಮರಸ್ಯದ ಸಾಮಗಾನಲಹರಿಯ ಮೇಲೆ ತೇಲಿ ಬರಲಿದೆ ನೋಡು, ನಮ್ಮ ನಾಡು' ಎಂಬ ಸಾಲನ್ನು ಭಾಷಣದ ಆರಂಭದಲ್ಲೇ ಉಲ್ಲೇಖಿಸಿದ ಬೊಮ್ಮಾಯಿ, ಜನಕೇಂದ್ರಿತ ಅಭಿವೃದ್ಧಿಯ ಆಶಯಗಳು ಬಜೆಟ್‌ನಲ್ಲಿ ಪ್ರತಿಬಿಂಬವಾಗುವಂತೆ ನೋಡಿಕೊಳ್ಳಲು ಸಾಕಷ್ಟು ಕಸರತ್ತು ನಡೆಸಿದ್ದಾರೆ. 'ದುರ್ಬಲ ವರ್ಗದವರನ್ನು ಪರಾವಲಂಬಿಗಳಾಗಿ ಮಾಡದೇ ಅವರ ರಕ್ಷಣೆ–ಏಳಿಗೆಗೆ ಒತ್ತು ನೀಡುವ ಮುಖೇನ ಅವರು ಸ್ವಾಭಿಮಾನದ ಬದುಕು ನಡೆಸಲು ಶಿಕ್ಷಣ, ಉದ್ಯೋಗ ಹಾಗೂ ಸಬಲೀಕರಣದ ಕಾರ್ಯಕ್ರಮಗಳನ್ನು ರೂಪಿಸುವುದು' ತಮ್ಮ ಸಂಕಲ್ಪ ಎಂದು ಹೇಳಿಕೊಂಡಿದ್ದಾರೆ. ಬಜೆಟ್‌ನ ಪುಟಗಳುದ್ದಕ್ಕೂ ಈ ಆಶಯಗಳು ಕಾಣಿಸುತ್ತಿವೆ.

ಪರಿಶಿಷ್ಟರು, ಮಹಿಳೆಯರು, ಹಿಂದುಳಿದವರ ಚೈತನ್ಯ ಹೆಚ್ಚಿಸುವ ಹತ್ತಾರು ಕಾರ್ಯಕ್ರಮಗಳನ್ನು ಹೆಣೆದಿರುವ ಅವರು, ಬಿಜೆಪಿಯು ಪ್ರಬಲ ಜಾತಿಗಳ ಪರವಾದ ಪಕ್ಷ ಎಂಬ ಅಪವಾದದ ಮುಸುಕು ಸರಿಸುವ ಪ್ರಯತ್ನವನ್ನೂ ನಡೆಸಿದ್ದಾರೆ.

ಅಬಕಾರಿ, ಇಂಧನ, ನೋಂದಣಿ ಮತ್ತು ಮುದ್ರಾಂಕ ಕ್ಷೇತ್ರದಲ್ಲಿ ತೆರಿಗೆಯ ಬರೆ ಎಳೆಯುವ ಕೆಲಸ ಮಾಡದೆ, ಕೊರೊನಾ ತಂದಿತ್ತ ಸಂಕಷ್ಟದಿಂದ ಬಸವಳಿದವರಲ್ಲಿ ಭರವಸೆ ತುಂಬಿಸುವ ಕಿರು ಪ್ರಯತ್ನದ ಝಲಕ್ ಬಜೆಟ್‌ನಲ್ಲಿದೆ. ಮಹಿಳಾ ಸ್ವಸಹಾಯ ಸಂಘಗಳ ಉತ್ಪನ್ನಗಳ ಬ್ರಾಂಡಿಂಗ್‌ಗೂ ಒತ್ತು ನೀಡಿದ್ದಾರೆ. ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಪೌರಕಾರ್ಮಿಕರು, ಗ್ರಾಮ ಸಹಾಯಕರ ಗೌರವಧನ ಹೆಚ್ಚಳ, ನೇಕಾರರು, ಅವಿವಾಹಿತ ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರಿಗೆ ನೆರವಿಗೂ ನಿಂತಿದ್ದಾರೆ.

ಆಡಳಿತಾತ್ಮಕ ವೆಚ್ಚ ಕಡಿಮೆ ಮಾಡಿ ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಿಕೊಳ್ಳಲು ಬೇಕಾಗಿದ್ದ ಆರ್ಥಿಕ ಕ್ರಮಗಳತ್ತ ದೃಷ್ಟಿ ಹರಿಸಿಲ್ಲ.

10ನೇ ಪುಟ ನೋಡಿ

### ಮಠಗಳಿಗಿಲ್ಲ ಕಾಸು

ವಿವಿಧ ಜಾತಿಯ ಮಠಗಳಿಗೆ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡಿ, ಓಲೈಸುವ ಚಾಳಿಯನ್ನು ಬೊಮ್ಮಾಯಿ ಈ ಬಾರಿ ಕೈಬಿಟ್ಟಿದ್ದಾರೆ.

ಆದರೆ, ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಕೊಡುಗೆ ನೀಡಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಗಳ ಮಠಗಳು ಹಾಗೂ ಸಂಸ್ಥೆಗಳ ಅಭಿವೃದ್ಧಿಗೆ ನೆರವು ನೀಡುವುದಾಗಿ ಪ್ರಕಟಿಸಿದ್ದಾರೆ. ದೇವಸ್ಥಾನಗಳಿಗೆ, ಕೆಲವು ಜಾತಿಗಳನ್ನು ಸಮಾಧಾನಪಡಿಸಲು ಮುಂದಾಗಿದ್ದಾರೆ.

ವೀರಶೈವ ಅಭಿವೃದ್ಧಿ ನಿಗಮ ಹಾಗೂ ಒಕ್ಕಲಿಗರ ಅಭಿವೃದ್ಧಿ ನಿಗಮಕ್ಕೆ ತಲಾ ₹100 ಕೋಟಿ, ಮರಾಠ ಅಭಿವೃದ್ಧಿ ನಿಗಮಕ್ಕೆ ₹50 ಕೋಟಿ, ಕೊಡವರ ಅಭಿವೃದ್ಧಿಗಾಗಿ ₹10 ಕೋಟಿ ಪ್ರಕಟಿಸಿದ್ದಾರೆ. ಹಿಂದುಳಿದ ಹಾಗೂ ಅತಿ ಹಿಂದುಳಿದ ಸಮುದಾಯಗಳಾದ ತಿಗಳ, ಮಾಳಿ, ಮಾಳಿ ಮಾಲಗಾರ, ಕುಂಬಾರ, ಯಾದವ, ದೇವಾಡಿಗ, ಸಿಂಪಿ, ಕ್ಷತ್ರಿಯ, ಮೇದಾರ, ಕುಂಚಿ, ಕುರ್ಮ, ಪಿಂಜಾರ/ನದಾಫ್, ಕುರುಬ, ಬಲಿಜ, ಈಡಿಗ, ಹಡಪದ ಹಾಗೂ ಇತರ ಸಮುದಾಯಗಳಿಗೆ ₹400 ಕೋಟಿ ಮೀಸಲಿಟ್ಟಿದ್ದಾರೆ. ಕ್ರೈಸ್ತರ ಅಭಿವೃದ್ಧಿಗೆ ₹50 ಕೋಟಿ, ಜೈನ್, ಸಿಖ್ ಹಾಗೂ ಬೌದ್ಧ ಸಮುದಾಯಗಳಿಗೆ ₹50 ಕೋಟಿ ಒದಗಿಸಿದ್ದಾರೆ. ಮುಸ್ಲಿಂ ಸಮುದಾಯದ ಹೆಸರು ಬಜೆಟ್‌ನಲ್ಲಿ ಇಲ್ಲವೇ ಇಲ್ಲ.

ವಿಶೇಷ ಪುಟಗಳು
3A,10,11,12 ಮತ್ತು 13

ಸಂಪಾದಕೀಯ 4

ಬಜೆಟ್ ನಾಡಿನ ಜನರ ಭವಿಷ್ಯದ ಮುನ್ಸೂಚನೆಯಂತಿರಬೇಕು. ಬೊಮ್ಮಾಯಿ ಮಂಡಿಸಿರುವುದು ಅತ್ಯಂತ ನಿರಾಶಾದಾಯಕ, ದೂರದೃಷ್ಟಿ ಇಲ್ಲದ ಬಡಾಯಿ ಬಜೆಟ್. ಅಭಿವೃದ್ಧಿಯ ಮುನ್ನೋಟವೇ ಇಲ್ಲ. ಬಿಜೆಪಿಯವರ ಮಾತುಗಳಿಗೇ ಈ ಬಜೆಟ್ ವಿರುದ್ಧವಾಗಿದೆ

**ಸಿದ್ದರಾಮಯ್ಯ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಉಪ್ಪು ಹುಳಿ ಖಾರ ಇಲ್ಲದ, ಯಾರದ್ದೋ ಒತ್ತಡದಿಂದ ಓದಿದ ಸತ್ವಹೀನ ಬಜೆಟ್. ಕೇವಲ ಅಂಕಿ ಅಂಶಗಳನ್ನು ಮುಂದಿಟ್ಟುಕೊಂಡ ಅಲಂಕಾರಿಕ ಬಜೆಟ್. ಎಲ್ಲಾ ವಲಯಗಳನ್ನೂ ಮಿಶ್ರಣ ಮಾಡಿ ಗ್ರೈಂಡರ್‌ನಲ್ಲಿ ಹಾಕಿ ರುಬ್ಬಿದ ಹಾಗಿದೆ

**ಎಚ್.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕಲ್ಯಾಣ್ ಜ್ಯುವೆಲರ್ಸ್
MARCH MEGA OFFER
FLAT 50% OFF
ON MAKING CHARGES FOR ALL PRODUCTS*
MARCH 4TH TO MARCH 20TH
*T&C Apply
OFFER VALID FOR ALL PRODUCTS IN GOLD, DIAMOND, UNCUT, PRECIOUS & SILVER JEWELLERY
WWW.KALYANJEWELLERS.NET | FOLLOW US ON | BUY ONLINE @ WWW.CANDERE.COM

ಮೊತ್ತಮೊದಲು ಲೈಫ್ ಇನ್ಶ್ಯೂರೆನ್ಸ್
ಆನ್‌ಲೈನ್‌ನಲ್ಲೂ ಲಭ್ಯ
ತುಂಟತನ ತುಂಬಿದ ನಿವೃತ್ತ ಜೀವನ
ಫಿಕ್ಸ್‌ಡ್ ಆ್ಯನ್ಯುಯಿಟಿ ದರಗಳು
ಮಲ್ಟಿಪ್ಲ್ ಆ್ಯನ್ಯುಯಿಟಿ ಆಪ್ಷನ್‌ಗಳು
ಆ್ಯನ್ಯುಯಿಟಿ ಸಂದಾಯದ ವಿಭಿನ್ನ ವಿಧಾನಗಳು
ಎಲ್‌ಐಸಿಯ ಜೀವನ್ ಅಕ್ಷಯ್ VII
ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ಇಂಡಿವಿಜ್ಯುವಲ್, ಇಮ್ಮಿಡಿಯಟ್ ಆನ್ಯುಯಿಟಿ ಪ್ಲಾನ್
UIN- 512N337V02 ಪ್ಲಾನ್ ನಂ.: 857
ಡೌನ್‌ಲೋಡ್ ಮಾಡಿರಿ ಎಲ್‌ಐಸಿಯ ಮೊಬೈಲ್ ಆಪ್ "MyLIC"
ಸಂದರ್ಶಿಸಿರಿ: licindia.in
ಕಾಲ್ ಸೆಂಟರ್ ಸರ್ವಿಸ್ (022) 6827 6827
ವಿವರಗಳಿಗಾಗಿ ನಿಮ್ಮ ಏಜೆಂಟರನ್ನು/ಸನಿಹದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿ ಅಥವಾ ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ
ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ! ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ.
ಅಪಾಯ ಅಂಶಗಳು, ಷರತ್ತು ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಮಾರಾಟವನ್ನು ಮುಕ್ತಾಯಗೊಳಿಸುವ ಮುನ್ನ ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಜಾಗರೂಕತೆಯಿಂದ ಓದಿಕೊಳ್ಳಿರಿ.
ನಮ್ಮೊಂದಿಗೆ ಸೇರಿಕೊಳ್ಳಿ: LIC India Forever
IRDAI Regn No.: 512
LIC ಲೈಫ್ ಇನ್ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ LIFE INSURANCE CORPORATION OF INDIA
ಕ್ಷಣ ಕ್ಷಣವೂ ನಿಮ್ಮೊಂದಿಗೆ
LIC / MUD / 2021-22 / 50 / Kan

# ಬೆಂಗಳೂರು ನಗರ

ಶನಿವಾರದ ಉಷ್ಣಾಂಶ
31° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಮಂಜು ಮುಸುಕಿದ ವಾತಾವರಣ. ನಂತರ ಬಿಸಿಲು ಇರಲಿದೆ

ಮುನ್ನೋಟ
ಭಾನುವಾರ 30° 19°
ಸೋಮವಾರ 32° 20°
ಮಂಗಳವಾರ 32° 20°

ಸೂರ್ಯೋದಯ: 6:34 ಸೂರ್ಯಾಸ್ತ : 6:29 ಚಂದ್ರೋದಯ: ಬೆ. 7:46 ಚಂದ್ರಾಸ್ತ: ರಾ. 8:03

ಶುಕ್ರವಾರದ ಹವಾಮಾನ : ಗರಿಷ್ಠ 32° ಕನಿಷ್ಠ 18°

---

**ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್**
(ಹಿಂದಿನ ಹೆಸರು ಕರ್ನಾಟಕ ಭೂ ಸೇನಾ ನಿಗಮ ನಿಯಮಿತ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ
ಆನಂದರಾವ್ ವೃತ್ತ, ಬೆಂಗಳೂರು, ಕರ್ನಾಟಕ – 560 009

ಕೆ.ಆರ್.ಐ.ಡಿ.ಎಲ್ ಸಂಸ್ಥೆಯು ಸಾರ್ವಜನಿಕ ವಲಯದ ಬ್ಯಾಂಕ್ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ / ಖಾಸಗಿ ವಲಯದ ಬ್ಯಾಂಕುಗಳಿಂದ ಒಂದು ವರ್ಷದ ಅವಧಿಗೆ **ರೂ. 575.00 ಕೋಟಿಗಳನ್ನು** ನಿಶ್ಚಿತ ಠೇವಣಿಯಲ್ಲಿ ಹೂಡಲು ಇ-ಬಿಡ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **www.eproc.karnataka.gov.in** ರಲ್ಲಿ **04–03–2022** ರಿಂದ ಪಡೆಯಬಹುದಾಗಿದೆ.

**ಸಹಿ/– ವ್ಯವಸ್ಥಾಪಕ ನಿರ್ದೇಶಕರು**

---

## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರ ಪರವಾಗಿ ನಾವು ಕೆಳಗೆ ಸಂಪೂರ್ಣವಾಗಿ **ಷೆಡ್ಯೂಲ್**‌ನಲ್ಲಿ ವಿವರಿಸಲಾಗಿರುವ ಹಾಗೂ **"ಷೆಡ್ಯೂಲ್ ಸ್ವತ್ತು"** ಎಂದು ಉಲ್ಲೇಖಿಸಲಾಗಿದ್ದು, ಸದರಿ ಸ್ವತ್ತು ಹರ್ಷ ಕೃಷ್ಣ ಮೂರ್ತಿ ಬಿನ್ ಕೆ. ಕೃಷ್ಣಮೂರ್ತಿ (ಮಾಲೀಕರು)ರವರಿಗೆ ಸೇರಿದ್ದು, ಇವರ ವಿಳಾಸ ಬೆಂಗಳೂರು–560038, ಕರ್ನಾಟಕ. ಈ ಸ್ವತ್ತಿನ ಶೀರ್ಷಿಕೆಯನ್ನು ಪರಿಶೀಲಿಸುತ್ತಿದ್ದೇವೆ.

ಯಾವುದೇ ವ್ಯಕ್ತಿಗಳಿಗೆ ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಅಥವಾ ಕ್ಲೇಮು ಅಥವಾ ಒಪ್ಪಂದವಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ 15 **ದಿನಗಳ** ಒಳಗಾಗಿ ತಮ್ಮನ್ನು ಬೆಂಬಲಿಸುವ ದಾಖಲೆಗಳ ಪ್ರತಿಯೊಂದಿಗೆ ಕೆಳಸಹಿಮಾಡಿರುವವರಿಗೆ ಸಲ್ಲಿಸಬೇಕು. ನಿಗಧಿತ ಸಮಯದೊಳಗೆ ಯಾವುದೇ ರೀತಿಯ ಸಮರ್ಥನೀಯ ಕ್ಲೇಮುಗಳು ಬಾರದಿದ್ದಲ್ಲಿ, ನಮ್ಮ ಕಕ್ಷಿದಾರರು ಸದರಿ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳಿಲ್ಲವೆಂದು ಪರಿಗಣಿಸಿ ಮುಂದಿನ ಪ್ರಕ್ರಿಯೆಯನ್ನು ಮುಂದುವರೆಸುತ್ತಾರೆಂದು ತಿಳಿಯತಕ್ಕದ್ದು, ತದನಂತರ ಬಂದಂಹ ಯಾವುದೇ ತಂಟೆ ತಕರಾರು ಅಥವಾ ಕ್ಲೇಮುಗಳಿಗೆ ಮಾನ್ಯತೆಯಿರುವುದಿಲ್ಲ.

### ಷೆಡ್ಯೂಲ್ ಸ್ವತ್ತು

**ಐಟಂ ನಂ.** 1: ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೆಂಪತಿಮ್ಮನಹಳ್ಳಿ ಗ್ರಾಮದಲ್ಲಿರುವ ಸ್ಥಿರಾಸ್ತಿ ಸ್ವತ್ತು ಸರ್ವೆ ನಂ.42/1, ಅಳತೆ 2 ಎಕರೆ 3 ಗುಂಟೆ ಹಾಗೂ 6 ಗುಂಟೆಗಳ ಖರಾಬಿನೊಂದಿಗೆ ಒಂದು ಉಪಹಾರ ಗೃಹ, ಕೊಠಡಿಗಳು ಹಾಗೂ ಸೂಟ್‌ಗಳು ಒಳಗೊಂಡಂತೆ ವಾಣಿಜ್ಯ ಉದ್ದೇಶಕ್ಕಾಗಿ ಪರಿವರ್ತಿತಗೊಂಡಿದ್ದು (ಹೋಟೆಲ್ ಇಂಡಸ್ಟ್ರಿ), ದಿನಾಂಕ 18/02/1998ರ ಅಧಿಕೃತ ಮೆಮೋರಾಂಡಮ್ ಸಂಖ್ಯೆ: BDS.ALN(D) SR 197/1997-98, ಪ್ರಸ್ತುತ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಈ–ಖಾತಾ ಸಂಖ್ಯೆ: 150300200600300158 ಹಾಗೂ ಇದಕ್ಕೆ ಚೆಕ್ಕುಬಂದಿ–

ಪೂರ್ವಕ್ಕೆ: ತೋಟಿ ಇನಾಂತಿ ಜಮೀನು, ಪಶ್ಚಿಮಕ್ಕೆ: ಸರ್ಕಾರಿ ಅಟ್ಟಿ
ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸುಬ್ಬರಾಯಪ್ಪನವರ ಜಮೀನು.

**ಐಟಂ ನಂ.** 2: ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಕೆಂಪತಿಮ್ಮನಹಳ್ಳಿ ಗ್ರಾಮದಲ್ಲಿರುವ ಕೃಷಿ ಜಮೀನಿನ ಸ್ಥಿರಾಸ್ತಿ ಸ್ವತ್ತು ಸರ್ವೆ ನಂ.42/2, ಅಳತೆ 1 ಗುಂಟೆ ಮತ್ತು ಸರ್ವೆ ನಂ. 42/3 ಅಳತೆ 2 ಗುಂಟೆಗಳು, ಒಟ್ಟು ಅಳತೆ 3 ಗುಂಟೆಗಳ ಸ್ವತ್ತಿಗೆ ಚೆಕ್ಕುಬಂದಿ–

ಪೂರ್ವಕ್ಕೆ: ತರಕಾರಿ ಮುನಿಯಪ್ಪನವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 42/1
ಉತ್ತರಕ್ಕೆ: ಸರ್ವೆ ನಂ. 42/1 ದಕ್ಷಿಣಕ್ಕೆ: ಸುಬ್ಬರಾಯಪ್ಪನವರ ಜಮೀನು.

ದಿನಾಂಕ: 04ನೇ ಮಾರ್ಚ್, 2022
ಬೆಂಗಳೂರು.

**ಸಹಿ/– ಉಮಾ ಗಿರಿ / ಯಮುನ .ಎಸ್, ವಕೀಲರು**
**ಎಕೆಎಸ್ ಲಾ ಅಸೋಸಿಯೇಟ್ಸ್**
ಇ–301, ಸನ್‌ರೈಸ್ ಛೇಂಬರ್ಸ್, 22, ಹಲಸೂರು ರಸ್ತೆ,
ಬೆಂಗಳೂರು–560 042. ಫೋನ್: (91–80) 40390999

---

## ಆಯುಷ್ ಇಲಾಖೆ

ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ,
ಡಾ॥ ಸಿದ್ಧಯ್ಯ ಪುರಾಣಿಕ ರಸ್ತೆ, ಬಸವೇಶ್ವರನಗರ, ಬೆಂಗಳೂರು – 560079.
ದೂರವಾಣಿ: 080–23359413, ಇ–ಮೇಲ್: ghmchprincipal@gmail.com

**ಸಂಖ್ಯೆ: ಸಹೋವೈಮ&ಆ/66/ಸರಬ/2021–22 ದಿನಾಂಕ: 02–03–2022**

### ಇ–ಟೆಂಡರ್ ಅಧಿಸೂಚನೆ

ಈ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಂಗಳೂರು ಇಲ್ಲಿನ ಕಟ್ಟಡಗಳ ಆವರಣಗಳನ್ನು ಹಾಗೂ ಆಸ್ಪತ್ರೆ, ಮಹಾವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಶುಚಿಗೊಳಿಸಲು / ಕಾರ್ಯನಿರ್ವಹಿಸಲು ಮತ್ತು ಪಾಳಿಯಲ್ಲಿ ಕಾವಲು ಕಾಯಲು ಅವಶ್ಯಕವಿರುವ ಭದ್ರತಾ /ಸ್ವಚ್ಛತಾ ಮತ್ತು ಇತರೆ ಸಿಬ್ಬಂದಿ ಸೇವೆಯನ್ನು 02 ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸುವ ಇ–ಟೆಂಡರ್.

1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಲಭ್ಯವಿರುವ ದಿನಾಂಕ: **03–03–2022 ರಿಂದ.** 2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **18–03–2022ರಂದು ಸಂಜೆ 5.00 ಗಂಟೆಯವರೆಗೆ.** 3) ಇ–ಟೆಂಡರ್‌ಗಳನ್ನು ದಿನಾಂಕ: **21–03–2022ರಂದು ಬೆಳಿಗ್ಗೆ 11.00 ಗಂಟೆಗೆ, ಮೇಲ್ಕಂಡ ವಿಳಾಸದಲ್ಲಿ ತೆರೆಯಲಾಗುವುದು.** 4) ಇ–ಟೆಂಡರ್ ಅಂದಾಜು ಮೊತ್ತ: **ರೂ. 50.00 ಲಕ್ಷ.** ಇ–ಟೆಂಡರ್ ನಿಯಮಗಳು ಮತ್ತು ನಿಬಂಧನೆಗಳನ್ನು ವೆಬ್‌ಸೈಟ್: **http://eproc.karnataka.gov.in** ನಲ್ಲಿ ದಿನಾಂಕ: **03–03–2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರಿಂದ ಪಡೆಯಬಹುದು.

ಸಹಿ/– ಪ್ರಾಚಾರ್ಯರು,
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಆಸ್ಪತ್ರೆ, ಬೆಂಗಳೂರು.

ವಾಸಾಸಂಇ/ಬೆಂ.ನ/ಅಡ್ವರ್ಟೋ/3590/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ,
ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ತಾಲ್ಲೂಕು ಪಂಚಾಯತಿ ಹೊಸಕೋಟೆ.

**ಸಂಖ್ಯೆ: ಶಿಅಯೋಹೊ/ತೂಯ/ಇ–ಟೆಂಡರ್/2021–22 ದಿನಾಂಕ: 03–03–2022**

### ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾ ಕಛೇರಿ ವ್ಯಾಪ್ತಿಗೆ ಬರುವ 310 ಅಂಗನವಾಡಿ ಕೇಂದ್ರಗಳಲ್ಲಿ ಉಪಯೋಗಿಸುತ್ತಿರುವ ತೂಕದ ಯಂತ್ರಗಳಿಗೆ 2021–22ನೇ ಸಾಲಿಗೆ **ವಾರ್ಷಿಕ ಸತ್ಯಾಪನೆ ಹಾಗೂ ದುರಸ್ತಿಯನ್ನು ಮಾಡಿಸಲು** ಕ್ರಮಕೈಗೊಳ್ಳಬೇಕಾಗಿರುತ್ತದೆ. ತೂಕದ ಯಂತ್ರಗಳಿಗೆ ಸತ್ಯಾಪನೆ ಸಂದರ್ಭದಲ್ಲಿ ದುರಸ್ತಿಯನ್ನು ಮಾಡುವ ಗುತ್ತಿಗೆದಾರರನ್ನು ನೇಮಿಸಬೇಕಾಗಿರುತ್ತದೆ. ಆದ ಕಾರಣ ಅರ್ಹ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕ ಅಧಿನಿಯಮ 1999–2000 ಹಾಗೂ ತಿದ್ದುಪಡಿಗಳ ಅನ್ವಯ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: **03–03–2022.** 2) ತಾಂತ್ರಿಕ ಮತ್ತು ಆರ್ಥಿಕ ಬಿಡ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: **21–03–2022 ರಂದು ಸಂಜೆ 5.30 ಗಂಟೆಯೊಳಗೆ.** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **22–03–2022ರಂದು ಅಪರಾಹ್ನ 3.00 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **23–03–2022ರಂದು ಅಪರಾಹ್ನ 3.00 ಗಂಟೆಗೆ.**

ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್: **http://www.eprocument.karnataka.gov.in** ನಲ್ಲಿ ಲಾಗ್‌ಆನ್ ಮಾಡಿ ನೋಡಬಹುದು.

**ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,**
**ಶಿಶು ಅಭಿವೃದ್ಧಿ ಯೋಜನೆ,**
**ಹೊಸಕೋಟೆ**

**ಸಹಿ/– ಕಾರ್ಯನಿರ್ವಹಣಾಧಿಕಾರಿಗಳು,**
**ತಾಲ್ಲೂಕು ಪಂಚಾಯಿತಿ,**
**ಹೊಸಕೋಟೆ.**

ವಾಸಾಸಂಇ/ಯುನಿಕ್/ಬೆಂಗ್ರಾಜಿ/454/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಉಪ ನೋಂದಣಾಧಿಕಾರಿ ಕಛೇರಿ ಹಿಂಭಾಗ, ಕೋಲಾರ.
ದೂರವಾಣಿ ಸಂಖ್ಯೆ: 08152–222482,
ಇ–ಮೇಲ್:eemidklr@rediffmail.com

**ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ–1/ಟೆಂಡರ್ ಪ್ರಕಟಣೆ/ 421/2021–22 ದಿನಾಂಕ: 03.02.2022**

### 1ನೇ ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ

**ಉಲ್ಲೇಖ: (1) ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:11/2021–22/ 188, ದಿನಾಂಕ:05.02.2022**

ಮೇಲಿನ ಉಲ್ಲೇಖ(1)ರಂತೆ ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:11/ 2021–22/ದಿನಾಂಕ:05.02.2022ರಂದು ಈ ವಿಭಾಗ ವ್ಯಾಪ್ತಿಯ 4702 ಪ್ರಧಾನ ಕಾಮಗಾರಿ–ಸರಣಿ ಚೆಕ್ ಡ್ಯಾಂ ನಿರ್ಮಾಣ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಕಾಮಗಾರಿಗಳ ಟೆಂಡರ್‌ಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿರುತ್ತದೆ. ಅದರಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ಡನ್ನು:– (1) ಬಿಡ್‌ಗಳನ್ನು ಸಲ್ಲಿಸುವ ಪ್ರಾರಂಭಿಕ **ದಿನಾಂಕ:14.03.2022 ಸಂಜೆ 16.00 ಗಂಟೆಯಿಂದ** (2) ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 24.03.2022 ಸಂಜೆ 16.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **25.03.2022 ಸಂಜೆ 16.30 ಗಂಟೆಯವರೆಗೆ.** ಉಳಿದಂತೆ ಸದರಿ ಪ್ರಕಟಣೆಯ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಅಥವಾ ದೂರವಾಣಿ ಮುಖಾಂತರ ಸಂಬಂಧಪಟ್ಟ ಶಾಖಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

**ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು**
**ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.**

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:421/ಎಂ.ಸಿ.ಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

## ಪ್ರಧಾನ ಮಹಾಲೇಖಾಪಾಲರ ಕಾರ್ಯಾಲಯ
## ಆಡಿಟ್ 1, ಕರ್ನಾಟಕ

Government of India

ಆಡಿಟ್ ಭವನ, (ಬಹುಮಹಡಿ ಕಟ್ಟಡಗಳ ಹತ್ತಿರ),
ಬೆಂಗಳೂರು-560001.

ಹಳೆಯ ಕಚೇರಿ ಪೀಠೋಪಕರಣಗಳು ಮತ್ತಿತ್ತರ ಸ್ಕ್ರಾಪ್ ವಸ್ತುಗಳ ಹರಾಜನ್ನು 12.03.2022 (ಶನಿವಾರ) ಬೆಳಗ್ಗೆ 11.00 ಗಂಟೆಗೆ ಹಾಗೂ ಕಂಪ್ಯೂಟರ್ ಸ್ಕ್ರಾಪ್ ವಸ್ತುಗಳ (ಇ-ವೇಸ್ಟ್) ಹರಾಜನ್ನು 16.03.2022 (ಬುಧವಾರ) ಬೆಳಗ್ಗೆ 11.00 ಗಂಟೆಗೆ ಮಹಾಲೇಖಾಪಾಲರ ಕಾರ್ಯಾಲಯ, ಆಡಿಟ್ 1, ಆಡಿಟ್ ಭವನ, (ಬಹುಮಹಡಿ ಕಟ್ಟಡಗಳ ಹತ್ತಿರ), ಪೀಠೋಪಕರಣಗಳು ಮತ್ತು ಕಂಪ್ಯೂಟರ್ ಸ್ಕ್ರಾಪ್ ವಸ್ತುಗಳು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ನಡೆಸಲಾಗುತ್ತದೆ. ಬಿಡ್ ಮೊತ್ತಗಳು ಜಿಎಸ್‌ಟಿಯನ್ನು ಒಳಗೊಂಡಿರುವುದಿಲ್ಲ.

**ಸಹಿ/-**
**ವರಿಷ್ಠ ಲೇಖಪರಿಶೋಧನಾಧಿಕಾರಿ (ಹೌಸಕೀಪಿಂಗ್).**
**ದೂರವಾಣಿ: 080 22640353**

---

## ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕ್ (ನಿ),

ನಂ. 1627/2, ಪಾರ್ಕ್ ರಸ್ತೆ, ರಾಮಮೋಹನಪುರ, ಬೆಂಗಳೂರು–560021
ದೂರವಾಣಿ ಸಂಖ್ಯೆ: 23320489/ 23422356/ 29555489

### ಚುನಾವಣಾ ತಿಳುವಳಿಕೆ ಪತ್ರ

ಮೇಲ್ಕಂಡ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ನಿಧನದಿಂದ ತೆರವಾದ ಒಂದು ನಿರ್ದೇಶಕ (ಸಾಮಾನ್ಯ) ಸ್ಥಾನಕ್ಕೆ ಆಡಳಿತ ಮಂಡಳಿಯ ಉಳಿದ ಅವಧಿಗೆ ಚುನಾವಣೆಯನ್ನು ದಿನಾಂಕ 20.03.2022 ಭಾನುವಾರದಂದು ಬೆಳಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ನಡೆಸಲು ನಿಶ್ಚಯಿಸಲಾಗಿದೆ. ಚುನಾವಣಾ ತಿಳಿವಳಿಕೆ ಮತ್ತು ವೇಳಾ ಪಟ್ಟಿಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಿದ್ದು, ಯಾವುದೇ ಅರ್ಹ ಸದಸ್ಯರಿಗೆ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಚುನಾವಣಾ ತಿಳುವಳಿಕೆ ಪತ್ರ ಎಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಕೋರುತ್ತಾ, ಹೆಚ್ಚಿನ ಮಾಹಿತಿ ಅವಶ್ಯವಿದ್ದಲ್ಲಿ ಬ್ಯಾಂಕಿನ ರಿಟರ್ನಿಂಗ್ ಅಧಿಕಾರಿಯನ್ನು ಅಥವಾ ಬ್ಯಾಂಕಿನ ಆಡಳಿತ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸ್ಥಳ: ಬೆಂಗಳೂರು
ದಿನಾಂಕ: 05.03.2022

ಸಹಿ/–
**ರಿಟರ್ನಿಂಗ್ ಅಧಿಕಾರಿ**
**ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕ್ (ನಿ),**

---

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆಗಳ ವಿಭಾಗ,
ಯಲಹಂಕ ವಲಯ, ಬೆಂಗಳೂರು – 560 092.

ಸಂ.: ಬಿಬಿಎಂಪಿ/ಯವ/ಕಾಪಾಅ(ಯೋ)/ಟೆಂಡರ್/15/2021–22 ದಿನಾಂಕ: 02.03.2022

### ಟೆಂಡರ್‌ಗಾಗಿ ಆಹ್ವಾನಿಸುವ ಸೂಚನೆ (ಎನ್‌ಐಟಿ)

ಅಲ್ಪಾವಧಿ ಟೆಂಡರ್ (ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ), ಯಲಹಂಕ ವಲಯ, ಬಿಬಿಎಂಪಿ ಇವರು ಕೆಳಕಂಡ ಸೇವೆಗಳನ್ನು ಒದಗಿಸಲು ಅರ್ಹ ಸೇವೆಗಳನ್ನು ಒದಗಿಸುವವರು / ಪೂರೈಕೆದಾರು ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಯೋಜನೆಗಳ ಹೆಸರು | ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇಎಂಡಿ (ರೂ.ಗಳಲ್ಲಿ) |
|---|---|---|---|
| 1 | ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸರ್ಕಾರಿ ಕಛೇರಿಗಳಿಗೆ ಭದ್ರತಾ ಸಿಬ್ಬಂದಿ ಮತ್ತು ಹೌಸ್‌ಕೀಪಿಂಗ್ ಸೇವೆಗಳನ್ನು ಒದಗಿಸುವುದು. | 47.57 ಲಕ್ಷಗಳು | 96,000/– |
| 2 | ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸರ್ಕಾರಿ ಕಛೇರಿಗಳಿಗೆ ಭದ್ರತಾ ಸಿಬ್ಬಂದಿ ಮತ್ತು ಹೌಸ್‌ಕೀಪಿಂಗ್ ಸೇವೆಗಳನ್ನು ಒದಗಿಸುವುದು. | 40.10 ಲಕ್ಷಗಳು | 81,000/– |

**ವೇಳಾಪಟ್ಟಿ:** (1) ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ (ಆನ್‌ಲೈನ್ ಮೂಲಕ ಮಾತ್ರ): **11.03.2022ರ ಸಂಜೆ 4.00 ಗಂಟೆಗೆ.** (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **14.03.2022ರ ಸಂಜೆ 4:00ರವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **15.03.2022ರ ಸಂಜೆ 4:30 ಗಂಟೆಗೆ** ಸಾಧ್ಯವಾದಲ್ಲಿ ಮುಂದಿನ ಕೆಲಸದ ದಿನ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **17.03.2022ರ ಸಂಜೆ 4:00 ಗಂಟೆಗೆ** ಸಾಧ್ಯವಾದಲ್ಲಿ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

---

# ನಟಿಗೆ ಅಶ್ಲೀಲ ಸಂದೇಶ: ಆ್ಯಡಂ ಬಿದ್ದಪ್ಪ ಬಂಧನ

ಪ್ರಜಾವಾಣಿ ವಾರ್ತೆ


ಆ್ಯಡಂ ಬಿದ್ದಪ್ಪ

**ಬೆಂಗಳೂರು:** ನಟಿ ಸಂಜನಾ ಗಲ್ರಾನಿ ಅವರಿಗೆ ಅಶ್ಲೀಲ ಸಂದೇಶ ಕಳುಹಿಸಿದ್ದ ಆರೋಪದಡಿ ಆ್ಯಡಂ ಬಿದ್ದಪ್ಪ ಎಂಬಾತನನ್ನು ಇಂದಿರಾನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೊಡಗಿನ ಆ್ಯಡಂ, ವಸ್ತ್ರವಿನ್ಯಾಸಕ ಪ್ರಸಾದ್ ಬಿದ್ದಪ್ಪ ಅವರ ಮಗ. ಇತ್ತೀಚೆಗೆ ನಟಿಯ ಮೊಬೈಲ್‌ಗೆ ಅಶ್ಲೀಲ ಸಂದೇಶ ಕಳುಹಿಸಿ ಲೈಂಗಿಕ ಕಿರುಕುಳ ನೀಡಿದ್ದ. ಈ ಬಗ್ಗೆ ನಟಿ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು, ಆತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಆರೋಪಿ ಆ್ಯಡಂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರ ಮೊಬೈಲ್ ಜಪ್ತಿ ಮಾಡಲಾಗಿದ್ದು, ಪರೀಕ್ಷೆಗೆಂದು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದೂ ತಿಳಿಸಿದರು.

ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿರುವ ನಟಿ ಸಂಜನಾ, 'ಗಣ್ಯ ವ್ಯಕ್ತಿಯೊಬ್ಬರ ಮಗ, ನನ್ನ ವಾಟ್ಸ್‌ಆ್ಯಪ್‌ಗೆ ಅಶ್ಲೀಲ ಸಂದೇಶ ಕಳುಹಿಸಿದ್ದರು. ಅದರಿಂದ ಸಾಕಷ್ಟು ನೊಂದಿದ್ದೇನೆ. ಈ ಘಟನೆಯಿಂದ ನನ್ನ ಕುಟುಂಬ ವಿಚಲಿತವಾಗಿದೆ. ಸಂದೇಶ ಕಳುಹಿಸಿದ್ದವರ ವಿರುದ್ಧ ಕಾನೂನು ಕ್ರಮಕ್ಕಾಗಿ ಪೊಲೀಸರಿಗೆ ದೂರು ನೀಡಿದ್ದೇನೆ. ದೂರಿನಡಿ ಕ್ರಮ ಜರುಗಿಸಿರುವ ಪೊಲೀಸರಿಗೆ ಧನ್ಯವಾದಗಳು' ಎಂದು ಅಧಿಕಾರಿ ಹೇಳಿದ್ದಾರೆ.

# ಜಾಮೀನು ಮೇಲೆ ಹೊರಬಂದು ಡ್ರಗ್ಸ್ ಮಾರಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಎಂಡಿಎಂಎ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ತಾಜುದ್ದೀನ್ ಪೊಚಕ್ಕಡ್ (33) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ತಾಜುದ್ದೀನ್, ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ. ವ್ಯವಸ್ಥಿತ ಜಾಲ ರೂಪಿಸಿಕೊಂಡು ಎಂಡಿಎಂಎ ಮಾತ್ರೆಗಳನ್ನು ಮಾರುತ್ತಿದ್ದ. ಆತನಿಂದ ₹1.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಅಪರಾಧ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿದ್ದ ಆರೋಪಿ, ಜಾಮೀನು ಮೇಲೆ ಇತ್ತೀಚೆಗಷ್ಟೇ ಹೊರಗೆ ಬಂದಿದ್ದ. ನೈಜೀರಿಯಾ ಪ್ರಜೆಗಳಿಂದ ಡ್ರಗ್ಸ್ ಖರೀದಿಸಿ ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ. ಸಹಚರರ ಮೂಲಕ ಡ್ರಗ್ಸ್ ಮಾರಿ, ಹಣ ಸಂಪಾದಿಸುತ್ತಿದ್ದ' ಎಂದೂ ತಿಳಿಸಿದರು.

# ಹಿಮಾಚಲ ಪ್ರದೇಶ ಬಜೆಟ್: ಪಿಂಚಣಿ ವಯಸ್ಸು 60ಕ್ಕೆ ಇಳಿಕೆ

ಜೈರಾಮ್ ಠಾಕೂರ್

**ಶಿಮ್ಲಾ (ಪಿಟಿಐ):** ಇಲ್ಲಿನ ವಿಧಾನಸಭೆಯಲ್ಲಿ ಶುಕ್ರವಾರ 2022–23ನೇ ಸಾಲಿನ ಬಜೆಟ್ ಮಂಡಿಸಿದ ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರು ಯಾವುದೇ ಆದಾಯದ ಮಿತಿಯಿಲ್ಲದೆ ಪಿಂಚಣಿ ಪಡೆಯಲು ವಯಸ್ಸಿನ ಮಿತಿಯನ್ನು 70 ವರ್ಷದಿಂದ 60 ವರ್ಷಕ್ಕೆ ಇಳಿಸುವುದಾಗಿ ಘೋಷಿಸಿದರು.

ಮಾಸಿಕ ವೃದ್ಧಾಪ್ಯ ಪಿಂಚಣಿ ಮೊತ್ತವನ್ನು ₹ 1,001ನಿಂದ ₹1,500ಗೆ ಹೆಚ್ಚಿಸುವುದಾಗಿಯೂ ಅವರು ಬಜೆಟ್‌ನಲ್ಲಿ ತಿಳಿಸಿದರು.

ವಿಧಾನಸಭೆಯ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ನಿಧಿಯನ್ನು (ಎಂಎಲ್‌ಎಡಿ) ₹ 1.80 ಕೋಟಿಯಿಂದ ₹2 ಕೋಟಿ ಹೆಚ್ಚಿಸುವುದಾಗಿ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಅವರು ಘೋಷಿಸಿದರು.

## ನಿರ್ವಹಣಾ ಕಾರ್ಯ: ಇಂದು ವಿದ್ಯುತ್ ವ್ಯತ್ಯಯ

**ಬೆಂಗಳೂರು:** ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಮಾರ್ಚ್5ರಂದು ಬೆಳಿಗ್ಗೆ 10ರಿಂದ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

**ಸ್ಥಳಗಳು:** ಸರ್ಜಾಪುರ, ಬಿಲ್ಲಾಪುರ, ಬಿದರಗುಪ್ಪೆ, ಹಂದೇನಹಳ್ಳಿ ಮತ್ತು ಸುತ್ತಮುತ್ತ ಪ್ರದೇಶಗಳು.

**ನಿಧನ ವಾರ್ತೆ**

## ಟಿ.ಎಸ್.ಡಾಕಪ್ಪ



**ಬೆಂಗಳೂರು:** 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಪ್ರೊಡಕ್ಷನ್ ವಿಭಾಗದ ನಿವೃತ್ತ ಸಹಾಯಕ ಟಿ.ಎಸ್. ಡಾಕಪ್ಪ (59) ಅವರು ಅನಾರೋಗ್ಯದಿಂದಾಗಿ ಶುಕ್ರವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ. ಡಾಕಪ್ಪ ಅವರ ಹುಟ್ಟೂರಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ತುದೂರಿನಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಸಲಾಗುವುದೆಂದು ಕುಟುಂಬದವರು ತಿಳಿಸಿದ್ದಾರೆ.

---

## INDIAN AIR FORCE

1. Applications are invited from war widows/ widows of defence personnel killed while on duty disabled soldiers/ ex servicemen and spouses/ widows of ex-servicemen for running the following SI Side shops at Air Force Station, Jalahalli (East and West) for maximum of 05 years with yearly extension and with annual hike on approved rebates.
2. Applications are invited from civilians also. However, category mentioned in Para 1 above will be given priority over Para 2 category.

| Sl. No. | Name of the Shop | Location | Shop No. |
|---|---|---|---|
| **EAST AREA** | | | |
| 1 | Sweet shop | ETI | P/415/3 |
| 2 | Cloth shop | Akshay Complex | P/336/14&15 |
| 3 | Boutique shop | Akshay Complex | P/336/22 |
| 4 | Supper bar | AFWWA(L) | P/212(A) |
| 5 | Cable TV East | NO SHOP | |
| 6 | Dhobi shop | Akshay complex | P/36/3&4 |
| 7 | Fruit shop | E&ITI | P/10/C3 |
| 8 | Vegetable shop | AFWWA(L) | P/212(A) |
| 9 | Chicken shop | Akshay complex | P/336/8 |
| 10 | Provision shop | 7th camp | T/415/1 |
| **WEST AREA** | | | |
| 11 | Flour mill | Tripti Complex | P/321/8 |
| 12 | Mochi shop | Tripti Complex | P/321/22 |
| 13 | Cable TV | Tripti Complex | P/321/21 |
| 14 | Mochi shop | CTI | T/471/1 |
| 15 | Book stall | Tripti Complex | P/32/11 |
| 16 | Motor/ cycle repair shop | Tripti complex | P/321/7 |
| 17 | Newspaper & magazine supplier | No shop | |

Tender forms can be procured on payment of Rs 500/- (non refundable) from Service Institute Office from **07 Mar 2022 to 15 Mar 2022,** 0900hrs to 1300hrs on all working days (except 12 Mar 22 and 13 Mar 22) Earnest money @ Rs 5.000/- per tender must be deposited by tenderer from **07 Mar 2022 to 15 Mar 2022** between 0900hrs to 1300hrs at SI Office on all working days (except 12 Mar 22 and 13 Mar 22)

The tender box will be placed at Main Guard Room. Air Force Station, Jalahalli West, Bangalore-560015 from **07 Mar 2022 (0900hrs) to 16 Mar 2022 (1000hrs).** Tender form should be in sealed envelope separate for each shop with the name of shop written on it, If applied for more than one shop, tender form for each shop should have copies of required documents. A vendor will be allotted not more than 02 shops. All tenderers are to drop the sealed tender envelopes in the said box which will be sealed at 1000hrs on **16 Mar 2022,** and tenders will be opened at 1100hrs on **16 Mar 2022,** by BOO in the presence of tenderers / representatives. In case of selected tenderers do not take over the allotment shop within the stipulated time the earnest money will be forfeited. Interested Ex-Service persons are to attach a photo copy of the below mentioned documents along with the tender form and produce the original ID card at the time of opening of tender.

(i) Discharge book (ii) PPO No (iii) Experience certificate
(iv) Diploma certificate (v) Education certificate (v) Bank pass book
(vi) IT Returns last 03 years (Vii)TIN/GST/PAN No (vii) FSSAI Certificate
(viii) Adhaar card

**PERSON TO CONTACT:**
Service Institute office
Air Force Station Jalahalli (West)
Bangalore - 560 015
Tele : 28399009/41167235

**Sd/- (Bharati Dimri)**
**Wg Cdr**
**O/o SI Fund, AFS Jalahalli West**

---

## ಬ್ಯೂರೋ ಆಫ್ ಎನರ್ಜಿ ಎಫಿಶಿಯನ್ಸಿ

Azadi Ka Amrit Mahotsav

(ಭಾರತ ಸರ್ಕಾರದ ಇಂಧನ ಸಚಿವಾಲಯದ ಅಡಿಯಲ್ಲಿನ ಶಾಸನಬದ್ಧ ಅಂಗ)
4ನೇ ಮಹಡಿ, ಸೇವಾ ಭವನ, ಆರ್.ಕೆ.ಪುರಂ, ನವದೆಹಲಿ–110066
Website: www.beeindia.gov.in, Ph: 011-26766700

### 13 ಅಧಿಸೂಚಿತ ಸೆಕ್ಟರ್‌ಗಳಲ್ಲಿನ ಇಂಧನ ಬಳಕೆದಾರರೇ: ದಯವಿಟ್ಟು ಗಮನಿಸಿ

### ಇಂಧನ ಸಂರಕ್ಷಣೆ ಕಾಯ್ದೆ, 2001 (2001/52) ಅಡಿಯಲ್ಲಿ ಇಂಧನ ಬಳಕೆಯ ಸ್ಥಿತಿಗತಿ ವರದಿ ಸಲ್ಲಿಕೆ

ಇಂಧನ ಸಂರಕ್ಷಣೆ ಕಾಯ್ದೆಯ (2001/52) ಸೆಕ್ಷನ್ 14ರ ಕ್ಲಾಜ್ (ಇ) ಅಡಿಯಲ್ಲಿ, ಎಸ್.ಒ.394 (ಇ) ದಿನಾಂಕ 12ನೇ ಮಾರ್ಚ್, 2007, ಎಸ್.ಒ. 3542 (ಇ) ದಿನಾಂಕ 29ನೇ ಡಿಸೆಂಬರ್ 2015, ಎಸ್.ಒ. 1388 (ಇ) ದಿನಾಂಕ 02ನೇ ಮೇ, 2017 ಮತ್ತು 502147 (ಇ) ದಿನಾಂಕ 17ನೇ ಜೂನ್, 2020 ಮುಖೇನ ಗುರುತಿಸಲಾಗಿರುವ ಕೆಳಕಂಡ ಎನರ್ಜಿ ಇಂಟೆನ್ಸೀವ್ ಸೆಕ್ಟರ್‌ಗಳಲ್ಲಿರುವ ಅಧಿಸೂಚಿತ, ನಿಗದಿತ ವಾರ್ಷಿಕ ಮಿತಿಗಿಂತ ಅಧಿಕ ಪ್ರಮಾಣದ ಇಂಧನ ಬಳಕೆದಾರರಾಗಿರುವ, ಈ ಕೆಳಗಿನ ಎನರ್ಜಿ ಇಂಟೆನ್ಸೀವ್ ಸೆಕ್ಟರ್‌ಗಳಲ್ಲಿರುವ ಎಲ್ಲ ಇಂಧನ ಬಳಕೆದಾರರಿಗೆ / ಎಲ್ಲಾ ವರ್ಗದ ಇಂಧನ ಬಳಕೆದಾರರಿಗೆ ಕೆಳಗಿನಂತೆ ಅಧಿಸೂಚಿಸಲಾಗಿದೆ.

| ಕ್ರ | ಅಧಿಸೂಚಿತ ಸೆಕ್ಟರ್ | ಮೆಟ್ರಿಕ್ ಟನ್ ತೈಲಕ್ಕೆ ಸಮನಾದ ವಾರ್ಷಿಕ ನಿಗದಿತ ಇಂಧನ ಬಳಕೆಯ ಮಿತಿ |
|---|---|---|
| 1. | ಅಲ್ಯೂಮಿನಿಯಂ | 7,500 |
| 2. | ಸಿಮೆಂಟ್ | |
| | (ಎ) ಇಂಟಿಗ್ರೇಟೆಡ್ ಸಿಮೆಂಟ್ ಯೂನಿಟ್ | 30,000 |
| | (ಬಿ) ಸಿಮೆಂಟ್ ಗ್ರೈಂಡಿಂಗ್ ಯೂನಿಟ್ | 10,000 |
| 3. | ವಾಣಿಜ್ಯ ಕಟ್ಟಡಗಳು ಅಥವಾ ಸಂಸ್ಥೆಗಳು | |
| | (ಎ) ಹೊಟೇಲ್‌ಗಳು | 500 |
| | (ಬಿ) ವಿಮಾನ ನಿಲ್ದಾಣಗಳು | 500 |
| 4. | ಕ್ಲೋರ್ – ಅಲ್ಕರಿ | 12,000 |
| 5. | ಇಲೆಕ್ಟ್ರಿಸಿಟಿ ಡಿಸ್ಟ್ರಿಬ್ಯೂಷನ್ ಕಂಪನಿಗಳು (ಡಿಸ್ಕಾಮ್ಸ್)* | ಎಸ್‌ಇಆರ್‌ಸಿ/ಜೆಇಆರ್‌ಸಿ ಇವರಿಂದ ಪರವಾನಗೆ ಪಡೆದಿರುವ ಎಲ್ಲಾ ವಿತರಣಾ ಕಂಪನಿಗಳು |
| 6. | ಫರ್ಟಿಲೈಜರ್ | 30,000 |
| 7. | ಕಬ್ಬಿಣ ಮತ್ತು ಅದಿರು | 20,000 |
| 8. | ಪಲ್ಪ್ & ಪೇಪರ್ | 20,000 |
| 9. | ಪೆಟ್ರೋಲಿಯಂ ರಿಫೈನರಿಗಳು | 90,000 |
| 10. | ಗ್ಯಾಸ್ ಕ್ರ್ಯಾಕರ್ಸ್ ಅಥವಾ ನ್ಯಾಫ್ತಾ ಕ್ರ್ಯಾಕರ್ಸ್ ಅಥವಾ ಎರಡನ್ನು ಹೊಂದಿರುವ ಪೆಟ್ರೋಕೆಮಿಕಲ್ ಘಟಕಗಳು | 1,00,000 |
| 11. | ರೈಲ್ವೆಗಳು | |
| | (ಎ) ಎಲ್ಲಾ ಜೋನ್‌ಗಳ ರೈಲ್ವೆಗಳು (ಟ್ರಾಕ್ಷನ್) | 70,000 |
| | (ಬಿ) ಕಾರ್ಯಾಗಾರಗಳು | 750 |
| | (ಸಿ) ಐಸಿಎಫ್, ಆರ್‌ಸಿಎಫ್, ಸಿಎಲ್‌ಡಬ್ಲ್ಯೂ, ಡಿಎಲ್‌ಡಬ್ಲ್ಯೂ, ಡಿಸಿಡಬ್ಲ್ಯೂ ಆರ್‌ಡಬ್ಲ್ಯೂಎಫ್, ಎಂಸಿಎಫ್ ಮತ್ತು ಆರ್‌ಡಬ್ಲ್ಯೂಪಿ ಸೇರಿದಂತೆ ರೈಲ್ವೆಯ 8 ಪ್ರೊಡಕ್ಷನ್ ಕಾರ್ಖಾನೆಗಳು | - |
| 12. | ಟೆಕ್ಸ್‌ಟೈಲ್ | 3,000 |
| 13. | ಥರ್ಮಲ್ ಪವರ್ ಸ್ಟೇಷನ್ಸ್ | 30,000 |

[*ಡಿಸ್ಕಾಮ್‌ನ ಇಂಧನ ಬಳಕೆಯನ್ನು 1000 ಮಿಲಿಯನ್ ಕೆಡಬ್ಲ್ಯುಹೆಚ್ ಪ್ರಮಾಣಕ್ಕೆ ಸಮಾನವಾಗಿರುವ ಒಟ್ಟು ಸರಾಸರಿ ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳಿಗೆ (ಎಟಿ & ಸಿ) ಸಮನಾಗಿ ಪರಿಗಣಿಸಲಾಗುತ್ತದೆ]

ಕೇಂದ್ರ ಸರ್ಕಾರದ ಎಸ್.ಒ.1264 (ಇ) ದಿನಾಂಕ 31ನೇ ಮಾರ್ಚ್, 2016 ಮತ್ತು ಎಸ್.ಒ.998(ಇ) ದಿನಾಂಕ 30ನೇ ಮಾರ್ಚ್, 2017, ಎಸ್.ಒ. 1409(ಇ) ದಿನಾಂಕ 28ನೇ ಮಾರ್ಚ್, 2018, ಎಸ್.ಒ. 1473(ಇ) ದಿನಾಂಕ 29ನೇ ಮಾರ್ಚ್, 2019, ಎಸ್.ಒ. 1254 (ಇ) ದಿನಾಂಕ 13ನೇ ಏಪ್ರಿಲ್, 2020, ಎಸ್.ಒ. 4491 (ಇ) ದಿನಾಂಕ 26ನೇ ಅಕ್ಟೋಬರ್, 2021 ಅಧಿಸೂಚನೆ ಮೇರೆಗಿನ ಸೆಕ್ಟರ್‌ಗಳ ಅಡಿಯಲ್ಲಿನ ನಿಗದಿತ ಇಂಧನ ಬಳಕೆಯ ಮಿತಿಗಿಂತ ಅಧಿಕ ಇಂಧನ ಬಳಸುತ್ತಿರುವವರ ಪಟ್ಟಿಯಲ್ಲಿರುವ ಎಲ್ಲಾ ಘಟಕಗಳಿಗೆ/ಸಂಸ್ಥೆಗಳಿಗೆ ವಿನಂತಿಸುವುದು ಏನೆಂದರೆ, ಎನರ್ಜಿ ಮ್ಯಾನೇಜರ್/ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಇವರಿಂದ ಅಧಿಕೃತಗೊಂಡಿರುವ, ಇಂಧನ ಸಂರಕ್ಷಣಾ ಕಾಯ್ದೆ, 2001ರ (52/2001) ಸೆಕ್ಷನ್ 148 ಕ್ಲಾಜ್ (1) ಅಡಿಯಲ್ಲಿ ಅಧಿಸೂಚಿತ ಫಾರಂ 1 ರಲ್ಲಿ 2020–21 ಮತ್ತು 2021–22ನೇ ಸಾಲಿನ ಕಳೆದ ಎರಡು ವರ್ಷಗಳ ತಮ್ಮ ವಾರ್ಷಿಕ ಇಂಧನ ಬಳಕೆ ಮತ್ತು ಇಂಧನ ಉತ್ಪಾದನೆಯ ಸ್ಥಿತಿಗತಿ ವರದಿಯ ಒಂದು ಪ್ರತಿಯನ್ನು ಬ್ಯೂರೋ ಆಫ್ ಎನರ್ಜಿ ಎಫಿಷಿಯನ್ಸಿ ರವರಿಗೆ ಸಂಬಂಧಿತ ಏಜೆನ್ಸಿಗೆ ಸಲ್ಲಿಸಬೇಕು.

ಒಂದು ಸೆಕ್ಟರ್‌ಗೆ ಸಂಬಂಧಿತ ನಿಗದಿತ ನಮೂನೆಯನ್ನು ಅಥವಾ ಫಾರಂ–1 ಅನ್ನು ಸದರಿ ಬಿಇಇ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು: https://beeindia.gov.in/content/pat-performa.

ಯಾವುದೇ ವ್ಯಕ್ತಿಯು 30ನೇ ಜೂನ್, 2022 ರೊಳಗೆ ವಾರ್ಷಿಕ ಬಳಕೆಯ ಸ್ಥಿತಿಗತಿ ವರದಿಯನ್ನು ಸಲ್ಲಿಸಲು ವಿಫಲವಾದಲ್ಲಿ, ಅಂತಹವರು ಇಂಧನ ಸಂರಕ್ಷಣಾ ಕಾಯ್ದೆ, 2001ರ ಕ್ಲಾಜ್ 26 ಅಡಿಯಲ್ಲಿ ಶಿಕ್ಷೆಗೆ ಗುರಿಯಾಗುವರು.

ಹೆಚ್ಚಿನ ಮಾಹಿತಿಗಾಗಿ/ವಿಚಾರಣೆಗಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ 011–26766700 ಅಥವಾ newdc@beenet.in ವಿಳಾಸಕ್ಕೆ ಇಮೇಲ್ ಬರೆಯಿರಿ.

**ಮಿಷನ್ ಡೈರೆಕ್ಟರ್**
**ಎನ್‌ಎಂಇಇಇ**

DAVP 34106/12/0020/2122

---

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರು (ಪೂರ್ವ)ರವರ ಕಛೇರಿ,
ಮೇಯೋಹಾಲ್, ಬೆಂಗಳೂರು

**ಸಂ.: ಜಂಆ(ಪೂ)ಪಿಆರ್/3601/21–22 ದಿನಾಂಕ: 03.03.2022**

### ಸಾರ್ವಜನಿಕ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಡೆತನದ ಸಹಾಯಕ ಕಂದಾಯ ಅಧಿಕಾರಿ (ಪೂರ್ವ–ಮಾರುಕಟ್ಟೆ) ವ್ಯಾಪ್ತಿಗೆ ಬರುವ ಹಲಸೂರು ಮಾರುಕಟ್ಟೆಯ ಈ ಕೆಳಕಂಡ ಮಳಿಗೆದಾರರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಮಳಿಗೆದಾರರುಗಳ ವಿವರಗಳು

| ಕ್ರ. ಸಂ. | ಮಳಿಗೆದಾರರ ಹೆಸರು | ಮಳಿಗೆ ಸಂಖ್ಯೆ | ಕ್ರ. ಸಂ. | ಮಳಿಗೆದಾರರ ಹೆಸರು | ಮಳಿಗೆ ಸಂಖ್ಯೆ |
|---|---|---|---|---|---|
| 1 | ಸೈಯದ್ ಆರಿಫ್ ಹುಸೇನ್ | 1 | 36 | ಅಬ್ದುಲ್ ವಾಜಿದ್ | 42 |
| 2 | ಜಮಲುದ್ದೀನ್ | 2 | 37 | ಷೇಕ್ ಅಹ್ಮದ್ | 43 |
| 3 | ಸೈಯದ್ ಇಂತಿಯಾಜ್ | 3 | 38 | ಷೇಕ್ ಮುಖ್ತರ್ | 44 |
| 4 | ಮಹ್ಮದ್ ಗಜಲ್ | 4 | 39 | ಮುಕ್ತರ್ | 45 |
| 5 | ಪಿ. ಅಬ್ದುಲ್ ಮಾಲಿಕ್ | 5 | 40 | ಅಗ್ಸರ್ ಅಹ್ಮದ್ | 46 |
| 6 | ಸೈಯದ್ ಗೌಸ್ | 6 | 41 | ನಾಗಪ್ಪ ಮೊದಲಿಯಾರ್ | 47/48 |
| 7 | ಓಬೇದೂರ್ | 7 | 42 | ಅಪ್ಸರ್ ಎಂ. | 49 |
| 8 | ಸೈಯದ್ ಬೀ | 8 | 43 | ಅರುಮ್ಗಂ | 50 |
| 9 | ಪಿ. ಅಬೀಬುಲ್ಲಾ | 9 | 44 | ಕೆ. ರಾಮಮೂರ್ತಿ | 50/0 |
| 10 | ನಾಗಮ್ಮ | 10 | 45 | ಎಸ್. ಸತ್ಯನಾರಾಯಣ | 51 |
| 11 | ಸೈಯದ್ ಇಂತಿಯಾಜ್ | 11 | 46 | ಪಚ್ಚಯ್ಯ | 52 |
| 12 | ಡಿ. ಅಬ್ದುಲ್ ಜಲೀಲ್ | 12 | 47 | ಆಸೀಫ್ ಶರೀಫ್ | 53 |
| 13 | ಅಬ್ದುಲ್ ಜಬ್ಬಾರ್ | 13 | 48 | ಕೆ. ಅಬ್ದುಲ್ ವಾಹಿದ್ | 54 |
| 14 | ರಾಮಚಂದ್ರ | 14 | 49 | ವಿ.ಬಿ. ಕದಿರ್‌ವೇಲು | 55 |
| 15 | ಮಹ್ಮದ್ ಮುಸ್ತಫ್ | 15 | 50 | ಜೆ.ಸಿ. ಇಂದಿರಾ | 56 |
| 16 | ಶಪಿ ಅಹ್ಮದ್ | 16 | 51 | ಜಲೀಲ್ ಅಬ್ದುಲ್ ಗಫಾರ್ | 57 |
| 17 | ಅಬ್ದುಲ್ ರಷೀದ್ | 17 | 52 | ಕರೀಂ ಅಬ್ದುಲ್ | 58 |
| 18 | ಅಬ್ದುಲ್ ಶುಕೋರ್ | 18 | 53 | ಹಾಜೀ ಅಬ್ದುಲ್ ರಜಾಕ್ | 59 |
| 19 | ಸಾವಿತ್ರಮ್ಮ | 19 | 54 | ಎ.ಜಿ. ಮಹ್ಮದ್ | 60 |
| 20 | ಅಮ್ಮಾನ್ | 20 | 55 | ಮುನೀರ್ | 61 |
| 21 | ಕುಪ್ಪಮ್ಮ | 21 | 56 | ಎ.ಜಿ. ಮಹ್ಮದ್ ಆಡಂ | 62 |
| 22 | ಎ. ಬಾಬುಜಾನ್ | 22 | 57 | ಅಬ್ದುಲ್ ಅಲಿ | 63 |
| 23 | ಶಾಹಿದ್ ಬೇಗಂ | 23 | 58 | ನೂರ್ ಜಹಾನ್ | 64 |
| 24 | ಅಬ್ದುಲ್ ಸತ್ತಾರ್ | 24 | 59 | ಕೆ. ಅಬ್ದುಲ್ ಖಾದರ್ | 65 |
| 25 | ಪಿ.ಕೆ. ಅಬ್ದುಲ್ | 25 | 60 | ಅಬ್ದುಲ್ ಅಮೀದ್ | 66 |
| 26 | ಪ್ಯಾರೇಜಾನ್ | 26 | 61 | ಮುಸ್ತಫ್ ಹುಸೇನ್ | 67 |
| 27 | ಪಿ.ಎಂ. ಇಲಿಯಾಸ್ | 27 | 62 | ಬಿ.ಎಸ್. ಅಹ್ಮದ್ ಹುಸೇನ್ | 68 |
| 28 | ಅನ್ವರ್ ಖಾನ್ | 28 | 63 | ಆರ್. ನರಸಿಂಹನ್ | 69 |
| 29 | ನಿಸ್ಸಾರ್ ಅಹ್ಮದ್ | 29/30 | 64 | ಗುಣಶೇಖರ್ | 70 |
| 30 | ಸಿ.ಹೆಚ್. ರಫಿ ಅಹ್ಮದ್ | 31/32 | 65 | ಕೋಟೇಶ್ವರಿ | 71 |
| 31 | ಆರೀಫ್ ಬೇಗಂ | 33/34 | 66 | ಮುನಿಸ್ವಾಮಿ | 72 |
| 32 | ಇಕ್ಬಲ್ | 35/36 | 67 | ಎಸ್. ಗೀತಾ | 73 |
| 33 | ಅಬ್ದುಲ್ ಮುಜೀಬ್ | 37/38 | 68 | ಪಾರ್ಥಿಬನ್ | 74 |
| 34 | ಬಿ. ಶಣ್ಮುಗಂ | 39/40 | 69 | ಮಹಾಲಿಂಗಂ | 75 |
| 35 | ಚಾಂದ್ ಪಾಷ | 41 | | | |

ಸದರಿ ಮಾರುಕಟ್ಟೆಯು ಶಿಥಿಲಾವಸ್ಥೆಯಲ್ಲಿದ್ದು ಹಾಗೂ ಮಾರುಕಟ್ಟೆ ಕಟ್ಟಡವು ತುಂಬಾ ಹಳೆಯ ಕಟ್ಟಡವಾಗಿದ್ದು, ಸದರಿ ಮಾರುಕಟ್ಟೆ ಕಟ್ಟಡಗಳ ಗೋಡೆಗಳು ಹಾಗೂ ಮೇಲ್ಛಾವಣಿಗಳು ತುಂಬಾ ಶಿಥಿಲಗೊಂಡಿದ್ದು, ಮುಂದಿನ ದಿನಗಳಲ್ಲಿ ಸದರಿ ಕಟ್ಟಡವು ಮಳೆಯಿಂದ ಕುಸಿದು ಬೀಳುವ ಸಂಭವವಿರುತ್ತದೆ ಮತ್ತು ಪ್ರಾಣ ಹಾನಿಯಾಗುವ ಸಂಭವವಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಮಾರುಕಟೆಯ ಮಳಿಗೆದಾರರುಗಳಿಗೆ ನೋಟೀಸ್ ಜಾರಿ ಮಾಡಲಾಗಿದ್ದು, ತಾವುಗಳು ಉದ್ದೇಶಪೂರ್ವಕವಾಗಿ ನೋಟೀಸನ್ನು ಸ್ವೀಕರಿಸದೇ ತಿರಸ್ಕರಿಸಿರುತ್ತೀರಿ. ಆದರೂ ಸಹ ಮಳಿಗೆದಾರರುಗಳಾದ ತಾವುಗಳು ಮಳಿಗೆಗಳನ್ನು ಖಾಲಿ ಮಾಡಲು ಯಾವುದೇ ಕ್ರಮವಹಿಸದೇ ಇರುವುದು ಕಂಡು ಬಂದಿರುತ್ತದೆ. ಆದ್ದರಿಂದ, ಈ ಸಾರ್ವಜನಿಕ ಪ್ರಕಟಣೆ ಪ್ರಕಟಣೆಗೊಂಡ 7 ದಿನಗಳ ಒಳಗಾಗಿ ಪೂರ್ತಿ ಪ್ರಮಾಣದ ಬಾಡಿಗೆ / ಗುತ್ತಿಗೆ ಮೊತ್ತವನ್ನು ಪಾವತಿಸಿ, ಸದರಿ ಮಳಿಗೆಗಳನ್ನು ಖಾಲಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಮುಂದೆ ಯಾವುದೇ ನಷ್ಟ ಅಥವಾ ಪ್ರಾಣಾಪಾಯ ಉಂಟಾದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಜವಾಬ್ದಾರರಾಗುವುದಿಲ್ಲ ಹಾಗೂ 7 ದಿನಗಳ ನಂತರ ಬಿ.ಬಿ.ಎಂ.ಪಿ. 2020ರ ಕಾಯ್ದೆ ಸೆಕ್ಷನ್ 256ರ ಅಡಿಯಲ್ಲಿ ಶಿಥಿಲಗೊಂಡ ಕಟ್ಟಡವನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

**ಸಹಿ/– ಜಂಟಿ ಆಯುಕ್ತರು (ಪೂರ್ವ), ಬಿಬಿಎಂಪಿ**

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

### ಸಾಲು ಸಾಲು ರ್‍ಯಾಲಿ, ಪ್ರತಿಭಟನೆ ● ನಿತ್ಯವೂ ವಿಪರೀತ ದಟ್ಟಣೆ: ಜನ ಸುಸ್ತು

# ಶೇಷಾದ್ರಿ ರಸ್ತೆ ಸ್ಥಗಿತವಾದರೆ ಸಂಚಾರ ಅಸ್ತವ್ಯಸ್ತ

● ಸಂತೋಷ ಜಿಗಳಿಕೊಪ್ಪ

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಯುತ್ತಿದ್ದ ವೇಳೆ ಶೇಷಾದ್ರಿ ರಸ್ತೆಯಲ್ಲಿ ದಟ್ಟಣೆ ಉಂಟಾಗಿ, ವಾಹನಗಳು ಸಾಲುಗಟ್ಟಿ ನಿಂತಿದ್ದವು – ಪ್ರಜಾವಾಣಿ ಚಿತ್ರ / ರಂಜು ಪಿ.

**ಬೆಂಗಳೂರು:** ನಗರದ ಶೇಷಾದ್ರಿ ರಸ್ತೆಯಲ್ಲಿ ವಾಹನಗಳ ಸಂಚಾರಕ್ಕೆ ಮೇಲಿಂದ ಮೇಲೆ ನಿರ್ಬಂಧ ವಿಧಿಸಲಾಗುತ್ತಿದ್ದು, ಇದು ವಿಪರೀತ ಸಂಚಾರ ದಟ್ಟಣೆಗೆ ಕಾರಣವಾಗುತ್ತಿದೆ. ಸಾಲು ಸಾಲು ಪ್ರತಿಭಟನೆ, ರ್‍ಯಾಲಿ, ಧರಣಿ, ಮೆರವಣಿಗೆಗಾಗಿ ರಸ್ತೆ ಬಂದ್ ಮಾಡುತ್ತಿರುವುದರಿಂದ, ಜನಸಾಮಾನ್ಯರು ನಿತ್ಯವೂ ಸಂಚಾರ ಕಿರಿಕಿರಿ ಅನುಭವಿಸುತ್ತಿದ್ದಾರೆ.

ರಾಜಧಾನಿ ಹೃದಯ ಭಾಗಲ್ಲಿರುವ ಮೆಜೆಸ್ಟಿಕ್, ಗಾಂಧಿನಗರ, ಶೇಷಾದ್ರಿಪುರ ಪ್ರದೇಶಗಳಿಗೆ ಶೇಷಾದ್ರಿ ರಸ್ತೆ ಹೊಂದಿಕೊಂಡಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಕೆ.ಆರ್. ವೃತ್ತದವರೆಗೂ ರಸ್ತೆ ವ್ಯಾಪಿಸಿದೆ. ಇದೇ ರಸ್ತೆಯಲ್ಲಿ ಸ್ವಾತಂತ್ರ್ಯ ಉದ್ಯಾನವಿದ್ದು, ಪ್ರತಿಭಟನೆ ಹಾಗೂ ಬಹಿರಂಗ ಸಭೆಗಳಿಗೆ ಅವಕಾಶ ಕಲ್ಪಿಸಲಾಗುತ್ತಿದೆ.

ಪ್ರತಿಭಟನೆಗೆ ಬರುವವರು, ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ನಗರ ರೈಲು ನಿಲ್ದಾಣದಿಂದ ಉದ್ಯಾನದವರೆಗೆ ಶೇಷಾದ್ರಿ ರಸ್ತೆ ಮೂಲಕ ಮೆರವಣಿಗೆ ನಡೆಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಶೇಷಾದ್ರಿ ರಸ್ತೆ ಬಂದ್ ಮಾಡಲಾಗುತ್ತಿದ್ದು, ಇದು ಸಂಚಾರ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ.

ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ಹಾಗೂ ರೈಲು ನಿಲ್ದಾಣಕ್ಕೆ ಬರುವ ಬಹುಪಾಲು ಮಂದಿ, ಶೇಷಾದ್ರಿ ರಸ್ತೆ ಮೂಲಕ ನಿಗದಿತ ಸ್ಥಳಗಳಿಗೆ ತೆರಳುತ್ತಿದ್ದಾರೆ. ರಸ್ತೆ ಬಂದ್ ಮಾಡಿದಾಗ, ಅವರೆಲ್ಲ ದಟ್ಟಣೆಯಲ್ಲಿ ಸಿಲುಕಿ ಪರದಾಡುತ್ತಿದ್ದಾರೆ. ದೊಡ್ಡ ರ್‍ಯಾಲಿಗಳು ಇದ್ದಾಗ ಗಂಟೆಗಟ್ಟಲೇ ರಸ್ತೆಯಲ್ಲಿ ಕಾದು, ವ್ಯವಸ್ಥೆಗೆ ಹಿಡಿಶಾಪ ಹಾಕುತ್ತಿದ್ದಾರೆ.

'ನಗರದ ಎಲ್ಲ ಪ್ರದೇಶ ಹಾಗೂ ಹೊರ ರಾಜ್ಯದ ಎಲ್ಲ ಭಾಗಗಳಿಗೆ ಮೆಜೆಸ್ಟಿಕ್‌ನಿಂದ ಬಸ್ ಸೇವೆ ಇದೆ. ನಿಲ್ದಾಣದಿಂದ ಹೊರಬರುವ ಬಹುತೇಕ ಬಸ್‌ಗಳು, ಶೇಷಾದ್ರಿ ರಸ್ತೆ ಮೂಲಕ ಸಾಗುತ್ತವೆ. ದಟ್ಟಣೆ ಉಂಟಾದರೆ, ಬಸ್‌ಗಳು ನಿಂತಲ್ಲೇ ನಿಲ್ಲಬೇಕಾಗುತ್ತದೆ' ಎಂದು ಬಿಎಂಟಿಸಿ ಚಾಲಕ ರಮೇಶ್ ಹೇಳಿದರು.

**ಪ್ರಯಾಣ ಪ್ರಯಾಸ**

'ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣದಿಂದಲೇ ಪ್ರತಿಭಟನಕಾರರು ಮೆರವಣಿಗೆ ಆರಂಭಿಸುತ್ತಾರೆ. ಇಂಥ ಸಂದರ್ಭದಲ್ಲಿ ಬಸ್ ಹಾಗೂ ಖಾಸಗಿ ವಾಹನಗಳ ಓಡಾಟ ಬಂದ್ ಆಗುತ್ತದೆ' ಎಂದೂ ತಿಳಿಸಿದರು.

**ಮೇಲ್ಸೇತುವೆ ಬಂದಾದರೂ ಸಮಸ್ಯೆ:** 'ಆನಂದರಾವ್ ವೃತ್ತ ಒಳಗೊಂಡಿರುವ ಶೇಷಾದ್ರಿ ರಸ್ತೆಯಲ್ಲಿ ಈ ಹಿಂದೆ ವಿಪರೀತ ದಟ್ಟಣೆ ಇರುತ್ತಿತ್ತು. ಇದನ್ನು ತಪ್ಪಿಸಲು ಮೇಲ್ಸೇತುವೆ ನಿರ್ಮಿಸಲಾಗಿದ್ದು, ಇದಕ್ಕೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ಹೆಸರಿಡಲಾಗಿದೆ. ಈಗ ಮೇಲ್ಸೇತುವೆಯಲ್ಲಿ ಮೇಲಿಂದ ಮೇಲೆ ವಾಹನಗಳ ಸಂಚಾರ ನಿರ್ಬಂಧಿಸುತ್ತಿರುವುದರಿಂದ ದಟ್ಟಣೆ ಹೆಚ್ಚಾಗುತ್ತಿದೆ. ನಿತ್ಯದ ಕೆಲಸಕ್ಕಾಗಿ ಶೇಷಾದ್ರಿ ರಸ್ತೆ ಮೂಲಕ ಹೋಗಬೇಕಾದ ಜನ ಹೈರಾಣಾಗುತ್ತಿದ್ದಾರೆ.

'ಪ್ರತಿಭಟನೆ ಸಂದರ್ಭದಲ್ಲಿ ಕೆಎಸ್‌ಆರ್ ಮೇಲ್ಸೇತುವೆ ಪ್ರವೇಶ ದ್ವಾರದಲ್ಲಿ ಬ್ಯಾರಿಕೇಡ್ ನಿಲ್ಲಿಸಿ ವಾಹನಗಳ ಸಂಚಾರ ತಡೆಯಲಾಗುತ್ತದೆ. ಆಗ, ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಮೆಜೆಸ್ಟಿಕ್, ಗಾಂಧಿನಗರ, ಓಕಳಿಪುರ, ಮಲ್ಲೇಶ್ವರ, ರೇಸ್‌ಕೋರ್ಸ್ ರಸ್ತೆ, ಕೆ.ಜಿ. ರಸ್ತೆ, ಶೇಷಾದ್ರಿಪುರ, ಮಲ್ಲೇಶ್ವರ, ಹಳೇ ಮೈಸೂರು ರಸ್ತೆ, ರಾಜಾಜಿನಗರ, ಓಕಳಿಪುರ, ಶ್ರೀರಾಮಪುರ, ಅರಮನೆ ರಸ್ತೆ, ಕೆ.ಆರ್. ವೃತ್ತ, ಕಾರ್ಪೊರೇಷನ್ ವೃತ್ತ, ಚಾಲುಕ್ಯ ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನಗಳ ಸಂಚಾರ ನಿಧಾನವಾಗಿ ದಟ್ಟಣೆ ಉಂಟಾಗುತ್ತದೆ' ಎಂದು ಆನಂದರಾವ್ ವೃತ್ತದ ವ್ಯಾಪಾರಿ ರಾಜಶೇಖರ್ ಹೇಳಿದರು.

'ಮೇಲ್ಸೇತುವೆ ಬಂದ್ ಆದಾಗ, ರೇಸ್‌ಕೋರ್ಸ್ ರಸ್ತೆ ಮೂಲಕ ವಾಹನಗಳು ಬಸವೇಶ್ವರ ವೃತ್ತಕ್ಕೆ ಹೋಗುತ್ತದೆ. ಆನಂದರಾವ್ ವೃತ್ತದ ಮೂಲಕವೂ ಕೆಲ ವಾಹನಗಳು ಸಂಚರಿಸಿ ಉದ್ಯಾನ ಬಳಿ ರಸ್ತೆಗೆ ಸೇರುತ್ತವೆ. ಇಂಥ ಸಂದರ್ಭದಲ್ಲಿ ಬಳ್ಳಾರಿ ರಸ್ತೆ, ಅರಮನೆ ರಸ್ತೆ ಹಾಗೂ ಕೆ.ಆರ್. ವೃತ್ತದಲ್ಲಿ ವಾಹನಗಳ ದಟ್ಟಣೆ ಉಂಟಾಗುತ್ತದೆ' ಎಂದೂ ಹೇಳಿದರು.

ಶೇಷಾದ್ರಿ ರಸ್ತೆಯಲ್ಲಿ ಹಾದು ಕೆ.ಆರ್. ವೃತ್ತದ ಮಾರ್ಗವಾಗಿ ಲಾಲ್‌ಬಾಗ್ ಬಳಿಯ ಕಚೇರಿಗೆ ಕೆಲಸಕ್ಕೆ ಹೋಗಿ ಬರುತ್ತೇನೆ. ಶೇಷಾದ್ರಿ ರಸ್ತೆ ಬಂದಾದರೆ, ದಟ್ಟಣೆಯಲ್ಲಿ ಸಿಲುಕುತ್ತೇನೆ. ಕೆಲಸಕ್ಕೆ ಹೋಗುವುದು ತಡವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಮೇಲಿಂದ ಮೇಲೆ ಪ್ರತಿಭಟನೆಗಳು ನಡೆಯುತ್ತಿತ್ತು. ಸಾಕಾಗಿ ಹೋಗಿದೆ

**ಆರ್. ಭರತ್**, ರಾಜಾಜಿನಗರ ನಿವಾಸಿ

ಈ ಹಿಂದೆ ಓಕಳಿಪುರ ವೃತ್ತದಲ್ಲಿ ದಟ್ಟಣೆ ಇರುತ್ತಿತ್ತು. ರಸ್ತೆ ವಿಸ್ತರಣೆ ಮಾಡಿದ್ದರಿಂದ ಸಮಸ್ಯೆ ಬಗೆಹರಿದಿದೆ. ಆದರೆ, ಈಗ ಪ್ರತಿಭಟನೆ ಹಾಗೂ ರ್‍ಯಾಲಿಯಿಂದಾಗಿ ಶೇಷಾದ್ರಿ ರಸ್ತೆಯಲ್ಲಿ ವಿನಾಕಾರಣ ದಟ್ಟಣೆ ಆಗುತ್ತಿದೆ. ಇದರಿಂದ ಮುಕ್ತಿ ಯಾವಾಗ ?

**ಆರೀಫ್**, ಬಟ್ಟೆ ವ್ಯಾಪಾರಿ

ಪದೇ ಪದೇ ದಟ್ಟಣೆಯಲ್ಲಿ ಸಿಲುಕಿ ಸಾಕಾಗಿತ್ತು. ಕೆಲಸಕ್ಕೆ ತಡವಾಗಿ ಹೋಗುತ್ತಿದ್ದರಿಂದ ವ್ಯವಸ್ಥಾಪಕ ಬೈಯುತ್ತಿದ್ದ. ಹೀಗಾಗಿ, ರಾಜಾಜಿನಗರದಲ್ಲಿರುವ ಸ್ವಂತ ಮನೆಯನ್ನು ಬಾಡಿಗೆಗೆ ಕೊಟ್ಟು, ಶಾಂತಿನಗರ ಬಳಿಯ ಕಚೇರಿ ಸಮೀಪದಲ್ಲೇ ಬಾಡಿಗೆ ಮನೆ ಮಾಡಿದ್ದೇನೆ

**ಎಸ್. ಮೋಹನ್ ಕುಮಾರ್**, ಖಾಸಗಿ ಕಂಪನಿ ಉದ್ಯೋಗಿ

## 'ಸರ್ಕಾರ ನಡೆಸುವವರ ಮನೆ ಮುಂದೆ ಪ್ರತಿಭಟಿಸಿ'

'ಪ್ರತಿಭಟನೆ ಎಲ್ಲರ ಹಕ್ಕು. ಆದರೆ, ಅದು ಜನಸಾಮಾನ್ಯರ ಅನ್ನ ಕಿತ್ತುಕೊಳ್ಳಬಾರದು. ನೂರಾರು ವ್ಯಾಪಾರಿಗಳು, ಸರಕು ಸಾಗಿಸಿ ಜೀವನ ನಡೆಸುತ್ತಿದ್ದಾರೆ. ಶೇಷಾದ್ರಿ ರಸ್ತೆಯಿಂದಾದ ದಟ್ಟಣೆಯಲ್ಲಿ ಅವರೆಲ್ಲ ಒಮ್ಮೆ ಸಿಲುಕಿದರೂ ನಷ್ಟ ಅನುಭವಿಸುತ್ತಾರೆ' ಎಂದು ಗೂಡ್ಸ್ ವಾಹನದ ಚಾಲಕ ರಂಗಸ್ವಾಮಿ ಅಳಲು ತೋಡಿಕೊಂಡರು.

'ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲು ಬರುವವರು, ರಸ್ತೆ ಬಂದ್ ಮಾಡಿ ಜನರಿಗೆ ತೊಂದರೆ ನೀಡುತ್ತಿದ್ದಾರೆ. ಇದರ ಬದಲು, ಸರ್ಕಾರ ನಡೆಸುವವರ ಮನೆ ಹಾಗೂ ಕಚೇರಿ ಎದುರು ಪ್ರತಿಭಟನೆ ಮಾಡಬೇಕು. ಅವಾಗಲೇ ಮುಖ್ಯಮಂತ್ರಿ, ಸಚಿವರು ಹಾಗೂ ಶಾಸಕರಿಗೆ ದಟ್ಟಣೆ ಸಮಸ್ಯೆ ಹೇಗಿರುತ್ತದೆ ? ಎಂಬುದು ತಿಳಿಯುತ್ತದೆ' ಎಂದೂ ಹೇಳಿದರು.

'ರಸ್ತೆಯಲ್ಲಿ ಪ್ರತಿಭಟನೆ ಮಾಡಿ, ಸಂಚಾರಕ್ಕೆ ಅಡ್ಡಿಪಡಿಸುವುದು ಯಾವ ನ್ಯಾಯ. ಒಂದು ದಿನ ನಾವು ಗೂಡ್ಸ್ ವಾಹನ ಚಲಾಯಿಸದಿದ್ದರೆ, ನನ್ನ ಕುಟುಂಬ ಉಪವಾಸವಿರಬೇಕಾಗುತ್ತದೆ' ಎಂದೂ ರಂಗಸ್ವಾಮಿ ತಿಳಿಸಿದರು.

### ಪ್ರತಿಭಟನೆ: ಸ್ಥಳಾಂತರ ಪ್ರಸ್ತಾವ ತಟಸ್ಥ

'ರಾಜ್ಯದ ಆಡಳಿತ ಕೇಂದ್ರ ವಿಧಾನಸೌಧ, ಶೇಷಾದ್ರಿ ರಸ್ತೆಯ ಸ್ವಾತಂತ್ರ್ಯ ಉದ್ಯಾನಕ್ಕೆ ಹತ್ತಿರದಲ್ಲಿದೆ. ಸರ್ಕಾರದ ಗಮನಸೆಳೆಯುವುದಕ್ಕಾಗಿ ಉದ್ಯಾನದಲ್ಲಿ ಪ್ರತಿಭಟನೆಗಳನ್ನು ಹಮ್ಮಿಕೊಳ್ಳುತ್ತಾರೆ. ಕಾನೂನು ಸುವ್ಯವಸ್ಥೆ ದೃಷ್ಟಿಯಿಂದ ರಸ್ತೆಗಳನ್ನು ಬಂದ್ ಮಾಡಿ, ಪ್ರತಿಭಟನೆಗೆ ಅವಕಾಶ ಕಲ್ಪಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಹೊರ ಜಿಲ್ಲೆಯಿಂದ ಬರುವ ಜನ, ಮೆಜೆಸ್ಟಿಕ್ ಹಾಗೂ ಗಾಂಧಿನಗರದಲ್ಲಿ ವಸತಿ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಮೆರವಣಿಗೆ ಮೂಲಕ ಉದ್ಯಾನಕ್ಕೆ ಬರುತ್ತಾರೆ. ಅವರಿಗೆ ರಕ್ಷಣೆ ನೀಡುವುದು ಪೊಲೀಸರ ಕರ್ತವ್ಯ. ಪ್ರತಿಭಟನೆಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಸಂಬಂಧ ಹಲವು ಬಾರಿ ಚರ್ಚೆ ಆಗಿದೆ. ಇದಕ್ಕೆ ಹಲವರು ವಿರೋಧ ವ್ಯಕ್ತಪಡಿಸಿದ್ದರು. ಹೀಗಾಗಿ, ಈ ಪ್ರಸ್ತಾವ ಸದ್ಯಕ್ಕೆ ತಟಸ್ಥವಾಗಿದೆ' ಎಂದೂ ತಿಳಿಸಿದರು.

ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ, ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಕರ್ನಾಟಕ ಟೂರಿಸಂ ಸೊಸೈಟಿ ಅಧ್ಯಕ್ಷ ಕೆ.ಶ್ಯಾಮರಾಜು, ಟಿ.ಎ.ಎ.ಐ. ವಿಭಾಗೀಯ ಅಧ್ಯಕ್ಷ ಅಮಿಶ್ ದೇಸಾಯಿ ಅವರು ಮೇಳ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

## ಪ್ರವಾಸೋದ್ಯಮ ಮೇಳ: 100ಕ್ಕೂ ಅಧಿಕ ಪ್ರದರ್ಶಕರು ಭಾಗಿ

**ಬೆಂಗಳೂರು:** ಪ್ರಯಾಣ ಮತ್ತು ಪ್ರವಾಸೋದ್ಯಮ ಮೇಳಕ್ಕೆ (ಟಿಟಿಎಫ್) ಶುಕ್ರವಾರ ಚಾಲನೆ ಲಭಿಸಿದ್ದು, ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಮತ್ತು ಕೇರಳ ಸೇರಿದಂತೆ ಒಟ್ಟು 12 ರಾಜ್ಯಗಳ 100ಕ್ಕೂ ಅಧಿಕ ಪ್ರದರ್ಶಕರು ಮೇಳದಲ್ಲಿ ಭಾಗಿಯಾಗಿದ್ದಾರೆ.

ಅರಮನೆ ಮೈದಾನದಲ್ಲಿ ಇದೇ 6ರವರೆಗೆ ನಡೆಯುವ ಮೇಳದಲ್ಲಿ 'ಸಾಹಸ ಪ್ರವಾಸೋದ್ಯಮ' ಎಲ್ಲರ ಆಕರ್ಷಣೆಯಾಗಿದೆ.

'ಕೋವಿಡ್‌ನಿಂದಾಗಿ ಪ್ರವಾಸೋದ್ಯಮಕ್ಕೆ ದೊಡ್ಡ ಪೆಟ್ಟು ಬಿದ್ದಿತ್ತು. ಎರಡು ವರ್ಷ ಯಾವುದೇ ಚಟುವಟಿಕೆಗಳು ನಡೆದಿರಲಿಲ್ಲ. ಕೋವಿಡ್ ಕಡಿಮೆಯಾಗುತ್ತಿರುವುದರಿಂದ ಅಂತರರಾಜ್ಯ ಪ್ರಯಾಣದ ಮೇಲಿನ ನಿರ್ಬಂಧ ಸಡಿಲ ಗೊಂಡಿದೆ. ಹೀಗಾಗಿ ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ಮೇಳ ಆಯೋಜಿಸಲಾಗಿದೆ' ಎಂದು ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ತಿಳಿಸಿದರು.

'ಟಿಟಿಎಫ್ ಬೆಂಗಳೂರು, ದೇಶದ ಅತ್ಯಂತ ಹಳೆಯ ಹಾಗೂ ಅತಿ ದೊಡ್ಡ ಪ್ರವಾಸೋದ್ಯಮ ಜಾಲದ ಭಾಗವಾಗಿದೆ. ಭಾರತದ ಪ್ರವಾಸೋದ್ಯಮವನ್ನು ಪುನರುಜ್ಜೀವನಗೊಳಿಸಲು ಹಾಗೂ ಮೆರುಗು ನೀಡಲು ಈ ಮೇಳ ಸಹಕಾರಿಯಾಗಲಿದೆ' ಎಂದು ಹೇಳಿದರು.

## 12-17 ವಯಸ್ಸಿನವರಿಗೆ ಕೊವ್ಯಾಕ್ಸಿನ್: ತುರ್ತು ಬಳಕೆಗೆ ಅನುಮತಿ

**ನವದೆಹಲಿ (ಪಿಟಿಐ):** 12–17 ವಯಸ್ಸಿನ ಮಕ್ಕಳಿಗೆ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಂಸ್ಥೆಯ ಕೋವ್ಯಾಕ್ಸಿನ್ ಲಸಿಕೆಯನ್ನು ತುರ್ತು ಸಂದರ್ಭದಲ್ಲಿ ಬಳಕೆ ಮಾಡಲು ಕೇಂದ್ರೀಯ ಔಷಧಿ ಪ್ರಾಧಿಕಾರದ ತಜ್ಞರ ಸಮಿತಿ ಶಿಫಾರಸು ಮಾಡಿದೆ. ಅನುಮತಿಗಾಗಿ ಸೀರಂ ಸಂಸ್ಥೆ ಫೆ.21 ರಂದು ಅರ್ಜಿ ಸಲ್ಲಿಸಿತ್ತು.

ಭಾರತದ ಔಷಧ ಮಹಾ ನಿಯಂತ್ರಕರು ವಯಸ್ಕರಿಗೆ ತುರ್ತು ಸಂದರ್ಭದಲ್ಲಿ ಕೋವ್ಯಾಕ್ಸಿನ್ ಲಸಿಕೆ ನೀಡಲು ಕಳೆದ ಡಿಸೆಂಬರ್‌ನಲ್ಲಿ ಅನುಮತಿ ನೀಡಿತ್ತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

### ಕಾಣೆಯಾಗಿದ್ದಾರೆ



ಶ್ರೀ ವೈ.ಎಸ್ ಕೃಷ್ಣೇಗೌಡ

ಶ್ರೀ ವೈ.ಎಸ್ ಕೃಷ್ಣೇಗೌಡ ದಿವಂಗತ ಶ್ರೀಕಂಠಯ್ಯನವರ ಮಗ ಸುಮಾರು 10 ವರ್ಷದಿಂದ ಮನೆಯಿಂದ ಕಾಣೆಯಾಗಿರುತ್ತಾರೆ.
ವಯಸ್ಸು 65 ವರ್ಷ, ಚಪ್ಪಟೆ ಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, 5.6 ಅಡಿ ಎತ್ತರ ಕನ್ನಡ ಮಾತನಾಡುತ್ತಾರೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಕೆಳಗಿನ ಮೊಬೈಲ್‌ಗೆ ಕರ ಮಾಡಿ 9902993653

ಬೆಳಗಾವಿ ಜಿಲ್ಲೆ ಗೋಕಾಕದಲ್ಲಿ ಶೂನ್ಯ ಸಂಪಾದನ ಮಠದಿಂದ ಶುಕ್ರವಾರ ನಡೆದ 17ನೇ ಶರಣ ಸಂಸ್ಕೃತಿ ಉತ್ಸವದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ಅವರಿಗೆ 'ಕಾಯಕಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸತೀಶ ಶುಗರ್ಸ್ ನಿರ್ದೇಶಕಿ ಪ್ರಿಯಾಂಕಾ ಜಾರಕಿಹೊಳಿ, ಮುರುಘರಾಜೇಂದ್ರ ಸ್ವಾಮೀಜಿ, ಜಮಖಂಡಿ ಓಲೆಮಠ ಅಭಿನವಕುಮಾರ ಚನ್ನಬಸವ ಸ್ವಾಮೀಜಿ, ಡಾ.ವಿಶ್ವನಾಥ ಶಿಂದೋಳಿಮಠ, ಸಂಸದೆ ಮಂಗಲಾ ಅಂಗಡಿ ಮೊದಲಾದವರು ಚಿತ್ರದಲ್ಲಿದ್ದಾರೆ

## ನ್ಯಾಯಾಲಯಕ್ಕೆ ಗೈರು: ದಂಪತಿ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೈಸೂರಿನ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಸ್ಟಿಕ್ಸ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ (ಸಿಪೆಟ್) ನಿವೃತ್ತ ಉದ್ಯೋಗಿ ಎಚ್.ಎನ್. ಅರವಿಂದ್ ಮತ್ತು ಬಿಂದು ಅರವಿಂದ್ ದಂಪತಿಯನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ದಾಖಲಾಗಿದ್ದ ಪ್ರಕರಣದ ವಿಚಾರಣೆಗೆ ಗೈರಾಗಿದ್ದ ಆರೋಪದ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಂಧಿಸಿದ್ದಾರೆ.

ಸಿಪೆಟ್‌ನಲ್ಲಿ ₹ 1.25 ಕೋಟಿ ಅವ್ಯವಹಾರ ನಡೆಸಿದ ಆರೋಪ ದಂಪತಿ ಮೇಲಿದೆ. ಈ ಸಂಬಂಧ ಸಿಬಿಐ 2009ರಲ್ಲಿ ಪ್ರಕರಣ ದಾಖಲಿಸಿ, ತನಿಖೆ ನಡೆಸಿತ್ತು. ಬಳಿಕ ಜಾರಿ ನಿರ್ದೇಶನಾಲಯವೂ ಪಿಎಂಎಲ್‌ಎ ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿತ್ತು. ಬೆಂಗಳೂರು ನಗರದ ಪಿಎಂಎಲ್‌ಎ ವಿಶೇಷ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆಯುತ್ತಿದೆ.

ಆರೋಪ ನಿಗದಿಯ ಹಂತದಲ್ಲಿ ಅರವಿಂದ್ ಮತ್ತು ಬಿಂದು ನ್ಯಾಯಾಲಯಕ್ಕೆ ಗೈರಾಗಿದ್ದರು. ಇಬ್ಬರ ವಿರುದ್ಧವೂ ಫೆಬ್ರುವರಿ 8ರಂದು ಜಾಮೀನುರಹಿತ ವಾರೆಂಟ್ ಹೊರಡಿಸಿದ್ದ ನ್ಯಾಯಾಲಯ, ಬಂಧನಕ್ಕೆ ಆದೇಶಿಸಿತ್ತು. ಇಬ್ಬರನ್ನೂ ಬಂಧಿಸಿರುವ ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ನ್ಯಾಯಾಂಗದ ವಶಕ್ಕೆ ಒಪ್ಪಿಸಿದ್ದಾರೆ.

## ತಿಣ್ಣೈಕರ್ ಮೇಲೆ ಅಪರಿಚಿತ ವ್ಯಕ್ತಿಗಳಿಂದ ಹಲ್ಲೆ

**ಖಾನಾಪುರ:** ಪಟ್ಟಣದ ಆರ್‌.ಟಿ.ಐ ಕಾರ್ಯಕರ್ತ ಜಯಂತ ತಿಣ್ಣೈಕರ್ ಮೇಲೆ ಶುಕ್ರವಾರ ಸಂಜೆ ಅಪರಿಚಿತ ಯುವಕರ ತಂಡವೊಂದು ಬೆಳಗಾವಿ ಖಾನಾಪುರ ಹೆದ್ದಾರಿಯ ಝಾಡ ಶಹಾಪುರ ಗ್ರಾಮದ ಬಳಿ ಹಲ್ಲೆ ಮಾಡಿದೆ.

ಜಯಂತ ಕೈ-ಕಾಲುಗಳಿಗೆ ತೀವ್ರ ಗಾಯಗಳಾಗಿದ್ದು ಬೆಳಗಾವಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಸಂಬಂಧ ಬೆಳಗಾವಿ ಗ್ರಾಮೀಣ ಠಾಣೆಗೆ ತಿಣ್ಣೈಕರ್ ದೂರು ನೀಡಿದ್ದಾರೆ.

ತಿಣ್ಣೈಕರ್ ಅವರು ಬಹುಕೋಟಿ ಛಾಪಾ ಕಾಗದ ಹಗರಣದ ರೂವಾರಿ ಕರೀಂ ಲಾಲಾ ತೆಲಗಿ ಪ್ರಕರಣವನ್ನು ಬೆಳಕಿಗೆ ತರುವಲ್ಲಿ ಶ್ರಮಿಸಿದ್ದರು.

### ಕರ್ನಾಟಕ ರಾಜ್ಯಪಾಲರ ಸಚಿವಾಲಯ

ಪೋ.ಬಾ ಸಂಖ್ಯೆ: 5033, ರಾಜಭವನ, ಬೆಂಗಳೂರು–560 001
ದೂರವಾಣಿ: 080–22254102, ಫ್ಯಾಕ್ಸ್: 080–22258150

ಸಂಖ್ಯೆ: ಜಿಎಸ್/11/ಕೆಓಎಂ/2022 ದಿನಾಂಕ:04.03.2022

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನ**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯು ದಿನಾಂಕ: 29.05.2022 ರಂದು ತೆರವಾಗಲಿದ್ದು, ಅರ್ಹತೆಯುಳ್ಳ ಪ್ರಾಧ್ಯಾಪಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾರ್ಗಸೂಚಿಗಳು ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅಧಿನಿಯಮ, 1992 ರನ್ವಯ ಕನಿಷ್ಠಪಕ್ಷ 10 ವರ್ಷಗಳ ಕಾಲ ಪ್ರಾಧ್ಯಾಪಕರ ಹುದ್ದೆಯಲ್ಲಿ ಅಥವಾ ತತ್ಸಮಾನ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುವ ಪ್ರಾಧ್ಯಾಪಕರು ತ್ರಿಪ್ರತಿಯಲ್ಲಿ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವ ಇತ್ಯಾದಿ ವಿವರಗಳೊಂದಿಗೆ ವೆಬ್‌ಸೈಟ್: **ksoumysuru.in** ನಲ್ಲಿ ಲಭ್ಯವಿರುವ ನಿಗದಿತ ಅರ್ಜಿ ನಮೂನೆಯಲ್ಲಿ ಸ್ವಯಂಘೋಷಣೆಯೊಂದಿಗೆ ಸಮುಚಿತ ಮಾರ್ಗದ ಮುಖೇನ **ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ಪಿ.ಬಿ. ನಂ. 5033, ರಾಜಭವನ, ಬೆಂಗಳೂರು–560001.** ಇವರಿಗೆ **19.03.2022ರ ಸಂಜೆ 5:30ರೊಳಗೆ** ತಲುಪುವಂತೆ ಕಳುಹಿಸುವುದು.

ವಾಸಾಸಂಇ/ಬೆಂನ/ಜಗದಾಳೆ ಅಡ್ವರ್ಟೈಸಿಂಗ್/3593/2021–22 ಸಹಿ/– ರಾಜ್ಯಪಾಲರ ವಿಶೇಷ ಕಾರ್ಯದರ್ಶಿ

**ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.**

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## 'ಶಿಕ್ಷಣದಿಂದ ಹೆಣ್ಣುಮಕ್ಕಳ ಹೊರಹಾಕಲು ಹುನ್ನಾರ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವಸ್ತ್ರ ವಿವಾದದ ಕಾರಣದಿಂದಾಗಿ ಯಾವ ವಿದ್ಯಾರ್ಥಿನಿಯೂ ಪರೀಕ್ಷೆಯಿಂದ ವಂಚಿತರಾಗಬಾರದು. ಹೈಕೋರ್ಟ್ ತೀರ್ಪನ್ನು ಗೌರವಿಸುವ ಮೂಲಕ ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು' ಎಂದು ಮಹಿಳಾ ಸಂಘಟನೆಗಳು ಆಗ್ರಹಿಸಿವೆ.

ಶುಕ್ರವಾರ ಇಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ,'ಹೆಣ್ಣುಮಕ್ಕಳ ಘನತೆಯ ಬದುಕಿಗಾಗಿ ಶಿಕ್ಷಣ ಬೇಕೆಂದು ನೂರಾರು ವರ್ಷಗಳ ಹಿಂದೆ ಪ್ರತಿಪಾದಿಸಿದ್ದವರನ್ನು ಭಾವಚಿತ್ರಗಳಲ್ಲಿ ಆರಾಧಿಸುತ್ತಿದ್ದೇವೆ. ಆದರೆ, ಹೆಣ್ಣುಮಕ್ಕಳನ್ನು ಇಂದು ಶಿಕ್ಷಣದ ಕಕ್ಷೆಯಿಂದ ಹೊರತರುವ ಕೆಲಸವನ್ನು ಬಹಳ ನಾಜೂಕಾಗಿ ಮಾಡಲಾಗುತ್ತಿದೆ' ಎಂದು ದೂರಿದರು.

'ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಹೆಣ್ಣುಮಕ್ಕಳನ್ನು ಸರಕಿನಂತೆ ಮಾರಾಟ ಮಾಡುತ್ತಿರುವುದು ಕಳವಳಕಾರಿ. ಮಹಿಳೆಯರ ಶಿಕ್ಷಣದ ಅವಕಾಶಗಳನ್ನು ಕಸಿದು, ಅವರ ಉಡುಪು ಹಾಗೂ ಆಯ್ಕೆಗಳ ಹಕ್ಕಿನ ಮೇಲೂ ನೇರ ದಾಳಿ ಆಗುತ್ತಿದೆ. ಶೈಕ್ಷಣಿಕ ವರ್ಷಾಂತ್ಯದಲ್ಲಿ ಎದ್ದ ವಿವಾದ, ಮುಸ್ಲಿಂ ಬಾಲಕಿಯರ ಪರೀಕ್ಷೆ ಬರೆಯುವ ಹಕ್ಕನ್ನು ಕಸಿಯುತ್ತಿದೆ. ಅವರನ್ನು ಶಿಕ್ಷಣದಿಂದ ದೂರ ಮಾಡುತ್ತಿರುವ ಶಕ್ತಿಗಳನ್ನು ತಡೆಯಬೇಕು' ಎಂದರು.

'ಶಿಕ್ಷಣ ನಮ್ಮ ಹಕ್ಕು, ಉಡುಪು ನಮ್ಮ ಆಯ್ಕೆ. ಸಂವಿಧಾನದತ್ತ ಹಕ್ಕುಗಳು ಲಿಂಗ, ಧರ್ಮ, ಜಾತಿಯ ಬೇಧವಿಲ್ಲದೆ ಎಲ್ಲರಿಗೂ ಸಮಾನವಾಗಿ ಸಿಗಬೇಕು. ಕಾಲೇಜುಗಳು ದ್ವೇಷ, ವಿಭಜಕ ಮನಸ್ಥಿತಿಗಳಿಂದ ಮುಕ್ತವಾಗಿ ಸಾಮರಸ್ಯದ ಸ್ಥಳವಾಗಬೇಕು. ಶಾಲಾ ಕಾಲೇಜುಗಳಲ್ಲಿ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸುವುದು ಸರ್ಕಾರದ ಜವಾಬ್ದಾರಿ' ಎಂದು ಆಗ್ರಹಿಸಿದರು.

ಜಾಗೃತ ಮಹಿಳಾ ಒಕ್ಕೂಟ, ವಿ ದ ವುಮೆನ್, ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಸ್ತ್ರೀ ಜಾಗೃತಿ ಸಮಿತಿ ಸೇರಿದಂತೆ ವಿವಿಧ ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಹಣದಾಸೆಗೆ ಕೊಲೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

**ಕನಕಪುರ:** ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ತಾಲ್ಲೂಕಿನ ಕಾಡಳ್ಳಿ ನಿರ್ಜನ ಪ್ರದೇಶದಲ್ಲಿ ಕೊಲೆ ಮಾಡಿ ಸುಟ್ಟು ಹಾಕಿದ್ದ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ತುಮಕೂರಿನ ವಾಸಿ ಮೂಡಲಗಿರಿಯಪ್ಪ ಅಲಿಯಾಸ್ ಮುರಳಿ (40) ಕೊಲೆಯಾದವರು. ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿ ಕಾಡಳ್ಳಿಯ ನಾಗೇಂದ್ರ (28) ಮತ್ತು ಆಟೊ ಚಾಲಕ ಪ್ರಮೋದ್ (32) ಬಂಧಿತರು.

ಕೊಲೆಯಾದ ಮುರಳಿಯು ಆರೋಪಿ ಪ್ರಮೋದ್ ಸ್ನೇಹಿತ. ಮುರಳಿ ತನ್ನ ಬಳಿ ₹ 8 ಲಕ್ಷ ಇರುವುದಾಗಿ ಆತನಿಗೆ ತಿಳಿಸಿದ್ದ. ಆ ಹಣ ಲಪಟಾಯಿಸಲು ಪ್ರಮೋದ್ ತನ್ನ ಗೆಳೆಯ ಕಾಡಳ್ಳಿ ನಾಗೇಂದ್ರನ ಜತೆ ಸೇರಿ ಸಂಚು ರೂಪಿಸಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುತ್ತತ್ತಿಯನ್ನು ತೋರಿಸುವುದಾಗಿ ಫೆ.12ರಂದು ಮುರಳಿಯನ್ನು ಕರೆಸಿಕೊಂಡ ಆರೋಪಿಗಳು ಚೆನ್ನಾಗಿ ಕುಡಿಸಿ ಕಾಡಳ್ಳಿ ಪಕ್ಕದ ಮುರಲೆ ತಿಮ್ಮನದೊಡ್ಡಿ ನಿರ್ಜನ ಪ್ರದೇಶದಲ್ಲಿ ಕೊಲೆ ಮಾಡಿ ಶವವನ್ನು ಸುಟ್ಟುಹಾಕಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಸಾತನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ ಆಗ್ರಹ

## 'ಮನೆ ಬಾಗಿಲಿಗೆ ತೋಟಗಾರಿಕಾ ಉತ್ಪನ್ನ ತಲುಪಿಸಿ'

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಗರದಲ್ಲಿ ಶುಕ್ರವಾರ ಆಯೋಜಿಸಿದ ತರಬೇತಿ ಕಾರ್ಯಕ್ರಮದಲ್ಲಿ ಜಿ.ಟಿ. ದೇವೇಗೌಡ ಅವರು ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಜಿಲ್ಲಾ ಹಾಪ್‌ಕಾಮ್ಸ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರೊಂದಿಗೆ ಸಂವಾದ ನಡೆಸಿದರು. ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್. ಅರುಣ್ ಕುಮಾರ್, ವೃತ್ತಿಪರ ನಿರ್ದೇಶಕಿ ಕೆ.ಸಿ. ನಾಗರತ್ನ ಇದ್ದಾರೆ –ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಖಾಸಗಿ ಮಾಲ್‌ಗಳ ನಡುವೆ ಹಾಪ್‌ಕಾಮ್ಸ್‌ಗಳು ಗ್ರಾಹಕರನ್ನು ತಲುಪಲಿ
- ರೈತರಿಗೆ ಆರ್ಥಿಕ ಶಕ್ತಿ ತುಂಬುವ ಕೆಲಸವೂ ಆಗಬೇಕು

**ಬೆಂಗಳೂರು:** 'ಹಾಪ್‌ಕಾಮ್ಸ್‌ಗಳಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ, ಬಲವರ್ಧಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಗ್ರಾಹಕರ ಮನೆ ಬಾಗಿಲಿಗೆ ತೋಟಗಾರಿಕಾ ಉತ್ಪನ್ನಗಳನ್ನು ತಲುಪಿಸುವ ವ್ಯವಸ್ಥೆಯನ್ನೂ ರೂಪಿಸಬೇಕು' ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ ಆಗ್ರಹಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮತ್ತು ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳವು ಜಂಟಿಯಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. 'ತೋಟಗಾರಿಕಾ ಸಹಕಾರ ಸಂಘಗಳು ಮತ್ತು ಹಾಪ್‌ಕಾಮ್ಸ್‌ಗಳು ರೈತರ ಜೀವನಾಡಿಗಳು. ಇಂದಿನ ಸ್ಪರ್ಧಾತ್ಮಕ ಪರಿಸರದಲ್ಲಿ ಖಾಸಗಿ ಮಾಲ್‌ಗಳ ನಡುವೆ ಹಾಪ್‌ಕಾಮ್ಸ್‌ಗಳು ಗ್ರಾಹಕರನ್ನು ತಲುಪಬೇಕಾಗಿದೆ. ಹೀಗಾಗಿ, ಸರ್ಕಾರವು ಪೂರಕ ಕ್ರಮಗಳನ್ನು ಕೈಗೊಳ್ಳಬೇಕು. ರೈತರಿಗೆ ಆರ್ಥಿಕ ಶಕ್ತಿ ತುಂಬುವ ಕೆಲಸವೂ ಆಗಬೇಕು' ಎಂದರು.

'ಇತ್ತೀಚೆಗೆ ವಿದ್ಯಾವಂತ ಯುವಕರು ಕೃಷಿ, ತೋಟಗಾರಿಕೆ, ಹೈನುಗಾರಿಕೆ ಯಂತಹ ವಲಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಸ್ವಾವಲಂಬಿ ಜೀವನ ಸಾಕಾರವಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಈ ಕ್ಷೇತ್ರಗಳಿಗೆ ಬರಲಿ. ರೈತರು ಬೆಳೆದ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಹಾಗೂ ಉತ್ತಮ ಬೆಲೆ ಸಿಗಬೇಕು' ಎಂದರು.

ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳದ ಉಪಾಧ್ಯಕ್ಷ ಸೂರ್ಯಕುಮಾರ್, 'ಹಾಪ್‌ಕಾಮ್ಸ್‌ಗಳು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಸರ್ಕಾರವು ಹಾಪ್‌ಕಾಮ್ಸ್‌ಗಳ ನೆರವಿಗೆ ಧಾವಿಸಬೇಕು. ಸ್ವಂತ ಕಟ್ಟಡ ಹೊಂದಲು ಹಣಕಾಸಿನ ಸೌಲಭ್ಯ ನೀಡಬೇಕು' ಎಂದು ಮನವಿ ಮಾಡಿಕೊಂಡರು.

ಸಹಕಾರ ಮಹಾಮಂಡಳದ ನಿರ್ದೇಶಕರಾದ ಎ.ಸಿ. ನಾಗರಾಜ್, ಕೆ.ಸಿ. ನಾಗರತ್ನಾ, ವ್ಯವಸ್ಥಾಪಕ ನಿರ್ದೇಶಕ ಎಸ್.ಎನ್. ಅರುಣ್ ಕುಮಾರ್, ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳದ ವ್ಯವಸ್ಥಾಪಕ ನಿರ್ದೇಶಕಿ ಎಚ್.ಎನ್. ಹೇಮಾ ಇದ್ದರು.

ಕುಶಲ್ಸ್ ಫ್ಯಾಶನ್ ಜ್ಯುವೆಲರಿ
SALE
ಎಲ್ಲಾ ಆಭರಣಗಳ ಮೇಲೆ 40% ರಿಯಾಯಿತಿ
ಬೆಂಗಳೂರು : ಒರಾಯನ್ ಮಾಲ್ । ಕಮರ್ಷಿಯಲ್ ಸ್ಟ್ರೀಟ್ । ಮಂತ್ರಿ ಸ್ಕ್ವೇರ್ ಮಾಲ್ । ಜಯನಗರ । ಕೋರಮಂಗಲ । ಕಮ್ಮನಹಳ್ಳಿ । ಕತ್ರಿ ಗುಪ್ಪೆ । ಎಚ್.ಎಸ್.ಆರ್. ಲೇಔಟ್ । ಬಸವೇಶ್ವರನಗರ । ಮಲ್ಲೇಶ್ವರಂ । ಇಂದಿರಾನಗರ । ವೆಗಾ ಸಿಟಿ ಮಾಲ್ ನ್ಯೂ ಬಿಇಎಲ್ ರಸ್ತೆ । ಡಿ.ವಿ.ಜಿ. ರಸ್ತೆ । ಆರ್.ಎಮ್.ಝಡ್. ಗೆಲೆರಿಯಾ ಮಾಲ್ । ಸಹಕಾರ್ ನಗರ । ಗರುಡಾ ಮಾಲ್ । ಆರ್‌ಆರ್ ನಗರ । ಶಾಂತಿನಿಕೇತನ । ಮೈಸೂರು : ದೇವರಾಜ ಅರಸು ರಸ್ತೆ । ಮಾಲ್ ಆಫ್ ಮೈಸೂರು । ಮಂಗಳೂರು : ಸಿಟಿ ಸೆಂಟ್ರಲ್ ಮಾಲ್ । ಹುಬ್ಬಳ್ಳಿ: ಕೊಪ್ಪಿಕರ ರಸ್ತೆ । ಬೆಳಗಾವಿ : ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ
5% CASHBACK SBI card
*Min. Trxn.: ₹3,500; Max. Cashback: ₹500 per card account. Validity: 01 Mar - 31 Mar 2022. T&C Apply.
ಚೆನ್ನೈ । ಕೊಯಮತ್ತೂರು । ಹೈದರಾಬಾದ್ । ವೈಜಾಗ್ । ವಿಜಯವಾಡ
ಚಂಡೀಗಡ । ಅಹಮದಾಬಾದ್ । ಕೊಚ್ಚಿ । ತ್ರಿವೇಂದ್ರಮ್
ಆನ್‌ಲೈನ್‌ನಲ್ಲಿ ಖರೀದಿಸಿ @ kushals.com | T : 9591321696

ಪ್ರಜಾವಾಣಿ

ವಿಶ್ವ ದರ್ಜೆಯ ಮೂಲ ಸೌಕರ್ಯ, ಸಾರಿಗೆ ಸಂಪರ್ಕ, ತಂತ್ರಜ್ಞಾನ, ಉತ್ತಮ ಹವಾಮಾನ ಹೊಂದಿರುವ ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ₹8,409 ಕೋಟಿ ಅನುದಾನ ಒದಗಿಸಲಾಗಿದೆ

**ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

# ರಾಜ್ಯ ಬಜೆಟ್ 2022-23

## ಹೊಸ ಯೋಜನೆಗಳು

1. ಕಟ್ಟಡ ಕಾರ್ಮಿಕರಿಗಾಗಿ 100 ಹೈಟೆಕ್ ಸಂಚಾರ ಕ್ಲಿನಿಕ್
2. ಜಕ್ಕೂರು ವಿಮಾನ ತರಬೇತಿ ಶಾಲೆ ಅಭಿವೃದ್ಧಿಗೆ ಖಾಸಗಿ ಸಹಭಾಗಿತ್ವ

## 2022–23 ಬಜೆಟ್ ಬೆಂಗಳೂರಿಗೆಷ್ಟು?

- ಬೆಂಗಳೂರು ಪಬ್ಲಿಕ್ ಶಾಲೆಗಳು
- ಪಿಆರ್‌ಆರ್ ಯೋಜನೆಗೆ ಮರುಜೀವ
- ಎಸ್‌ಟಿಪಿಗಳ ಪುನಶ್ಚೇತನ
- ಹೊಸ ಆಸ್ಪತ್ರೆ ನಿರ್ಮಾಣ
- ಪ್ರತಿ ವಾರ್ಡ್‌ನಲ್ಲೂ ‘ನಮ್ಮ ಕ್ಲಿನಿಕ್’

# ‘ನಮ್ಮ ಮೆಟ್ರೊ’ ಜಾಲ– ಮತ್ತಷ್ಟು ಬಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕ್ಷಿಪ್ರ ಸಾರಿಗೆ ವ್ಯವಸ್ಥೆ ಬಲಪಡಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 2022–23ನೇ ಸಾಲಿನ ಬಜೆಟ್‌ನಲ್ಲಿ ಆದ್ಯತೆ ನೀಡಿದ್ದಾರೆ. ಸರ್ಜಾಪುರ–ಹೆಬ್ಬಾಳ ನಡುವೆ 37 ಕಿ.ಮೀ ಹಾಗೂ ಹೊಸಹಳ್ಳಿ–ಕಡಬಗೆರೆ ನಡುವೆ 13 ಕಿ.ಮೀ ಉದ್ದದ ಮೆಟ್ರೊ ಮಾರ್ಗಗಳನ್ನು ನಿರ್ಮಿಸುವುದಾಗಿ ಪ್ರಕಟಿಸಿದ್ದಾರೆ.

‘ಸರ್ಜಾಪುರ– ಹೆಬ್ಬಾಳ ಮೆಟ್ರೊ ಮಾರ್ಗವು ಅಗರ, ಕೋರಮಂಗಲ, ಡೇರಿ ವೃತ್ತದ ಮೂಲಕ ಹಾದು ಹೋಗಲಿದೆ. ಮೆಟ್ರೊ ಜಾಲಕ್ಕೆ ಮಾಸ್ಟರ್‌ಪ್ಲ್ಯಾನ್ ರೂಪಿಸುವಾಗಲೇ ಈ ಮಾರ್ಗದ ಪ್ರಸ್ತಾವ ಇತ್ತು. ಕಾರಣಾಂತರಗಳಿಂದ ಅದರ ಅನುಷ್ಠಾನ ಸಾಧ್ಯವಾಗಿರಲಿಲ್ಲ. ಇದು ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಲ್ಲಿನ ಮೆಟ್ರೊ ಜಾಲವನ್ನು ಮತ್ತಷ್ಟು ಬಲಪಡಿಸಲಿದೆ ಎಂಬ ಕಾರಣಕ್ಕೆ ಈ ಹೊಸ ಮಾರ್ಗವನ್ನು ನಿರ್ಮಿಸುವ ತೀರ್ಮಾನಕ್ಕೆ ಬರಲಾಗಿದೆ. ಶೀಘ್ರವೇ ಇದರ ಸಮಗ್ರ ಯೋಜನಾ ವರದಿ(ಡಿಪಿಆರ್) ತಯಾರಿಸಲು ಟೆಂಡರ್ ಕರೆಯಲಿದ್ದೇವೆ’ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಮಾರ್ಗವು ಹೆಬ್ಬಾಳದಿಂದ ಕೋರಮಂಗಲ ತನಕ ಸುರಂಗ ಮಾರ್ಗ ಹಾಗೂ ಅಲ್ಲಿಂದ ಸರ್ಜಾಪುರದವರೆಗೆ ಎತ್ತರಿಸಿದ ಮಾರ್ಗ ನಿರ್ಮಾಣಗೊಳ್ಳಲಿದೆ.

**ಮೆಟ್ರೊ 3 ಹಂತಕ್ಕೆ ₹ 11,250 ಕೋಟಿ:** ನಮ್ಮ ಮೆಟ್ರೊ ಮೂರನೇ ಹಂತದ ಮಾರ್ಗವು ಹೊರವರ್ತುಲ ರಸ್ತೆ ಮೂಲಕ ಹಾದು ಹೋಗಲಿದೆ ಎಂದು ಈ ಹಿಂದಿನ ಬಜೆಟ್‌ನಲ್ಲೇ ಸರ್ಕಾರ ಘೋಷಿಸಿತ್ತು. ‘ಮೂರನೇ ಹಂತದ ಯೋಜನೆಯನ್ನು ₹ 11,250 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ವಿಸ್ತೃತ ಯೋಜನಾ ವರದಿಯನ್ನು (ಡಿ.ಪಿ.ಆರ್) ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗುವುದು. ಹೆಬ್ಬಾಳದಿಂದ ಜೆ.ಪಿ. ನಗರದವರೆಗೆ 32 ಕಿ.ಮೀ ಉದ್ದದ ಮಾರ್ಗ ಹಾಗೂ ಹೊಸಹಳ್ಳಿಯಿಂದ ಕಡಬಗೆರೆವರೆಗೆ 13 ಕಿ.ಮೀ.ಗಳ ಮಾರ್ಗವನ್ನು ಮೂರನೇ ಹಂತವು ಒಳಗೊಂಡಿದೆ' ಎಂದು ಮುಖ್ಯಮಂತ್ರಿ ಈ ಬಾರಿ ಪ್ರಕಟಿಸಿದ್ದಾರೆ.

2021-22ನೇ ಸಾಲಿನಲ್ಲಿ ನಮ್ಮ ಮೆಟ್ರೊ ಎರಡನೇ ಹಂತದಲ್ಲಿ ನಿರ್ಮಾಣವಾದ 7.53 ಕಿ.ಮೀ ಉದ್ದದ ಮಾರ್ಗದಲ್ಲಿ ಕಾರ್ಯಾಚರಣೆ ಆರಂಭವಾಗಿತ್ತು. 2022-23ನೇ ಸಾಲಿನಲ್ಲಿ ಮತ್ತೆ 33 ಕಿ.ಮೀ ಉದ್ದದ ಮಾರ್ಗವು ಮೆಟ್ರೊ ಜಾಲಕ್ಕೆ ಸೇರ್ಪಡೆಯಾಗಲಿದೆ. ಇದರಿಂದ ನಗರವು 89 ಕಿ.ಮೀ ಉದ್ದದ ಮೆಟ್ರೊ ಜಾಲವನ್ನು ಹೊಂದಿದಂತಾಗುತ್ತದೆ. ಸೆಂಟ್ರಲ್ ಸಿಲ್ಕ್‌ಬೋರ್ಡ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಜೋಡಿಸುವ 58.19 ಕಿ.ಮೀ. ಉದ್ದದ ಮೆಟ್ರೊ ಮಾರ್ಗ ನಿರ್ಮಾಣ ಕಾಮಗಾರಿ ಪ್ರಾರಂಭಗೊಂಡಿದ್ದು, 2025ರ ಮಾರ್ಚ್ ಒಳಗೆ ಪೂರ್ಣಗೊಳ್ಳಲಿದೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ.

ಕೊಳಚೆ ನೀರು ಶುದ್ಧೀಕರಣ ಘಟಕಗಳ(ಎಸ್‌ಟಿಪಿ) ಪುನಃಶ್ಚೇತನ, ‘ಬೆಂಗಳೂರು ಪಬ್ಲಿಕ್ ಶಾಲೆ’ಗಳ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳು ಬಜೆಟ್‌ನಲ್ಲಿ ಗಮನ ಸೆಳೆದಿವೆ. ಇವುಗಳ ಹೊರತಾಗಿ, ಬಜೆಟ್‌ನಲ್ಲಿ ರಾಜ್ಯದ ರಾಜಧಾನಿಯ ಸಮಗ್ರ ಅಭಿವೃದ್ಧಿಗಾಗಿ ಘೋಷಿಸಿರುವ ಬಹುತೇಕ ಕಾರ್ಯಕ್ರಮಗಳು ಜಾರಿಯಲ್ಲಿರುವ ಯೋಜನೆಗಳೇ ಆಗಿವೆ.

## ಸರ್ಜಾಪುರ–ಹೆಬ್ಬಾಳ ನಡುವೆ 37 ಕಿ.ಮೀ ಮಾರ್ಗಕ್ಕೆ ಡಿಪಿಆರ್



**35.40** ಕಿ.ಮೀ
ಹೆಬ್ಬಾಳ–ಸರ್ಜಾಪುರ ಮೆಟ್ರೊ ಮಾರ್ಗದ ಉದ್ದ

● **18.60** ಕಿ.ಮೀ
ಎತ್ತರಿಸಿದ ಮಾರ್ಗ (ಸರ್ಜಾಪುರ–ಕೋರಮಂಗಲ)

● **16.80** ಕಿ.ಮೀ
ಸುರಂಗ ಮಾರ್ಗ(ಕೋರಮಂಗಲ–ಹೆಬ್ಬಾಳ)

**₹45** ಕೋಟಿ
ಬನಶಂಕರಿ ಜಂಕ್ಷನ್‌ನಲ್ಲಿ ‘ಸ್ಕೈವಾಕ್’ ನಿರ್ಮಾಣಕ್ಕೆ ಹಂಚಿಕೆ ಮಾಡಿದ ಅನುದಾನ

### ‘ಜಲ ಮಾಲಿನ್ಯ ತಡೆಗೆ ಕ್ರಮ’

ಜಲ ಮಾಲಿನ್ಯ ತಡೆಗಟ್ಟಲು ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿರುವ ಹಳೆಯ 20 ಕೊಳಚೆ ನೀರು ಶುದ್ಧೀಕರಣ ಘಟಕಗಳ ಪುನರುಜ್ಜೀವನ ಮತ್ತು ಉನ್ನತೀಕರಣ ಕಾಮಗಾರಿಯನ್ನು ₹ 1,500 ಕೋಟಿ ವೆಚ್ಚದಲ್ಲಿ ಜಲಮಂಡಳಿ ಕೈಗೊಳ್ಳಲಿದೆ.

**₹89** ಕೋಟಿ
20 ಬೆಂಗಳೂರು ಪಬ್ಲಿಕ್ ಶಾಲೆಗಳನ್ನು ಅಭಿವೃದ್ಧಿಪಡಿಸಲುಮೀಸಲಿಟ್ಟ ಅನುದಾನ

**₹8,409** ಕೋಟಿ
ಬೆಂಗಳೂರಿಗೆ ಹಂಚಿಕೆ ಮಾಡಿರುವ ಒಟ್ಟು ಅನುದಾನ

**₹15,000** ಕೋಟಿ
ಸರ್ಜಾಪುರ–ಹೆಬ್ಬಾಳ ಮೆಟ್ರೊ ಮಾರ್ಗದ ಅಂದಾಜು ವೆಚ್ಚ

**₹11,250** ಕೋಟಿ
ನಮ್ಮ ಮೆಟ್ರೊ ಮೂರನೇ ಹಂತದ ವಿಸ್ತರಣೆ ಕಾಮಗಾರಿಗಳ ಅಂದಾಜು ವೆಚ್ಚ

**₹55** ಕೋಟಿ
ವೈಟ್‌ಫೀಲ್ಡ್, ಕೆ.ಆರ್.ಪುರ, ಯಶವಂತಪುರ, ಜ್ಞಾನಭಾರತಿ ಮತ್ತು ಯಲಹಂಕಗಳಲ್ಲಿ ರೈಲ್ವೆ–ಮೆಟ್ರೊ ಸಂಪರ್ಕಕ್ಕೆ ಮೀಸಲಿಟ್ಟ ಅನುದಾನ

ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಿಸಿ ಎಲ್ಲ ವಾಹನಗಳ ಸಿಗ್ನಲ್ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಲು ಗ್ರೇಡ್ ಸೆಪರೇಟರ್ ಮತ್ತು ಮೇಲುಸೇತುವೆ ನಿರ್ಮಾಣ ಮಾಡಬೇಕೆಂಬುದು ದಶಕಗಳ ಬೇಡಿಕೆ. ಬಿಬಿಎಂಪಿ, ಬಿಡಿಎ ಮತ್ತು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜಂಟಿಯಾಗಿ ಕಾಮಗಾರಿ ಅನುಷ್ಠಾನ ಮಾಡಲಾಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

2021–22ನೇ ಸಾಲಿನ ಬಜೆಟ್‌ಗೆ ಹೋಲಿಸಿದರೆ ಈ ವರ್ಷ ಬೆಂಗಳೂರಿನ ಅಭಿವೃದ್ಧಿಗೆ ಒಟ್ಟು ₹ 614 ಕೋಟಿ ಅನುದಾನವನ್ನು ಹೆಚ್ಚುವರಿಯಾಗಿ ಘೋಷಣೆ ಮಾಡಲಾಗಿದೆ. ಕಳೆದ ಬಜೆಟ್‌ನಲ್ಲಿ ಬೆಂಗಳೂರಿನ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರ ಒಟ್ಟು ₹ 7,795 ಕೋಟಿ ಅನುದಾನ ಹಂಚಿಕೆ ಮಾಡಿತ್ತು.

### ಪ್ರಮುಖ ಘೋಷಣೆಗಳು

- 105 ಎಕರೆಯ ಎನ್‌ಜಿಇಎಫ್ ಪ್ರದೇಶದಲ್ಲಿ ಸಿಂಗಪುರದ ಮಾದರಿಯಲ್ಲಿ ‘ಗ್ರೀನ್ ಎಕ್ಸ್‌ಪೊ’ ನಿರ್ಮಾಣ– ಪರಿಸರ ಸ್ನೇಹಿ ತಂತ್ರಜ್ಞಾನ, ಪರಿಸರಸ್ನೇಹಿ ಸಾರಿಗೆ, ಹಸಿರು ಮೂಲಸೌಕರ್ಯ, ಹಸಿರು ನವೋದ್ಯಮಗಳ ಪ್ರಾತ್ಯಕ್ಷಿಕೆಗೆ ಉತ್ತೇಜನ
- 350 ಎಕರೆ ವಿಸ್ತೀರ್ಣದಲ್ಲಿ ಯಲಹಂಕ ಬಳಿಯ ಜಾರಕಬಂಡೆ ಕಾವಲ್ ಪ್ರದೇಶದಲ್ಲಿ ಅಟಲ್ ಬಿಹಾರಿ ವಾಜಪೇಯಿ ಉದ್ಯಾನ ನಿರ್ಮಾಣ
- 500 ಹಾಸಿಗೆಗಳ ಸಾಮರ್ಥ್ಯವುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಗರದ ನಾಲ್ಕು ಕಡೆ ನಿರ್ಮಾಣ
- 500 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಮಾಡ್ಯುಲಾರ್ ವಿಧಾನದಲ್ಲಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ನಿರ್ಮಾಣ
- ವಾಣಿವಿಲಾಸ ಆಸ್ಪತ್ರೆಯಲ್ಲಿ ಭ್ರೂಣ ಚಿಕಿತ್ಸೆ ಮತ್ತು ನವಜಾತ ಶಿಶುಚಿಕಿತ್ಸೆ ವಿಭಾಗ ಹೊಸತಾಗಿ ಪ್ರಾರಂಭ
- ಸಾಂಕ್ರಾಮಿಕವಲ್ಲದ ರೋಗ ಪತ್ತೆಗೆ ಮತ್ತು ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗೆ ತಜ್ಞರ ಬಳಿ ಶಿಫಾರಸು ಮಾಡಲು ಎಲ್ಲ ವಾರ್ಡ್‌ಗಳಲ್ಲಿ ‘ನಮ್ಮ ಕ್ಲಿನಿಕ್’ ಸ್ಥಾಪನೆ

## ‘ಜಾರಕಬಂಡೆ ಕಾವಲ್‌ನಲ್ಲಿ ಉದ್ಯಾನ: ಹೃದಯಸ್ಪರ್ಶಿ ನಿರ್ಧಾರ’



ಒತ್ತಡ ಲಾಬಿಗಳಿಗೆ ಮಣಿಯದೆಯೇ ಯಲಹಂಕ ಬಳಿ ಜಾರಕಬಂಡೆ ಕಾವಲ್‌ನಲ್ಲಿ 350 ಎಕರೆ ಪ್ರದೇಶದಲ್ಲಿ ಲಾಲ್‌ಬಾಗ್ ಹಾಗೂ ಕಬ್ಬನ್ ಉದ್ಯಾನದ ಮಾದರಿಯಲ್ಲಿ ಉದ್ಯಾನ ನಿರ್ಮಿಸುವ ಯೋಜನೆ ನಿಜಕ್ಕೂ ಹೃದಯಸ್ಪರ್ಶಿಯಾದುದು. ವಿಶಾಲ ಜಾಗದಲ್ಲಿ ಹಸಿರು ವಲಯ ನಿರ್ಮಿಸುವ ಬಗ್ಗೆ ನಿರ್ಧಾರ ತಳೆಯಲು ನಮ್ಮ ನಾಯಕತ್ವ ವಹಿಸಿಕೊಂಡವರಿಗೆ ಶತಮಾನಗಳೇ ಬೇಕಾದವು!

ಎನ್‌ಜಿಇಎಫ್‌ನ 105 ಎಕರೆ ಜಾಗದಲ್ಲಿ ಗ್ರಿನ್ ಎಕ್ಸ್‌ಪೊ ನಿರ್ಮಿಸುವ ಘೋಷಣೆ, ಈ ಜಾಗವು ಸಾಂಪ್ರದಾಯಿಕ ರಿಯಲ್ ಎಸ್ಟೇಟ್ ಅಭಿವೃದ್ಧಿಗೆ ಬಳಕೆಯಾಗುತ್ತದೆಯೇನೋ ಎಂಬ ಆತಂಕವನ್ನು ದೂರಮಾಡಿದೆ. ಎನ್‌ಜಿಇಎಫ್‌ನ ಬಹುಪಾಲು ಜಾಗವನ್ನು ಸಾರ್ವಜನಿಕ ಉದ್ದೇಶಕ್ಕೆ ಬಳಸುವುದು ವಿವೇಕಯುತ ನಿರ್ಧಾರ. ಈ ಜಾಗವು ನಿರ್ದಿಷ್ಟ ಉದ್ದೇಶಕ್ಕೆ ಬಳಸುವ ಬದಲು ಬಹು ಉದ್ದೇಶಗಳಿಗೆ ಬಳಸುವಂತಾಗಬೇಕು.

ಕೆ–100 ಜನರ ನೀರ ಹಾದಿ ಯೋಜನೆ ಇನ್ನೊಂದು ಬಹುಕಾಲದ ಬೇಡಿಕೆ. ಕೊಳಚೆ ನೀರು ರಾಜಕಾಲುವೆಗೆ ಸೇರುವುದನ್ನು ತಡೆಯುವುದು ಹಾಗೂ ರಾಜಕಾಲುವೆ ಹಾಗೂ ಕೆರೆಯಂಗಳಗಳನ್ನು ಜನಸ್ನೇಹಿ ತಾಣವನ್ನಾಗಿಸುವುದು ಭಾರಿ ಬದಲಾವಣೆಗಳಿಗೆ ಕಾರಣವಾಗಬಲ್ಲುದು. ರಾಜಕಾಲುವೆ ದುರಸ್ತಿಗೆ ₹ 1500 ಕೋಟಿ ಘೋಷಿಸಲಾಗಿದೆ. ಇಂತಹ ಅನೇಕ ಘೋಷಣೆಗಳನ್ನು ಎರಡು ದಶಕಗಳಿಂದ ನೋಡುತ್ತಿದ್ದೇವೆ. ಆದರೆ, ಇವು ಕಾರ್ಯಗತವಾಗುವುದು ಯಾವಾಗಲೋ. ಭವಿಷ್ಯದಲ್ಲಿ ಪ್ರವಾಹ ತಡೆಯುವ ಉದ್ದೇಶದಿಂದ ಕಾಲುವೆ ವ್ಯವಸ್ಥೆಗೆ ಮಾತ್ರ ಆದ್ಯತೆ ನೀಡಿ, ಜಲಾನಯನ ಪ್ರದೇಶದ ಸಮಗ್ರ ನಿರ್ವಹಣೆಯನ್ನು ಕಡೆಗಣಿಸುವುದು ದೂರದೃಷ್ಟಿಯ ನಿರ್ಧಾರದಂತೆ ತೋರುವುದಿಲ್ಲ.

ಮೆಟ್ರೊ, ಉಪನಗರ ರೈಲು, ಫೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್), ಬಡವಣೆ ಅಭಿವೃದ್ಧಿಗಳೆಲ್ಲವೂ ಹಳಸಲು ಘೋಷಣೆಗಳು. ಈ ಯೋಜನೆಗಳ ಜಾರಿ ತಡವಾದಷ್ಟೂ ಅವುಗಳ ವೆಚ್ಚವೂ ಹೆಚ್ಚುತ್ತಲೇ ಸಾಗುತ್ತದೆ. 2004ರಲ್ಲಿ ಪಿಆರ್‌ಆರ್ ಯೋಜನೆ ಪ್ರಸ್ತಾವ ಸಿದ್ಧವಾದಾಗ ಅದರ ವೆಚ್ಚ ಈಗಿನ ವೆಚ್ಚದ ನಾಲ್ಕನೆ ಒಂದರಷ್ಟೂ ಇರಲಿಲ್ಲ. ಕೆಲವೊಮ್ಮೆ ನಾವು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೇವೆ ಎಂಬುದೂ ಮುಖ್ಯವಾಗುತ್ತದೆ. ವಿಮಾನನಿಲ್ದಾಣ ಸಂಪರ್ಕಕ್ಕೆ ಉಪನಗರ ರೈಲೇ ಸೂಕ್ತವಾದುದು. ಆದರೆ ಅದನ್ನು ಆಯ್ಕೆ ಮಾಡಿಕೊಂಡಿಲ್ಲ.

ಬಿಬಿಎಂಪಿ ಯಾವ ಯೊಜನೆಗೆ ಎಷ್ಟು ವೆಚ್ಚ ಮಾಡಬೇಕು ಎಂಬುದನ್ನು ಪ್ರತಿ ವರ್ಷವೂ ರಾಜ್ಯ ಸರ್ಕಾರವೇ ನಿರ್ಧರಿಸುತ್ತಿದೆ. ಇದು ವಿಕೇಂದ್ರೀಕರಣ ಪ್ರಕ್ರಿಯೆಗೆ ವಿರುದ್ಧವಾದ ನಡೆ.

**ವಿ. ರವಿಚಂದರ್,** ನಗರ ಯೋಜನಾ ತಜ್ಞ

## ‘ಎಲ್ಲರನ್ನು ಒಳಗೊಳ್ಳುವ ನಗರವನ್ನು ಕಟ್ಟಬೇಕಿದೆ’

ನಮ್ಮ ಕ್ಲಿನಿಕ್ ಕಾರ್ಯಕ್ರಮ ಜಾರಿ, ಅಟಲ್ ಬಿಹಾರಿ ವಾಜಪೇಯಿ ಉದ್ಯಾನ, ರಾಜಕಾಲುವೆ ಪುನಃಶ್ಚೇತನಕ್ಕೆ ಅನುದಾನ ಒದಗಿಸುವುದು ಸ್ವಾಗತಾರ್ಹ ನಡೆ.

ನಗರದ ಸುಂದರೀಕರಣದ ಕಾರ್ಯಕ್ರಮದ ಅಡಿ ಕೆರೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉಲ್ಲೇಖಿಸಲಾಗಿದೆ. ಆದರೆ, ಕೆರೆಗಳು ಮಳೆ ನೀರು ಸಂಗ್ರಹಿಸಲು ನೆರವಾಗುವ ಮೂಲಕ 100 ಕಿ.ಮೀ. ದೂರದಿಂದ ಕಾವೇರಿ ನೀರು ತರಿಸಿಕೊಳ್ಳಲು ಬೇಕಾಗುವ ವಿದ್ಯುತ್ ಬಿಲ್ ನ್ನು ಉಳಿಸಬಲ್ಲವು. ದೋಷ ಪೂರಿತ ಯೋಜನೆಗಳಿಂದಾಗಿ ನಾವು ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ನಿಸರ್ಗವು ಬೆಂಗಳೂರಿಗೆ ಕೊಡುಗೆಯಾಗಿ ಸುರಿಸುವ ಮಳೆ ನೀರಿನ ನಿರ್ವಹಣೆಗೆ ಮಹತ್ವಾಕಾಂಕ್ಷಿ ಯೋಜನೆಗಳಿಲ್ಲ ಎಂಬುದು ನಿಜಕ್ಕೂ ನಿರಾಸೆ ಮೂಡಿಸುತ್ತದೆ.

ನಗರದಲ್ಲಿ ವಸತಿ ಸಮಸ್ಯೆ ಎಷ್ಟು ಭೀಕರವಾಗಿದೆ ಎಂಬುದನ್ನು ಕೋವಿಡ್ ಬಿಕ್ಕಟ್ಟು ನಮಗೆ ತೋರಿಸಿಕೊಟ್ಟಿದೆ. ಸಾವಿರಾರು ವಲಸೆ ಕಾರ್ಮಿಕರು ಊರಿಗೆ ಮರಳಿದರು– ಏಕೆಂದರೆ ಅವರೆಲ್ಲ ಬೆಂಗಳೂರನ್ನು ‘ತವರು’ ಎಂದು ಪರಿಗಣಿಸಿಯೇ ಇರಲಿಲ್ಲ. ಕೈಗೆಟಕುವ ದರದಲ್ಲಿ ವಸತಿ ಒದಗಿಸುವುದಕ್ಕೆ ಸಮಗ್ರ ಯೋಜನೆ ರೂಪಿಸುವ ಅಗತ್ಯವಿದೆ. ಕೋವಿಡ್ ಬಿಕ್ಕಟ್ಟಿನಿಂದ ಪಾಠ ಬಳಿಕವಾದರೂ ಎಲ್ಲರನ್ನೂ ಒಳಗೊಳ್ಳುವ, ಎಲ್ಲರೂ ಘನತೆಯ ಬದುಕನ್ನು ಕಾಣುವಂತಹ ಹಾಗೂ ಮಕ್ಕಳ ಆರೈಕೆ, ಶಿಕ್ಷಣ ಹಾಗೂ ಆರೋಗ್ಯ ಸೇವೆ ಎಲ್ಲರಿಗೂ ಸುಲಭವಾಗಿ ದಕ್ಕುವಂತಹ ನಗರವನ್ನಾಗಿ ಬೆಂಗಳೂರನ್ನು ಕಟ್ಟಬೇಕಿತ್ತು.

ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ವಿಶೇಷ ಸ್ಥಾನ ಪಡೆಯುವ ಏಕೈಕ ನಗರ ಬೆಂಗಳೂರು. ಬೇರೆ ಯಾವುದೇ ನಗರಕ್ಕೂ ಇಂತಹ ವಿಶೇಷ ಸ್ಥಾನಮಾನವಿಲ್ಲ. ಬೆಂಗಳೂರು ರಾಜ್ಯದ ಆರ್ಥಿಕ ಎಂಜಿನ್ ಎಂದು ಈ ವಿಶೇಷ ಸ್ಥಾನಮಾನವನ್ನು ಕೆಲವರು ಸಮರ್ಥಿಸಿಕೊಳ್ಳಲೂ ಬಹುದು. ಬೆಂಗಳೂರು ಕರ್ನಾಟಕದ ಏಕೈಕ ಆರ್ಥಿಕ ಎಂಜಿನ್ ಆದರೆ ಅದು ಇನ್ನಷ್ಟು ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ರಾಜ್ಯ ಸಮಗ್ರವಾಗಿ ಅಭಿವೃದ್ಧಿ ಆಗಬೇಕಾದರೆ ಕನಿಷ್ಠ ಪಕ್ಷ ಈ ನಗರದಷ್ಟೇ ಉದ್ಯಮಶೀಲವಾದ, ಪ್ರಗತಿಪರವಾದ ಹಾಗೂ ಶೈಕ್ಷಣಿಕವಾಗಿ ಮುಂದುವರಿದ ಇಂತಹ 10 ಆರ್ಥಿಕ ಕೇಂದ್ರಗಳಾದರೂ ರೂಪುಗೊಳ್ಳಬೇಕು.

ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕೇವಲ ಒಂದು ರಾಜ್ಯಕ್ಕೆ ಮಾತ್ರ ಪ್ರಾಶಸ್ತ್ಯ ನೀಡುವುದನ್ನು ನಾವು ಒಪ್ಪಿಕೊಳ್ಳುತ್ತೇವೆಯೇ? ಕೇಂದ್ರ ಹಣಕಾಸು ಆಯೊಗವು ಎಲ್ಲರಿಗೂ ಒಪ್ಪಿಗೆಯಾಗುವಂತಹ ಸೂತ್ರವನ್ನು ಬಳಸಿ ರಾಜ್ಯಗಳಿಗೆ ಅನುದಾನ ಹಂಚಿಕೆ ಮಾಡಲು ಸಾಧ್ಯವಾಗುತ್ತದೆ ಎಂದಾದರೆ, ರಾಜ್ಯ ಹಣಕಾಸು ಆಯೋಗಕ್ಕೆ ಇದು ಏಕೆ ಸಾಧ್ಯವಾಗುವುದಿಲ್ಲ?

**ಶ್ರೀನಿವಾಸ ಅಲವಿಲ್ಲಿ,** ಜನಾಗ್ರಹದ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ

## ಬಿ– ಖಾತಾ: ದಶಕದ ಸಮಸ್ಯೆಗೆ ಮುಕ್ತಿ?

‘ಬಿಬಿಎಂಪಿ ವ್ಯಾಪ್ತಿಯಲ್ಲಿ 6 ಲಕ್ಷಕ್ಕೂ ಹೆಚ್ಚು ಸ್ವತ್ತುಗಳ ವಿವರಗಳನ್ನು ಬಿ–ವಹಿಯಲ್ಲಿ (ಬಿ– ಖಾತಾ) ದಾಖಲಿಸಲಾಗಿದೆ. ಇವುಗಳಿಗೆ ಎ– ಖಾತಾ ನೀಡಬೇಕು ಎಂಬುದು ದಶಕಗಳ ಬೇಡಿಕೆ. ಈ ಬಗ್ಗೆ ಬಜೆಟ್‌ನಲ್ಲೇ ಉಲ್ಲೇಖಿಸಲಾಗಿದೆ. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಕಾಯ್ದೆ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆಗಳಡಿಯಲ್ಲೇ ಇದಕ್ಕೆ ಅವಕಾಶ ಕಲ್ಪಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಭರವಸೆ ನಿಡಿದ್ದಾರೆ.

## ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಸ್ಮಾರ್ಟ್ ಸ್ಪರ್ಶ

ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಬಿಡಿಎ ಇದುವರೆಗೆ 2671 ಎಕರೆ ಭೂಸ್ವಾಧೀನ ಮಾಡಿದೆ. ಇನ್ನೂ 1,297 ಎಕರೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಬಾಕಿ ಇದೆ. ಈ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಆಧುನಿಕ ಸ್ಮಾರ್ಟ್ ಸಿಟಿಯಾಗಿ ಈ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತದೆ. ಸರ್ ಎಂ.ವಿಶ್ವೇಶರಯ್ಯ, ಬನಶಂಕರಿ 6ನೇ ಹಂತ ಮತ್ತು ಅಂಜನಾಪುರ ಬಡಾವಣೆಗಳಲ್ಲಿನ ರಸ್ತೆ, ಚರಂಡಿಗಳು, ಒಳಚರಂಡಿ ಮತ್ತು ಕೊಳಚೆ ನೀರು ಸಂಸ್ಕರಣಾ ಘಟಕವನ್ನು (ಎಸ್‌ಟಿಪಿ)
₹ 404 ಕೋಟಿ ವೆಚ್ಚದಲ್ಲಿ ಬಿಡಿಎ ವತಿಯಿಂದ ನಿರ್ಮಿಸಿ ಮುಂದಿನ ನಿರ್ವಹಣೆಗಾಗಿ ಬಿಬಿಎಂಪಿಗೆ ಹಸ್ತಾಂತರಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.



## ‘ಕಾವೇರಿ 5ನೇ ಹಂತ 2025ರ ಒಳಗೆ ಪೂರ್ಣ’

ಬೆಂಗಳೂರು ನಗರಕ್ಕೆ ಹೆಚ್ಚುವರಿಯಾಗಿ ನಿತ್ಯ 77.50 ಕೋಟಿ ಲೀಟರ್ ಕಾವೇರಿ ನೀರನ್ನು ತರುವ ₹ 5,550 ಕೋಟಿ ವೆಚ್ಚದ ಕಾವೇರಿ 5ನೇ ಹಂತದ ನೀರು ಸರಬರಾಜು ಯೋಜನೆ ಜಾರಿಯಲ್ಲಿದೆ. ಇಲ್ಲಿಯವರೆಗೆ ₹ 1,556 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯನ್ನು 2024-25ನೇ ಸಾಲಿನ ಅಂತ್ಯದೊಳಗೆ ಪೂರ್ಣಗೊಳಿಸುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ.

ಮೆಗಾಸಿಟಿ ಆವರ್ತ ನಿಧಿ ಅಡಿಯಲ್ಲಿ ಅರ್ಕಾವತಿ ನೀರಿನ ಮೂಲದ ಪುನರುಜ್ಜೀವನಕ್ಕೆ ಹಾಗೂ ಎತ್ತಿನಹೊಳೆ ಯೋಜನೆಯಿಂದ 1.7 ಟಿ.ಎಂ.ಸಿ. ಅಡಿ ನೀರನ್ನು ಯೋಜನಾಬದ್ಧವಾಗಿ ಬಳಸಿಕೊಳ್ಳುವುದಕ್ಕೆ ₹ 312 ಕೋಟಿ ವೆಚ್ಚದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯ ಪುನಃಶ್ಚೇತನ ಕಾಮಗಾರಿಯನ್ನು 2022-23ನೇ ಸಾಲಿನಲ್ಲಿ ಪೂರ್ಣಗೊಳಿಸುವ ಭರವಸೆ ನೀಡಿದ್ದಾರೆ.

ನಗರದ ರಾಜಕಾಲುವೆಗಳನ್ನು ಮಳೆ ನೀರು ಹರಿಯುವಿಕೆಗೆ ಮಾತ್ರ ಬಳಸಲು ಮತ್ತು ಮಳೆ ಸುರಿದಾಗ ಪ್ರವಾಹ ಉಂಟಾಗದಂತೆ ತಡೆಯಲು ರಾಜಕಾಲುವೆ ಅಭಿವೃದ್ಧಿಗಾಗಿ ₹ 1,500 ಕೋಟಿ ನೀಡುವುದಾಗಿ ಮುಖ್ಯಮಂತ್ರಿಯವರು ಈಗಾಗಲೇ ಘೋಷಣೆ ಮಾಡಿದ್ದರು. ಅದನ್ನೇ ಬಜೆಟ್‌ನಲ್ಲಿ ಮತ್ತೊಮ್ಮೆ ಉಲ್ಲೇಖಿಸಿದ್ದಾರೆ.

ರಾಜಕಾಲುವೆಗೆ ಕೊಳಚೆ ನೀರು ಸೇರದಂತೆ ತಡೆದು, ಪುನರುಜ್ಜೀವನಗೊಳಿಸಿ ಅದನ್ನು ವಿಹಾರ ತಾಣವನ್ನಾಗಿ ಅಭಿವೃದ್ಧಿಪಡಿಸುವ ‘ಕೆ-100’ ಯೋಜನೆಯ ಬಗ್ಗೆಯೂ ಮತ್ತೆ ಬಜೆಟ್‌ನಲ್ಲಿ ಉಲ್ಲೇಖಿಸಿದ್ದಾರೆ. ₹ 195 ಕೋಟಿ ವೆಚ್ಚ ಯೋಜನೆ ಈಗಾಗಲೇ ಶೇ 46ರಷ್ಟು ಭೌತಿಕ ಪ್ರಗತಿ ಆಗಿದೆ.

ಬೆಂಗಳೂರಿನ ಮಡಿವಾಳ ಮತ್ತು ಎಲೆ ಮಲ್ಲಪ್ಪಶೆಟ್ಟಿ ಕೆರೆಗಳ ಸಮಗ್ರ ಅಭಿವೃದ್ಧಿಗೆ ರೂಪುರೇಷೆ ಸಿದ್ಧಪಡಿಸಲಾಗುವುದು.



ಬಸವನಗುಡಿಯ ಉತ್ತರಾಧಿಮಠದ ಜಯತೀರ್ಥ ವಿದ್ಯಾಪೀಠದಲ್ಲಿ ನಡೆಯುತ್ತಿರುವ ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗೋವಿಗೆ ಮುತ್ತಿಟ್ಟು ನಮಿಸಿದರು. ಮಠದ ಸತ್ಯಾತ್ಮತೀರ್ಥ ಸ್ವಾಮೀಜಿ, ಕೋಡ್ಲಿ ಅಕ್ಷೋಭ್ಯತೀರ್ಥ ಮಠದ ರಘು ವಿಜಯತೀರ್ಥರು ಇದ್ದರು.

## ಪಿ.ಆರ್‌.ಆರ್: ವೆಚ್ಚ ಹೆಚ್ಚಳ

‘ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣ ಯೋಜನೆಯನ್ನು 2006ರಲ್ಲೇ ಘೋಷಣೆ ಮಾಡಿದರೂ ಇದುವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. 73 ಕಿ.ಮೀ ಉದ್ದ ಹಾಗೂ 100 ಮೀ ಅಗಲದ ಈ ರಸ್ತೆ ನಿರ್ಮಾಣಕ್ಕೆ ಭೂ ಸ್ವಾಧೀನ ವೆಚ್ಚವೂ ಸೇರಿ ₹ 21,091 ಕೋಟಿ ಬಂಡವಾಳ ಬೇಕಾಗುತ್ತದೆ. ಈ ಯೋಜನೆಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ವಿನ್ಯಾಸಗೊಳಿಸಿ, ನಿರ್ಮಿಸಿ, ಹಣಕಾಸು ಹೊಂದಿಸಿ, ನಿರ್ವಹಿಸಿ ಹಸ್ತಾಂತರಿಸುವ (ಡಿಬಿಎಫ್‌ಒಟಿ) ಮಾದರಿಯ ಈ ಯೋಜನೆಗೆ ಪ್ರಸಕ್ತ ವರ್ಷದಲ್ಲೇ ಟೆಂಡರ್ ಕರೆದು ಚಾಲನೆ ನೀಡಲಾಗುತ್ತದೆ. ಗುತ್ತಿಗೆದಾರರೇ ಭೂ ಸ್ವಾಧೀನ ಮತ್ತು ನಿರ್ಮಾಣ ವೆಚ್ಚ ಭರಿಸಲಿದ್ದಾರೆ’ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆ ಹಾಗೂ ಹಳೇ ಮದ್ರಾಸ್ ರಸ್ತೆಯ ಮೂಲಕ ಹಾದು ಹೋಗಿ ಹೊಸೂರು ರಸ್ತೆಯನ್ನು ಸೇರುವ ಫೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲಾಗುತ್ತದೆ. ಈ ಯೋಜನೆಯನ್ನು ಸ್ವಿಸ್ ಚಾಲೆಂಜ್ ಮಾದರಿಯಲ್ಲಿ ಅನುಷ್ಠಾನಕ್ಕೆ ತರುವುದಾಗಿ ಸರ್ಕಾರ ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಿಸಿತ್ತು.

## ಶ್ರೀಮಂತರು, ಬಿಲ್ಡರ್‌ಗಳ ಜೇಬು ತುಂಬಿಸುವ ಬಜೆಟ್

ಬಜೆಟ್‌ನಲ್ಲಿ ಬೆಂಗಳೂರು ನಗರದ ಅಭಿವೃದ್ಧಿಯ ಪರಿಕಲ್ಪನೆಯೇ ಬೇರೆ ರೀತಿ ಇದೆ. ಬೆಂಗಳೂರಿನ ನಾಗರಿಕರು ಯಾವ ರೀತಿಯ ಸಮಸ್ಯೆ ಎದುರಿಸುತ್ತಿದ್ದಾರೆ, ಅದರಿಂದ ಅವರನ್ನು ಪಾರು ಮಾಡುವುದು ಹೇಗೆ ಎಂಬ ಪರಿಕಲ್ಪನೆಯೇ ಸರ್ಕಾರಕ್ಕೆ ಇದ್ದಂತೆ ಇಲ್ಲ. ಉದ್ಯಾನ, ನಮ್ಮ ಕ್ಲಿನಿಕ್, ಮೆಟ್ರೊ ರೈಲಿಗೆ ಹಣ ನೀಡಲಾಗಿದೆ. ಇವೆಲ್ಲವೂ ಕಟ್ಟಡಗಳನ್ನು ಕಟ್ಟುವ ಕೆಲಸಗಳೇ ಹೊರತು ಜನರಿಗೆ ಬೇಕಿರುವ ನಿಜವಾದ ಅಭಿವೃದ್ಧಿ ಅಲ್ಲ. ಕೋವಿಡ್ ನಂತರ ಕಾರ್ಮಿಕರ ಸಂಬಳ ಕಡಿಮೆಯಾಗಿದೆ. ಅಡುಗೆ ಅನಿಲ, ತರಕಾರಿ, ಬೇಳೆ ಸೇರಿ ಅಗತ್ಯ ವಸ್ತುಗಳ ಬೆಲೆ ಜಾಸ್ತಿಯಾಗಿದೆ. ಪಡಿತರ ಚೀಟಿ ಹೊಂದಿದವರಿಗೆ ಕೊಡುತ್ತಿರುವ ಅಕ್ಕಿ ಪ್ರಮಾಣ ಕಡಿಮೆ ಮಾಡಲಾಗಿದೆ. ಬಡವರನ್ನು ಕೊಳೆಗೇರಿಗಳಿಂದ ಎತ್ತಂಗಡಿ ಮಾಡಿ ಊರಾಚೆಗೆ ಬಿಡಲಾಗುತ್ತಿದೆ. ಈ ರೀತಿಯ ಬಿಕ್ಕಟ್ಟಿನಲ್ಲಿ ಜನ ಸಿಲುಕಿರುವಾಗ ಮೆಟ್ರೊ ರೈಲಿಗೆ ಹಣ ಕೊಡುವುದೇ ಅಭಿವೃದ್ಧಿ ಎಂದರೆ ಹೇಗೆ? ಸರ್ಕಾರಿ ಶಾಲೆಯ ಮಕ್ಕಳು ಎರಡು ವರ್ಷಗಳಿಂದ ಶಿಕ್ಷಣದಲ್ಲಿ ಹಿಂದೆ ಬಿದ್ದಿದ್ದಾರೆ. ಅವರನ್ನು ಶೈಕ್ಷಣಿಕವಾಗಿ ಮೇಲೆತ್ತುವುದು ಹೇಗೆ ಎಂಬ ಆಲೋಚನೆ ಮತ್ತು ಉದ್ದೇಶ ಎರಡೂ ಸರ್ಕಾರಕ್ಕೆ ಇಲ್ಲ. ಯಾವುದೇ ಬಜೆಟ್‌ನಲ್ಲೂ ಈ ರೀತಿಯ ಮುನ್ನೋಟ ಕಂಡಿಲ್ಲ, ಈಗಲೂ ಅದೇ ಆಗಿದೆ. ದುಡಿಯುವ ವರ್ಗಕ್ಕೆ ಬಸ್ ಸೌಕರ್ಯವನ್ನಾದರೂ ಉಚಿತವಾಗಿ ಕಲ್ಪಿಸಬೇಕಿತ್ತು. ಬಿಎಂಟಿಸಿಗೆ ಹಣ ನೀಡಿದ್ದರೆ ಅದು ಸಾಧ್ಯವಾಗುತ್ತಿತ್ತು. ಶ್ರೀಮಂತರಿಗೆ ಮತ್ತು ಬಿಲ್ಡರ್‌ಗಳ ಜೇಬಿಗೆ ಹಣ ತುಂಬಿಸುವ ಬಜೆಟ್ ಇದಾಗಿದೆಯೇ ಹೊರತು ಜನರ ಅಭಿವೃದ್ಧಿಗೆ ಪೂರಕವಾಗಿಲ್ಲ.

**ಲೇಖಾ ಅಡವಿ,** ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್

## ಬಜೆಟ್ ಪ್ರತಿಕ್ರಿಯೆಗಳು

### ನವೋದ್ಯಮಗಳಿಗೆ ರಹದಾರಿ



ಬೆಂಗಳೂರು ಈ ದೇಶದ ಸ್ಟಾರ್ಟ್‌ಅಪ್ (ನವೋದ್ಯಮ) ಹಬ್. ಆ ಮಾನ್ಯತೆಯನ್ನು ರಾಜ್ಯದ ಇತರ ಸ್ಥಳಗಳಿಗೂ ವಿಸ್ತರಿಸುವ ನಿಲುವು ಬಜೆಟ್‌ನಲ್ಲಿ ವ್ಯಕ್ತವಾಗಿದೆ. ಇದರಿಂದ ರಾಜ್ಯದ ಪ್ರತಿ ನಗರ ಬೆಂಗಳೂರಿನಂತೆ ನವೋದ್ಯಮಗಳಲ್ಲಿ ಮುಂಚೂಣಿ ಸ್ಥಾನಕ್ಕೇರುವಲ್ಲಿ ಅನುಮಾನವಿಲ್ಲ

**ಆಕಾಶ್,**
ಸಾಫ್ಟ್‌ವೇರ್ ಉದ್ಯೋಗಿ

### ಮಹಿಳೆಯರಿಗೆ ಹೆಚ್ಚಿನ ಆದ್ಯತೆ

ಸಂಕಷ್ಟದಲ್ಲಿರುವ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಹಾಗೂ ವೃತ್ತಿಪರ ಕೌಶಲ ತರಬೇತಿಗಾಗಿ ಅನುಪಾಲನೆ ಗೃಹಗಳ ಸ್ಥಾಪನೆ ಸ್ವಾಗತಾರ್ಹ. ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳ ಸ್ಥಾಪನೆ ಒಳ್ಳೆಯ ಕ್ರಮ. ಈ ಬಜೆಟ್‌ನಲ್ಲಿ ಮಹಿಳಾ ಸಬಲೀಕರಣ ಹಾಗೂ ಮಕ್ಕಳಿಗಾಗಿ ಹೆಚ್ಚಿನ ಆದ್ಯತೆ ನೀಡಲಾಗಿದೆ

**ಮೇಘನಾ ರಾಜೇಶ್,**
ಕೆ.ಆರ್.ಪುರ

### ‘ಉದ್ಯಮಿ’ಯಾಗಲು ಮಹಿಳೆಗೆ ಬಲ

ಮಹಿಳೆಯರ ನೇತೃತ್ವದ ನವೋದ್ಯಮಗಳಿಗೆ ₹10 ಲಕ್ಷದವರೆಗೆ ಸಾಲ ನೀಡುವ ಯೋಜನೆ ಒಳ್ಳೆಯದು. ಮಹಿಳೆಯರು ಸಬಲೆಯರಾಗಲು ಇದು ಬಲ ನೀಡಲಿದೆ. ಮಹಿಳೆಯರಿಗೆ ಉದ್ಯಮಿಗಳಾಗುವ ಸಾಮರ್ಥ್ಯಗಳಿದ್ದರೂ ಆರ್ಥಿಕ ಬೆಂಬಲದ ಕೊರತೆ ಇತ್ತು. ಈ ಹೊಸ ಯೋಜನೆಯಿಂದ ರಾಜ್ಯದಲ್ಲಿ ಮಹಿಳಾ ಉದ್ಯಮಿಗಳ ಉಗಮವಾಗಲಿದೆ

**ರಮ್ಯಾ,** ಖಾಸಗಿ ಕಂಪನಿ ಉದ್ಯೋಗಿ

### ‘ಆಶಾ’ಗಳಿಗೆ ಗೌರವಧನ ಸಾಲದು

ಕೋವಿಡ್ ತಡೆಗಟ್ಟಲು ಜೀವದ ಹಂಗು ತೊರೆದು ಕೆಲಸ ಮಾಡಿದ ಆಶಾ ಕಾರ್ಯಕರ್ತರಿಗೆ ತಿಂಗಳ ಗೌರವಧನ ₹1 ಸಾವಿರ ಏರಿಕೆ ಸ್ವಾಗತಾರ್ಹ. ಆದರೆ, ಈಗಿನ ಬೆಲೆ ಏರಿಕೆಯ ಬದುಕು ಸಾಗಿಸಲು ಗೌರವಧನವನ್ನು ₹3 ಸಾವಿರಗಳಿಗೆ ಹೆಚ್ಚಿಸಬೇಕು. ಅವರ ಬಹುದಿನಗಳ ಬೇಡಿಕೆಯಂತೆ ತಿಂಗಳಿಗೆ ಕನಿಷ್ಠ ₹12 ಸಾವಿರ ಕೈಸೇರುವಂತೆ ಮಾಡಬೇಕು

**ಡಿ.ನಾಗಲಕ್ಷ್ಮಿ,** ರಾಜ್ಯ ಕಾರ್ಯದರ್ಶಿ, ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ

### ಬದುಕು ಬೀದಿಗೆ ಬಿಟ್ಟ ಬಜೆಟ್

ಬೀದಿಬದಿ ವ್ಯಾಪಾರಿಗಳನ್ನು ರಾಜ್ಯ ಬಜೆಟ್‌ನಲ್ಲಿ ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಕೋವಿಡ್‌ನಿಂದಾಗಿ ಬದುಕು ಬೀದಿಗೆ ಬಂದು ನಿಂತಿದ್ದ ವ್ಯಾಪಾರಿಗಳಿಗೆ ಬಜೆಟ್‌ನಲ್ಲಿ ವಿಶೇಷ ಯೋಜನೆಗಳನ್ನು ನಿರೀಕ್ಷಿಸಿದ್ದೆವು. ಆದರೆ, ನಮ್ಮನ್ನು ಪರಿಗಣಿಸಿಯೇ ಇಲ್ಲ. ಪ್ರತಿ ಬಜೆಟ್‌ನಲ್ಲೂ ನಮ್ಮನ್ನು ಕಡೆಗಣಿಸುತ್ತಾ ಬಂದಿದ್ದಾರೆ.

**ರಂಗಸ್ವಾಮಿ,** ಕರ್ನಾಟಕ ಬೀದಿಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ

### ಅಂಕಿ ಅಂಶಗಳಿಂದ ಚಮತ್ಕಾರ

ರಾಜ್ಯ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಇಲಾಖಾವಾರು ವಿವರ ನೀಡಿಲ್ಲ. ಇದು ಕೇವಲ ಅಂಕಿ ಅಂಶಗಳಿಂದ ಚಮತ್ಕಾರ ಮಾಡುವ ಬಜೆಟ್. ‘ಬಿ’ ಖಾತೆಯನ್ನು ‘ಎ’ ಖಾತೆಯನ್ನಾಗಿ ಬದಲಾಯಿಸುವ ನಿರ್ಧಾರ ಸ್ವಾಗತಾರ್ಹ. ಆ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಸರಳೀಕರಣಗೊಳಿಸಬೇಕು.

**ಟಿ.ಎ.ಶರವಣ,**
ಜೆಡಿಎಸ್ ಮುಖಂಡ

# ಬಜೆಟ್ ಅನಿಸಿಕೆಗಳು

## ಹೋರಾಟಕ್ಕೆ ಜಯ

ದೇವಾಲಯಗಳಿಗೆ ವಾರ್ಷಿಕ ತಸ್ತೀಕ್ ಮೊತ್ತವನ್ನು ₹60 ಸಾವಿರಕ್ಕೆ ಹೆಚ್ಚಿಸುವ ಘೋಷಣೆಗೆ ಧನ್ಯವಾದ. ಒಕ್ಕೂಟದ ಐದು ವರ್ಷಗಳ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ. ನಮ್ಮ ಬೇಡಿಕೆಗೆ ಸ್ಪಂದಿಸಿದ ರಾಜ್ಯ ಸರ್ಕಾರಕ್ಕೆ ವಂದನೆಗಳು.

**ಕೆ.ಎಸ್.ಎನ್.ದೀಕ್ಷಿತ್,** ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ

## ಜನರ ಕೈಸೇರುತ್ತಿಲ್ಲ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆಗೆ ಗಮನ ಹರಿಸಿಲ್ಲ. ಇರುವ ಯೋಜನೆಗಳು ಜನರ ಕೈಸೇರುತ್ತಿಲ್ಲ. ಹಿಂದಿನ ಸರ್ಕಾರ ನೀಡುತ್ತಿದ್ದ ವಿದ್ಯಾರ್ಥಿವೇತನವನ್ನು ಈಗಿನ ಸರ್ಕಾರ ನಿಲ್ಲಿಸಿತು. ಬಜೆಟ್‌ನಲ್ಲಿ ಇವರನ್ನು ಕಡೆಗಣಿಸಲಾಗಿದೆ

**ಲಕ್ಷ್ಮೀನಾರಾಯಣ ನಾಗವಾರ,** ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ

## ಪ್ರಯಾಣಿಕರಿಗೆ ದ್ರೋಹ

ಬೆಂಗಳೂರಿನ ಸಾಮಾನ್ಯ ಪ್ರಯಾಣಿಕರಿಗೆ ಬಜೆಟ್ ದ್ರೋಹ ಮಾಡಿದೆ. ನಗರ ಸಾರಿಗೆಯ ಬಗ್ಗೆ ಉಲ್ಲೇಖವಿಲ್ಲ. ನಗರ ಜೀವನಾಡಿಯಾಗಿರುವ ಬಿಎಂಟಿಸಿಗೆ ಯಾವುದೇ ಹಣ ಹಂಚಿಕೆ, ಸಾಮಾನ್ಯ ಜನರಿಗೆ ಪ್ರಯಾಣ ದರ ಕಡಿತ, ಮಹಿಳೆಯರು ಮತ್ತು ದುರ್ಬಲ ಸಮುದಾಯಗಳಿಗೆ ಉಚಿತ ಪ್ರಯಾಣ ಕಲ್ಪಿಸುವ ಮಾತುಗಳೇ ಕೇಳಿ ಬರಲಿಲ್ಲ.

**ವಿನಯ್ ಶ್ರೀನಿವಾಸ್,** ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ

## ಘೋಷಣೆಗಷ್ಟೇ ಸೀಮಿತ



'ಸಬ್ ಕಾ ಸಾಥ್, ಸಬ್ ಕಾ ವಿಕಾಸ್..' ಘೋಷಣೆಗಷ್ಟೇ ಸೀಮಿತ. ಅಂಗವಿಕಲರನ್ನು ಬಜೆಟ್‌ನಿಂದ ಹೊರಗಿಟ್ಟಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಸರ್ಕಾರ ಅಂಗವಿಕಲತೆ ನಿರ್ಮೂಲನೆ ಮಾಡುತ್ತಿದೆಯೋ ಅಥವಾ ಅಂಗವಿಕಲರನ್ನೇ ನಿರ್ಮೂಲನೆ ಮಾಡಲು ಮುಂದಾಗಿದೆಯೋ ಎನ್ನುವ ಅನುಮಾನ ಮೂಡಿದೆ

**ಚಂದ್ರಶೇಖರ ಪುಟ್ಟಪ್ಪ,** ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ

## ರೈತರ ಪರ ಬಜೆಟ್

ಬಸವರಾಜ ಬೊಮ್ಮಾಯಿ ಅವರ ಚೊಚ್ಚಲ ಬಜೆಟ್ ಸರ್ವಸ್ಪರ್ಶಿಯಾಗಿದೆ. ಕೃಷಿ, ನೀರಾವರಿ, ಹೈನುಗಾರಿಕೆ, ರೇಷ್ಮೆ, ಕೃಷಿ ಕಾಲೇಜು, ರೈತರ ಶಕ್ತಿ ಕೇಂದ್ರ, ರೈತರ ಆರೋಗ್ಯ ವಿಮೆ, ಸಾಲ ಯೋಜನೆ ಸೇರಿದಂತೆ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಇದು ರೈತರ ಪರ ಬಜೆಟ್.

**ಪಿ.ಎಲ್.ಸೋಮಶೇಖರ,** ಭಾರತೀಯ ಕಿಸಾನ್ ಸಂಘದ ಪ್ರಾಂತ ಉಪಾಧ್ಯಕ್ಷ

## ಅಲೆಮಾರಿ ವಿರೋಧಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿರುವ ಅಲೆಮಾರಿ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಸ್ಥಾನ ನೀಡಿಲ್ಲ. ನಿಗಮದ ಕನಸಿಗೂ ತಣ್ಣೀರೆರಚಲಾಗಿದ್ದು, ಸರ್ಕಾರದ ಅಲೆಮಾರಿ ವಿರೋಧಿ ನಡೆ ಸ್ಪಷ್ಟವಾಗಿದೆ. ಒಟ್ಟಾರೆ ಇದು ಅಲೆಮಾರಿಗಳ ವಿರೋಧಿ ಬಜೆಟ್.

**ಕಿರಣ್ ಕುಮಾರ್ ಕೊತ್ತಗೆರೆ,** ಎಸ್‌ಸಿ–ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾದ ಪ್ರಧಾನ ಕಾರ್ಯದರ್ಶಿ

## ಸುಧಾರಣೆಗೆ ಒತ್ತು ನೀಡಿಲ್ಲ

ಈ ಬಜೆಟ್ ಮೂಲಕ ರಾಜ್ಯದ ನಗರಾಡಳಿತ ವ್ಯವಸ್ಥೆಯನ್ನು ಸಮಗ್ರವಾಗಿ ಅಳೆದು, ನಗರಗಳನ್ನು ಮೂಲ ಸೌಕರ್ಯಗಳ ಮೂಲಕ ಅಭಿವೃದ್ಧಿಪಡಿಸುವ ಅವಕಾಶ ಇತ್ತು. ಆದರೆ, ನಮ್ಮ ನಗರ ಹಾಗೂ ಪಟ್ಟಣಗಳ ಜೀವನದ ಗುಣಮಟ್ಟ ಸುಧಾರಿಸುವತ್ತ ಯಾವುದೇ ಒತ್ತು ನೀಡದಿರುವುದು ನಿರಾಸೆ ತಂದಿದೆ.

**ಸಂತೋಷ ನರಗುಂದ,** ಜನಾಗ್ರಹದ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥ

## ಪತ್ರಿಕೆ ಹಾಕುವವರ ಕಡೆಗಣನೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಕಚೇರಿಗೆ ಪ್ರತಿದಿನ ಪತ್ರಿಕೆ ಹಾಕುವ ವರ್ಗವನ್ನೇ ಮರೆತಿದ್ದಾರೆ. ಕೋವಿಡ್ ಸಂದರ್ಭದಲ್ಲೂ ನಿಮ್ಮ ಮನೆ ಬಾಗಿಲಿಗೆ ಪತ್ರಿಕೆ ತಲುಪಿಸಿದ್ದೇವೆ. ಆದರೂ ನಮ್ಮನ್ನು ಪ್ರತಿ ಬಜೆಟ್‌ನಲ್ಲಿ ಕಡೆಗಣಿಸಲಾಗಿದೆ. ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಮಾತ್ರ ಬಜೆಟ್ ಮಂಡಿಸುತ್ತೀರ. ಇದು ಎಷ್ಟರ ಮಟ್ಟಿಗೆ ಸರಿ?

**ಕೆ.ಶಂಭುಲಿಂಗ,** ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ

# 'ಕ.ಕ ಮಾನವ ಸಂಪನ್ಮೂಲ ಸಂಘಕ್ಕೆ ಇಲ್ಲ ಅನುದಾನ'

ಪ್ರಜಾವಾಣಿ ವಾರ್ತೆ

**ಕಲಬುರಗಿ:** ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘಕ್ಕೆ ಪ್ರಸಕ್ತ ಬಜೆಟ್‌ನಲ್ಲಿ ಅನುದಾನ ನೀಡಿಲ್ಲ.

ಈ ಭಾಗದ ಮಾನವ ಸಂಪನ್ಮೂಲದ ಅಭಿವೃದ್ಧಿ ದೃಷ್ಟಿಕೋನದಿಂದ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಸರ್ಕಾರದಿಂದ ಈ ಸಂಘ ಸ್ಥಾಪಿಸಿ, ಸಂಘ ಪರಿವಾರದ ಹಿರಿಯ ಮುಖಂಡ ಬಸವರಾಜ ಪಾಟೀಲ ಸೇಡಂ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದರು. ವಾರ್ಷಿಕ ₹500 ಕೋಟಿ ಅನುದಾನ ನೀಡುವುದಾಗಿಯೂ ಘೋಷಿಸಿದ್ದರು.

'ಸಂಘಕ್ಕೆ ಬರಬೇಕಾದ ಬಾಕಿ ಸೇರಿ ಒಟ್ಟು ₹ 700 ಕೋಟಿ ಅನುದಾನ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದೇವು. ಈ ಬಜೆಟ್‌ನಲ್ಲಿ ಅನುದಾನ ನೀಡದಿರಲು ಏನು ಕಾರಣ ಎಂಬುದು ನನಗೆ ಗೊತ್ತಿಲ್ಲ.ಈ ಸಂಘವನ್ನು ನಾನಾಗಿಯೇ ಕೇಳಿ ಪಡೆದಿಲ್ಲ. ಸರ್ಕಾರವೇ ಇದನ್ನು ಕಟ್ಟಿ, ನನ್ನ ಹೆಗಲಿಗೆ ಜವಾಬ್ದಾರಿ ವಹಿಸಿದೆ. ಹಾಗಾಗಿ, ನಾನು ಈ ವಿಷಯದಲ್ಲಿ ಏನನ್ನೂ ಕೇಳುವುದಿಲ್ಲ' ಎಂದು ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

ಬಸವರಾಜ ಪಾಟೀಲ ಸೇಡಂ

'ಸಂಘವು ಘೋಷಣೆಯಾದ ಬಳಿಕ ಕೊರೊನಾ ಕಾರಣದಿಂದಾಗಿ ಮೊದಲ ಅನುದಾನ ಬರುವುದಕ್ಕೆ 11 ತಿಂಗಳು ಹಿಡಿಯಿತು. ಮೊದಲ ಕಂತಿನಲ್ಲಿ ಕೊಟ್ಟಿದ್ದ ₹ 100 ಕೋಟಿ ವೆಚ್ಚ ಮಾಡಿದ್ದೇವೆ. ತಿಂಗಳ ಹಿಂದೆ ಎರಡನೇ ಕಂತಿನಲ್ಲಿ ಮತ್ತೆ ₹ 100 ಕೋಟಿ ನೀಡಿದ್ದಾರೆ. ಇವೆರಡೂ ಕಳೆದ ಬಾರಿಯ ಅನುದಾನ. ಪ್ರಸ್ತುತ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ( ಕೆಕೆಆರ್‌ಡಿಬಿ) ಗೆ ₹ 3 ಸಾವಿರ ಕೋಟಿ ನೀಡಿದ್ದಾರೆ. ಆದರೆ, ಇದರಲ್ಲಿ ನಮ್ಮ ಸಂಘಕ್ಕೆ ಪಾಲು ಕೊಡಲು ಬರುವುದಿಲ್ಲ. ನಮಗೆ ಪ್ರತ್ಯೇಕವಾಗಿ ನೀಡಬೇಕು. ನಮ್ಮ ಮುಂದೆ ಸಾಕಷ್ಟು ಅಭಿವೃದ್ಧಿ ಮಾರ್ಗಸೂಚಿಗಳು ಇವೆ. ಅನುದಾನ ಕೊಟ್ಟರೆ ಕೆಲಸ ಮಾಡುತ್ತೇವೆ. ಇಲ್ಲದಿದ್ದರೆ ಇಲ್ಲ' ಎಂದೂ ಅವರು ಹೇಳಿದರು.

## ವೆಂಕಟೇಶ್ ಮೇಲೆ ಹಲ್ಲೆ: ಇಬ್ಬರ ಬಂಧನ

**ಶಿವಮೊಗ್ಗ:** ಗೋಪಾಳದ ಪದ್ಮಾ ಚಿತ್ರಮಂದಿರದ ಬಳಿ ಗುರುವಾರ ಕೃಷಿಕ ವಂಕಟೇಶ್ ಅವರ ಮೇಲೆ ಹಲ್ಲೆ ನಡೆಸಿದ್ದ ಇಬ್ಬರು ಆರೋಪಿಗಳನ್ನು ತುಂಗಾ ನಗರ ಪೊಲೀಸರು ಬಂಧಿಸಿದ್ದಾರೆ.

ಗೋಪಾಳ ಬಡಾವಣೆಯ ಸಲ್ಮಾನ್ (20), ಅಣ್ಣಾ ನಗರದ ಸೈಯದ್ ಸುಭಾನ್ (18) ಬಂಧಿತ ಆರೋಪಿಗಳು.

ವೆಂಕಟೇಶ್ ತಮ್ಮ ಸಾಕುನಾಯಿ ಜೊತೆ ವಿದ್ಯಾನಿಕೇತನ ಶಾಲೆಯ ಹತ್ತಿರ ವಾಯುವಿಹಾರಕ್ಕೆ ಹೋಗಿದ್ದಾಗ ಕುಡಿದ ಮತ್ತಿನಲ್ಲಿದ್ದ ಆರೋಪಿಗಳು ಇತರ ಸ್ನೇಹಿತರ ಜತೆ ಸೇರಿಕೊಂಡು ಹಲ್ಲೆ ಮಾಡಿದ್ದರು ಎಂದು ಆರೋಪಿಸಿದ್ದಾರೆ.

# 20 ಸಾವಿರ ಮನೆ ಹಂಚಿಕೆ

- ಬೆಂಗಳೂರಿನಲ್ಲಿ ಮಹುಮಹಡಿ ವಸತಿ ಯೋಜನೆಯಡಿ 1 ಲಕ್ಷ ಮನೆಗಳನ್ನು ನಿರ್ಮಿಸುವ ಯೋಜನೆಯಡಿ 53,807 ಮನೆಗಳ ನಿರ್ಮಾಣಕ್ಕೆ ಕಾಮಗಾರಿ ಪ್ರಗತಿಯಲ್ಲಿದೆ. ಇವುಗಳ ಪೈಕಿ 20 ಸಾವಿರ ಮನೆಗಳನ್ನು ಪ್ರಸಕ್ತ ಸಾಲಿನಲ್ಲಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ.
- ತೃತೀಯ ಲಿಂಗಿ ಸಮುದಾಯದವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಆದ್ಯತೆ ಮೇರೆಗೆ ಮನೆ ನಿರ್ಮಾಣ.
- ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದವರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಆದ್ಯತೆ ಮೇರೆಗೆ ಮನೆ ನಿರ್ಮಾಣ ಮತ್ತು ಇತರೆ ಅಭಿವೃದ್ಧಿ ಕಾರ್ಯಕ್ರಮ.
- ಅಲ್ಪಸಂಖ್ಯಾತರ ಇಲಾಖೆಯಡಿ ಪರವಾನಗಿ ಪಡೆದಿರುವ ಬೀದಿ ಬದಿ ವ್ಯಾಪಾರಿಗಳು, ತಳ್ಳುಗಾಡಿ, ಹೂ ಮಾರಾಟಗಾರರು, ತರಕಾರಿ ಮತ್ತು ಹಣ್ಣು ವ್ಯಾಪಾರಿಗಳಿಗೆ ಹಾಗೂ ಆಟೋ ಚಾಲಕರಿಗೆ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಸಹಯೋಗದೊಂದಿಗೆ ಆರ್ಥಿಕ ಸಹಾಯ.
- ಹೊಸೂರು ರಸ್ತೆಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ಮತ್ತು ಕಾರ್ಯಾಗಾರವನ್ನು ₹7 ಕೋಟಿ ವೆಚ್ಚದಲ್ಲಿ ಬಿಎಂಆರ್‌ಸಿಎಲ್ ಸಹಯೋಗದಲ್ಲಿ ನವೀಕರಿಸಿ ಉನ್ನತೀಕರಿಸುವುದು.
- ವಿಶ್ವ ದರ್ಜೆಯ ಮೂಲಸೌಕರ್ಯ, ಸಾರಿಗೆ ಸಂಪರ್ಕ, ತಂತ್ರಜ್ಞಾನ, ಉತ್ತಮ ಹವಾಮಾನ ಹೊಂದಿರುವ ಬೆಂಗಳೂರನ್ನು ಸಭೆ ಸಮಾರಂಭ, ಪ್ರೋತ್ಸಾಹಕ, ವಿಚಾರ ಸಂಕಿರಣ ಮತ್ತು ವಸ್ತುಪ್ರದರ್ಶನದ (ಮೈಸ್) ಹಬ್ ಆಗಿ ಮೇಲ್ದರ್ಜೆಗೇರಿಸಲು ಯೋಜನೆ.

## ಹಳೆ ಘೋಷಣೆ ಪುನರುಚ್ಚಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಸ್ತೆ, ಗ್ರೇಡ್ ಸಪರೇಟರ್, ಕೆರೆ, ರಾಜಕಾಲುವೆ, ಉದ್ಯಾನ, ಕಟ್ಟಡ, ಕೊಳೆಗೇರಿಗಳನ್ನು ಅಭಿವೃದ್ಧಿಪಡಿಸುವ ಹಾಗೂ ಬೀದಿ ದೀಪ, ಕಸ ನಿರ್ವಹಣೆಗೆ ನೆರವಾಗುವ 'ಅಮೃತ ನಗರೋತ್ಥಾನ' ಯೋಜನೆಯನ್ನು 2022ರ ಸ್ವಾತಂತ್ರ್ಯ ದಿನಾಚರಣೆಯಂದು ಮುಖ್ಯಮಂತ್ರಿ ಘೋಷಿಸಿದ್ದರು. ₹ 6,000 ಕೋಟಿ ವೆಚ್ಚದ ಯೋಜನೆ ಇದಾಗಿದ್ದು, ಬಜೆಟ್‌ಗೂ ಮೊದಲೇ ₹ 3,661 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆ ಬಗ್ಗೆ ಬಜೆಟ್‌ನಲ್ಲಿ ಮತ್ತೆ ಉಲ್ಲೇಖ ಮಾಡಲಾಗಿದೆ.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಟೌನ್‌ಷಿಪ್ ನಿರ್ಮಿಸುವುದಾಗಿ 2021–22ನೇ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಇಲ್ಲಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಪಾರ್ಕ್ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಈ ಬಾರಿಯ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಬೆಂಗಳೂರು ಉಪನಗರ ರೈಲ್ವೆ ಯೋಜನೆಯನ್ನು ₹ 15,267 ಕೋಟಿ ಅಂದಾಜು ವೆಚ್ಚದಲ್ಲಿ 2026ರ ಒಳಗೆ ಜಾರಿಗೆ ತರಲಾಗುತ್ತಿದೆ. 148 ಕಿ.ಮೀ. ಉದ್ದದ ನಾಲ್ಕು ಕಾರಿಡಾರ್‌ಗಳನ್ನು ನಿರ್ಮಿಸುವ ಈ ಯೋಜನೆಯಲ್ಲಿ ಚಿಕ್ಕಬಾಣಾವರ-ಬೈಯ್ಯಪ್ಪನಹಳ್ಳಿ ಕಾರಿಡಾರ್‌ನ ಸಿವಿಲ್ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಶೀಘ್ರವೇ ಕಾಮಗಾರಿಯನ್ನು ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ. ಈ ಯೋಜನೆಗೆ 2022–23ನೇ ಸಾಲಿನಲ್ಲಿ ₹ 850 ಕೋಟಿ ಅನುದಾನ ಘೋಷಣೆ ಮಾಡಲಾಗಿತ್ತು. ಈ ಬಾರಿಯ ಬಜೆಟ್‌ನಲ್ಲಿ ಅನುದಾನ ಪ್ರಕಟಿಸಿಲ್ಲ.

## ನನ್ನ ನಗರ ನನ್ನ ಬಜೆಟ್: ಫ್ರೀಜ್ ಮಾಬ್

**ಬೆಂಗಳೂರು:** 'ನನ್ನ ನಗರ ನನ್ನ ಬಜೆಟ್' ಭಾಗವಾಗಿ ಜನಾಗ್ರಹ ಸಂಘಟನೆಯಿಂದ ಕ್ವಿನ್ಸ್ ರಸ್ತೆಯಲ್ಲಿ ಶುಕ್ರವಾರ ಸಂಜೆ ಫ್ರೀಜ್ ಮಾಬ್ ನಡೆಸಲಾಯಿತು.

ಬಿಬಿಎಂಪಿ ಜೊತೆ ಸೇರಿ ನಡೆಸುತ್ತಿರುವ ಅಭಿಯಾನ ಇದಾಗಿದ್ದು ಫೆ.23 ರಿಂದ ಅಭಿಯಾನ ಆರಂಭಿಸಲಾಗಿದೆ. ಈವರೆಗೆ 700ಕ್ಕೂ ಹೆಚ್ಚು ನಾಗರಿಕರು ಸುಮಾರು 1,900 ಸಲಹೆಗಳನ್ನು ಬಜೆಟ್ ಬಸ್‌ಗೆ ಮತ್ತು ಆನ್‌ಲೈನ್ ಮೂಲಕ ಸಲ್ಲಿಸಿದ್ದಾರೆ. ನಾಗರಿಕರು ಬಜೆಟ್ ಮೇಲಿನ ತಮ್ಮ ಅಭಿಪ್ರಾಯವನ್ನು, ವಿಶೇಷವಾಗಿ ಉದ್ಯಾನ, ಪಾದಾಚಾರಿ ರಸ್ತೆ ಮತ್ತು ಸಾರ್ವಜನಿಕ ಶೌಚಾಲಯಗಳ ಬಗ್ಗೆ www.mycitymybudget.in ನಲ್ಲಿ ಸಲ್ಲಿಸಬಹುದು.

# ರಾಸಾಯನಿಕದಿಂದ ಹಕ್ಕಿಗಳಿಗೆ ಕಂಟಕ

ಪ್ರಜಾವಾಣಿ ವಾರ್ತೆ

ಮಾವಿನ ಗಿಡದಲ್ಲಿ ಸಮೃದ್ಧಿಯಾಗಿರುವ ಹೂವುಗಳು

**ದಾಬಸ್ ಪೇಟೆ:** ವಸಂತ ಮಾಸದಲ್ಲಿ ಚಿಗುರುವ ಮಾವಿನ ಮರಗಳಲ್ಲಿ ಕುಳಿತು ಚಿಲಿಪಿಲಿ ಎಂದು ಹಾಡುತ್ತಿದ್ದ ಹಕ್ಕಿಗಳ ಪಾಲಿಗೆ ರಾಸಾಯನಿಕ ಔಷಧಗಳು ವಿಷವಾಗಿ ಕಾಡುತ್ತಿದೆ. ರೈತನಿಗೆ ಹಲವು ರೀತಿಯಲ್ಲಿ ಸಹಕಾರಿಯಾಗಿದ್ದ ಪಕ್ಷಿಗಳು ಜೀವ ಕಳೆದುಕೊಳ್ಳುತ್ತಿವೆ.

ನೆಲಮಂಗಲ ತಾಲ್ಲೂಕಿನಲ್ಲಿ 1,259 ಎಕರೆ ಪ್ರದೇಶದಲ್ಲಿ ಮಾವಿನ ಬೆಳೆ ಇದೆ. ರೈತರು ಮಾವಿನ ಬೆಳೆ ಉಳಿಸಿಕೊಳ್ಳಲು ಸಿಂಪಡಿಸುತ್ತಿರುವ ರಾಸಾಯನಿಕದಿಂದ ಕೋಗಿಲೆ ಸಂತತಿಯೇ ನಶಿಸುತ್ತಿದೆ. ಮಾವಿನ ಮರಗಳಿಗೆ ರೋಗ ಬಾರದಿರಲಿ, ಹೂಗಳು ಉದುರದಿರಲಿ, ಚೆನ್ನಾಗಿ ಕಾಯಿ ಕಚ್ಚಲಿ ಎಂಬ ಕಾರಣಕ್ಕೆ ರೈತರು ಪ್ಲಾನೋಫಿಕ್ ಲಿಕ್ವಿಡ್ ಮತ್ತು ರೋಕೊ ಪೌಡರ್ ಸಿಂಪಡಣೆ ಮಾಡುತ್ತಿದ್ದಾರೆ. ಇದು ಕೋಗಿಲೆ ಹಾಗೂ ಇತರೆ ಜಾತಿಯ ಪಕ್ಷಿಗಳಿಗೆ ಮರಣ ಶಾಸನವಾಗುತ್ತಿದೆ. ಮಾವಿನ ಮರದತ್ತ ಕೋಗಿಲೆಗಳು ತಿರುಗಿ ನೋಡದಂತಹ ವಾತಾವರಣ ಸೃಷ್ಟಿಯಾಗುತ್ತಿದೆ. ಹೂವುಗಳ ಮಕರಂದ ಹೀರಲು ಬರುವ ದುಂಬಿ, ಜೇನು ನೊಣಗಳು ಗೂಡು ಕಟ್ಟುವುದೂ ಕಡಿಮೆಯಾಗಿದೆ.

'ಮಾವಿನ ಮರವನ್ನು ಇಷ್ಟಪಡುವ ಕೋಗಿಲೆಗಳು ವಸಂತ ಕಾಲದಲ್ಲಿ ಈ ಮರದ ಮೇಲೆ ಕೂತು ಹೂಗಳ ಮಕರಂದ ಹೀರಿ ಸುಶ್ರಾವ್ಯವಾಗಿ ಹಾಡುವ ಮೂಲಕ ಸಂಗಾತಿಯನ್ನು ಸೆಳೆಯುತ್ತವೆ. ಸಂಗಾತಿಯೊಂದಿಗೆ ಬೆರೆತು ಜೂನ್, ಜುಲೈ ತಿಂಗಳಲ್ಲಿ ಗರ್ಭ ಧರಿಸಿ ಆಗಸ್ಟ್ ತಿಂಗಳಲ್ಲಿ ಕಾಗೆ ಗೂಡು ಹುಡುಕಿ ಮೊಟ್ಟೆ ಇಟ್ಟು ಸಂತಾನ ವೃದ್ಧಿ ಮಾಡಿಕೊಳ್ಳುತ್ತವೆ' ಎಂದು ಪಕ್ಷಿ ಪ್ರಿಯ ಸಿದ್ದಯ್ಯ ವಿವರಿಸುತ್ತಾರೆ.

'ಹಿಂದೆಲ್ಲಾ ಮಾವಿನ ಮರಗಳು ದೊಡ್ಡದಾಗಿರುತ್ತಿದ್ದವು. ಈಗ ತಳಿ ಸಂಕರದಿಂದ ಮರಗಳು ಚಿಕ್ಕದಾಗಿ ಹರಡಿಕೊಳ್ಳುತ್ತಿದೆ. ಇದು ಕೂಡ ಕೋಗಿಲೆಗಳು ಸಂಯೋಗಕ್ಕೆ ತೊಂದರೆಯಾಗಿದೆ' ಎಂದು ಅವರು ಅಭಿಪ್ರಾಯಪಡುತ್ತಾರೆ.

ಬೆಳೆಗಳಿಗೆ ರೋಗ ತಗಲುತ್ತದೆ ಎಂದು ರೈತರು ಹೊಲಗದ್ದೆ, ತೋಟಗಳ ಬೆಳೆಗಳಿಗೆ ಕೀಟನಾಶಕ ಸಿಂಪಡಿಸುತ್ತಿದ್ದಾರೆ. ಈ ಕೀಟನಾಶಕ ಬೆರೆತ ಕಾಳು ಕಡ್ಡಿಗಳನ್ನು ತಿನ್ನುವುದರಿಂದಲೂ ಪಕ್ಷಿಗಳು ಸಾಯುತ್ತಿವೆ. ಹೇರಳವಾಗಿದ್ದ ಕಾಡು ಕಣ್ಮರೆಯಾಗುತ್ತಿದೆ. ಅರಣ್ಯ ಇಲಾಖೆ ಬೆಳೆಸುತ್ತಿರುವ ಮರಗಳಲ್ಲಿ ಈ ಪಕ್ಷಗಳಿಗೆ ಬೇಕಾದ ಹಣ್ಣಿನ ಮರಗಳೇ ಇಲ್ಲ. ಇದು ಕೂಡ ಪಕ್ಷಗಳ ಬದುಕಿಗೆ ಮಾರಕವಾಗಿದೆ ಎನ್ನುತ್ತಾರೆ ಸಿದ್ದಯ್ಯ.

'ರಾಗಿ, ತೊಗರಿ, ಅವರೆ ಗಿಡಗಳಿಗೂ ಔಷಧ ಸಿಂಪಡಣೆ ಮಾಡಲಾಗುತ್ತಿದೆ. ಕಾಗೆ, ಗುಬ್ಬಚ್ಚಿ, ಕಾಜಾಣ, ಗೊರವಂಕ ಇನ್ನಿತರ ಪಕ್ಷಿಗಳು ದಿನೇ ದಿನೇ ಕಡಿಮೆಯಾಗುತ್ತಿವೆ. ಹೂವುಗಳ ಮಕರಂದ ಹೀರಲು ಬರುವ ದುಂಬಿ, ಜೇನು ನೊಣಗಳು ಗೂಡು ಕಟ್ಟುವುದು ಕಡಿಮೆಯಾಗಿದೆ' ಎನ್ನುತ್ತಾರೆ ಕೃಷಿ ಅಧಿಕಾರಿ ಕುಮಾರ್.

## ಹೆಲಿಕಾಪ್ಟರ್ ಟಿಕೆಟ್ ಬುಕ್; ₹ 4.20 ಲಕ್ಷ ವಂಚನೆ

**ಚಿಕ್ಕಬಳ್ಳಾಪುರ:** ವೈಷ್ಣೋದೇವಿ ದರ್ಶನಕ್ಕೆ ತೆರಳಲು ಹೆಲಿಕಾಪ್ಟರ್ ಬುಕ್ ಮಾಡುತ್ತೇವೆ ಎಂದು ನಂಬಿಸಿ ಗೌರಿಬಿದನೂರು ತಾಲ್ಲೂಕಿನ ಹಳೇಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ವಿ.ಟಿ.ವೆಂಕಟೇಶ್ ಹಾಗೂ ಅವರ ಸ್ನೇಹಿತರಿಂದ ಆನ್‌ಲೈನ್ ವಂಚಕರು ₹ 4,21,520 ಹಣ ಲಪಟಾಯಿಸಿದ್ದಾರೆ. ಈ ಸಂಬಂಧ ವೆಂಕಟೇಶ್ ಚಿಕ್ಕಬಳ್ಳಾಪುರ ಸಿ.ಇ.ಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಉತ್ತರ ಭಾರತ ಪ್ರವಾಸಕ್ಕೆ ತೆರಳಲು 44 ಜನ ಸ್ನೇಹಿತರು ಇಂಡಿಯನ್ ಏರ್‌ಲೈನ್ಸ್ ಟಿಕೆಟ್ ಬುಕ್ ಮಾಡಿದ್ದೇವೆ. ಈ ಸಂದರ್ಭದಲ್ಲಿ ವಯಸ್ಸಾದ ವ್ಯಕ್ತಿಗಳು ಇದ್ದ ಕಾರಣ ವೈಷ್ಣೋದೇವಿ ದೇವಾಲಯಕ್ಕೆ ಹೋಗಲು ಹೆಲಿಕಾಪ್ಟರ್ ಬುಕ್ ಮಾಡಲು ಗೂಗಲ್ ಸರ್ಚ್ ಮಾಡಿದೆವು. ಅದರಲ್ಲಿ ಹೆಲಿಶಾಫರ್ ಬುಕಿಂಗ್ ವೆಬ್‌ಸೈಟ್ ವೀಕ್ಷಿಸಿದ್ದು ಅದರಲ್ಲಿನ ವಾಟ್ಸ್‌ಆ್ಯಪ್ ನಂಬರ್ ಸಂಪರ್ಕಿಸಿದೆವು.

ಹಿಮಾಲಿಯನ್ ಹೆಲಿ ಸರ್ವಿಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವುದಾಗಿ, ನನ್ನ ಹೆಸರು ನಿತಿನ್ ಕುಮಾರ್ ಸಿಂಗ್ ಎಂದು ವ್ಯಕ್ತಿಯೊಬ್ಬ ಪರಿಚಯಿಸಿಕೊಂಡ. ಒಬ್ಬರ ಪ್ರಯಾಣದ ಟಿಕೆಟ್‌ಗೆ ₹ 3,460 ಇದೆ ಎಂದು ತಿಳಿಸಿದೆ. ಆತ ಹೇಳಿದಂತೆ ಹಣವನ್ನು ಜಮೆ ಮಾಡಿದೆವು. ಟಿಕೆಟ್‌ಗಳನ್ನು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ. ಬಳಿಕ ಅವು ನಕಲಿ ಎಂದು ಗೊತ್ತಾಯಿತು ಎಂದಿದ್ದಾರೆ.

# 'ಕಂಡು ಕೇಳರಿಯದ ರೀತಿ ಸಾಹಿತ್ಯ ಸಮ್ಮೇಳನ'

ಪ್ರಜಾವಾಣಿ ವಾರ್ತೆ

ಮಹೇಶ ಜೋಶಿ

**ಬೆಂಗಳೂರು:** 'ಹಿಂದೆಂದು ಕಂಡು ಕೇಳರಿಯದ ರೀತಿಯಲ್ಲಿ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಾವೇರಿಯಲ್ಲಿ ಆಚರಿಸಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ₹ 20 ಕೋಟಿ ಅನುದಾನ ಘೋಷಿಸಿದ್ದಾರೆ. ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಅವರು, 'ಸರ್ಕಾರದ ಈ ನೆರವಿನಿಂದ ಅರ್ಥಪೂರ್ಣವಾಗಿ ಸಮ್ಮೇಳನ ಆಚರಿಸಲಾಗುವುದು. ಮುಖ್ಯಮಂತ್ರಿ ಮತ್ತು ನಾನು ಹಾವೇರಿ ಜಿಲ್ಲೆಯವರಾಗಿದ್ದೇವೆ. ಹೀಗಾಗಿ, ಅಲ್ಲಿ ಐತಿಹಾಸಿಕ ದಾಖಲೆ ನಿರ್ಮಿಸಲಾಗುವುದು' ಎಂದು ಹೇಳಿದ್ದಾರೆ.

'ಸಾಹಿತಿಗಳಾದ ಡಾ. ಸಿದ್ಧಲಿಂಗಯ್ಯ, ಚೆನ್ನವೀರ ಕಣವಿ ಹಾಗೂ ಪ್ರೊ. ಚಂದ್ರಶೇಖರ ಪಾಟೀಲ ಅವರ ಸಾಹಿತ್ಯ ಪ್ರಚಾರಕ್ಕೆ ಸಂಬಂಧಿಸಿದಂತೆ ಪರಿಷತ್ತು ಸರ್ಕಾರಕ್ಕೆ ಈ ಹಿಂದೆ ಮನವಿ ಸಲ್ಲಿಸಿತ್ತು.

ಈ ಬಗ್ಗೆಯೂ ಘೋಷಣೆಯಾಗಿರುವುದು ಸಂತಸ ನೀಡಿದೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: info@gokaldasexports.com; ವೆಬ್‌ಸೈಟ್: www.gokaldasexports.com

### ಅಂಚೆ ಮತಪತ್ರದ ನೋಟೀಸ್

ಈ ಮೂಲಕ ಕಂಪನಿಯ ಸದಸ್ಯರುಗಳಿಗೆ ನೋಟೀಸು ನೀಡುವುದೇನಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ಸೆಕ್ಷನ್ 108 ಮತ್ತು ಸೆಕ್ಷನ್ 110ರ ಅನುಗುಣವಾಗಿ ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ಮತ್ತು ನಿಯಮ 22, ತಿದ್ದುಪಡಿಗಳನ್ನು, (ನಿರ್ವಹಣಾ ನಿಯಮಗಳು) ಓದಿಕೊಂಡಂತೆ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ"), ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್) ನಿಯಂತ್ರಣಗಳು, 2015ರ ಅಗತ್ಯ ಸುತ್ತೋಲೆಗಳನ್ನು ಓದಿಕೊಂಡಂತೆ ಮತ್ತು ಕಾಯ್ದೆಯ ಇತರ ಅನ್ವಯವಾಗುವ ನಿಬಂಧನೆಗಳಡಿಯ ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳಂತೆ ಕಾಲಕಾಲಕ್ಕೆ ಕಂಪನಿಯು ರಿಮೋಟ್ ವಿದ್ಯುನ್ಮಾನ ಮತದಾನ (ಇ–ಮತದಾನ)ದ ಪ್ರಕ್ರಿಯೆಯ ದಿನಾಂಕ ಮಾರ್ಚ್ 1, 2022ರ ಅಂಚೆ ಮತಪತ್ರದ ಮೂಲಕ ಇಲ್ಲಿ ತಿಳಿಸಿರುವ ಐಟಂಗಳ ಮೇಲೆ ತನ್ನ ಸದಸ್ಯರಿಂದ ಅನುಮೋದನೆ ಅಪೇಕ್ಷಿಸುತ್ತದೆ.

| ಐಟಂ ನಂ. | ವಿವರ | ನಿರ್ಣಯದ ಸ್ವರೂಪ |
|---|---|---|
| 1. | 'ಜಿಇಎಲ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2022' ಗೆ ಅನುಮೋದನೆ ("ಇಎಸ್‌ಒಪಿ 2022"/"ಯೋಜನೆ"). | ವಿಶೇಷ |
| 2. | 'ಜಿಇಎಲ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2022' ("ಇಎಸ್‌ಒಪಿ 2022"/"ಯೋಜನೆ") ಅಡಿಯಲ್ಲಿ ಸಮೂಹ ಕಂಪನಿ(ಗಳು), ಸಹವರ್ತಿ ಕಂಪನಿ(ಗಳು), ಮತ್ತು ಅಥವಾ ಕಂಪನಿಯ ಅಂಗಸಂಸ್ಥೆ ಕಂಪನಿ(ಗಳು) ಉದ್ಯೋಗಿಗಳಿಗೆ / ನಿರ್ದೇಶಕರಿಗೆ ಅನುದಾನದ ಆಯ್ಕೆಗಳ ಮಂಜೂರಾತಿ. | ವಿಶೇಷ |
| 3. | ಗುರುತಿಸಲಾದ ಉದ್ಯೋಗಿಗಳಿಗೆ ನೀಡಲಾದ ಬಂಡವಾಳದ 1% ಕ್ಕೆ ಸಮಾನಾಗಿ ಅಥವಾ ಹೆಚ್ಚಿನ ಉದ್ಯೋಗಿ ಸ್ಟಾಕ್ ಆಯ್ಕೆಯ ಅನುದಾನದ ಅನುಮೋದನೆ. | ವಿಶೇಷ |

ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ಫೆಬ್ರವರಿ 25, 2022ರಂತೆ (ಕಟ್–ಆಫ್ ದಿನಾಂಕ) ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ಡಿಪಾಸಿಟರೀಸ್ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ರವರೊಂದಿಗೆ ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟ್, ಅಂದರೆ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (KFin ಟೆಕ್) ನೊಂದಿಗೆ ನೋಂದಾಯಿಸಿಕೊಂಡಿರುವವರಿಗೆ ಕಂಪನಿಯು ಅಂತಹ ಸದಸ್ಯರಿಗೆ ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಶುಕ್ರವಾರ, ಮಾರ್ಚ್ 4, 2022ರಂದು ಕಂಪನಿಯು ಪೂರ್ಣಗೊಳಿಸಿದೆ. ಕಟ್–ಆಫ್ ದಿನಾಂಕದಂದು ಸದಸ್ಯರು / ಫಲಾನುಭವಿ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ನೋಟೀಸನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು.

ಮೇಲ್ಕಂಡ ಸುತ್ತೋಲೆಗಳ ಅನುಸಾರವಾಗಿ, ಅಂಚೆ ಮತಪತ್ರದ ನೋಟೀಸಿನ ಹಾರ್ಡ್ ಪ್ರತಿಯನ್ನು ನಮೂನೆಗಳು ಮತ್ತು ಪೂರ್ವ–ಪಾವತಿಸಿದ ವ್ಯವಹಾರದ ಉತ್ತರ ಲಕೋಟೆಯನ್ನು ಸದಸ್ಯರಿಗೆ ಕಳುಹಿಸಲಾಗುವುದಿಲ್ಲ. ಸದಸ್ಯರ ಸಮ್ಮತಿ ಅಥವಾ ಅಸಮ್ಮತಿ ಅಭಿಪ್ರಾಯದ ಸಂವಹನವು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಗಳ ಮೂಲಕ ಮಾತ್ರ ನಡೆಯುತ್ತದೆ.

ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನದ ಮೂಲಕ ನಡೆಯುವ ಪೋಸ್ಟಲ್ ಬ್ಯಾಲೆಟ್ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯ ನಿರ್ದೇಶಕರ ಮಂಡಳಿಯು, ಕಂಪನಿಯ ಕಾರ್ಯದರ್ಶಿ ಅಭ್ಯಸಿಸುತ್ತಿರುವ (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 5553) ಶ್ರೀ ನಾಗೇಂದ್ರ ಡಿ ರಾವ್ ಅವರನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನದ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಸೇವೆಗಳನ್ನು ಬಳಸಿಕೊಂಡಿದೆ. ಅಂಚೆ ಮತಪತ್ರದ ನೋಟೀಸನ್ನು ಕಂಪನಿಯ ವೆಬ್‌ಸೈಟ್ www.gokaldasexports.com ನಿಂದ ಅಥವಾ KFin Tech ವೆಬ್‌ಸೈಟ್‌ನಿಂದ https://evoting.kfintech.com/ ಡೌನ್‌ಲೋಡ್ ಮಾಡಬಹುದು. ನೋಟೀಸನ್ನು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾಗಿರುವಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಸಿ ಲಿಮಿಟೆಡ್ (www.bseindia.com)ನ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗಿರುತ್ತದೆ.

ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸದ ಸದಸ್ಯರು, ಕೆಫಿನ್ ಟೆಕ್‌ನೊಂದಿಗೆ ಅದರ ವೆಬ್‌ಸೈಟ್ https://ris.kfintech.com/clientservices/postalballot/registration.aspx ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ.

ಇ–ಮೇಲ್ ವಿಳಾಸದ ಶಾಶ್ವತ ನೋಂದಣಿಗಾಗಿ, ಸದಸ್ಯರು ತಮ್ಮ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟ್‌ರವರೊಂದಿಗೆ ಹೊಂದಿರುವ ಎಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳು ಮತ್ತು ಕೆಫಿನ್ ಟೆಕ್‌ನೊಂದಿಗೆ ಹೊಂದಿರುವ ಭೌತಿಕ ಹೋಲ್ಡಿಂಗ್‌ಗಳಿಗೆ ಅನುಗುಣವಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು ವಿನಂತಿಸಲಾಗಿದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿರುವ ಯಾವುದೇ ಸದಸ್ಯರು, ಅಂಚೆ ಮತಪತ್ರದ ನೋಟೀಸ್, ರಿಮೋಟ್ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಸ್ವೀಕರಿಸದಿದ್ದರೆ, ಅಂತಹ ಸದಸ್ಯರು ಅದನ್ನು ಸ್ವೀಕರಿಸಲು ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ einward.ris@kfintech.com ಗೆ ಬರೆಯುವುದರ ಮೂಲಕ ಪಡೆಯಬಹುದು.

ಅಂಚೆ ಮತಪತ್ರ/ ಇ–ಮತದಾನಕ್ಕೆ ಸಂಬಂಧಿಸಿದ ವಿವರಗಳು:

| ವಿಷಯ | | ವಿವರಗಳು |
|---|---|---|
| 1. ನೋಟೀಸ್ ರವಾನೆಯನ್ನು ಪೂರ್ಣಗೊಳಿಸಿದ ದಿನಾಂಕ | : | ಮಾರ್ಚ್ 4, 2022 |
| 2. ಇ–ಮತದಾನದ ಅರ್ಹತೆಗೆ ಕಟ್–ಆಫ್ ದಿನಾಂಕ | : | ಫೆಬ್ರವರಿ 25, 2022 |
| 3. ಇ–ಮತದಾನದ ಅವಧಿ | : | ಶನಿವಾರ, ಮಾರ್ಚ್ 05, 2022ರಂದು ಬೆಳಿಗ್ಗೆ 9.00 ಗಂಟೆ ಐಎಸ್‌ಟಿಗೆ ಪ್ರಾರಂಭವಾಗುತ್ತದೆ ಮತ್ತು ಭಾನುವಾರ, ಏಪ್ರಿಲ್ 3, 2022ರ ಸಂಜೆ 5.00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. |
| 4. ಇಮೇಲ್ ಐಡಿಗಳ ತಾತ್ಕಾಲಿಕ ನೋಂದಣಿಗಾಗಿ ಸದಸ್ಯರಿಗೆ ಲಿಂಕ್ | : | https://ris.kfintech.com/clientservices/postalballot/registration.aspx |
| 5. ಇ–ಮತದಾನದ ಫಲಿತಾಂಶಗಳ ಘೋಷಣೆ | : | ಅಂಚೆ ಮತದಾನ ಮೂಲಕ ಇ–ಮತದಾನದ ಫಲಿತಾಂಶಗಳನ್ನು ಮಂಗಳವಾರ, ಏಪ್ರಿಲ್ 5, 2022ರಂದು ಅಥವಾ ಮೊದಲು ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.gokaldasexports.com ಮತ್ತು KFin ನ ವೆಬ್‌ಸೈಟ್ https://evoting.kfintech.com/ನಲ್ಲಿ ಪ್ರಕಟಣೆ ಮಾಡಲಾಗುವುದು ಜೊತೆಗೆ ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳೊಂದಿಗೆ ಸಂವಹನ ಮಾಡಲಾಗುತ್ತದೆ. ಅಂಚೆ ಮತದಾನದ ಫಲಿತಾಂಶಗಳನ್ನು ಕಂಪನಿಯು ತನ್ನ ನೋಂದಾಯಿತ ಕಚೇರಿಯಲ್ಲಿ ಪ್ರಕಟಿಸುತ್ತದೆ. ನಿರ್ಣಯಗಳು, ಅಗತ್ಯ ಬಹುಮತದಿಂದ ಭಾನುವಾರ, ಏಪ್ರಿಲ್ 3, 2022ರಂದು ಅಂಗೀಕರಿಸಲ್ಪಟ್ಟರೆ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾರವರು ಹೊರಡಿಸಿದ ಸಾಮಾನ್ಯ ಸಭೆಗಳ ಮೇಲೆ ಸೆಕ್ರೆಟರಿ ಸ್ಟ್ಯಾಂಡರ್ಡ್ಸ್ (SS–2) ನ ನಿಯಮಗಳಿಗೆ ಅನುಗುಣವಾಗಿ ಪರಿಗಣಿಸಲಾಗುತ್ತದೆ. |

ಇ–ಮತದಾನಕ್ಕೆ ಸಂಬಂಧಿಸಿದಂತೆ ಸದಸ್ಯರು ಯಾವುದೇ ಪ್ರಶ್ನೆಗಳು/ ಕುಂದುಕೊರತೆಗಳಿಗಾಗಿ https://evoting.kfintech.com (KFintech ವೆಬ್‌ಸೈಟ್) ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸಹಾಯ ಮತ್ತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ವೀಕ್ಷಿಸಬಹುದು ಅಥವಾ ಶ್ರೀ ಶಿವಕುಮಾರ್ ರವರನ್ನು evoting@kfintech.com ನಲ್ಲಿ ಅಥವಾ KFintech ನ ಟೋಲ್ ಫ್ರೀ ಸಂಖ್ಯೆ 1–800–309–4001 ಗೆ ಕರೆ ಮಾಡಿ ಸಂಪರ್ಕಿಸಬಹುದು ಅಥವಾ ಕಂಪನಿ ಕಾರ್ಯದರ್ಶಿ ಶ್ರೀತಿ ಎಂ ಎಸ್ ರವರನ್ನು cs@gokaldasexports.com ನ ಮೂಲಕ ಸಂಪರ್ಕಿಸಬಹುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಶ್ರೀತಿ ಎಂ ಎಸ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : ಮಾರ್ಚ್ 4, 2022

ನಮ್ಮ ಕನಸಿನ ನಗರ
ಅದು ನನಸಾಗುವಂತೆ ಮಾಡೋಣ

PURAVANKARA PRESENTS DH BENGALURU 2040 SUMMIT POWERED BY manipalhospitals

ಇಂದಿನ **ಪವರ್ ಆಫ್ ಗುಡ್**‌ನ ಬುನಾದಿಯ ಮೇಲೆ ಶ್ರೇಷ್ಠವಾದ ನಾಳೆಯ ನಿರ್ಮಾಣ

ನಗರವನ್ನು ಅಗ್ರಸ್ಥಾನಕ್ಕೆ ಕರೆದೊಯ್ಯುವಂತಹ ಅಪರೂಪದ ಕಾರ್ಯಕ್ರಮ. ರಾಜಕಾರಣಿಗಳು, ಕಾರ್ಯನೀತಿ ರೂಪಿಸುವವರು, ಬುದ್ಧಿಜೀವಿಗಳು, ವಿವಿಧ ಕ್ಷೇತ್ರಗಳ ಪರಿಣಿತರು ಮತ್ತು ಕ್ರೀಡೆ ಹಾಗೂ ಮನರಂಜನಾ ಕ್ಷೇತ್ರಗಳ ಖ್ಯಾತರನ್ನು ಒಂದೇ ವೇದಿಕೆಯ ಮೇಲೆ ಒಟ್ಟುಗೂಡಿಸುವಂತಹ ಒಂದು ವಿಶಿಷ್ಟ ಸಮಾವೇಶವಿದು. ಎಲ್ಲರ ವಿಚಾರಗಳ ಕುರಿತು ಚರ್ಚೆ, ವಾದ ಪ್ರತಿವಾದದಿಂದ ಪರಿಹಾರೋಪಾಯಗಳು ಗೋಚರಿಸುತ್ತವೆ. ಆಗ ಭಾರತದ ತಾಂತ್ರಿಕ ರಾಜಧಾನಿಯಾದ ಬೆಂಗಳೂರು ಪ್ರಗತಿಯತ್ತ ದಾಪುಕಾಲು ಹಾಕುವ ಹಾದಿಯನ್ನು ಕಂಡುಕೊಳ್ಳಬಹುದು. ಪ್ರಥಮ DH ಬೆಂಗಳೂರು 2040 ಸಮಾವೇಶಕ್ಕೆ

11 ಮಾರ್ಚ್, 2022 | 1 ಹೊಸ ಪಥದತ್ತ ಸಾಗುವ ಸಮಾವೇಶ | 29 ನಿಪುಣ ಭಾಷಣಕಾರರು | 12 ಮನಸೆಳೆಯುವ ಸೆಷನ್‌ಗಳು

ಸಹ ಪ್ರಾಯೋಜಕರು

ತಾಂತ್ರಿಕ ಪ್ರಯೋಜಕರು

ಇನ್ನು ಹೆಚ್ಚಿನ ಮಾಹಿತಿಗಾಗಿ bit.ly/dhbengaluru2040 ಗೆ ಲಾಗ್ ಇನ್ ಆಗಿ

### ‘50 ವರ್ಷದ ಸಂಭ್ರಮದಲ್ಲಿ ತುಳು ಚಿತ್ರರಂಗ’ ವಿಚಾರಗೋಷ್ಠಿಯಲ್ಲಿ ಒಕ್ಕೊರಲ ಆಗ್ರಹ

# ‘ಹೆಚ್ಚು ಪ್ರಾದೇಶಿಕ ಸಿನಿಮಾಗಳಿಗೆ ಸಬ್ಸಿಡಿ ನೀಡಲಿ’

ಪ್ರಜಾವಾಣಿ ವಾರ್ತೆ

50 ವರ್ಷಗಳ ಸಂಭ್ರಮದಲ್ಲಿ ತುಳು ಸಿನಿಮಾ ಕುರಿತ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ನಿರ್ದೇಶಕ ತಮ್ಮ ಲಕ್ಷ್ಮಣ, ವಿಜಯ್‌ಕುಮಾರ್ ಕೊಡಿಯಾಲ್‌ಬೈಲ್, ರಿಚರ್ಡ್ ಕ್ಯಾಸ್ಟಲೀನೊ ಹಾಗೂ ನಟ ಶಿವಧ್ವಜ್ —ಪ್ರಜಾವಾಣಿ ಚಿತ್ರ

ಯಾವ ಸಿನಿಮಾ ನೋಡೋಣ…ಚಿತ್ರೋತ್ಸವದ ಸಿನಿಮಾ ವೇಳಾಪಟ್ಟಿ ವೀಕ್ಷಿಸುತ್ತಿರುವ ಸಿನಿಪ್ರಿಯರು

**ಬೆಂಗಳೂರು:** ‘ಕರ್ನಾಟಕ ಸರ್ಕಾರ 200 ಚಲನಚಿತ್ರಗಳಿಗೆ ಸಬ್ಸಿಡಿ ನೀಡಲು ನಿರ್ಧರಿಸಿದ್ದು, ಈ ಪೈಕಿ ಕನಿಷ್ಠ 25-30 ಪ್ರಾದೇಶಿಕ ಭಾಷೆಯ ಸಿನಿಮಾಗಳಿಗೆ ಸಬ್ಸಿಡಿ ನೀಡಬೇಕು’ ಎಂಬ ಒಕ್ಕೊರಲ ಆಗ್ರಹ ತುಳು ಚಿತ್ರರಂಗದಿಂದ ಕೇಳಿ ಬಂತು.

13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಶುಕ್ರವಾರ ‘50 ವರ್ಷದ ಸಂಭ್ರಮದಲ್ಲಿ ತುಳು ಸಿನಿಮಾ’ ವಿಷಯದ ಕುರಿತ ವಿಚಾರಗೋಷ್ಠಿ ನಡೆಯಿತು. ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ನಿರ್ದೇಶಕ ರಿಚರ್ಡ್ ಕ್ಯಾಸ್ಟಲೀನೊ ಅವರು, ‘ಇಲ್ಲಿಯವರೆಗೂ ಪ್ರತಿ ವರ್ಷ 125 ಸಿನಿಮಾಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ. ಈ ಪೈಕಿ ಸಬ್ಸಿಡಿ ಪಡೆಯುವ ತುಳು ಸಿನಿಮಾಗಳು ಒಂದೆರಡಷ್ಟೇ. ಇದು ನೋವಿನ ಸಂಗಂತಿ. ತುಳು ಸಿನಿಮಾಗಳಲ್ಲೂ ಉತ್ತಮ ಕಥೆಗಳು ಇವೆ. ಮುಂದೆ 200 ಸಿನಿಮಾಗಳಿಗೆ ಸಬ್ಸಿಡಿ ನೀಡುವಾಗ, ತುಳು ಸೇರಿದಂತೆ ಪ್ರಾದೇಶಿಕ ಭಾಷೆಯ ಕನಿಷ್ಠ 25-30 ಅರ್ಹ ಸಿನಿಮಾಗಳಿಗೆ ಸಬ್ಸಿಡಿ ಸಿಗಲಿ’ ಎಂದು ಆಗ್ರಹಿಸಿದರು.

‘ಒಟಿಟಿಯಲ್ಲಿ ತುಳು ಭಾಷೆಗಿಲ್ಲ ಸ್ಥಾನ’: ‘ಪಿಂಗಾರ’ ಚಿತ್ರದ ನಿರ್ಮಾಪಕ ಅವಿನಾಶ್ ಯು. ಶೆಟ್ಟಿ ಮಾತನಾಡಿ, ‘ಒಟಿಟಿ ವೇದಿಕೆಗಳಲ್ಲಿ ತುಳು ಸಿನಿಮಾಗಳಿಗೆ ಸ್ಥಾನ ಸಿಗುತ್ತಿಲ್ಲ. ನನ್ನ ಸಿನಿಮಾವನ್ನು ಅಮೆಜಾನ್ ಪ್ರೈಂನಲ್ಲಿ ಹಾಕಲು ನಾನು ಪ್ರಯತ್ನಿಸಿದೆ. ಆದರೆ ‘ತುಳು ಭಾಷೆ ನಮ್ಮ ಪಟ್ಟಿಯಲ್ಲಿ ಇಲ್ಲ’ ಎಂದು ಕಂಪನಿಯು ನಿರಾಕರಿಸಿತು. ಒಟಿಟಿ ವೇದಿಕೆಗೆ ಹೋಗಲು ಯೋಗ್ಯತೆ ಇರುವ ತುಳು ಸಿನಿಮಾಗಳು ಹಲವು ಇದ್ದು, ಆದರೆ ಅವಕಾಶವಿಲ್ಲ’ ಎಂದರು.

ನಟ, ನಿರ್ದೇಶಕ ರೂಪೇಶ್ ಶೆಟ್ಟಿ ಮಾತನಾಡಿ, ‘ತುಳು ಚಿತ್ರರಂಗದಲ್ಲಿ ಕಳೆದ 50 ವರ್ಷದಲ್ಲಿ ಕೇವಲ 110 ಸಿನಿಮಾಗಳಷ್ಟೇ ಬಂದಿವೆ. ತುಳು ಸಿನಿಮಾಗಳೂ ಬೆಂಗಳೂರನ್ನು ಅವಲಂಬಿಸಿವೆ. ಮಂಗಳೂರಿನಲ್ಲೂ ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಸೌಲಭ್ಯಗಳು ದೊರೆಯಬೇಕು. ಜೊತೆಗೆ ಕನ್ನಡ ಸಿನಿಮಾಗಳಿಗೆ ಮಲ್ಟಿಪ್ಲೆಕ್ಸ್‌ಗಳಲ್ಲಿ ದೊರೆಯುವ ಶೇಕಡಾವರು ಆದಾಯ, ತುಳು ಸಿನಿಮಾಗಳಿಗೂ ದೊರೆಯಬೇಕು. ತುಳು ಸಿನಿಮಾಗಳನ್ನು ಇತರೆ ಭಾಷೆಯೊಂದಿಗೆ ಸೇರಿಸಿದ್ದು, ನಿರ್ಮಾಪಕರಿಗೆ ಇದರಿಂದ ನಷ್ಟವಾಗುತ್ತಿದೆ’ ಎಂದರು.

> **ತುಳು ಚಿತ್ರರಂಗದ ಹೆಚ್ಚಿನ ಸಿನಿಮಾಗಳು ಹಾಸ್ಯ ಪ್ರಧಾನ ಕಥೆಗೇ ಜೋತುಬಿದ್ದಿವೆ. ಕಥೆಯ ಬಗ್ಗೆ ಗಮನ ಕೊಡಬೇಕು.**
>
> **ವಿಜಯ್‌ಕುಮಾರ್**
> ಕೊಡಿಯಾಲ್‌ಬೈಲ್, ನಿರ್ದೇಶಕ

## ಕೋವಿಡ್: ಹೊಸ ಪ್ರಕರಣ 23 ಜಿಲ್ಲೆಗಳಲ್ಲಿ ಒಂದಂಕಿ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದ್ದು, ಶುಕ್ರವಾರ 233 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. 23 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಒಂದಂಕಿಯಲ್ಲಿವೆ.

ಒಂದು ದಿನದ ಅವಧಿಯಲ್ಲಿ 48 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.48ಕ್ಕೆ ಇಳಿಕೆಯಾಗಿದೆ. 24 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿದ್ದು, ಬೆಂಗಳೂರಿನಲ್ಲಿ 163 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ವಿಜಯಪುರ, ರಾಮನಗರ, ಕೊಪ್ಪಳ, ಚಿಕ್ಕಮಗಳೂರು, ಬೀದರ್ ಹಾಗೂ ಬಾಗಲಕೋಟೆಯಲ್ಲಿ ಹೊಸ ಪ್ರಕರಣ ಪತ್ತೆಯಾಗಿಲ್ಲ.

ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 39.42 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರ ಪೈಕಿ ಬೆಂಗಳೂರಿನಲ್ಲಿ 331 ಮಂದಿ ಸೇರಿದಂತೆ ರಾಜ್ಯದಲ್ಲಿ 648 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.98 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 3,469ಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 2,460 ಸೋಂಕಿತರು ಇದ್ದಾರೆ.

ಕೊರೊನಾ ಸೋಂಕಿತರಲ್ಲಿ 6 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಇಬ್ಬರು, ಧಾರವಾಡ, ಹಾಸನ, ತುಮಕೂರು ಹಾಗೂ ವಿಜಯಪುರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 2.57 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,985ಕ್ಕೆ ತಲುಪಿದೆ.

## ಬೆಳ್ಳಿ ಪರದೆಯಲ್ಲಿ ವಿಶ್ವ ದರ್ಶನಕ್ಕೆ ಕಾದರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿತ್ರಗಳ ಪಟ್ಟಿ ಹುಡುಕುತ್ತಿದ್ದವರು, ವಿವಿಧ ಆಡಿಟೋರಿಯಂಗಳ ಪ್ರವೇಶ ದ್ವಾರಗಳಲ್ಲಿ ನಿಂತು ಇಣುಕುತ್ತಿದ್ದವರು, ಪಾಸ್ ಸಿಗದೆ ಪರದಾಡಿದವರು… ಸುಮ್ಮನೆ ಅಡ್ಡಾಡಿ ಹೋದವರು, ತಮ್ಮ ನೆಚ್ಚಿನ ನಿರ್ದೇಶಕ, ಚಿತ್ರಕರ್ಮಿಗಳ ಜೊತೆ ಮಾತುಕತೆಗೆ ನಿಂತವರು…

– ಇದು 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಚಿತ್ರ ಪ್ರದರ್ಶನದ ಮೊದಲ ದಿನವಾದ ಶುಕ್ರವಾರ ಒರಾಯನ್ ಮಾಲ್‌ನ ಪಿವಿಆರ್ ಚಿತ್ರಮಂದಿರದ ಸುತ್ತಮುತ್ತ ಕಂಡುಬಂದ ನೋಟ.

ನಿಗದಿತ ಚಿತ್ರಗಳನ್ನು ವೀಕ್ಷಿಸಲು ಕಾಯುತ್ತಿದ್ದವರೂ ಇದ್ದರು. ಬೆಳಿಗ್ಗೆ 10 ಗಂಟೆಯ ಪ್ರದರ್ಶನಕ್ಕೆ ಸಣ್ಣ ಪ್ರಮಾಣದ ಪ್ರೇಕ್ಷಕರು ಇದ್ದರು. ಮಧ್ಯಾಹ್ನ 1 ಗಂಟೆಯ ಅವಧಿಯ ಪ್ರದರ್ಶನಕ್ಕೆ ಒಂದೊಂದೇ ಪ್ರದರ್ಶನ ಆಡಿಟೋರಿಯಂಗಳು ಬೇಗನೇ ತುಂಬತೊಡಗಿದವು. ಚಿತ್ರಮಂದಿರದ ಸಿಬ್ಬಂದಿ ಹಾಲ್ ಭರ್ತಿಯಾಗಿರುವುದನ್ನು ವಾಕಿಟಾಕಿ ಮೂಲಕ ವರದಿ ಮಾಡುತ್ತಿದ್ದರು.

**ಪಾಸ್ ಇಲ್ಲ:** ಹಣ ಪಾವತಿಸಿದ್ದರೂ ಪಾಸ್ ಸಿಕ್ಕಿಲ್ಲ ಎಂದು ವಿದ್ಯಾರ್ಥಿಗಳ ಗುಂಪೊಂದು ತುಂಬಾ ಹೊತ್ತಿನಿಂದ ಕಾಯುತ್ತಿತ್ತು. ಒಂದೋ ಪಾಸ್ ಕೊಡಿ. ಇಲ್ಲವಾದರೆ ಹಣ ವಾಪಸ್ ಮಾಡಿ ಎಂದು ಕೋರಿದರು. ಸರಿಯಾದ ಸ್ಪಂದನ ದೊರೆಯಲಿಲ್ಲ ಎಂಬ ದೂರು ಅವರಿಂದ ಕೇಳಿಬಂತು.

6 ಸಾವಿರಗಳಷ್ಟು ಪಾಸ್‌ಗಳನ್ನು ಈಗಾಗಲೇ ವಿತರಿಸಲಾಗಿದೆ. ಹೊಸ ಪಾಸ್ ವಿತರಿಸುವುದನ್ನು ಸ್ಥಗಿತಗೊಳಿಸಲಾಗಿದೆ ಎಂದು ಚಿತ್ರೋತ್ಸವದ ಸಂಯೋಜಕ ಪಿ.ಶೇಷಾದ್ರಿ ಹೇಳಿದರು.

ಚಿತ್ರ ತಂಡಗಳು, ಬೇರೆ ರಾಜ್ಯಗಳ ಚಲನಚಿತ್ರೋತ್ಸವ ಆಯೋಜಕರು, ಸಿನಿಮಾ, ಪತ್ರಿಕೋದ್ಯಮ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

### ಬೇಸರ ಹೊರ ಹಾಕಿದ ನಿರ್ದೇಶಕ ಗಿರೀಶ ಕಾಸರವಳ್ಳಿ

# ‘ನನ್ನ ಸಿನಿಮಾ ಕುರಿತು ಕನ್ನಡದಲ್ಲಿ ಕೃತಿಯಿಲ್ಲ’

ಪ್ರಜಾವಾಣಿ ವಾರ್ತೆ

13 Biffes
ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
Bengaluru International Film Festival
03-10 ಮಾರ್ಚ್ MARCH • 2022
FIAPF • (Accredited by FIAPF)

ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಕೃತಿ ಬಿಡುಗಡೆಗೊಳಿಸಿದರು. ಚಿತ್ರೋತ್ಸವದ ನಿರ್ದೇಶಕ ನರಹರಿ ರಾವ್, ಎನ್‌ಎಫ್‌ಎಐನ ಗುರುಪ್ರಸಾದ್ ಎಚ್. ಎಲ್, ಗಿರೀಶ ಕಾಸರವಳ್ಳಿ ಹಾಗು ಗಣೇಶ್ ಮಟ್ಕರಿ ಇದ್ದಾರೆ —ಪ್ರಜಾವಾಣಿ ಚಿತ್ರ

**ಬೆಂಗಳೂರು:** ‘ನನ್ನ ಸಿನಿಮಾಗಳಿಗೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ಇಂಗ್ಲಿಷ್‌ನಲ್ಲಿ 10 ಕೃತಿಗಳು ಪ್ರಕಟವಾಗಿವೆ. ಆದರೆ ಬೇಸರದ ವಿಷಯವೆಂದರೆ ಕನ್ನಡದಲ್ಲಿ ಒಂದೇ ಒಂದು ಕೃತಿ ಇಲ್ಲಿಯವರೆಗೂ ಬಂದಿಲ್ಲ’ ಎಂದು ನಿರ್ದೇಶಕ ಗಿರೀಶ ಕಾಸರವಳ್ಳಿ ಹೇಳಿದರು.

13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಅಂಗವಾಗಿ ಓರಾಯನ್ ಮಾಲ್‌ನ 11ನೇ ತೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಗಣೇಶ್ ಮಟ್ಕರಿ ಅವರು ಬರೆದ ಇಂಗ್ಲಿಷ್ ಕೃತಿ ‘ಸಿಯರ್ ಆಫ್ ಕಂಟೆಂಪರರಿ ಹಿಸ್ಟರಿ–ಗಿರೀಶ ಕಾಸರವಳ್ಳಿ ಆ್ಯಂಡ್ ಹಿಸ್ ಸಿನಿಮಾ’ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ನನ್ನ ಸಿನಿಮಾಗಳ ಬಗ್ಗೆ ಲೇಖಕ ಮನು ಚಕ್ರವರ್ತಿ, ಒ.ಪಿ. ಶ್ರೀವಾಸ್ತವ್ ಅವರು ತಲಾ ಒಂದು ಕೃತಿ, ಆಸ್ಟ್ರೇಲಿಯಾದ ಸಿನಿಮಾ ವಿಮರ್ಶಕ ಜಾನ್ ವುಡ್ ಅವರು ಎರಡು ಕೃತಿ ಹಾಗೂ ಪ್ರದೀಪ್ ಬಿಸ್ವಾಸ್ ಅವರು ನಾಲ್ಕು ಕೃತಿಗಳನ್ನು ಬರೆದಿದ್ದಾರೆ. ಶರತ್ ಕಲ್ಕೋಡ್ ಅವರು ಕನ್ನಡದಲ್ಲೊಂದು ಕೃತಿ ಬರೆದಿದ್ದಾರೆ. ಇದರಲ್ಲಿ ಕೇವಲ ನನ್ನ ಜೀವನದ ಬಗ್ಗೆ ಮಾಹಿತಿ ಇದೆ. ಇಂಗ್ಲಿಷ್‌ನಲ್ಲಿ ಬಂದಂತಹ ಕೃತಿಗಳಲ್ಲಿ ನನ್ನ ಸಿನಿಮಾವನ್ನು ಆಳವಾಗಿ ವಿಶ್ಲೇಷಿಸಲಾಗಿದೆ. ಒಬ್ಬ ನಿರ್ದೇಶಕನಿಗೆ ಇದು ಮುಖ್ಯ. ಆತನ ದೂರದೃಷ್ಟಿ ಏನು? ಜೀವನದ ಬಗ್ಗೆ ಏನು ಹೇಳುತ್ತಾನೆ? ರಾಜಕೀಯ, ಮೌಲ್ಯ, ಜೀವನದ ಬಗ್ಗೆ ಆತನ ವಿಷಯಪ್ರವೇಶ ಹೇಗಿದೆ? ಎನ್ನುವುದು ಈ ಕೃತಿಗಳಲ್ಲಿದೆ’ ಎಂದರು.

‘ಮರಾಠಿ, ಮಲಯಾಳಂನಲ್ಲಿ ಸಿನಿಮಾ ಮತ್ತು ಸಂಸ್ಕೃತಿ ಎರಡನ್ನೂ ಜೊತೆಜೊತೆಯಾಗಿ ನೋಡುತ್ತಾರೆ. ಆದರೆ ಕನ್ನಡದಲ್ಲಿ ಸಿನಿಮಾವನ್ನು ಸಂಸ್ಕೃತಿಯ ಭಾಗವನ್ನಾಗಿ ನೋಡಿಲ್ಲ’ ಹೀಗಾಗಿ ಇಂಥ ಕೃತಿಗಳು ಬಂದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

‘ಗಣೇಶ್ ಮಟ್ಕರಿ ತಮ್ಮ ಕೃತಿಯಲ್ಲಿ ನನ್ನ ಸಿನಿಮಾಗಳಲ್ಲಿನ ಭಾವನಾತ್ಮಕ ಕೊಂಡಿಯನ್ನು ನೋಡುವ ಪ್ರಯತ್ನ ಮಾಡಿದ್ದಾರೆ. ಉದಾಹರಣೆಗೆ ‘ತ್ರಿ ವುಮೆನ್’ ಎಂಬ ಅಧ್ಯಾಯದಲ್ಲಿ ‘ತಾಯಿ ಸಾಹೇಬ’, ‘ದ್ವೀಪ’ ಹಾಗೂ ‘ಹಸೀನಾ’ದಲ್ಲಿನ ಮೂರು ಪಾತ್ರಗಳ ಪ್ರತಿಬಿಂಬದ ಮುಖಾಂತರ ವಿಶ್ಲೇಷಣೆ ಮಾಡಿದ್ದಾರೆ’ ಎಂದರು.



## ನವೀನ್ ಕುಟುಂಬಸ್ಥರಿಗೆ ₹25 ಲಕ್ಷ ಪರಿಹಾರ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ



ಕುಮಾರಪಟ್ಟಣ ಸಮೀಪದ ಚಳಗೇರಿ ಗ್ರಾಮದ ಮೃತ ನವೀನ್ ನಿವಾಸಕ್ಕೆ ಶುಕ್ರವಾರ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭೇಟಿ ನೀಡಿ, ಪೋಷಕರಿಗೆ ಸಾಂತ್ವನ ಹೇಳಿದರು —ಪ್ರಜಾವಾಣಿ ಚಿತ್ರ

**ಚಳಗೇರಿ (ಕುಮಾರಪಟ್ಟಣ):** ‘ರಾಜ್ಯ ಸರ್ಕಾರದಿಂದ ಮೃತ ನವೀನ್ ಗ್ಯಾನಗೌಡರ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡುವ ತೀರ್ಮಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೈಗೊಂಡಿದ್ದಾರೆ. ಬೊಮ್ಮಾಯಿ ಅವರೇ ಶನಿವಾರ ಇಲ್ಲಿಗೆ ಬಂದು ಪರಿಹಾರದ ಚೆಕ್ ವಿತರಿಸುವ ನಿರೀಕ್ಷೆಯಿದೆ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ರಾಣೆಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದಲ್ಲಿರುವ ಮೃತ ನವೀನ ಗ್ಯಾನಗೌಡರ ನಿವಾಸಕ್ಕೆ ಶುಕ್ರವಾರ ರಾತ್ರಿ ಭೇಟಿ ನೀಡಿ, ಪಾಲಕರಿಗೆ ಸಮಾಧಾನ ಪಡಿಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಯಸ್ಸಿಗೆ ಬಂದ ಮಗನನ್ನು ಕಳೆದುಕೊಂಡ ತಂದೆ–ತಾಯಿಯ ನೋವು ಮತ್ತು ಕಣ್ಣೀರಿಗೆ ಸಾಂತ್ವನ ಹೇಳಲು ನನ್ನ ಬಳಿ ಪದಗಳೇ ಇಲ್ಲದಂತಾಗಿದೆ. ಇಂಥ ಪರಿಸ್ಥಿತಿ ಯಾವ ಪೋಷಕರಿಗೂ ಬರಬಾರದು ಎಂದು ಅವರು ಮರುಕ ವ್ಯಕ್ತಪಡಿಸಿದರು.

‘ಈ ಪರಿಸ್ಥಿತಿಯಲ್ಲಿ ನವೀನ್ ಮೃತದೇಹ ತರುವುದು ಅಷ್ಟೊಂದು ಸುಲಭದ ಮಾತಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ನಾನು, ಪ್ರಧಾನಿ ಅವರೊಂದಿಗೆ ಮೃತದೇಹ ತರಿಸಿಕೊಡಲು ಮಾತನಾಡಿದ್ದೇವೆ. ನರೇಂದ್ರ ಮೋದಿ ಅವರು ಉಕ್ರೇನ್ ದೇಶದೊಂದಿಗೆ ನಿರಂತರ ಸಂಪರ್ಕ ಹೊಂದಿದ್ದು, ಒಂದೆರಡು ದಿನಗಳಲ್ಲಿ ವಿಶೇಷ ವಿಮಾನದ ಮೂಲಕ ಮೃತದೇಹವನ್ನು ತಾಯ್ನಾಡಿಗೆ ತರುವ ಸರ್ವ ಪ್ರಯತ್ನ ನಡೆಸಿದ್ದಾರೆ’ ಎಂದು ತಿಳಿಸಿದರು.

ನವೀನ್ ತಂದೆ ಶೇಖರಪ್ಪ ಗ್ಯಾನಗೌಡ್ರ, ತಾಯಿ ವಿಜಯಲಕ್ಷ್ಮಿ, ಅಣ್ಣ ಹರ್ಷ ಗ್ಯಾನಗೌಡ್ರ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ ವಿಜಯೇಂದ್ರ, ಶಾಸಕ ಅರುಣಕುಮಾರ ಪೂಜಾರ, ಉಗ್ರಾಣ ನಿಗಮದ ಅಧ್ಯಕ್ಷ ಯು.ಬಿ ಬಣಕಾರ ಇದ್ದರು.

> **‘ಕೊನೆಗೆ ಮೃತದೇಹದ ಚಿತ್ರ ಸಿಕ್ಕರೂ ಸಾಕು’**
>
> ‘ಮೃತಪಟ್ಟ ಮಗನನ್ನು ಬದುಕಿಸಿಕೊಡಿ ಎಂದು ಕೇಳುವುದಿಲ್ಲ. ಮಗನ ಮೃತದೇಹ ಹೇಗಿದೆ ಎಂದು ಇದುವರೆಗೂ ನೋಡಲು ಸಾಧ್ಯವಾಗಿಲ್ಲ. ಮಗನ ಮೃತದೇಹದ ಭಾವಚಿತ್ರ ಸಿಕ್ಕರೂ ಸಾಕು ಅದನ್ನೇ ನೋಡಿ ಸಮಾಧಾನ ಪಟ್ಟುಕೊಳ್ಳುತ್ತೇವೆ’ ಎಂದು ನವೀನ ತಂದೆ ಶೇಖರಪ್ಪ ಗ್ಯಾನಗೌಡರ ಮತ್ತು ತಾಯಿ ವಿಜಯಲಕ್ಷ್ಮಿ ಅವರು ಬಿ.ಎಸ್.ಯಡಿಯೂರಪ್ಪ ಅವರಲ್ಲಿ ಅಲವತ್ತುಕೊಂಡರು.

## ‘ಆನ್‌ಲೈನ್ ವಂಚನೆ’ಗೆ ಸಿಮ್ ನೀಡುತ್ತಿದ್ದವರ ಬಂಧನ

**ಬೆಂಗಳೂರು:** ಆನ್‌ಲೈನ್ ಮೂಲಕ ಜನರನ್ನು ವಂಚಿಸುತ್ತಿದ್ದ ಆರೋಪಿಗೆ ಸಿಮ್‌ಕಾರ್ಡ್ ನೀಡುತ್ತಿದ್ದ ಆರೋಪದಡಿ ಇಬ್ಬರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

‘ಯಲಹಂಕದ ಹರ್ಷ (24) ಹಾಗೂ ಎಸ್. ಚೇತನ್ (27) ಬಂಧಿತರು. ಇಬ್ಬರೂ ಮೊಬೈಲ್ ಸೇವಾ ಕಂಪನಿಯ ಮಾರಾಟ ಪ್ರತಿನಿಧಿಗಳು. ಅವರಿಬ್ಬರ ಕೃತ್ಯದ ಬಗ್ಗೆ ಕಂಪನಿಗೆ ಮಾಹಿತಿ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರತಿಷ್ಠಿತ ಕಾಲೇಜಿನಲ್ಲಿ ಎಂಜಿನಿಯರಿಂಗ್ ಸೀಟು ಕೊಡಿಸುವುದಾಗಿ ಹೇಳಿ ವಿದ್ಯಾರ್ಥಿನಿಯೊಬ್ಬರ ಪೋಷಕರನ್ನು ವಂಚಿಸಲಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ಆರೋಪಿ ರಾಜೇಶ್ವರ್ ಎಂಬಾತನನ್ನು ಜ. 28ರಂದು ಬಂಧಿಸಲಾಗಿತ್ತು. ಆತನ ವಿಚಾರಣೆ ನಡೆಸಿದಾಗ, ವಂಚನೆಗೆ ಬಳಸಿದ್ದ ಸಿಮ್‌ಕಾರ್ಡ್ ನೀಡಿದ್ದವರ ಮಾಹಿತಿ ಲಭ್ಯವಾಗಿತ್ತು.’

‘ಅಪರಿಚಿತರ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಇಟ್ಟುಕೊಂಡಿದ್ದ ಹರ್ಷ ಹಾಗೂ ಚೇತನ್, ನಕಲಿ ಸಿಮ್‌ಕಾರ್ಡ್‌ಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಅದರಲ್ಲೇ ಒಂದು ಸಿಮ್‌ಕಾರ್ಡ್‌ನ್ನು ಆರೋಪಿ ರಾಜೇಶ್ವರ್‌ಗೆ ನೀಡಿದ್ದರು. ಅದೇ ಸಿಮ್‌ಕಾರ್ಡ್ ಬಳಸಿ ವಿದ್ಯಾರ್ಥಿನಿಯ ಪೋಷಕರನ್ನು ವಂಚಿಸಲಾಗಿತ್ತು’ ಎಂದೂ ಮೂಲಗಳು ತಿಳಿಸಿವೆ.

ನೆಲಮಂಗಲ ಪಟ್ಟಣದ ಅಡೇಪೇಟೆ ಶ್ರೀ ರುದ್ರೇಶ್ವರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು

## ‘ಗಾಂಜಾ ಚಾಕೊಲೇಟ್’ ಮಾರಾಟ ಜಾಲ ಪತ್ತೆ

ಪ್ರಜಾವಾಣಿ ವಾರ್ತೆ

ಮಹದೇವಪುರ ಪೊಲೀಸರು ಜಪ್ತಿ ಮಾಡಿರುವ ಗಾಂಜಾ ಚಾಕೊಲೆಟ್ ಪೊಟ್ಟಣಗಳು

**ಬೆಂಗಳೂರು:** ಗಾಂಜಾವನ್ನು ಚಾಕೊಲೆಟ್ ರೂಪದಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಮಹದೇವಪುರ ಪೊಲೀಸರು ಭೇದಿಸಿದ್ದು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಒಡಿಶಾದ ಪ್ರದೀಪ್ ಕುಮಾರ್ ರಾವುತ್ (33) ಹಾಗೂ ಎಸ್.ಕೆ. ಸಜಾನ್ (27) ಬಂಧಿತರು. ಅವರಿಂದ 1 ಕೆ.ಜಿ ಗಾಂಜಾ ಹಾಗೂ 18 ಕೆ.ಜಿ ತೂಕದ 320 ಗಾಂಜಾ ಚಾಕೊಲೇಟ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಗಿರೀಶ್ ಹೇಳಿದರು.

‘ಠಾಣೆ ವ್ಯಾಪ್ತಿಯ ಹೊರವರ್ತುಲ ರಸ್ತೆ ಮೂಲಕ ಆರೋಪಿಗಳು ಗಾಂಜಾ ಸಾಗಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಗಿದೆ. ಇವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿದರು.

**ಬೀಡಾ ಅಂಗಡಿಗಳಲ್ಲಿ ಮಾರಾಟ:** ‘ನಗರದಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಗಳು, ತಮ್ಮೂರಾದ ಒಡಿಶಾಗೆ ಆಗಾಗ ಹೋಗಿ ಬರುತ್ತಿದ್ದರು. ಅದೇ ಸಂದರ್ಭದಲ್ಲೇ ಗಾಂಜಾ ಹಾಗೂ ಗಾಂಜಾ ಚಾಕೊಲೇಟ್‌ಗಳನ್ನು ತರುತ್ತಿದ್ದರೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಜಿಗಣಿ, ಎಲೆಕ್ಟ್ರಾನಿಕ್ ಸಿಟಿ ಹಾಗೂ ಸುತ್ತಮುತ್ತಲಿನ ಬೀಡಾ ಅಂಗಡಿಗಳಲ್ಲಿ ಗಾಂಜಾ ಚಾಕೊಲೆಟ್ ಮಾರಲಾಗುತ್ತಿತ್ತು. ಕೆಲ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಕೆಲ ಕಾರ್ಮಿಕರು ಚಾಕೊಲೆಟ್ ಖರೀದಿಸುತ್ತಿದ್ದರು’ ಎಂದೂ ತಿಳಿಸಿದರು.

‘ಗಾಂಜಾವನ್ನು ಪೊಟ್ಟಣಗಳಲ್ಲಿ ತುಂಬಿ ಮಾರಿದರೆ, ಪೊಲೀಸರಿಗೆ ಸಿಕ್ಕಿಬೀಳುವ ಭಯ ಆರೋಪಿಗಳಲ್ಲಿತ್ತು. ಹೀಗಾಗಿ, ಚಾಕೊಲೆಟ್ ರೂಪದಲ್ಲಿ ಗಾಂಜಾ ಮಾರುತ್ತಿದ್ದರು. ಇದೊಂದು ವ್ಯವಸ್ಥಿತ ಜಾಲವಾಗಿದ್ದು, ಹಲವರು ಭಾಗಿಯಾಗಿರುವ ಮಾಹಿತಿ ಇದೆ’ ಎಂದು ಪೊಲೀಸರು ಹೇಳಿದರು.

### ರಷ್ಯಾಗೆ ಜಿ7 ಶೃಂಗ ರಾಷ್ಟ್ರಗಳ ಆಗ್ರಹ ● ಝುಪೋರಿರಿಝಿಯಾ ಸ್ಥಾವರದ ಹತ್ತಿರವೇ ದಾಳಿ; ಆತಂಕ

# ‘ಅಣುಶಕ್ತಿ ಸ್ಥಾವರ ಗುರಿಯಾಗಿಸಿ ದಾಳಿ ಬೇಡ’

ಉಕ್ರೇನ್ ಪಶ್ಚಿಮದಲ್ಲಿ ಕೀವ್ ನಗರಕ್ಕೆ 40 ಕಿ.ಮೀ. ದೂರದಲ್ಲಿನ ಬುಶಿವ್ ನಗರದ ಬಳಿ ರಷ್ಯಾದ ವಾಯುದಾಳಿಯಿಂದಾಗಿ ಕಾರುಗಳು ನಜ್ಜುಗುಜ್ಜಾಗಿರುವುದು —ಎ.ಪಿ ಚಿತ್ರ

**ಬರ್ಲಿನ್ (ಎಎಫ್‌ಪಿ):** ಉಕ್ರೇನ್‌ನ ಅಣುಶಕ್ತಿ ವಿದ್ಯುತ್ ಸ್ಥಾವರಗಳು ಅಥವಾ ಅವುಗಳ ಸಮೀಪ ದಾಳಿ ನಡೆಸುವುದನ್ನು ನಿಲ್ಲಿಸಬೇಕು ಎಂದು ಸೇನಾ ದಾಳಿ ಕೈಗೊಂಡಿರುವ ರಷ್ಯಾಗೆ ಜಿ7 ಶೃಂಗದ ವಿದೇಶಾಂಗ ಸಚಿವರು ಶುಕ್ರವಾರ ಆಗ್ರಹಪಡಿಸಿದ್ದಾರೆ.

ಉಕ್ರೇನ್‌ನಲ್ಲಿ ಇರುವ ಝುಪೋರಿರಿಝಿಯಾ ಪರಮಾಣು ವಿದ್ಯುತ್ ಸ್ಥಾವರದ ಸಮೀಪವೇ ಬಳಿ ಶುಕ್ರವಾರ ರಾತ್ರಿ ಸೇನಾ ಘರ್ಷಣೆ ನಡೆದ ಹಿಂದೆಯೇ ಈ ಆಗ್ರಹ ವ್ಯಕ್ತವಾಗಿದೆ.

ಅಣುಶಕ್ತಿ ವಿದ್ಯುತ್ ಸ್ಥಾವರ ಸೌಲಭ್ಯಗಳ ಮೇಲಿನ ದಾಳಿ ಅಥವಾ ದಾಳಿ ನಡೆಸುವ ಬೆದರಿಕೆಯು ಅಂತರರಾಷ್ಟ್ರೀಯ ಕಾನೂನಿನ ಸಿದ್ಧಾಂತಗಳಿಗೆ ವಿರುದ್ಧವಾದುದು. ಅಲ್ಲದೆ, ಶಾಂತಿ ಸ್ಥಾಪನೆಯ ಮೂಲ ಉದ್ದೇಶಕ್ಕೇ ಭಂಗ ಉಂಟು ಮಾಡಲಿದೆ ಎಂದು ಜಿ7 ರಾಷ್ಟ್ರಗಳ ವಿದೇಶಾಂಗ ಸಚಿವರು ಜಂಟಿ ಹೇಳಿಕೆಯಲ್ಲಿ ಪ್ರತಿಪಾದಿಸಿದ್ದಾರೆ.

## ನ್ಯಾಟೊ ತಿರಸ್ಕಾರ

**ಬ್ರಸೆಲ್ಸ್ ವರದಿ (ಎ.ಪಿ):** ಉಕ್ರೇನ್‌ನ ವಿಮಾನಹಾರಾಟ ರಹಿತ ವಾಯುಮಾರ್ಗ ವಲಯದ ಮೇಲೆ ಕಣ್ಗಾವಲು ಇಡಬೇಕು ಎಂಬ ಬೇಡಿಕೆಯನ್ನು ನ್ಯಾಟೊ ಸದಸ್ಯ ರಾಷ್ಟ್ರಗಳು ಶುಕ್ರವಾರ ತಳ್ಳಿಹಾಕಿವೆ. ಇಂತಹ ಕ್ರಮಗಳು ಯೂರೋಪ್‌ನಲ್ಲಿ ಯುದ್ಧ ಸ್ಥಿತಿ ವ್ಯಾಪಿಸಲು ಕಾರಣವಾಗಬಹುದು ಎಂದು ನ್ಯಾಟೊದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟೊನಿ ಬ್ಲಿಂಕೆನ್ ಮತ್ತು ಇತರೆ ರಾಷ್ಟ್ರಗಳ ವಿದೇಶಾಂಗ ಕಾರ್ಯದರ್ಶಿಗಳ ಜೊತೆಗೆ ಚರ್ಚಿಸಿದ ಬಳಿಕ, ನ್ಯಾಟೊದ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ರಷ್ಯಾವು ವ್ಯಾಪಕ ಪ್ರಮಾಣದಲ್ಲಿ ಶೆಲ್ ದಾಳಿ ನಡೆಸುತ್ತಿರುವ ಕಾರಣ ಉಕ್ರೇನ್‌ನಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂಬುದನ್ನು ಅವರು ಒಪ್ಪಿಕೊಂಡರು.

ಉಕ್ರೇನ್‌ನಲ್ಲಿ ಈಗ ನಡೆಯುತ್ತಿರುವುದು ಭಯಾನಕ. ಜನರ ಸಂಕಷ್ಟ ನೋವುಂಟು ಮಾಡುತ್ತಿದೆ. ಎರಡನೇ ವಿಶ್ವಯುದ್ಧದ ಬಳಿಕ ಇಂಥ ಸ್ಥಿತಿಯನ್ನು ಯೂರೋಪ್‌ನಲ್ಲಿ ನಾವು ಕಂಡಿಲ್ಲ. ಆದರೆ, ನಾವು ವಾಯುಮಾರ್ಗ ಮತ್ತು ಭೂ ಸಾರಿಗೆ ಮೂಲಕ ನಾವು ಉಕ್ರೇನ್ ಪ್ರವೇಶಿಸುವುದಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು.

30 ಸದಸ್ಯ ರಾಷ್ಟ್ರಗಳಿರುವ ನ್ಯಾಟೊದ ಒಪ್ಪಂದ ವಿಧಿ 5ರ ಅನ್ವಯ, ಯಾವುದೇ ಸದಸ್ಯ ರಾಷ್ಟ್ರಗಳ ಮೇಲೆ ದಾಳಿ ನಡೆದರೆ ಇತರೆ ರಾಷ್ಟ್ರಗಳು ರಕ್ಷಣೆಗೆ ಧಾವಿಸಬೇಕು. ನ್ಯಾಟೊ ಯುದ್ಧವಿಮಾನವನ್ನು ಹೊಡೆದುರುಳಿಸುವ ಯಾವುದೇ ಯತ್ನ ಈ ನಿಯಮಕ್ಕೆ ಧಕ್ಕೆ ಉಂಟುಮಾಡಲಿದೆ ಎಂದರು.

ಈ ಮಧ್ಯೆ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, ಪಶ್ಚಿಮ ರಾಷ್ಟ್ರಗಳಿಗೆ ತನ್ನ ದೇಶದ ವಾಯುಮಾರ್ಗ ಮಿತಿಯಲ್ಲಿ ಸಂಚಾರ ರಹಿತ ವಲಯ ಎಂದು ಘೋಷಿಸಬೇಕು ಎಂದು ಒತ್ತಾಯಿಸಿದ್ದಾರೆ. ಉಕ್ರೇನ್‌ನ ಅಣುಶಕ್ತಿ ವಿದ್ಯುತ್ ಸ್ಥಾವರದ ಮೇಲಿನ ದಾಳಿ ಹಿಂದೆಯೇ ಈ ಮನವಿ ವ್ಯಕ್ತವಾಗಿದೆ.

### ಅಜಾಗರೂಕತೆಯ ದಾಳಿ: ಆತಂಕ

**ವಿಶ್ವಸಂಸ್ಥೆ (ಎಎಫ್‌ಪಿ):** ಉಕ್ರೇನ್‌ನಲ್ಲಿ ಅಣುಶಕ್ತಿ ವಿದ್ಯುತ್ ಸ್ಥಾವರದ ಮೇಲೆ ರಷ್ಯಾದ ಅಜಾಗರೂಕತೆಯ ದಾಳಿಯು ಯೂರೋಪ್ ಅನ್ನೇ ಅಪಾಯದಂಚಿಗೆ ದೂಡಬಹುದು ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಅಮೆರಿಕದ ರಾಯಭಾರಿ ಎಚ್ಚರಿಸಿದ್ದಾರೆ.

‘ದೇವರ ಕೃಪೆ ದೊಡ್ಡದು. ಕಳೆದ ರಾತ್ರಿ ಅಣುಶಕ್ತಿ ಸ್ಥಾವರದ ಮೇಲಿನ ದಾಳಿ ಕೂದಲೆಳೆ ಅಂತರದಲ್ಲಿ ತಪ್ಪಿದೆ. ಅದು ಅಜಾಗರೂಕತೆ ಮತ್ತು ಅಪಾಯಕಾರಿ ದಾಳಿ. ರಷ್ಯಾ, ಯೂರೋಪ್ ಮತ್ತು ಉಕ್ರೇನ್ ನಾಗರಿಕರ ಸುರಕ್ಷತೆಗೆ ಧಕ್ಕೆ ತರುವಂತದ್ದಾಗಿತ್ತು’ ಎಂದು ಅಮೆರಿಕದ ರಾಯಭಾರಿ ಲಿಂಡಾ ಥಾಮಸ್ ಗ್ರೀನ್‌ಫೀಲ್ಡ್ ಹೇಳಿದರು. ಅಣುಶಕ್ತಿ ವಿದ್ಯುತ್ ಸ್ಥಾವರದ ಮೇಲಿನ ದಾಳಿ ಅಂತರರಾಷ್ಟ್ರೀಯ ಕಾಯ್ದೆಗೆ ವಿರುದ್ಧವಾದುದುದು ಎಂದು ವಿಶ್ವಸಂಸ್ಥೆಯ ಪ್ರಧಾನ ಸಹ ಕಾರ್ಯದರ್ಶಿ ರೋಸ್ಮರಿ ಡಿಕಾರ್ಲೊ ಅವರು ಪ್ರತಿಪಾದಿಸಿದರು.

ಈ ಕುರಿತು ಪ್ರತಿಕ್ರಿಯಿಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, ‘ಸ್ಥಾವರವೇ ಸ್ಫೋಟಗೊಂಡಿತು. ಎಲ್ಲರ ಅಂತ್ಯ ಸಮೀಪಿಸಿತು. ಇದು, ಯೂರೋಪ್‌ನ ಅಂತ್ಯ ಎಂದೇ ನಾನು ಭಾವಿಸಿದ್ದೆ’ ಎಂದು ಹೇಳಿದರು.

### ಉಕ್ರೇನ್‌ನ ನಗರಗಳ ಮೇಲೆ ಬಾಂಬ್ ದಾಳಿ ನಡೆಸಿಲ್ಲ: ಪುಟಿನ್

**ಮಾಸ್ಕೊ:** ಉಕ್ರೇನ್ ನಗರಗಳ ಮೇಲೆ ರಷ್ಯಾದ ಸೇನೆಯು ಬಾಂಬ್ ದಾಳಿ ನಡೆಸಿದೆ ಎಂಬುದನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನಿರಾಕರಿಸಿದ್ದಾರೆ. ಇದು, ಆಧಾರರಹಿತವಾದುದು ಎಂದು ಜರ್ಮನ್ ಚಾನ್ಸಲೆರ್ ಓಲಾಫ್ ಸ್ಕೋಲ್ಜ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡುತ್ತಾ ಎಂದು ತಿಳಿಸಿದರು.

ಇದು, ವ್ಯವಸ್ಥಿತ ಪ್ರಚಾರ. ಮಾತುಕತೆಗೆ ರಷ್ಯಾ ಮುಕ್ತವಾಗಿದೆ. ಉಕ್ರೇನ್‌ನಲ್ಲಿ ಶಾಂತಿ ಸ್ಥಾಪನೆ ಬಯಸುವ ಎಲ್ಲರ ಜೊತೆಗೆ ಚರ್ಚಿಸಲೂ ಸಿದ್ಧ. ಆದರೆ, ನಮ್ಮ ಬೇಡಿಕೆಗೆ ಒಪ್ಪಬೇಕು. ಇದರಲ್ಲಿ ಉಕ್ರೇನ್‌ನ ತಟಸ್ಥ ಮತ್ತು ಅಣುಶಕ್ತಿಯೇತರ ಸ್ಥಾನಮಾನ ನೀಡಬೇಕು ಎಂಬುದು ಪ್ರಮುಖವಾದುದಾಗಿದೆ ಎಂದಿದ್ದಾರೆ ಎಂದು ಕಚೇರಿ ಹೇಳಿಕೆ ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in



### ಸುಭಾಷಿತ

ಪ್ರಸ್ತುತ ಸ್ಥಿತಿಗತಿ ಆಧರಿಸಿ ವ್ಯಕ್ತಿಯೊಬ್ಬನ ಭವಿಷ್ಯವನ್ನು ನಿರ್ಣಯಿಸಬೇಡಿ. ಏಕೆಂದರೆ, ಕಪ್ಪು ಕಲ್ಲಿದ್ದಲನ್ನು ಹೊಳೆಯುವ ವಜ್ರವನ್ನಾಗಿ ಬದಲಾಯಿಸುವ ಶಕ್ತಿ ಕಾಲಕ್ಕೆ ಇರುತ್ತದೆ. –ಚಾಣಕ್ಯ

# ತೆರಿಗೆ ಹೊರೆಯಿಲ್ಲ, ಮಠಗಳಿಗೆ ಕಾಣಿಕೆಯಿಲ್ಲ ಸರ್ವರನ್ನೂ ಓಲೈಸುವ ಚುನಾವಣಾ ಕಸರತ್ತು

‘ಚುನಾವಣಾ ಜಾತ್ರೆ’ ಸನ್ನಿಹಿತವಾಗಿರುವ ಈ ಹೊತ್ತಿನಲ್ಲಿ ಎಲ್ಲ ಧರ್ಮ, ಜಾತಿ, ಸಮುದಾಯ ಹಾಗೂ ಪ್ರದೇಶಗಳ ಜನರಿಗೂ ಬಜೆಟ್‌ನ ‘ಪ್ರಸಾದ’ವನ್ನು ಹಂಚುವ ಉಮೇದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಮಂಡಿಸಿದ 2022–23ರ ರಾಜ್ಯ ಬಜೆಟ್‌ನಲ್ಲಿ ಢಾಳಾಗಿ ಎದ್ದು ಕಾಣುತ್ತದೆ. ಆದರೆ, ತಮ್ಮ ರಾಜಕೀಯ ‘ಗುರು’ ಬಿ.ಎಸ್. ಯಡಿಯೂರಪ್ಪನವರು ಸುರಿಸಿದಂತೆ ಇವರೇನೂ ಮಠಗಳ ಮೇಲೆ ಅದೇ ರೀತಿಯ ಪ್ರೀತಿಯ ಮಳೆ ಸುರಿಸುವ ಗೋಜಿಗೆ ಹೋಗಿಲ್ಲ. ತೆರಿಗೆ ಹೆಚ್ಚಳದ ಸೊಲ್ಲೂ ಈ ಬಜೆಟ್‌ನಲ್ಲಿಲ್ಲ. ಹೀಗಾಗಿ ಈ ಆಯವ್ಯಯ ಜನಪ್ರಿಯತೆಯ ಹಾದಿಯನ್ನೇ ಹಿಡಿದಿದೆ. ತಾವು ಪ್ರತಿನಿಧಿಸುತ್ತಿರುವ ಪಕ್ಷದ ಬಲವನ್ನು ಹೆಚ್ಚಿಸಲು ಅತ್ಯುತ್ಸಾಹ ತೋರಿರುವ ಮುಖ್ಯಮಂತ್ರಿ, ಸರ್ವರ ಹಿತವನ್ನು ಬಯಸುವ ಮಾತುಗಳನ್ನಾಡಿ, ರಾಜ್ಯದ ಮೂಲೆ, ಮೂಲೆಯಲ್ಲಿರುವ ಎಲ್ಲರನ್ನೂ ಓಲೈಸುವ ಕಸರತ್ತು ನಡೆಸಿದ್ದಾರೆ. ಹೀಗಾಗಿ ತಿಗಳ, ಮಾಳಿ, ಕುಂಬಾರ, ಯಾದವ, ದೇವಾಡಿಗ, ಸಿಂಪಿ, ಕ್ಷತ್ರಿಯ, ಮೇದಾರ, ಕುರ್ಮ, ಪಿಂಜಾರ/ನದಾಫ್, ಕುರುಬ, ಬಲಿಜ, ಈಡಿಗ, ಮಡಿವಾಳ, ಹಡಪದ ಮೊದಲಾದ ಹಿಂದುಳಿದ ಸಮುದಾಯಗಳೂ ಬಜೆಟ್‌ನಲ್ಲಿ ಪಾಲು ಪಡೆದಿವೆ. ‘ಅಹಿಂದ’ದ ವ್ಯಾಪ್ತಿಯನ್ನು ಹಿಗ್ಗಿಸಿರುವ ಅವರು, ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಸಮುದಾಯಗಳತ್ತಲೂ ಗಮನಹರಿಸದೇ ಬಿಟ್ಟಿಲ್ಲ. ಜೈನ, ಸಿಖ್, ಬೌದ್ಧ, ಕ್ರೈಸ್ತ, ಮುಸ್ಲಿಂ ಧರ್ಮಗಳ ಕಡೆಗೂ ಅವರ ಚಿತ್ತ ಹರಿದಿದೆ. ಧರ್ಮ, ಜಾತಿಗಳನ್ನು ಹುಡುಕಿ, ಹುಡುಕಿ ಅನುದಾನವನ್ನು ಹಂಚಿಕೆ ಮಾಡಿಬಿಟ್ಟಿದ್ದಾರೆ ಮುಖ್ಯಮಂತ್ರಿ. ಮತ ಅರಳಿಸುವ ಎಲ್ಲ ಗಿಡ–ಮರಗಳ ‘ಫಸಲು’ ತಮ್ಮ ಪಕ್ಷದ ಬುಟ್ಟಿಗೇ ಬೀಳಬೇಕು ಎನ್ನುವ ಇರಾದೆ ಬೊಮ್ಮಾಯಿಯವರ ಬಜೆಟ್‌ನ ಉದ್ದಕ್ಕೂ ಗೋಚರಿಸುತ್ತದೆ. ಅದಕ್ಕೆ ತಕ್ಕಂತೆ ಆರ್ಥಿಕ ದಾಳ ಉರುಳಿಸುವಲ್ಲಿ ಅವರು ಚಾಣಾಕ್ಷತೆಯನ್ನೂ ಮೆರೆದಿದ್ದಾರೆ. ಎಲ್ಲವನ್ನೂ ಹುಡುಕಿ ತೆಗೆಯುವ ಅವರ ನಡೆ ಧರ್ಮ, ಜಾತಿಗಳಿಗೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದ ಅಷ್ಟೂ ನೀರಾವರಿ ಯೋಜನೆಗಳ ಕಡತಗಳ ಮೇಲಿನ ದೂಳು ಝಾಡಿಸಿ ತೆಗೆದು, ಎಲ್ಲ ಯೋಜನೆಗಳಿಗೂ ಅಷ್ಟಿಷ್ಟು ಅನುದಾನವನ್ನು ಎತ್ತಿಟ್ಟಿದ್ದಾರೆ. ಮೇಕೆದಾಟು, ಎತ್ತಿನಹೊಳೆ, ಕಳಸಾ–ಬಂಡೂರಿ, ಕೃಷ್ಣಾ, ಮಹದಾಯಿ, ಭದ್ರಾ, ತುಂಗಭದ್ರಾ... ಹೀಗೆ ಎಲ್ಲ ಯೋಜನೆಗಳ ಜಪವನ್ನೂ ಮಾಡಿದ್ದಾರೆ. ಎಲ್ಲರನ್ನೂ ತಲುಪುವ ಜನಪ್ರಿಯತೆಯ ಹಾದಿಯಲ್ಲಿ ಮುಖ್ಯಮಂತ್ರಿ ಎಷ್ಟು ದೂರ ಕ್ರಮಿಸಿದ್ದಾರೆಂದರೆ ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟ ತಯಾರಕರು, ಗ್ರಾಮ ಸಹಾಯಕರು ಹಾಗೂ ಅರ್ಚಕರ ವೇತನವನ್ನು, ತುಸುವೇ ಆಗಿರಲಿ, ಹೆಚ್ಚಿಸಿದ್ದಾರೆ. ಪೌರಕಾರ್ಮಿಕರಿಗೆ ಸಂಕಷ್ಟ ಭತ್ಯೆ ನೀಡುವುದಾಗಿಯೂ ಘೋಷಿಸಿದ್ದಾರೆ. ರೈತರಿಗೆ ಡೀಸೆಲ್ ಸಹಾಯಧನ ನೀಡಲು ‘ರೈತ ಶಕ್ತಿ’ ಯೋಜನೆಯನ್ನೂ ಪ್ರಕಟಿಸಿದ್ದಾರೆ. ಹಳೆಯ ಯೋಜನೆಗಳ ಹೆಸರನ್ನೇ ಉಲ್ಲೇಖಿಸಿ ರಾಜಧಾನಿ ಬೆಂಗಳೂರಿನ ಜನರಿಗೂ ಸಿಂಹಪಾಲು ಕೊಟ್ಟಿರುವಂತೆ ಬಿಂಬಿಸಿದ್ದಾರೆ.

ಸರ್ವರನ್ನೂ ಸಂತುಷ್ಟಿಗೊಳಿಸುವ ಭರದಲ್ಲಿ ಬಜೆಟ್‌ನಲ್ಲಿ ದೂರದರ್ಶಿತ್ವದ ನೋಟವೇ ಕಾಣೆಯಾಗಿದೆ

ಗಣರಾಜ್ಯೋತ್ಸವದ ಸಮಯದಲ್ಲಿ ನಾರಾಯಣ ಗುರುಗಳ ಕುರಿತ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಅವಕಾಶ ದೊರೆತಿಲ್ಲ ಎಂದು ಆಕ್ಷೇಪ ವ್ಯಕ್ತವಾಗಿತ್ತು. ಅದರಿಂದ ಆಗಬಹುದಾದ ‘ಹಾನಿ’ಯನ್ನು ಕಡಿಮೆ ಮಾಡುವ ಭಾಗವಾಗಿ ನಾರಾಯಣ ಗುರು ವಸತಿಶಾಲೆ ಸ್ಥಾಪನೆಯ ಘೋಷಣೆ ಹೊರಬಿದ್ದಂತಿದೆ. ರೈತರು ಮತ್ತು ಮಹಿಳೆಯರ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಘೋಷಿಸಲಾಗಿದೆ. ದೇವಾಲಯಗಳನ್ನು ಸರ್ಕಾರದ ಸುಪರ್ದಿಯಿಂದ ಮುಕ್ತಗೊಳಿಸುವ ವಿವಾದಾತ್ಮಕ ಅಂಶದ ಪ್ರಸ್ತಾವವನ್ನೂ ಮುಖ್ಯಮಂತ್ರಿ ಮಾಡಿದ್ದಾರೆ. ಸಕಾರಾತ್ಮಕ ಪರಿಣಾಮ ಬೀರಬಹುದಾದ ಅಂಶಗಳು ಕೂಡ ಬಜೆಟ್‌ನಲ್ಲಿವೆ. ಯಶಸ್ವಿನಿ ಯೋಜನೆ ಪುನರಾರಂಭ ಮಾಡುತ್ತಿರುವುದು ಅವುಗಳಲ್ಲೊಂದು. ಬಡವರು ಸುಲಭವಾಗಿ ಚಿಕಿತ್ಸೆ ಪಡೆಯಲು ಇದರಿಂದ ಅನುವಾಗಲಿದೆ. ನಗರ ಪ್ರದೇಶಗಳಲ್ಲಿ ವಾರ್ಡ್‌ಗೆ ಒಂದರಂತೆ ‘ನಮ್ಮ ಕ್ಲಿನಿಕ್’ ಆರಂಭಿಸುವ ನಿರ್ಧಾರ ಕೂಡ ಉತ್ತಮ ನಡೆ. ಶೈಕ್ಷಣಿಕ ಹಾಗೂ ಆರೋಗ್ಯ ಸೌಕರ್ಯ ಹೆಚ್ಚಳಕ್ಕೆ ಅನುದಾನ ಒದಗಿಸಲು ಮುಂದಾಗಿರುವುದು ಸ್ವಾಗತಾರ್ಹ ಹೆಜ್ಜೆ. ಐಐಟಿ ಮಾದರಿಯಲ್ಲಿ ಏಳು ಕೆಐಟಿಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಹಾಗೂ ವಿನೂತನ ಮಾದರಿಯ ಏಳು ವಿಶ್ವವಿದ್ಯಾಲಯಗಳ ಸ್ಥಾಪನೆಯ ಘೋಷಣೆ ಕುತೂಹಲ ಮೂಡಿಸಿವೆ. ‘ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕು’ಗಳನ್ನು ಗುರುತಿಸಿ, ಅವುಗಳ ಸರ್ವಾಂಗೀಣ ಅಭಿವೃದ್ಧಿಗೆ ಅನುದಾನ ಒದಗಿಸಲಿರುವುದು ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಪೂರಕವಾದ ಯೋಜನೆ. ಚಲನಚಿತ್ರಗಳಿಗೆ ಸಹಾಯಧನ ನೀಡುವ ಪ್ರಮಾಣವನ್ನು ಈಗಿನ 125 ಚಿತ್ರಗಳಿಂದ 200 ಚಿತ್ರಗಳಿಗೆ ಏರಿಕೆ ಮಾಡಲಾಗುವುದು ಎಂದು ಪ್ರಕಟಿಸಿರುವುದು ಸಿನಿಮಾ ಮಂದಿಗೆ ಸಂತಸ ತಂದೀತು. ಆದರೆ, ಸರ್ವರನ್ನೂ ಖುಷಿಪಡಿಸುವ ಭರದಲ್ಲಿ ಬಜೆಟ್‌ನಲ್ಲಿ ದೂರದರ್ಶಿತ್ವದ ನೋಟವೇ ಕಾಣೆಯಾಗಿಬಿಟ್ಟಿದೆ. ಹೀಗಾಗಿ ದೂರಗಾಮಿ ಪರಿಣಾಮ ಬೀರುವಂತಹ, ಸಾರ್ವಜನಿಕ ಆಸ್ತಿ ಸೃಷ್ಟಿಸುವಂತಹ ಯೋಜನೆಗಳು ಗೈರಾಗಿವೆ. ಜಿಎಸ್‌ಟಿ ರಾಜ್ಯಭಾರದ ಈ ದಿನಗಳಲ್ಲಿ ತೆರಿಗೆ ಹೆಚ್ಚಿಸಲು ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಆಸ್ಪದವಿಲ್ಲ. ಮದ್ಯದ ಮೇಲಿನ ತೆರಿಗೆ ಹೆಚ್ಚಿಸುವ ಗೋಜಿಗೆ ಮುಖ್ಯಮಂತ್ರಿ ಹೋಗಿಲ್ಲ. ಅನುದಾನ ಹಂಚಿಕೆಗೆ ಬೇಕಾದ ಕೊರತೆಯನ್ನು ₹ 72 ಸಾವಿರ ಕೋಟಿ ಸಾಲದಿಂದ ತುಂಬಿಕೊಳ್ಳಲು ಅವರು ನಿರ್ಧರಿಸಿದ್ದಾರೆ. ಸಾಲ ತೀರುವಳಿಗೆ ಬಜೆಟ್‌ನ ಶೇ 17ರಷ್ಟು ಪಾಲನ್ನು ಮೀಸಲಿಟ್ಟಿದ್ದಾರೆ. ಆರ್ಥಿಕ ಶಿಸ್ತಿಗಿಂತ ವೋಟಿನ ಅಂಕಗಣಿತವೇ ಬಜೆಟ್‌ಗೆ ಮುಖ್ಯವಾಗಿರುವುದು ಸುಸ್ಪಷ್ಟವಾಗಿದೆ.

## ದಿನದ ಟ್ವೀಟ್

### ಉತ್ತರ ಏನಿರಬಹುದು?

**ಕಡೆಯದಾಗಿ ಒಂದು ಪ್ರಶ್ನೆ ಉಳಿದುಕೊಳ್ಳುತ್ತದೆ: ಯುದ್ಧ ಕೊನೆಗೊಂಡ ಬಳಿಕ, ಈಗ ಕರೆತಂದಿರುವ ವಿದ್ಯಾರ್ಥಿಗಳೆಲ್ಲರೂ ಅಧ್ಯಯನ ಮುಂದುವರಿಸಲು ಉಕ್ರೇನ್‌ಗೆ ಮರಳುವರೇ ಅಥವಾ ಭಾರತದಲ್ಲಿಯೇ ಉಳಿಯುವರೇ? ಎರಡನೆಯದನ್ನು ಆಯ್ದುಕೊಂಡರೆ, ಅವರ ವೈದ್ಯಕೀಯ ಪದವಿಯನ್ನು ಇಲ್ಲಿನ ಯಾವ ವಿಶ್ವವಿದ್ಯಾಲಯದ ಅಡಿಯಲ್ಲಿ, ಯಾವ ಹಂತದಲ್ಲಿ ಪರಿಗಣಿಸಲಾಗುತ್ತದೆ ಮತ್ತು ಕೊನೆಯದಾಗಿ ಅದಕ್ಕೆ ಎಷ್ಟು ವೆಚ್ಚ ತಗುಲಬಹುದು?**

**ರೋಹಿತ್ ಸಿಂಹ,** ಎಂಜಿನಿಯರ್

## ಕಿಡಿನುಡಿ

**ರಾಜ್ಯ ಬಜೆಟ್‌ನಲ್ಲಿ ಮೇಕೆದಾಟು ಯೋಜನೆಗೆ ಹಣ ಘೋಷಿಸಿದ್ದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅಭಿನಂದನೆಗಳು. ಆ ಮೂಲಕ ನಿಮ್ಮದು ಬುದ್ಧಿವಂತ ರಾಜಕೀಯ ನಡೆ ಎಂಬುದನ್ನು ತಿಳಿಸಿದ್ದೀರಿ. ಯೋಜನೆ ಘೋಷಿಸುವುದರ ಜೊತೆಗೆ ಒಕ್ಕೂಟ ಸರ್ಕಾರದ ಮೇಲೆ ಒತ್ತಡ ಹಾಕಿ ಪರಿಸರ ಅನುಮತಿ ಪಡೆದುಕೊಳ್ಳುವುದು ಸಹ ನಿಮ್ಮ ಮುಖ್ಯ ಕೆಲಸವಾಗಿದೆ.**

**ಡಿ.ಕೆ.ಸುರೇಶ್,** ಸಂಸದ, ಕಾಂಗ್ರೆಸ್ ಮುಖಂಡ

## 25 ವರ್ಷಗಳ ಹಿಂದೆ

ಬುಧವಾರ, 5-3-1997

- **ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಗೆ ಸಾಫ್ಟ್‌ವೇರ್ ದೊರೆ ಬಿಲ್‌ಗೇಟ್ಸ್ ಕರೆ**

**ನವದೆಹಲಿ, ಮಾ. 4**– ವಿಶೇಷವಾಗಿ ಟೆಲಿಸಂಪರ್ಕ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯಿಂದ ಭಾರತದ ಜೀವನಮಟ್ಟ ಸುಧಾರಿಸುವ ಅವಕಾಶಗಳ ಕುರಿತಾಗಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರೊಂದಿಗೆ ಚರ್ಚೆ ನಡೆಸಿರುವುದಾಗಿ ಅಮೆರಿಕದ 8.7 ಶತಕೋಟಿ ಡಾಲರ್‌ಗಳ ಮೈಕ್ರೊಸಾಫ್ಟ್ ಸಂಸ್ಥೆ ಅಧ್ಯಕ್ಷ ಬಿಲ್‌ಗೇಟ್ಸ್ ಇಂದು ತಿಳಿಸಿದರು.

ಪ್ರಧಾನಿಯವರೊಂದಿಗೆ ಉಪಾಹಾರ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದಲ್ಲಿನ ವಿಶ್ವವಿದ್ಯಾಲಯಗಳಿಗಾಗಿ ವಿವಿಧ ಯೋಜನೆಗಳನ್ನು ಕುರಿತಂತೆ ತಮ್ಮ ಕಂಪನಿ ಕಾರ್ಯ ನಿರ್ವಹಿಸುತ್ತಿದೆ ಎಂದರು.

- **ಭ್ರಷ್ಟಾಚಾರ ಆರೋಪ: ಅವಿಶ್ವಾಸ ನಿರ್ಣಯ ತರಲು ಪ್ರಧಾನಿ ಸವಾಲು**

**ನವದೆಹಲಿ, ಮಾ. 4**– ತಮ್ಮದು ಹಗರಣ ಮುಕ್ತ ಸರ್ಕಾರ ಎಂದು ಘೋಷಿಸಿದ ಪ್ರಧಾನಿ ಎಚ್.ಡಿ. ದೇವೇಗೌಡ ಅವರು, ತಮ್ಮ ವಿರುದ್ಧವಾಗಲೀ ಅಥವಾ ಸಂಪುಟದ ಇತರ ಸದಸ್ಯರ ವಿರುದ್ಧವಾಗಲೀ ಯಾವುದೇ ಭ್ರಷ್ಟಾಚಾರ ಪ್ರಕರಣದ ಆರೋಪ ಇದ್ದರೆ ಅವಿಶ್ವಾಸ ನಿರ್ಣಯ ತರುವಂತೆ ಪ್ರತಿಪಕ್ಷ ಭಾರತೀಯ ಜನತಾ ಪಕ್ಷಕ್ಕೆ ಇಂದು ಸವಾಲು ಹಾಕಿದರು.

## 50 ವರ್ಷಗಳ ಹಿಂದೆ

ಭಾನುವಾರ, 5-3-1972

- **16 ರಾಜ್ಯಗಳಲ್ಲಿ ಕೆಚ್ಚಿನ ಹೋರಾಟ ಇಂದಿನಿಂದ ಆರಂಭ**

**ನವದೆಹಲಿ, ಮಾ. 4**– ರಾಷ್ಟ್ರದ ಇಪ್ಪತ್ತೊಂದು ರಾಜ್ಯಗಳ ಪೈಕಿ ಹದಿನಾರು ರಾಜ್ಯಗಳಲ್ಲಿ ಮತದಾನದ ಮೂಲಕ ಅಧಿಕಾರ ಗಳಿಸುವುದಕ್ಕಾಗಿ ಒಂದು ವಾರ ಅವಧಿಯ ಕೆಚ್ಚಿನ ಹೋರಾಟವು ಇಂದು ಆರಂಭವಾಗಲಿದೆ.

ಮೈಸೂರು ಮತ್ತು ಗುಜರಾತ್ ರಾಜ್ಯಗಳ ಅನೇಕ ನಗರಗಳಲ್ಲಿ ಇಂದು ಮತದಾನ ನಡೆಯಲಿದೆ.

- **ಚುನಾವಣಾ ಪ್ರಚಾರ ವೈಖರಿ!**

**ಬೆಂಗಳೂರು, ಮಾ. 4**– ಭಾನುವಾರ ಮತದಾನ ಇರುವುದರಿಂದ ಶನಿವಾರ ಬೆಂಗಳೂರು ಪ್ರಚಾರದ ಬಿರುಸು, ಧ್ವನಿವರ್ಧಕಗಳ ಗದ್ದಲದಿಂದ ದೂರವಾಗಿತ್ತು. ಆದರೆ ಮನೆಗಳಿಗೆ ಹೋಗಿ ಮತದಾರರನ್ನು ಭೇಟಿ ಮಾಡುವ ಅಭ್ಯರ್ಥಿಗಳ ಪರ ಪ್ರಚಾರಕರ ತಂಡದ ಚಟುವಟಿಕೆ ಅಲ್ಲಲ್ಲಿ ಕಂಡುಬಂತು. ಅಭ್ಯರ್ಥಿಗಳ ಸಂಕೇತವು ವ್ಯಾನ್‌ಗಳ ಮೇಲೆ ಮೆರೆದಿದ್ದು ಪ್ರಚಾರದ ವೈಶಿಷ್ಟ್ಯ.

### ಮಹಿಳೆಯರ ದುಡಿಮೆ ಸಹಭಾಗಿತ್ವ ಮತ್ತು ಜಿಡಿಪಿ ಬೆಳವಣಿಗೆ ನಡುವೆ ಅನುಲೋಮ ಸಂಬಂಧವಿದೆ

# ಲಿಂಗ ಸಮಾನತೆ ಮತ್ತು ಅಭಿವೃದ್ಧಿ

ವಿಶ್ಲೇಷಣೆ

ಡಾ. ಟಿ.ಆರ್.ಚಂದ್ರಶೇಖರ

**ಈ ವರ್ಷವೂ** ಮಾರ್ಚ್ ಎಂಟರಂದು ವಾಡಿಕೆಯಂತೆ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತದೆ. ಲಿಂಗ ಸಮಾನತೆಯನ್ನು ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದು ಎಂದು ಅನೇಕರು ಭಾವಿಸಿದ್ದಾರೆ. ಇದು ಪೂರ್ಣ ಸತ್ಯವಲ್ಲ. ವಿಶ್ವಬ್ಯಾಂಕ್ 2012ರಲ್ಲಿಯೇ ತನ್ನ ವಿಶ್ವ ಅಭಿವೃದ್ಧಿ ವರದಿಯಲ್ಲಿ ‘ಲಿಂಗ ಸಮಾನತೆ’ಯನ್ನು ‘ಸ್ಮಾರ್ಟ್ ಎಕನಾಮಿಕ್ಸ್’ ಎಂದು ಕರೆದಿದೆ. ಆ ಮೂಲಕ ಅದಕ್ಕೆ ಆರ್ಥಿಕ ಆಯಾಮವಿದೆ ಎನ್ನುವುದನ್ನು ದೃಢಪಡಿಸಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕವನ್ನು ಅನುಲಕ್ಷಿಸಿ ಲಿಂಗ ಸಮಾನತೆ ಮತ್ತು ಅಭಿವೃದ್ಧಿ ನಡುವಿನ ಸಂಬಂಧ ಕುರಿತಂತೆ ಕೆಲವು ಸಂಗತಿಗಳನ್ನು ಇಲ್ಲಿ ಚರ್ಚೆ ಮಾಡಲಾಗಿದೆ.

ಜನಸಂಖ್ಯೆ ಬೆಳವಣಿಗೆಗೆ ಸಂಬಂಧಿಸಿದಂತೆ ಕರ್ನಾಟಕವು ಉತ್ತಮ ಸ್ಥಾನದಲ್ಲಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ- 5 (ಎನ್‌ಎಫ್‌ಎಚ್‌ಎಸ್) ವರದಿ ಪ್ರಕಾರ, ಒಟ್ಟು ಜನಸಂಖ್ಯೆಯ ಲಿಂಗ ಅನುಪಾತವು 2015- 16ರಲ್ಲಿ 979ರಷ್ಟಿದ್ದುದು 2019-2020ರಲ್ಲಿ 1034ಕ್ಕೇರಿದೆ. ಮಹಿಳೆಯರ ದೃಷ್ಟಿಯಿಂದ ಇದೊಂದು ಸ್ವಾಗತಾರ್ಹ ಬೆಳವಣಿಗೆಯಾಗಿದೆ. ಇದೇ ರೀತಿಯಲ್ಲಿ ಪ್ರತೀ ಮಹಿಳೆಯು ಪಡೆಯುವ ಸರಾಸರಿ ಮಕ್ಕಳ ಸಂಖ್ಯೆಯು (ಒಟ್ಟು ಸಂತಾನೋತ್ಪತ್ತಿ ಪ್ರಮಾಣ) ಇದೇ ಅವಧಿಯಲ್ಲಿ 1.8ರಿಂದ 1.7ಕ್ಕಿಳಿದಿದೆ. ಅಂದರೆ ಪ್ರತೀ ಮೂವರು ಮಹಿಳೆಯರಿಗೆ ಐವರು ಮಕ್ಕಳು. ಒಟ್ಟು ಸಂತಾನೋತ್ಪತ್ತಿ ಪ್ರಮಾಣ ಕಡಿಮೆಯಾಗಿರುವುದರಿಂದ ಮಹಿಳೆಯರಿಗೆ ಮತ್ತೆ ಮತ್ತೆ ಗರ್ಭಿಣಿಯರಾಗುವ ಪ್ರಮೇಯ ಬರುವುದಿಲ್ಲ. ಜನಗಣತಿ ಪ್ರಕಾರ, 2011ರಲ್ಲಿ ಮಹಿಳೆಯರ ಸಾಕ್ಷರತೆ ಪ್ರಮಾಣ ರಾಜ್ಯದಲ್ಲಿ ಪುರುಷರ ಸಾಕ್ಷರತೆಗಿಂತ ಶೇ 14.39ರಷ್ಟು ಕಡಿಮೆಯಿತ್ತು. ಈ ಅಂತರ 2019-2020ರಲ್ಲಿ ಶೇ 11.8ಕ್ಕಿಳಿದಿದೆ (ಎನ್‌ಎಫ್‌ಎಚ್‌ಎಸ್- 5 ವರದಿ). ಒಟ್ಟು ಅಕ್ಷರಸ್ಥರಲ್ಲಿ ಮಹಿಳೆಯರ ಸಂಖ್ಯೆಯು ಪುರುಷರ ಸಂಖ್ಯೆಗಿಂತ ಕಡಿಮೆ ಇದೆ.

ಅನೇಕ ಅಧ್ಯಯನಗಳು ಮತ್ತು ವರದಿಗಳು ದೃಢಪಡಿಸಿರುವಂತೆ ಲಿಂಗ ಸಮಾನತೆಯು ಅಭಿವೃದ್ಧಿಯ ಚಾಲಕಶಕ್ತಿ. ಇದನ್ನು ನಿರ್ಧರಿಸುವ ಬಹುಮುಖ್ಯ ಸೂಚಿಯೆಂದರೆ ಮಹಿಳೆಯರ ಶ್ರಮಶಕ್ತಿ ಸಹಭಾಗಿತ್ವ ಪ್ರಮಾಣ (ಲೇಬರ್ ಫೋರ್ಸ್ ಪಾರ್ಟಿಸಿಪೇಶನ್ ರೇಟ್). ವಿಶ್ವ ಲಿಂಗ ಅಸಮಾನತೆ ಸೂಚ್ಯಂಕ- 2021ರ ಪ್ರಕಾರ, 156 ದೇಶಗಳ ಪೈಕಿ ಲಿಂಗ ಅಸಮಾನತೆ ಸೂಚ್ಯಂಕದಲ್ಲಿ ಭಾರತದ ಸ್ಥಾನ 140. ಇದರ ನಾಲ್ಕು ಸೂಚಿಗಳಲ್ಲಿ ಒಂದಾದ ‘ಆರ್ಥಿಕ ಸಹಭಾಗಿತ್ವ ಮತ್ತು ಅವಕಾಶ’ದಲ್ಲಿ ಭಾರತದ ಸಾಧನೆ ಅತ್ಯಂತ ಕನಿಷ್ಠವಾಗಿದೆ (0.326). ಈ ಸೂಚಿಯಲ್ಲಿ ಭಾರತದ ಸ್ಥಾನ 151/156. ಅತ್ಯಂತ ಆತಂಕಕಾರಿ ಸಂಗತಿಯೆಂದರೆ, ಆರೋಗ್ಯ ಮತ್ತು ಬದುಕುಳಿಯುವ ಸೂಚಿಯಲ್ಲಿ ಜಗತ್ತಿನ 156 ದೇಶಗಳಲ್ಲಿ ಭಾರತದ ಸ್ಥಾನ 155. ಅಂದರೆ ಭಾರತದ ಸಂದರ್ಭದಲ್ಲಿ ಲಿಂಗ ಸಮಾನತೆಯು ಅಭಿವೃದ್ಧಿಯ ಚಾಲಕಶಕ್ತಿಯಾಗಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿಲ್ಲ.

ಮಹಿಳೆಯರ ಆರ್ಥಿಕ ಸಹಭಾಗಿತ್ವದ ಅಳತೆಯ ಸಾಧನವೆಂದರೆ ಮಹಿಳಾ ದುಡಿಮೆ ಸಹಭಾಗಿತ್ವ ಪ್ರಮಾಣ. ಕರ್ನಾಟಕದಲ್ಲಿ ಮಹಿಳೆಯರ ಶ್ರಮಶಕ್ತಿ ಸಹಭಾಗಿತ್ವ ಪ್ರಮಾಣ (ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಮಹಿಳಾ ಉದ್ಯೋಗಿಗಳು ಮತ್ತು ಉದ್ಯೋಗಗಳನ್ನು ಹುಡುಕುತ್ತಿರುವವರ ಪ್ರಮಾಣ) 2018-19ರಲ್ಲಿ ಶೇ 29.9. ಅಖಿಲ ಭಾರತ ಮಟ್ಟದಲ್ಲಿ ಇದು ಶೇ 17.5ರಷ್ಟಿದೆ. ಮಹಿಳೆಯರ ದುಡಿಮೆ ಸಹಭಾಗಿತ್ವವನ್ನು ಅಳತೆ ಮಾಡುವ ಮತ್ತೊಂದು ಸಾಧನವೆಂದರೆ ಪುರುಷರ ಕೂಲಿ ಅಥವಾ ಸಂಬಳದಲ್ಲಿ ಮಹಿಳೆಯರ ಕೂಲಿ ಅಥವಾ ಸಂಬಳದ ಶೇಕಡ ಪ್ರಮಾಣ. ಕರ್ನಾಟಕದಲ್ಲಿ ಇದರ ಪ್ರಮಾಣ 0.75. ಲಿಂಗ ಸಮಾನತೆಗೆ ಕೊರತೆ 0.25.

ವರಮಾನದಲ್ಲಿ ಲಿಂಗ ಅಸಮಾನತೆಯಿದೆ. ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣವು ಪುರುಷರ ದುಡಿಮೆ ಸಹಭಾಗಿತ್ವದ ಶೇ 34ರಷ್ಟಿದೆ. ಈ ಎಲ್ಲ ಸೂಚಿಗಳು ಕರ್ನಾಟಕದಲ್ಲಿನ ಮಹಿಳೆಯರ ಆರ್ಥಿಕ ಸಹಭಾಗಿತ್ವ ಕೆಳಮಟ್ಟದಲ್ಲಿದೆ ಮತ್ತು ಆರ್ಥಿಕ ಅವಕಾಶಗಳು ತುಂಬ ಸೀಮಿತವಾಗಿವೆ ಎಂಬುದನ್ನು ತೋರಿಸುತ್ತವೆ. ಮಹಿಳೆಯರ ದುಡಿಮೆ ಸಹಭಾಗಿತ್ವ ಮತ್ತು ಜಿಡಿಪಿ ಬೆಳವಣಿಗೆಯ ನಡುವೆ ಅನುಲೋಮ ಸಂಬಂಧವಿದೆ. ಅಭಿವೃದ್ಧಿಗೆ ಬಂಡವಾಳವೇ ಮೂಲದ್ರವ್ಯ ಎನ್ನುವುದನ್ನು ಒಪ್ಪಿದರೂ ಉಳಿಯುವ ಪ್ರಶ್ನೆ ಇದು: ಬಂಡವಾಳವಿಲ್ಲದೆಯೂ ಆರ್ಥಿಕತೆಯಲ್ಲಿ ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸುವುದರ ಮೂಲಕ ಅಭಿವೃದ್ಧಿಯ ನಡೆಯನ್ನು ತೀವ್ರಗೊಳಿಸಬಹುದು. ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣವು ಪುರುಷರ ದುಡಿಮೆ ಸಹಭಾಗಿತ್ವ ಪ್ರಮಾಣದ ಮಟ್ಟಕ್ಕೆ ಏರಿದರೆ ಅದು ಆರ್ಥಿಕತೆಯ ಜಿಡಿಪಿ ಬೆಳವಣಿಗೆಯನ್ನು ಉತ್ತಮಪಡಿಸಬಹುದು.

ಕರ್ನಾಟಕದಲ್ಲಿ ಮಹಿಳೆಯರ ಉದ್ಯೋಗ ಸ್ಥಿತಿ ಉತ್ತಮವಾಗೇನಿಲ್ಲ. ರಾಜ್ಯದಲ್ಲಿನ ಒಟ್ಟು ಐಎಎಸ್ ಅಧಿಕಾರಿಗಳಲ್ಲಿ ಮಹಿಳೆಯರ ಪ್ರಮಾಣ ಶೇ 28ರಷ್ಟಿದ್ದರೆ ಹೈಕೋರ್ಟ್ ನ್ಯಾಯಮೂರ್ತಿಗಳಲ್ಲಿ ಮಹಿಳೆಯರ ಪ್ರಮಾಣ ಶೇ 28.46. ರಾಜ್ಯ ವಿಧಾನಸಭೆಯಲ್ಲಿ ಮಹಿಳೆಯರ ಪ್ರಮಾಣ ಶೇ 3.51. ಮಹಿಳೆಯರ ರಾಜಕೀಯ ಸಬಲೀಕರಣ ಎಷ್ಟು ದುರ್ಬಲವಾಗಿದೆ ಎಂಬುದು ಇದರಿಂದ ತಿಳಿದುಬರುತ್ತದೆ. ರಾಜಕೀಯ ಪಕ್ಷಗಳು ಮಹಿಳೆಯರಿಗೆ ಚುನಾವಣೆಯಲ್ಲಿ ‘ಅವರು ಗೆಲ್ಲಲಾರರು’ ಎಂಬ ಸಬೂಬು ಹೇಳಿ ಅವರಿಗೆ ಅವಕಾಶ ನೀಡುತ್ತಿಲ್ಲ. ಇದನ್ನು ಒಂದುಪಕ್ಷ ಒಪ್ಪಿದರೂ ಸರ್ಕಾರವು ನೇಮಕ ಮಾಡುವ ವಿಶ್ವವಿದ್ಯಾಲಯಗಳ ಸಿಂಡಿಕೇಟುಗಳಲ್ಲಿ ಮತ್ತು ಅಕಾಡೆಮಿಗಳಲ್ಲಿ ಮಹಿಳೆಯರಿಗೆ ಅವಕಾಶ ದೊರೆಯದಿರುವುದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಉದಾ: ಕರ್ನಾಟಕದಲ್ಲಿನ ಕಲೆ, ಸಂಗೀತ, ಸಾಹಿತ್ಯ, ಭಾಷೆ ಮುಂತಾದ ಅಕಾಡೆಮಿಗಳ ಅಧ್ಯಕ್ಷರಲ್ಲಿ ಮಹಿಳೆ ಮತ್ತು ಪುರುಷರ ಅನುಪಾತ 2:16 ಮತ್ತು ಅವುಗಳ ಸದಸ್ಯರಲ್ಲಿ ಈ ಅನುಪಾತ 30:151.

ಕರ್ನಾಟಕದಲ್ಲಿ ರಾಜಕಾರಣಿಗಳು ಮತ್ತೆ ಮತ್ತೆ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ, ಸಂವೇದನಾರಹಿತವಾಗಿ ಮಾತನಾಡುವುದು ಸಾಮಾನ್ಯವಾಗಿಬಿಟ್ಟಿದೆ. ‘ಗಂಡಸ್ಥನ’, ‘ಬಳೆ ತೊಟ್ಟುಕೊಂಡಿಲ್ಲ’ ಎಂಬ ಮಹಿಳೆಯರನ್ನು ಗುರಿಯಾಗಿಟ್ಟುಕೊಂಡ ಬೈಗುಳಗಳನ್ನು ರಾಜಕೀಯವಾಗಿ ಉನ್ನತ ಸ್ಥಾನದಲ್ಲಿರುವ ಪುರುಷರು ಯಾವ ಬಿಡೆಯಿಲ್ಲದೆ ಬಳಸುತ್ತಿದ್ದಾರೆ.

ಒಕ್ಕೂಟ ಸರ್ಕಾರದ 2022- 23ರ ಬಜೆಟ್ಟಿನಲ್ಲಿ ಆರೋಗ್ಯಕ್ಕೆ ನೀಡಿರುವ ಅನುದಾನವು (₹ 1.24 ಲಕ್ಷ ಕೋಟಿ) ಒಟ್ಟು ಬಜೆಟ್ಟಿನ ಶೇ 3.14ರಷ್ಟಾಗುತ್ತದೆ ಮತ್ತು 2022- 23ರ ಅಂದಾಜು ಜಿಡಿಪಿಯ ಶೇ 0.48ರಷ್ಟಾಗುತ್ತದೆ. ಕರ್ನಾಟಕದ 2021- 22ರ ಬಜೆಟ್ಟಿನ ಒಟ್ಟು ವೆಚ್ಚದಲ್ಲಿ ಶೇ 3.99 ಆರೋಗ್ಯಕ್ಕೆ ನೀಡಲಾಗಿದೆ. ಸಾರ್ವಜನಿಕ ಆರೋಗ್ಯ ಸೇವೆಯ ಭಾಗವಾಗಿಯೇ ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಿಸಿದ ಸಂತಾನೋತ್ಪತ್ತಿ ಆರೋಗ್ಯವನ್ನೂ ನಿರ್ವಹಿಸಲಾಗುತ್ತಿದೆ. ಇದರ ಪರಿಣಾಮವಾಗಿ ಮತ್ತು ಸಮಾಜದಲ್ಲಿನ ಲಿಂಗ ತಾರತಮ್ಯದ ಕಾರಣವಾಗಿ ಮಹಿಳೆಯರು ಮತ್ತು ಮಕ್ಕಳು (ಅನೀಮಿಯ) ಅಪೌಷ್ಟಿಕತೆಯನ್ನು ಎದುರಿಸುತ್ತಿದ್ದಾರೆ. ಕರ್ನಾಟಕದಲ್ಲಿ 15ರಿಂದ 49 ವರ್ಷಗಳ ವಯೋಮಾನದ ಒಟ್ಟು ಮಹಿಳೆಯರಲ್ಲಿ ಅನೀಮಿಯಾ ಎದುರಿಸುತ್ತಿರುವವರ ಪ್ರಮಾಣ 2015- 16ರಲ್ಲಿ ಶೇ 60.9ರಷ್ಟಿದ್ದುದು 2019-2020ರಲ್ಲಿ ಶೇ 65.5ಕ್ಕೇರಿದೆ. ಅನೀಮಿಯ ಎದುರಿಸುತ್ತಿರುವ ಒಟ್ಟು ಗರ್ಭಿಣಿಯರಲ್ಲಿ ಇದರ ಪ್ರಮಾಣ ಶೇ 45.4ರಿಂದ ಶೇ 45.7ಕ್ಕೇರಿದೆ.

ಈಗಿರುವ ಅಸಮಾನತೆಗಳ ಜೊತೆಗೆ ‘ಡಿಜಿಟಲ್ ಅಸಮಾನತೆ’ ಎಂಬುದು ಹೊಸದಾಗಿ ಸೇರಿಕೊಂಡು ಲಿಂಗ ಅಸಮಾನತೆಯನ್ನು ಉಲ್ಬಣಗೊಳಿಸುತ್ತಿದೆ. ಎನ್‌ಎಫ್‌ಎಚ್‌ಎಸ್- 5 ವರದಿ ಪ್ರಕಾರ, 2019-2020ರಲ್ಲಿ ರಾಜ್ಯದಲ್ಲಿ ಒಟ್ಟು ಮಹಿಳೆಯರಲ್ಲಿ ಇಂಟರ್‌ನೆಟ್ ಬಳಸುವವರ ಪ್ರಮಾಣ ಶೇ 35ರಷ್ಟಿದ್ದರೆ ಪುರುಷರಲ್ಲಿ ಇದರ ಪ್ರಮಾಣ ಶೇ 62.4ರಷ್ಟಿದೆ. ಮೊಬೈಲ್ ಬಳಸುವ ಮಹಿಳೆಯರ ಪ್ರಮಾಣ ಶೇ 61.8. ಒಕ್ಕೂಟ ಸರ್ಕಾರವು ಆರ್ಥಿಕತೆಯನ್ನು ಡಿಜಿಟಲೈಸ್ ಮಾಡುವ ದಿಸೆಯಲ್ಲಿ ದಾಪುಗಾಲಿಡುತ್ತಿದೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಔಪಚಾರಿಕತೆಯನ್ನು ಬಿಟ್ಟು ಪ್ರಜ್ಞಾಪೂರ್ವಕವಾಗಿ ಮತ್ತು ಬದ್ಧತೆಯಿಂದ ರಾಜ್ಯದ ಅಭಿವೃದ್ಧಿಗಾಗಿ ಹಾಗೂ ಮಹಿಳೆಯರ ಉತ್ತಮ ಬದುಕಿಗಾಗಿ ಲಿಂಗ ಸಮಾನತೆಯನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುವುದು ಅಪೇಕ್ಷಣೀಯ.

## ಚುರುಮುರಿ



### ಮೆಡಿಕಲ್ ಮಾಯೆ

- ಸಿ.ಎನ್.ರಾಜು

**‘ಮಗಳ** ಪಿಯು ಪರೀಕ್ಷೆ ಮುಗಿಯುವವರೆಗೂ ಮನೆಯಲ್ಲಿ ನಿಷೇಧಾಜ್ಞೆ ಜಾರಿ ಮಾಡಿದ್ದೇನೆ, ಗದ್ದಲ ಮಾಡಬೇಡಿ, ಟೀವಿ ಆನ್ ಮಾಡಬೇಡಿ, ಮೊಬೈಲ್ ಮ್ಯೂಟ್ ಮಾಡಿ...’ ಎಂದಳು ಅನು.

‘ಮಗಳ ಓದಿಗೆ ಡಿಸ್ಟರ್ಬ್ ಆಗದಂತೆ ಪಾತ್ರೆ, ಒಗ್ಗರಣೆ ಸೌಂಡು ಇಲ್ಲದೆ ಅಡುಗೆ ಮಾಡು. ಕಾಂಪೌಂಡಿನಲ್ಲಿ ಕುಂಯ್‌ಗುಡುವ ನಾಯಿಯನ್ನು ನಿನ್ನ ತವರು ಮನೆಯಲ್ಲಿ ಕಟ್ಟಿಹಾಕಿ ಬಾ’ ಗಿರಿ ಹೇಳಿದ.

‘ಆಗಲಿ, ಹಾಸಿಗೆ ಮೇಲೆ ಮುಲುಕಾಡುವ ನಿಮ್ಮ ಅಮ್ಮನನ್ನು ನಿಮ್ಮೂರಿಗೆ ಕಳಿಸಿ. ಸ್ನೇಹಿತರು, ಸಂಬಂಧಿಗಳನ್ನು ಮನೆಗೆ ಕರೆಯಬೇಡಿ, ಪರೀಕ್ಷೆ ಮುಗಿಯುವವರೆಗೂ ಯಾವ ಸಂಬಂಧಗಳೂ ಬೇಡ’.

‘ದೇವರಿಗೆ ತುಪ್ಪದ ದೀಪ ಹಚ್ಚಿ, ಮಗಳಿಗೆ ಮೆಡಿಕಲ್ ಸೀಟು ಕರುಣಿಸು ಅಂತ ಬೇಡಿಕೊ. ಮಗಳಿಗೆ ಹೆಲ್ತ್ ಪ್ರಾಬ್ಲಂ ಆದಾಗ ತಕ್ಷಣ ಬಂದು ಟ್ರೀಟ್‌ಮೆಂಟ್ ಕೊಡಲು ಡಾಕ್ಟರ್‌ಗೆ ರಿಕ್ವೆಸ್ಟ್ ಮಾಡಿದ್ದೇನೆ. ಡೌಟ್ ಕ್ಲಿಯರ್ ಮಾಡಲು ಟ್ಯೂಷನ್ ಟೀಚರ್ ಮನೆಗೇ ಬರ್ತೀನಿ ಅಂತ ಹೇಳಿದ್ದಾರೆ. ಮಗಳು ಪರೀಕ್ಷೆಯಲ್ಲಿ ಔಟಾಫ್ ಔಟ್ ಸ್ಕೋರ್ ಮಾಡಿ ಮೆಡಿಕಲ್ ಸೀಟ್ ತಗೊಬೇಕು’.

‘ಈ ಪರೀಕ್ಷೆಯಲ್ಲಿ ಸ್ಕೋರ್ ಮಾಡೋದು ಮುಖ್ಯವಲ್ಲ, ನೀಟ್‌ನಲ್ಲಿ ಸೆಲೆಕ್ಟ್ ಆದರಷ್ಟೇ ಮೆಡಿಕಲ್ ಸೀಟು. ಮ್ಯಾನೇಜ್‌ಮೆಂಟ್ ಸೀಟಿಗೆ ಕೋಟಿಗಟ್ಟಲೆ ದುಡ್ಡು ಕೊಡೋದು, ಉಕ್ರೇನ್‌ನಂಥಾ ದೇಶಗಳಿಗೆ ಮಗಳನ್ನು ಕಳಿಸೋದು ಎರಡೂ ಕಷ್ಟ... ನಮ್ಮಂಥವರಿಗಲ್ಲ ಮೆಡಿಕಲ್ ಸೀಟು...’ ಅನು ನೊಂದುಕೊಂಡಳು.

‘ಬಡವರು, ಕನ್ನಡಿಗರ ಪಾಲಿನ ಮೆಡಿಕಲ್ ಸೀಟುಗಳು ಉತ್ತರ ಭಾರತದವರ ಪಾಲಾಗ್ತಿವೆಯಂತೆ, ನೀಟ್ ಪದ್ಧತಿ ರದ್ದು ಮಾಡಿ ಅಂತ ಹೋರಾಟ ಶುರುವಾಗಿದೆ. ಕನ್ನಡದಲ್ಲಿ ನೀಟ್ ಪರೀಕ್ಷೆ ಬರೆಯುವಂತಾಗಿದ್ದರೆ ನಾನೂ ಡಾಕ್ಟರ್ ಆಗ್ತಿದ್ದೆ’.

‘ನೀಟ್ ಇರಲಿ, ಮೊದಲು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಪರೀಕ್ಷೆಯಲ್ಲಿ ಪಾಸಾಗಿ ಪರಿಷತ್ತಿನ ಸದಸ್ಯತ್ವ ಉಳಿಸಿಕೊಳ್ಳಿ...’ ಎಂದು ಅನು ಹಂಗಿಸಿದಳು.

## ಸಂಗತ

# ಮಕ್ಕಳ ಮಾತೇ ಮರೆಯಾಯಿತೇಕೆ?

### ತಮ್ಮ ಭೀತಿ, ಗೊಂದಲ, ಸಂಕಟಗಳನ್ನು ಯಾರಲ್ಲೂ ಹಂಚಿಕೊಳ್ಳಲಾಗದೆ ದುಗುಡಕ್ಕೆ ಒಳಗಾದ ಎಳೆಯರ ಸಂಖ್ಯೆ ತುಂಬಾ ದೊಡ್ಡದಿದೆ

- ಡಾ. ಮುರಳೀಧರ ಕಿರಣಕೆರೆ

**‘ಸರ್,** ಮಕ್ಳು ಯಾಕೋ ಬಾಯೇ ಬಿಡ್ತಿಲ್ಲ. ಹೆದ್ರಿಕೆಗೋ, ಪಾಠ ಅರ್ಥ ಆಗ್ದೆ ಹಾಗೆ ಮಾಡ್ತಾವೋ ಒಂದೂ ಗೊತ್ತಾಗಲ್ಲ. ಪ್ರಿಪರೇಟರಿ ಎಕ್ಸಾಂನಲ್ಲೂ ಮಾರ್ಕ್ಸ್ ತುಂಬಾ ಕಮ್ಮಿ ಬಂದಿದೆ. ಹಿಂದಿನ ಯಾವ ಬ್ಯಾಚೂ ಹೀಗಿರಲಿಲ್ಲ. ಕೊರೊನಾ ಬಂದ್ಮೇಲೆ ಈ ತರ. ಏನು ಕೇಳಿದ್ರೂ ಉತ್ರ ಕೊಡಲ್ಲ. ಹೀಗಾದ್ರೆ ಒಳ್ಳೆ ರಿಸಲ್ಟ್ ಕೊಡೋದು ಹೇಗೆ? ನಮ್ಗಂತೂ ತಲೆ ಕೆಟ್ಹೋಗಿದೆ. ಅವ್ರಿಗೆ ವಿಶ್ವಾಸ ತುಂಬಿ ಮಾತಾಡೋ ರೀತಿ ಮಾಡ್ಬಹುದಾ ಸರ್?’ ಸರ್ಕಾರಿ ಪ್ರೌಢಶಾಲೆಯೊಂದರ ಮುಖ್ಯ ಶಿಕ್ಷಕಿ ತಮ್ಮ ಅಳಲು ತೋಡಿಕೊಂಡರು.

ನಾನು ಸಂಸ್ಥೆಯೊಂದರಲ್ಲಿ ವ್ಯಕ್ತಿತ್ವ ವಿಕಸನ ತರಬೇತುದಾರನೂ ಆಗಿರುವುದರಿಂದ ಇಂಥ ಸಮಸ್ಯೆಗಳ ಬಗ್ಗೆ ಪರಿಚಿತ ಶಿಕ್ಷಕರು ಸಲಹೆ, ಮಾರ್ಗದರ್ಶನ ಬಯಸುತ್ತಾರೆ. ಹಾಗಂತ ಇದು ಒಂದು ಶಾಲೆಯ ಕಥೆಯಲ್ಲ. ಈ ಕೊರೊನೋತ್ತರ ಕಾಲಘಟ್ಟದಲ್ಲಿ ಎಲ್ಲೆಡೆಯೂ ಹೆಚ್ಚು ಕಮ್ಮಿ ಇಂಥದ್ದೇ ದೂರು!

ಹೌದು, ಶಿಕ್ಷಕರ ಈ ಆಕ್ಷೇಪ ಮಕ್ಕಳನ್ನು ಮಾತನಾಡಿಸುವಾಗ ಸತ್ಯವೆನಿಸುತ್ತದೆ. ಪ್ರಶ್ನೆ ಎಷ್ಟೇ ಸರಳವಾಗಿದ್ದರೂ ಉತ್ತರಿಸಲು ಹಿಂದೆ ಮುಂದೆ ನೋಡುವುದು, ಪಟ್ಟುಬಿಡದೆ ಮತ್ತೆ ಮತ್ತೆ ಕೇಳಿದರೆ ಸಣ್ಣ ದನಿಯಲ್ಲಿ ಏನೋ ಗುನುಗುನಿಸಿ ಪುನಃ ಮೌನಕ್ಕೆ ಜಾರುವುದು, ನೇರ ದೃಷ್ಟಿಯನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುವುದು, ಕಂಗಳಲ್ಲಿ ಎದ್ದು ಕಾಣಿಸುವ ಭಯ, ಆತಂಕ, ಕಾಣೆಸದ ಉತ್ಸಾಹ ಎಳೆಯರ ಮನಃಸ್ಥಿತಿ ಪೂರ್ಣವಾಗಿ ಕದಡಿಹೋಗಿರುವ ಸಂಗತಿಯನ್ನು ಸಾರಿ ಹೇಳುತ್ತವೆ. ಇಂತಹ ಮಕ್ಕಳಿಗೆ ಹೆದರಿಸಿಯೋ ಒತ್ತಡ ಹಾಕಿಯೋ ಮಾತನಾಡಿಸುವುದು ಖಂಡಿತಾ ಪ್ರಯೋಜನಕ್ಕೆ ಬಾರದು.

ಪಠ್ಯಕ್ಕೆ ಸಂಬಂಧಿಸಿಲ್ಲದ ಸರಳ ಚಟುವಟಿಕೆಗಳು, ಕಥೆಗಳ ಮೂಲಕ ಮೆಲ್ಲನೆ ಅವರ ಅಂತರಂಗ ಪ್ರವೇಶಿಸಲು ಸಾಧ್ಯವಾದಾಗ ಮಾತ್ರ ಮುಂದಿನ ಕಾರ್ಯ ಸುಗಮ. ಒಮ್ಮೆ ಮನಗೆದ್ದರೆ ಸಾಕು ಮಕ್ಕಳು ತಾವಾಗಿಯೇ ತೆರೆದುಕೊಳ್ಳುತ್ತಾರೆ. ನಂಬಿಕೆ, ವಿಶ್ವಾಸ ವೃದ್ಧಿಸುತ್ತಿದ್ದಂತೆಯೇ ತಮ್ಮ ಅನುಮಾನಗಳನ್ನು ಕೇಳಲು ಆರಂಭಿಸುತ್ತಾರೆ. ಮನಸ್ಸು ಇಷ್ಟು ಹದಗೊಂಡಿತೆಂದರೆ ಮುಖ್ಯ ವಿಷಯವನ್ನು ಮನದಟ್ಟು ಮಾಡಿಸುವುದು ಸುಲಭ.

ಒಂದೂವರೆ ವರ್ಷದಷ್ಟು ದೀರ್ಘಾವಧಿ ಭೌತಿಕ ತರಗತಿಗಳಿಲ್ಲದೆ ಕಳೆದಿದೆ. ಸ್ನೇಹಿತರು, ಸಹಪಾಠಿಗಳು, ಬಾಂಧವರೊಂದಿಗೆ ಮುಕ್ತವಾಗಿ ಬೆರೆಯಲು ಅವಕಾಶವಾಗದೆ ಚಿಪ್ಪೊಳಗೆ ಅದುಮಿಟ್ಟ ಪರಿಸ್ಥಿತಿ. ಆನ್‌ಲೈನ್ ಕ್ಲಾಸುಗಳ ಕಾರಣ ಮೊಬೈಲೊಂದೇ ಬೆಂಬಿಡದ ಸಂಗಾತಿ. ನೇರಾನೇರ ಸಂಪರ್ಕವಿಲ್ಲದ ನೀರಸ ತರಗತಿಗಳಲ್ಲಿ ಮೂಡದ ಆಸಕ್ತಿ. ವಯೋಸಹಜ ಒಡನಾಟಗಳಿಗೆ ಕತ್ತರಿ ಬಿದ್ದ ಕಾರಣ ಮಕ್ಕಳ ಮನಸ್ಸು ವಿಚಲಿತ, ಗೊಂದಲಗಳ ಗೂಡು. ಕಲಿಕೆಯಲ್ಲಿ ತೊಡಗಿಸಿಕೊಳ್ಳಲಾಗದೆ ಏರಿದ ಆತಂಕ.

ಮೊದಲೇ ಹದಿಹರೆಯದ ಮಕ್ಕಳು ಪೋಷಕರೊಂದಿಗೆ ಸಂವಹಿಸುವುದು ತುಂಬಾ ಕಡಿಮೆ. ತಮ್ಮ ಭೀತಿ, ಗೊಂದಲ, ಸಂಕಟಗಳನ್ನು ಯಾರಲ್ಲೂ ಹಂಚಿಕೊಳ್ಳಲಾಗದೆ ಖಿನ್ನತೆಗೆ ಜಾರಿದ ಎಳೆಯರ ಸಂಖ್ಯೆ ತುಂಬಾ ದೊಡ್ಡದಿದೆ. ಮತ್ತೊಂದಷ್ಟು ಮಕ್ಕಳು ಮೊಬೈಲ್ ಗೇಮಿಂಗ್, ಜಾಲತಾಣಗಳ ಆಕರ್ಷಣೆಗೆ ಸಿಲುಕಿ ಅದರಲ್ಲೇ ಮುಳುಗಿ ತಮ್ಮ ಆತಂಕಕ್ಕೆ ಹೊರಹರಿವು ಕಂಡುಕೊಂಡಿದ್ದಾರೆ.

ಗ್ಯಾಜೆಟ್‌ಗಳ ವ್ಯಸನಕ್ಕೆ ಸಿಲುಕಿದ ಮಕ್ಕಳು ಕೊರೊನಾ ಪೂರ್ವದಲ್ಲೇ ಒಂಟಿಯಾಗಿದ್ದರು. ಆನ್‌ಲೈನ್ ತರಗತಿ, ಹೋಂವರ್ಕ್, ಟೆಸ್ಟ್ ಅಂತೆಲ್ಲಾ ಅನಿವಾರ್ಯವಾಗಿ ಮೊಬೈಲ್, ಕಂಪ್ಯೂಟರ್‌ಗಳಿಗೆ ಅಂಟಿಕೊಂಡ ಮೇಲಂತೂ ಅಕ್ಷರಶಃ ದ್ವೀಪಗಳಂತಾಗಿದ್ದಾರೆ! ಕ್ಲಾಸ್‌ಗಳು ಅರ್ಥವಾಗದ ಆತಂಕ, ಕಾಯಿಲೆಯ ಭಯ, ಪೋಷಕರ ಒತ್ತಡ, ವಿದ್ಯಾಭ್ಯಾಸದ ಅನಿಶ್ಚಿತತೆ, ಹತ್ತಿರದವರನ್ನು ಕಳೆದುಕೊಂಡ ದುಃಖ, ನಕಾರಾತ್ಮಕ ಅಂಶಗಳನ್ನು ವೈಭವೀಕರಿಸಿ ಭೀತಿಯ ದೊಡ್ಡ ಅಲೆ ಹುಟ್ಟುಹಾಕಿದ ಕೆಲವು ಮಾಧ್ಯಮಗಳು, ತಪ್ಪಿದ ಸಹಪಾಠಿಗಳು, ಸ್ನೇಹಿತರ ಸಾಂಗತ್ಯ, ಖುಷಿ, ಆತಂಕಗಳನ್ನು ಜೊತೆಗಾರರೊಂದಿಗೆ ಹಂಚಿಕೊಂಡು ಹಗುರವಾಗಲು ಇಲ್ಲದ ಅವಕಾಶ, ಸಾಮಾಜಿಕವಾಗಿ ತೆರೆದುಕೊಳ್ಳಲು ದೊಡ್ಡ ವೇದಿಕೆಯಾಗಿದ್ದ ಭೌತಿಕ ತರಗತಿಗಳ ನಿಲುಗಡೆ, ಆಟೋಟಗಳಲ್ಲಿ ಪಾಲ್ಗೊಂಡು ತಮ್ಮ ಒತ್ತಡಗಳನ್ನು ಹೊರಹರಿಸಲು ಇಲ್ಲದ ಅವಕಾಶ... ಇವೇ ಮುಂತಾದ ಕಾರಣಗಳು ನಮ್ಮ ಮಕ್ಕಳಿಂದ ಮಾತನ್ನು ಕಸಿದು ಮೊಬೈಲಿಗೆ ಆತುಕೊಳ್ಳುವಂತೆ ಮಾಡಿದ್ದು.

ಕೆಲವು ಮಕ್ಕಳು ಡಿಜಿಟಲ್ ಚಾಟ್‌ಗಳಲ್ಲಿ ತುಂಬಾ ಚುರುಕಿದ್ದರೂ ಪರಸ್ಪರ ಎದುರುಬದುರಾದಾಗ ಮಾತನಾಡಲು ತಡಕಾಡುವುದು ಕಾಣಿಸುತ್ತಿದೆ. ಸಂಭಾಷಿಸುವಾಗ ಇರಬೇಕಾದ ನಯ, ವಿನಯ, ಗುರುಹಿರಿಯರಿಗೆ ಗೌರವಪೂರ್ವಕ ಸಂಬೋಧನೆ, ಮುಗುಳ್ನಗೆ, ದೃಷ್ಟಿ ಸಂಪರ್ಕದಂತಹ ಆಂಗಿಕ ಭಾಷೆಯೂ ಮರೆಯಾಗಿದೆ ಎಂಬ ಆತಂಕ ಈಗ ಸಾರ್ವತ್ರಿಕ.

ಕಳೆದುಹೋದ ಕಲಿಕಾಕ್ಷಾಮದ ಆ ಅಮೂಲ್ಯ ಸಮಯ ಮರಳಿ ಬಾರದಿದ್ದರೂ ಮಕ್ಕಳನ್ನು ತಿದ್ದಿ ಅವರು ಪುನಃ ಚಟಪಟ ಮಾತನಾಡುವಂತೆ, ಭಾವನೆಗಳನ್ನು ಹಂಚಿಕೊಳ್ಳುವಂತೆ, ಸಮಾಜಮುಖಿಯಾಗಿ ತೆರೆದುಕೊಳ್ಳುವಂತೆ ಮಾಡುವುದು ಖಂಡಿತಾ ಸಾಧ್ಯ. ಇದಕ್ಕೆ ಬೇಕಿರುವುದು ಅವರ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳುವ ಮನಃಸ್ಥಿತಿ ಜೊತೆಗೆ ಷರತ್ತುರಹಿತ ಪ್ರೀತಿಯಷ್ಟೇ. ಗದರದೆ, ದಂಡಿಸದೆ, ಅವಮಾನಿಸದೆ, ಹೀಯಾಳಿಸದೆ ವಾತ್ಸಲ್ಯದಿಂದ ತುಂಬುವ ಸಕಾರಾತ್ಮಕ ಭಾವನೆಯು ಪವಾಡಸದೃಶ ಫಲಿತಾಂಶ ನೀಡಬಲ್ಲದು. ಹೌದು, ಇಂತಹದ್ದೊಂದು ಸಕಾರಾತ್ಮಕ ಬದಲಾವಣೆಗೆ ಸಮಯದ ಹೂಡಿಕೆಯ ಜೊತೆಗೆ ನಿರಂತರ ಪ್ರಯತ್ನದ ಅಗತ್ಯವಿದೆ.

## ವಾಚಕರ ವಾಣಿ

### ಕಾರ್ಮೋಡದ ನಡುವೆ ಚೇತೋಹಾರಿ ನಡೆ

ಉಕ್ರೇನ್ ಮೇಲೆ ರಷ್ಯಾದ ದಾಳಿ ಹಾಗೂ ಸಾವುನೋವಿನ ನಡುವೆಯೂ ಜಾಲತಾಣದಲ್ಲಿ ನೋಡಿದ ಒಂದು ಸುದ್ದಿಯ ತುಣುಕು ಗಮನ ಸೆಳೆಯಿತು. ಸೆರೆ ಸಿಕ್ಕ ರಷ್ಯಾದ ಸೈನಿಕನೊಬ್ಬನಿಗೆ ಉಕ್ರೇನ್‌ನ ಸೈನಿಕರು ಬಿಸಿ ಬಿಸಿ ಚಹಾವನ್ನು ಸೇವಿಸಲು ಕೊಟ್ಟು, ಆತನ ತಾಯಿಯೊಡನೆ ಫೋನ್ ಮೂಲಕ ಮಾತನಾಡಲು ಅನುವು ಮಾಡಿಕೊಟ್ಟರು. ಯುದ್ಧದ ನಡುವೆಯೂ ವೈರಿಗಳ ನಡುವೆ ಮಾನವೀಯತೆಯು ಇನ್ನೂ ಮರೆಯಾಗದಿರುವುದು ಚೇತೋಹಾರಿಯಾಗಿದೆ.

**ಭರತ್ ಬಿ.ಎನ್.,** ಬೆಂಗಳೂರು

### ಬಜೆಟ್ ಮಂಡನೆ ಎಂದರೇನು?

ಬಸವರಾಜ ಬೊಮ್ಮಾಯಿಯವರ ಎರಡು ಗಂಟೆ ಹತ್ತು ನಿಮಿಷ ಅವಧಿಯ ಬಜೆಟ್ ಭಾಷಣ ಕೇಳಿ ಈ ಪ್ರಶ್ನೆ ಎದುರಾಯಿತು. ಬಜೆಟ್ ಮಂಡನೆ ಎಂದರೆ ಸಾಮಾನ್ಯ ಅರ್ಥದಲ್ಲಿ ಒಂದು ನಿರ್ದಿಷ್ಟ ಅವಧಿಗಾಗಿ (ಇಲ್ಲಿ ಒಂದು ವರ್ಷ) ಅಂದಾಜು ಆದಾಯ ಮತ್ತು ಖರ್ಚು ಇಂತಿಷ್ಟು ಎಂದು ತಿಳಿಸುವುದು. ತೆರಿಗೆ ಪ್ರಸ್ತಾವಕ್ಕೆ ಕೊನೆಯ ಆರು ನಿಮಿಷಗಳು, ಅದಕ್ಕಿಂತ ಮೊದಲು ತಮ್ಮ ಭಾಷಣದ ಮುಖ್ಯ ಅಂಶಗಳ ಪುನರುಕ್ತಿ. ಹೀಗಾಗಲು ಒಂದು ಕಾರಣ, ಆರಂಭದಲ್ಲಿ ಮಾಡಿದ ಕಾಲವ್ಯಯ (ಮೋದಿ ನಿಜ ಜನನಾಯಕ, ಯಡಿಯೂರಪ್ಪ ಯಶಸ್ವಿಯಾಗಿ ಸವಾಲು ಎದುರಿಸಿದರು ಇತ್ಯಾದಿ). ಬಸವಣ್ಣ, ಸೊನ್ನಲಿಗೆ ಸಿದ್ಧರಾಮರಿಂದ ಹಿಡಿದು ಚೆನ್ನವೀರ ಕಣವಿಯವರವರೆಗೆ ನುಡಿ ಉಲ್ಲೇಖ- ಆದರೆ ವರದಿ ಓದಿದಂತೆ! ಹೇಗೆ ತಮ್ಮ ಅಧಿಕಾರಾವಧಿ ಚುನಾವಣೆ ಆಗುವವರೆಗೆ ಮಾತ್ರವೋ ಹಾಗೆಯೇ ಸುಮಾರು ಎರಡು ಗಂಟೆ ಅವಧಿಯಲ್ಲಿ ಸುಸ್ತು ಮಾಡಿಕೊಳ್ಳದೆ, ಕೇಳುವವರಿಗೆ ಅರ್ಥವಾಗುವಂತೆ (ಅದಕ್ಕಿಂತ ಹೆಚ್ಚಾಗಿ ಬೇಸರವಾಗಿ ನಿದ್ದೆ -ಊಟಕ್ಕೆ ಮೊದಲೇ- ಬರದಂತೆ) ಎಷ್ಟು ಓದಬಹುದು ಎಂದು ಸ್ಥೂಲವಾಗಿ ಅಂದಾಜಿಸಿಕೊಳ್ಳಬೇಕಿತ್ತು. ಪರಿಣಾಮ: ಬೇಗಬೇಗ ಓದಲು ಹೋಗಿ ತಡವರಿಸಿದರು. ಸ್ಥಳಗಳ ಹೆಸರು ಸರಿ ಇತ್ತು, ದಶಮಾಂಶ ಇದ್ದ ಸಂಖ್ಯೆಯನ್ನು ಇಂಗ್ಲಿಷ್‌ನಲ್ಲಿ ಓದಿದ್ದರಿಂದ ಸಮಯ ಉಳಿಯಿತು. ಕೆಲವು ಮುಖ್ಯ ಅಂಶಗಳು ಇದ್ದರೂ ಮುಳುಗಿದವು.

ವಿಧಾನಸಭಾ ಸದಸ್ಯರಿಗೆ ಬಜೆಟ್ ಪುಸ್ತಕ ಕೂಡಲೇ ಸಿಗುತ್ತದೆ. ಹೊರಗಿನವರಿಗೆ ಒಟ್ಟಾರೆ ಹೊಸ ತೆರಿಗೆ ಹಾಕಿದ್ದಾರೋ ಕೊರತೆ ಹೆಚ್ಚೋ ಎಂಬುದಷ್ಟೇ ಮುಖ್ಯ. ಎಲ್ಲರನ್ನೂ ಮೆಚ್ಚಿಸಬೇಕು, ಎಲ್ಲವನ್ನೂ ಓದಿ ಹೇಳಬೇಕು ಎಂದು ಹೊರಟಾಗ ಹೀಗಾಗುತ್ತದೆ. ಏನಾದರೂ ಹೊಸತಿದ್ದರೂ ಗಮನಕ್ಕೆ ಬರುವುದಿಲ್ಲ.

**ಎಚ್.ಎಸ್.ಮಂಜುನಾಥ,** ಬೆಂಗಳೂರು

### ಕಹಿ ಸತ್ಯ

ಒಬ್ಬರಿಗೊಬ್ಬರು ಗೊತ್ತಿರುವ,
ಒಬ್ಬರನ್ನೊಬ್ಬರು ದ್ವೇಷಿಸುವ
ಆದರೆ...
ಒಬ್ಬರನ್ನೊಬ್ಬರು ಸಾಯಿಸದ
ಹಿರಿಯ ನಾಯಕರ ನಿರ್ಣಯದಂತೆ...
ರಣರಂಗದಲ್ಲಿ...
ಒಬ್ಬರಿಗೊಬ್ಬರು ಗೊತ್ತಿರದ
ಒಬ್ಬರನ್ನೊಬ್ಬರು ದ್ವೇಷಿಸದ
ಅಮಾಯಕ ಯುವ ಯೋಧರು
ಒಬ್ಬರನ್ನೊಬ್ಬರು
ಸಾಯಿಸುತ್ತಾರೆ...!

**ವಿ.ವಿಜಯೇಂದ್ರ ರಾವ್,** ಬೆಂಗಳೂರು

### ಲತಾ, ಲಹರಿ ಸ್ಮರಿಸದೇ ಇದ್ದುದೇಕೆ?

ಬೆಂಗಳೂರಿನಲ್ಲಿ ಗುರುವಾರ ನಡೆದ 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ, ಇತ್ತೀಚೆಗೆ ನಿಧನರಾದ ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಮತ್ತು ಸಂಗೀತ ನಿರ್ದೇಶಕ ಬಪ್ಪಿ ಲಹರಿ ಅವರ ಹೆಸರೇ ಕೇಳಿಬರದಿದ್ದುದು ಬೇಸರದ ಸಂಗತಿ. ಹೋಗಲಿ, ಲತಾ ಮಂಗೇಶ್ಕರ್ ಅವರ ಒಂದು ಹಾಡೂ ಕೇಳಿ ಬರಲಿಲ್ಲ, ಅವರ ಹಾಡಿಗೆ ಒಂದು ನೃತ್ಯವನ್ನೂ ನೋಡಲಿಲ್ಲ. ಅಂತರರಾಷ್ಟ್ರೀಯ ಖ್ಯಾತಿಯ ಇಂತಹ ದಿಗ್ಗಜರನ್ನೇ ಸ್ಮರಿಸದವರು ಇನ್ನು ಈಚಿನ ದಿನಗಳಲ್ಲಿ ನಮ್ಮನ್ನು ಅಗಲಿದ ಕನ್ನಡ ನಟರಾದ ಶಿವರಾಂ, ಸಂಚಾರಿ ವಿಜಯ್ ಅಂತಹವರನ್ನು ಸ್ಮರಿಸುತ್ತಾರೆಯೇ?

**ಸತ್ಯನಾರಾಯಣ ಎ.ವಿ.,** ಬೆಂಗಳೂರು

### ಖಾದ್ಯ ತೈಲ ಬೆಲೆ ಏರಿಕೆ ನಿಯಂತ್ರಿಸಿ

ಉಕ್ರೇನ್ ಮೇಲೆ ರಷ್ಯಾ ನಡೆಸಿರುವ ದಾಳಿಯ ಪರಿಣಾಮವಾಗಿ, ಉಕ್ರೇನ್‌ನಿಂದ ನಮ್ಮ ದೇಶಕ್ಕೆ ವ್ಯಾಪಕವಾಗಿ ಆಮದಾಗುತ್ತಿದ್ದ ಸೂರ್ಯಕಾಂತಿ ಎಣ್ಣೆಯ ಪೂರೈಕೆಯಲ್ಲಿ ಕೊರತೆಯಾಗಿದೆ. ಹೀಗಾಗಿ, ಖಾದ್ಯ ತೈಲಗಳ ಬೆಲೆ ಲೀಟರಿಗೆ ₹ 25ಕ್ಕಿಂತಲೂ ಅಧಿಕ ಏರಿಕೆಯಾಗಿದೆ. ಯುದ್ಧ ಮುಂದುವರಿದರೆ ಮುಂದಿನ ದಿನಗಳಲ್ಲಿ ಖಾದ್ಯ ತೈಲ, ಪೆಟ್ರೋಲ್, ಡೀಸೆಲ್ ಬೆಲೆ ಇನ್ನಷ್ಟು ಹೆಚ್ಚಬಹುದೆನ್ನುವ ಆತಂಕವಿದೆ. ಮುಂದಿನ ದಿನಗಳಲ್ಲಿ ಜನಸಾಮಾನ್ಯರ ಹಿತದೃಷ್ಟಿಯಿಂದ ಖಾದ್ಯ ತೈಲವನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುವುದು, ಅಕ್ರಮ ದಾಸ್ತಾನು ತಡೆಗಟ್ಟುವುದು, ನ್ಯಾಯಬೆಲೆ ಅಂಗಡಿಗಳ ಮೂಲಕ ಪೂರೈಸುವಂತಹ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು.

**ಉದಯ ಮ. ಯಂಡಿಗೇರಿ,** ಧಾರವಾಡ

### ಅಂಕ ಕಡಿತ: ನಿರ್ಧಾರ ಬದಲಾಗದಿರಲಿ

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಪರೀಕ್ಷೆಯಲ್ಲಿ ಸಂದರ್ಶನದ ಅಂಕವನ್ನು ಇತ್ತೀಚೆಗೆ ಕಡಿತಗೊಳಿಸಿರುವುದರ ವಿರುದ್ಧ ರಾಜ್ಯದ ಕೆಲವು ಹಿರಿಯ ನಾಯಕರು ಮಾಡಿರುವ ಆಕ್ಷೇಪಗಳು ವಾಸ್ತವಾಂಶಕ್ಕೆ ದೂರವಾಗಿವೆ. ಇಲ್ಲಿ ಸಂದರ್ಶನದ ಅಂಕ ಕಡಿತದಿಂದ ಅಭ್ಯರ್ಥಿಯ ಆಯ್ಕೆಯು ಹೆಚ್ಚು ಲಿಖಿತ ಪರೀಕ್ಷೆಯ ಮೇಲೆ ಅವಲಂಬಿತವಾಗುತ್ತದೆ. ಹೀಗಾದಾಗ ಗ್ರಾಮೀಣ ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ಅನುಕೂಲವಾಗುತ್ತದೆ. ಪ್ರಸ್ತುತ ಮುಖ್ಯ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದರೂ ಸಂದರ್ಶನ ಎಂಬ ತೆರೆಮರೆಯ ಆಟದಲ್ಲಿ ಹಣ ಮತ್ತು ಅಧಿಕಾರದ ಬಲವೇ ಮೇಲುಗೈ ಸಾಧಿಸಿದೆ. ಇದಕ್ಕೆ ಜ್ವಲಂತ ಉದಾಹರಣೆಯೆಂದರೆ, 2011ರ ಪ್ರೊಬೇಷನರಿ ಅಧಿಕಾರಿಗಳ ನೇಮಕಾತಿ ಪ್ರಕರಣ. ಹಾಗಾಗಿ ಯಾವುದೇ ಮಾರ್ಪಾಡಿದ್ದರೂ ವಿಸ್ತೃತ ಚರ್ಚೆಯ ಮುಖಾಂತರ ಅಂಗೀಕಾರವಾಗಬೇಕೇ ವಿನಾ ಯಾರದೋ ಒತ್ತಡಕ್ಕೆ ಮಣಿದು ನಿರ್ಧಾರ ಬದಲಿಸಬಾರದು. ಕೊರೊನಾ ಸಂಕಷ್ಟದ ಸಮಯದಲ್ಲೂ ಎದೆಗುಂದದೆ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳ ಪ್ರಯತ್ನಕ್ಕೆ ನಿಮ್ಮ ಸ್ವಹಿತಾಸಕ್ತಿಗಾಗಿ ತಣ್ಣೀರೆರಚದಿರಿ.

**ಮಂಜುನಾಥ ವಿ.ಜೆ.,** ಗೌರಿಬಿದನೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited.
To know more about The Printers (Mysore) Private Ltd, visit www.printersmysore.com.

ಉತ್ತರ ಪ್ರದೇಶ
ಉತ್ತರಾಖಂಡ
ಗೋವಾ
ಮಣಿಪುರ
ಪಂಜಾಬ್

# ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಳ

**ನವದೆಹಲಿ (ಪಿಟಿಐ):** ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ 4,406 ಅಭ್ಯರ್ಥಿಗಳ ಪೈಕಿ ಶೇ 26ರಷ್ಟು ಅಭ್ಯರ್ಥಿಗಳು ತಮ್ಮ ಮೇಲೆ ಅಪರಾಧ ಪ್ರಕರಣಗಳು ಇವೆ ಎಂದು ಘೋಷಿಸಿಕೊಂಡಿದ್ದಾರೆ. ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣಪತ್ರಗಳನ್ನು ವಿಶ್ಲೇಷಿಸಿ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆಯು ಸಿದ್ಧಪಡಿಸಿದ ವರದಿಯಲ್ಲಿ ಈ ಮಾಹಿತಿ ಇದೆ.

2017ರ ವಿಧಾನಸಭಾ ಚುನಾವಣೆಯಲ್ಲಿ 4,823 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಅವರಲ್ಲಿ 859 (ಶೇ 18ರಷ್ಟು) ಅಭ್ಯರ್ಥಿಗಳ ವಿರುದ್ಧ ಅಪರಾಧ ಪ್ರಕರಣಗಳು ಇದ್ದವು.

ಈ ಬಾರಿ ಸ್ಪರ್ಧಿಸಿರುವ 889 (ಶೇ 20ರಷ್ಟು) ಅಭ್ಯರ್ಥಿಗಳ ವಿರುದ್ಧ ಗಂಭೀರವಾದ ಅಪರಾಧ ಪ್ರಕರಣಗಳು ಇವೆ. 2017ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಶೇ 15ರಷ್ಟು ಅಭ್ಯರ್ಥಿಗಳ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳು ಇದ್ದವು.

ಅಪರಾಧ ಹಿನ್ನೆಲೆಯ ಅತಿ ಹೆಚ್ಚು (ಶೇ 65) ಅಭ್ಯರ್ಥಿಗಳನ್ನು ಸಮಾಜವಾದಿ ಪಕ್ಷವು (ಎಸ್‌ಪಿ) ಕಣಕ್ಕೆ ಇಳಿಸಿದೆ. ಎಸ್‌ಪಿಯಿಂದ ಸ್ಪರ್ಧಿಸಿರುವ 347 ಅಭ್ಯರ್ಥಿಗಳಲ್ಲಿ 224 ಮಂದಿಯ ವಿರುದ್ಧ ಪ್ರಕರಣಗಳು ಇವೆ. ಎಸ್‌ಪಿಯ ಮಿತ್ರ ಪಕ್ಷ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ 19 ಅಭ್ಯರ್ಥಿಗಳ ಪೈಕಿ 11 ಮಂದಿಯ ವಿರುದ್ಧ ಪ್ರಕರಣಗಳು ಇವೆ. ಆರ್‌ಎಲ್‌ಡಿಯ 33 ಅಭ್ಯರ್ಥಿಗಳ ಪೈಕಿ 19 ಮಂದಿಯ ವಿರುದ್ಧ ಅಪರಾಧ ಪ್ರಕರಣಗಳು ದಾಖಲಾಗಿವೆ.

### ಕುಬೇರರಿಗೆ ಆದ್ಯತೆ

ಎಲ್ಲ ಪ್ರಮುಖ ಪಕ್ಷಗಳೂ ಟಿಕೆಟ್ ನೀಡಿಕೆಯಲ್ಲಿ ಶ್ರೀಮಂತರಿಗೆ ಆದ್ಯತೆ ನೀಡಿವೆ. ಆರ್‌ಎಲ್‌ಡಿಯ 33 ಅಭ್ಯರ್ಥಿಗಳ ಪೈಕಿ 31 ಮಂದಿ ಕೋಟ್ಯಧಿಪತಿಗಳು. ಬಿಜೆಪಿಯ 374 ಅಭ್ಯರ್ಥಿಗಳಲ್ಲಿ 335 ಮಂದಿ, ಎಸ್‌ಪಿಯ 347 ಅಭ್ಯರ್ಥಿಗಳ ಪೈಕಿ 302, ಬಿಎಸ್‌ಪಿಯ 399 ಅಭ್ಯರ್ಥಿಗಳ ಪೈಕಿ 315 ಮಂದಿ, ಅಪ್ನಾ ದಳ (ಎಸ್)ನ 17 ಅಭ್ಯರ್ಥಿ ಪೈಕಿ 12 ಮಂದಿ ಕೋಟ್ಯಧಿಪತಿಗಳು.

ಬಿಜೆಪಿ ಅಭ್ಯರ್ಥಿಗಳಲ್ಲಿ ಶೇ 45ರಷ್ಟು ಮಂದಿ ಅಪರಾಧ ಹಿನ್ನೆಲೆಯವರು ಇದ್ದಾರೆ. 374 ಅಭ್ಯರ್ಥಿಗಳ ಪೈಕಿ 169 ಮಂದಿಯ ವಿರುದ್ಧ ಅಪರಾಧ ಪ್ರಕರಣಗಳು ಇವೆ. ಕಾಂಗ್ರೆಸ್‌ನ 397 ಅಭ್ಯರ್ಥಿಗಳ ಪೈಕಿ 160 ಮಂದಿಯ ವಿರುದ್ಧ ಪ್ರಕರಣಗಳು ಇವೆ. ಬಿಎಸ್‌ಪಿಯ 399 ಅಭ್ಯರ್ಥಿಗಳಲ್ಲಿ 153 ಮಂದಿ ಅಪರಾಧ ಹಿನ್ನೆಲೆಯವರು.

69 ಅಭ್ಯರ್ಥಿಗಳ ವಿರುದ್ಧ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಪ್ರಕರಣಗಳು ಇವೆ. 10 ಮಂದಿಯ ವಿರುದ್ಧ ಅತ್ಯಾಚಾರ ಆರೋಪ ಇದೆ.

ಉತ್ತರ ಪ್ರದೇಶದಲ್ಲಿ ಒಟ್ಟು 403 ಕ್ಷೇತ್ರಗಳಿವೆ. ಅವುಗಳ ಪೈಕಿ 226 ಕ್ಷೇತ್ರಗಳನ್ನು 'ರೆಡ್ ಅಲರ್ಟ್' ಕ್ಷೇತ್ರಗಳು ಎಂದು ಪರಿಗಣಿಸಲಾಗಿದೆ. ಏಕೆಂದರೆ, ಈ ಕ್ಷೇತ್ರಗಳಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳ ವಿರುದ್ಧ ಅಪರಾಧ ಪ್ರಕರಣಗಳು ಇವೆ. 2017ರಲ್ಲಿ ಈ ಸಂಖ್ಯೆ 152 ಆಗಿತ್ತು.

## ನುಡಿ-ಕಿಡಿ

**ರಾಷ್ಟ್ರ ಮಟ್ಟದ ಎಲ್ಲ ನಾಯಕರೂ ಚುನಾವಣಾ ಪ್ರಚಾರ ನಡೆಸಲು ಉತ್ತರ ಪ್ರದೇಶಕ್ಕೆ ಬಂದಿದ್ದಾರೆ. ಅವರ ಭಾಷಣ ಕೇಳಿದರೆ, ಸಣ್ಣ ರಾಜಕಾರಣಿ ಸಣ್ಣ ಸುಳ್ಳು ಹೇಳುತ್ತಾರೆ. ದೊಡ್ಡ ರಾಜಕಾರಣಿ ದೊಡ್ಡ ಸುಳ್ಳು ಹೇಳುತ್ತಾರೆ. ಅತ್ಯಂತ ದೊಡ್ಡ ನಾಯಕ ಅತಿ ದೊಡ್ಡ ಸುಳ್ಳು ಹೇಳುತ್ತಾರೆ**

**ಅಖಿಲೇಶ್ ಯಾದವ್,** ಎಸ್‌ಪಿ ಮುಖ್ಯಸ್ಥ

**ಚುನಾವಣೆಯ ಸಂದರ್ಭದಲ್ಲಿ ಅರಾಜಕತೆ ಹರಡುವ ಉದ್ದೇಶದಿಂದ ತಾವು ಅಡಗಿದ್ದ ಬಿಲಗಳಿಂದ ವೃತ್ತಿಪರ ಅಪರಾಧಿಗಳು ಹೊರ ಬಂದಿದ್ದರು. ಆದರೆ, ತಮ್ಮ ಉದ್ದೇಶ ಏನೂ ಸಾಧನೆ ಆಗದು ಎಂಬುದು ಅವರಿಗೆ ಅರಿವಾಗಿದೆ. ಹಾಗಾಗಿ, ಅಡಗಿಕೊಳ್ಳಲು ಅವರು ಬಿಲಗಳನ್ನು ಹುಡುಕುತ್ತಿದ್ದಾರೆ**

**ಯೋಗಿ ಆದಿತ್ಯನಾಥ,** ಉತ್ತರ ಪ್ರದೇಶ ಮುಖ್ಯಮಂತ್ರಿ

**ದೇಶವು ಹಲವು ಸವಾಲುಗಳನ್ನು ಎದುರಿಸುತ್ತಿದೆ. ಜಾತಿ ಆಧಾರದಲ್ಲಿ ನಡೆಯುವ ತಾರತಮ್ಯ, ಅನ್ಯಾಯ ಅವುಗಳಲ್ಲಿ ಸೇರಿವೆ. ಬಡವರ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಮಾಜವಾದಿ ಪಕ್ಷಕ್ಕೆ ಬಹುದೊಡ್ಡ ಹೊಣೆಗಾರಿಕೆ ಇದೆ. ಬಡವರು, ಯುವಜನರು, ಅವಿದ್ಯಾವಂತರು ಮತ್ತು ನಿರ್ಲಕ್ಷ್ಯಕ್ಕೆ ಒಳಗಾದವರಿಗಾಗಿ ಪಕ್ಷವು ಸದಾ ಕೆಲಸ ಮಾಡಿದೆ**

**ಮುಲಾಯಂ ಸಿಂಗ್ ಯಾದವ್,** ಸಮಾಜವಾದಿ ಪಕ್ಷದ ಸ್ಥಾಪಕ



**ಅಖಿಲೇಶ್ ಯಾದವ್ ಅವರ ಗಮನವು ಒಂದು ಸಮುದಾಯ ಮತ್ತು ಒಂದು ಜಾತಿಯ ಕಡೆಗೆ ಮಾತ್ರ ಇದೆ. ಅವರು ಒಂದು ಕಣ್ಣಿನಿಂದ ಜಾತಿಯನ್ನೂ ಮತ್ತೊಂದು ಕಣ್ಣಿನಿಂದ ಸಮುದಾಯವನ್ನೂ ನೋಡುತ್ತಾರೆ. ಅವರು ನೋಡುವ ಸಮುದಾಯದ ಭಾಗವಾಗಿ ನಾವು ಇಲ್ಲ**

**ಅಮಿತ್ ಶಾ,** ಕೇಂದ್ರ ಗೃಹ ಸಚಿವ

ಆಧಾರ: ಪಿಟಿಐ

# ಎಸ್‌ಪಿಗೆ ಬಂಗಾಳಿ ಬೆಂಬಲದ ಹಂಬಲ

## ವಾರಾಣಸಿ: ಮಮತಾ ಬ್ಯಾನರ್ಜಿ ಮೂಲಕ ಪ್ರಭಾವ ಬೀರಲು ಅಖಿಲೇಶ್ ಯತ್ನ

● ಸಂಜಯ ಪಾಂಡೆ

ಅಖಿಲೇಶ್ ಯಾದವ್ ಅವರು ಮೌ ಎಂಬಲ್ಲಿ ಶುಕ್ರವಾರ ಚುನಾವಣಾ ಪ್ರಚಾರ ನಡೆಸಿದರು ಪಿಟಿಐ ಚಿತ್ರ

**ವಾರಾಣಸಿ:** ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ಜಂಟಿಯಾಗಿ ನಡೆಸಿದ ಚುನಾವಣಾ ರ‍್ಯಾಲಿಯಲ್ಲಿ ಬಂಗಾಳಿ ಭಾಷೆಯ ಘೋಷಣೆಗಳು ಇದ್ದ ಬ್ಯಾನರ್ ಮತ್ತು ಫಲಕ ಹಿಡಿದಿದ್ದ ಜನರ ಸಂಖ್ಯೆ ಗಣನೀಯವಾಗಿಯೇ ಇತ್ತು. ವಾರಾಣಸಿಯಲ್ಲಿ ಬಿಜೆಪಿಯ ಶಕ್ತಿ ಕುಂದಿಸಲು ಯತ್ನಿಸುತ್ತಿರುವ ಅಖಿಲೇಶ್‌ಗೆ ಇದು ಸಂತಸ ತಂದಿದೆ.

ವಾರಾಣಸಿಯಲ್ಲಿ ಬಂಗಾಳಿ ಮತದಾರರು ದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಈ ಸಮುದಾಯದ ಬೆಂಬಲವು ಫಲಿತಾಂಶದ ಮೇಲೆ ಪರಿಣಾಮ ಬೀರುತ್ತದೆ. ಕಳೆದ ಕೆಲವು ದಶಕಗಳಲ್ಲಿ, ಬಂಗಾಳಿಗಳು ದೊಡ್ಡ ಸಂಖ್ಯೆಯಲ್ಲಿ ವಾರಾಣಸಿಗೆ ಬಂದು ನೆಲೆಯಾಗಿದ್ದಾರೆ.

ಬಿಜೆಪಿ ಮುಖಂಡ ಶ್ಯಾಮದೇವ್ ರಾಯ್ ಚೌಧುರಿ ಅವರು ವಾರಾಣಸಿ ದಕ್ಷಿಣ ಕ್ಷೇತ್ರವನ್ನು 2017ರವರೆಗೆ ಸತತ ಏಳು ಬಾರಿ ಗೆದ್ದಿದ್ದರು ಎಂಬುದು ಬಂಗಾಳಿಗಳ ಪ್ರಾಬಲ್ಯಕ್ಕೆ ಸಾಕ್ಷಿ. ಕಳೆದ ಚುನಾವಣೆಯಲ್ಲಿ ಚೌಧುರಿ ಬದಲಿಗೆ ನೀಲಕಾಂತ ತಿವಾರಿ ಅವರಿಗೆ ಬಿಜೆಪಿ ಟಿಕೆಟ್ ನೀಡಿತ್ತು. ತಿವಾರಿ ಅವರು 17 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದಾರೆ.

ಟಿಕೆಟ್ ನಿರಾಕರಣೆಯಾದ ಬಳಿಕ ಚೌಧುರಿ ಅವರು ಬಂಡಾಯದ ಸೂಚನೆ ನೀಡಿದ್ದರು. ಪ್ರಧಾನಿ ಮೋದಿ ಅವರೇ ಮಧ್ಯಪ್ರವೇಶಿಸಿ ಅವರನ್ನು ಸಮಾಧಾನ ಪಡಿಸಿದ್ದರು. ಚುನಾವಣೆ ಬಳಿಕ, ಸೂಕ್ತ ಸ್ಥಾನ ನೀಡುವ ಭರವಸೆಯನ್ನು ಚೌಧುರಿ ಅವರಿಗೆ ಕೊಟ್ಟಿದ್ದರು. ಚೌಧುರಿ ಅವರು ಈ ಬಾರಿ ಪ್ರಚಾರದಲ್ಲಿ ಸಕ್ರಿಯವಾಗಿ ಕಾಣಿಸಿಕೊಂಡಿಲ್ಲ.

1989ರಿಂದಲೇ ಈ ಕ್ಷೇತ್ರವು ಬಿಜೆಪಿಯ 'ಭದ್ರಕೋಟೆ'. ಈ 'ಭದ್ರಕೋಟೆ'ಯಲ್ಲಿ ಬಿರುಕು ಮೂಡಿಸಲು ಎಸ್‌ಪಿ ಯತ್ನಿಸುತ್ತಿದೆ. ಹಾಗಾಗಿಯೇ, ಸ್ಥಳೀಯ ಅರ್ಚಕ ಕಿಶನ್ ದೀಕ್ಷಿತ್ ಅವರನ್ನು ಇಲ್ಲಿಂದ ಕಣಕ್ಕೆ ಇಳಿಸಿದೆ. ಅವರು ನಗರದಲ್ಲಿರುವ ಮಹಾಮೃತ್ಯುಂಜಯ ದೇವಾಲಯದ ಮುಖ್ಯಸ್ಥರೂ ಹೌದು. ಬಿಜೆಪಿಯ ಅಭ್ಯರ್ಥಿ ಮತ್ತು ಸಚಿವ ನೀಲಕಾಂತ ತಿವಾರಿ ಅವರಿಗೆ ದೀಕ್ಷಿತ್ ಅವರು ಕಠಿಣ ಸ್ಪರ್ಧೆ ಒಡ್ಡಿದ್ದಾರೆ.

ಕ್ಷೇತ್ರದ ಜನರಿಗೆ ಪರಿಣಾಮಕಾರಿ ಸೇವೆ ಒದಗಿಸಲು ಸಾಧ್ಯವಾಗಿಲ್ಲ. ಅದಕ್ಕಾಗಿ ಕ್ಷಮೆ ಕೇಳುವುದಾಗಿ ತಿವಾರಿ ಅವರು ಕೆಲ ದಿನಗಳ ಹಿಂದೆ ಹೇಳಿದ್ದರು. ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಇನ್ನೊಂದು ಅವಕಾಶ ಕೊಡಿ ಎಂದೂ ಕೇಳಿದ್ದರು.

ಬಂಗಾಳಿ ಮತದಾರರ ಬೆಂಬಲ ಎಸ್‌ಪಿಯ ಕಡೆಗೆ ವಾಲಿದರೆ ಆ ಪಕ್ಷಕ್ಕೆ ಗೆಲುವು ಸುಲಭವಾಗಲಿದೆ. ಈ ಕ್ಷೇತ್ರದಲ್ಲಿ 80 ಸಾವಿರ ಮುಸ್ಲಿಮರೂ ಇದ್ದಾರೆ. ಮುಸ್ಲಿಮರು ಈ ಬಾರಿ ಎಸ್‌ಪಿಯ ಮತಬ್ಯಾಂಕ್ ಎಂದೇ ಪರಿಗಣಿಸಲಾಗುತ್ತಿದೆ. 'ನಮ್ಮ ಪರಿಸ್ಥಿತಿ ಇಲ್ಲಿ ದೃಢವಾಗಿದೆ. ಬಂಗಾಳಿ ಮತದಾರರ ಬೆಂಬಲವು ಗೆಲುವನ್ನು ಖಚಿತಪಡಿಸಿದೆ' ಎಂದು ಎಸ್‌ಪಿಯ ಸ್ಥಳೀಯ ಮುಖಂಡ ಧೀರಜ್ ಯಾದವ್ ಹೇಳಿದ್ದಾರೆ.

ಮಮತಾ ಅವರು ವಾರಾಣಸಿಯಲ್ಲಿ ಎರಡು ದಿನ ತಂಗುವ ಯೋಜನೆ ಮೊದಲು ಇತ್ತು. ಆದರೆ, ಅವರು ಮೂರು ದಿನ ವಾರಾಣಸಿಯಲ್ಲಿ ಇದ್ದರು. ಜತೆಗೆ, ಅಖಿಲೇಶ್ ಅವರ ಜತೆಗೆ ರೋಡ್‌ಶೋ ಕೂಡ ನಡೆಸಿದರು. ಬಂಗಾಳಿ ಮತದಾರರು ಹೆಚ್ಚಾಗಿ ನೆಲೆಸಿರುವ ಪ್ರದೇಶಗಳಲ್ಲಿಯೇ ರೋಡ್ ಶೋ ಆಯೋಜಿಸಲಾಗಿತ್ತು.

## ಮಣಿಪುರ: ಕೊನೆಯ ಹಂತದ ಮತದಾನ ಇಂದು

**ಗುವಾಹಟಿ:** ಮಣಿಪುರ ವಿಧಾನಸಭೆಗೆ ಎರಡನೇ ಹಂತದ ಮತದಾನ ಶನಿವಾರ ನಡೆಯಲಿದೆ. ಇಬ್ಬರು ಮಹಿಳೆಯರು ಸೇರಿದಂತೆ 92 ಅಭ್ಯರ್ಥಿಗಳು ಕಣದಲ್ಲಿದ್ದು, 22 ಕ್ಷೇತ್ರಗಳಲ್ಲಿ ಮತದಾನ ಇದೆ. ಬೆಳಿಗ್ಗೆ 7ರಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ.

1,247 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 6 ಜಿಲ್ಲೆಗಳ ಸುಮಾರು 8.38 ಕೋಟಿ ಮತದಾರರು ಮತ ಚಲಾಯಿಸಲಿದ್ದಾರೆ. ಕಾಂಗ್ರೆಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಒಕ್ರಮ್ ಇಬೊಬಿ ಸಿಂಗ್ ಅವರು ಈ ಬಾರಿ ಚುನಾವಣಾ ಕಣದಲ್ಲಿರುವ ಪ್ರಮುಖರಾಗಿದ್ದಾರೆ.

**ರೋಡ್ ಶೋ** ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿಯಲ್ಲಿ ಶುಕ್ರವಾರ ರೋಡ್‌ಶೋ ನಡೆಸಿದರು. ಇಲ್ಲಿ ಸೋಮವಾರ ಮತದಾನ ನಡೆಯಲಿದೆ – ಪಿಟಿಐ ಚಿತ್ರ

## ಮುಖ್ತಾರ್ ಅನ್ಸಾರಿ ಮಗನ ಮೇಲೆ ಪ್ರಕರಣ ದಾಖಲು

**ಮೌ (ಉತ್ತರ ಪ್ರದೇಶ) (ಪಿಟಿಐ):** ಜೈಲು ಸೇರಿರುವ ಗೂಂಡಾ ಮತ್ತು ರಾಜಕಾರಣಿ ಮುಖ್ತಾರ್ ಅನ್ಸಾರಿ ಅವರ ಮಗ ಅಬ್ಬಾಸ್ ಅನ್ಸಾರಿ ಅವರ ಮೇಲೆ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯ ಪ್ರಕರಣ ದಾಖಲಾಗಿದೆ. ಸರ್ಕಾರಿ ಅಧಿಕಾರಿಗಳನ್ನು ಅಬ್ಬಾಸ್ ಅನ್ಸಾರಿ ಅವರು ಬೆದರಿಸುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಂಡ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ.

ಅಬ್ಬಾಸ್ ಅನ್ಸಾರಿ ಅವರು ಮೌ ವಿಧಾನಸಭಾ ಕ್ಷೇತ್ರದಿಂದ ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಈ ಪಕ್ಷವು ಅಖಿಲೇಶ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷದ ಜತೆಗೆ ಮೈತ್ರಿ ಹೊಂದಿದೆ.

'ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಆರು ತಿಂಗಳು ಯಾವ ಅಧಿಕಾರಿಯನ್ನೂ ವರ್ಗಾಯಿಸಬಾರದು ಎಂದು ಅಖಿಲೇಶ್ ಅವರಲ್ಲಿ ಕೇಳಿಕೊಂಡಿದ್ದೇನೆ. ಇಲ್ಲಿ ಇದ್ದವರು ಇಲ್ಲಿಯೇ ಉಳಿಯಬೇಕು. ಮೊದಲು ನಮ್ಮ ಲೆಕ್ಕ ಚುಕ್ತಾ ಮಾಡಬೇಕು' ಎಂದು ಚುನಾವಣಾ ಪ್ರಚಾರ ಸಭೆಯಲ್ಲಿ ಅಬ್ಬಾಸ್ ಹೇಳಿರುವುದು ವಿಡಿಯೊದಲ್ಲಿ ಇದೆ.

## ಯೋಗಿ ಸರ್ಕಾರ ಕಿತ್ತೊಗೆಯುವುದು ಮುಸ್ಲಿಮರ ಆದ್ಯತೆ

# ಉ.ಪ್ರ: ಒವೈಸಿ ಪಕ್ಷ 'ಭವಿಷ್ಯ'ದ ಆಯ್ಕೆ

**ಆಜಂಗಡ/ಫಹೂರಾಬಾದ್ (ಉತ್ತರ ಪ್ರದೇಶ) (ಪಿಟಿಐ):** ಅಸಾದುದ್ದೀನ್ ಒವೈಸಿ ನೇತೃತ್ವದ ಆಲ್ ಇಂಡಿಯಾ ಮಜ್ಲಿಸ್ ಎ ಇತ್ತೆಹಾದುಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷವು ಈ ಬಾರಿಯ ಉತ್ತರ ಪ್ರದೇಶ ವಿಧಾಸಭಾ ಚುನಾವಣೆಯಲ್ಲಿ ನಿರೀಕ್ಷಿತ ಸ್ಥಾನಗಳನ್ನು ಗೆಲ್ಲದಿರಬಹುದು. ಆದರೆ ಸಮಾಜವಾದಿ ಪಕ್ಷ (ಎಸ್‌ಪಿ) ಹಾಗೂ ಬಹುಜನ ಸಮಾಜ (ಬಿಎಸ್‌ಪಿ) ಪಕ್ಷಗಳ ಭದ್ರಕೋಟೆಗಳಲ್ಲಿ ನುಸುಳುವಲ್ಲಿ ಅದು ಸಫಲವಾಗಿದ್ದು, ಸ್ಥಳೀಯ ಮುಸ್ಲಿಂ ಯುವಜನರು ಎಐಎಂಐಎಂ ಪಕ್ಷ ತಮ್ಮ ಭವಿಷ್ಯದ ಆಯ್ಕೆ ಎಂಬ ರೀತಿ ನೋಡುತ್ತಿದ್ದಾರೆ.

ಉತ್ತರ ಪ್ರದೇಶದ ಮುಸ್ಲಿಮರು ಎಸ್‌ಪಿ ಅಥವಾ ಬಿಎಸ್‌ಪಿಯನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಮತಗಳು ವಿಭಜನೆಯಾಗಬಹುದು ಎಂಬ ಕಾರಣಕ್ಕೆ ಅವರು ಈ ಬಾರಿ ತಮ್ಮ ಆಯ್ಕೆಯನ್ನು ಬದಲಿಸುವ ಸಾಧ್ಯತೆ ಕಡಿಮೆ. ಆಜಂಗಡದ ಮುಬಾರಕ್‌ಪುರ ವಿಧಾನಸಭೆ ಕ್ಷೇತ್ರವನ್ನು ಹೊರತುಪಡಿಸಿದರೆ, ಪಕ್ಷವು ರಾಜ್ಯದ ಎಲ್ಲಿಯೂ ಗಂಭೀರವಾಗಿ ಸ್ಪರ್ಧೆಗೆ ಇಳಿದಿಲ್ಲ. ಈ ಕ್ಷೇತ್ರದಲ್ಲಿ ಪಕ್ಷದಿಂದ ಸ್ಪರ್ಧಿಸಿರುವ ಪ್ರಬಲ ಅಭ್ಯರ್ಥಿ ಶಾ ಆಲಂ ಅಲಿಯಾಸ್ ಗುಡ್ಡು ಜಮಾಲಿ ಅವರು ಪಕ್ಷದ ಹೆಸರಿಗಿಂತ ತಮ್ಮ ವರ್ಚಸ್ಸಿನಿಂದ ಗೆಲ್ಲಲಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ.

ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಬೇಕು ಎಂಬುದು ರಾಜ್ಯದ ವಿವಿಧ ಭಾಗಗಳಲ್ಲಿರುವ ಮುಸ್ಲಿಮರ ಅಭಿಮತ. ಆದರೆ ಈ ಬಾರಿಯ ಚುನಾವಣೆಯಲ್ಲಿ ಎಐಎಂಐಎಂ ಪಕ್ಷವನ್ನು ಬೆಂಬಲಿಸಿದರೆ, ಅದು ಮತಗಳ ವಿಭಜನೆಗೆ ಕಾರಣವಾಗಿ ಅಂತಿಮವಾಗಿ ಬಿಜೆಪಿಗೇ ನೆರವಾಗುತ್ತದೆ ಎಂಬ ಆತಂಕ ಅವರಲ್ಲಿದೆ. ಎಐಎಂಐಎಂ ಪಕ್ಷ ಈ ಬಾರಿ ಸೋಲುಂಡರೂ, ಅದು ತಮ್ಮ 'ಸ್ವಂತ ಪಕ್ಷ' ಎಂದೇ ಹಲವು ಮುಸ್ಲಿಮರು ವಾದಿಸುತ್ತಾರೆ.

ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಮಿರ್ಜಾಪುರದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದರು—ಪಿಟಿಐ ಚಿತ್ರ

**ಕಾಂಗ್ರೆಸ್, ಎಸ್‌ಪಿ, ಬಿಎಸ್‌ಪಿ ನಮ್ಮ ದನಿಗೆ ಓಗೊಡಲಿಲ್ಲ. ಒವೈಸಿ ಅವರು ನಮ್ಮ ಕಳಕಳಿಗೆ ಸ್ಪಂದಿಸಿದ್ದಾರೆ. ಎಲ್ಲರಂತೆ ನಮಗೂ ಒಂದು ಪಕ್ಷ ಬೇಕಲ್ಲವೇ**

**ಒಬೈದುಲ್ಲಾ,** ಅಂಗಡಿ ಮಾಲೀಕ

**ಎಐಎಂಐಎಂ ಮತಗಳನ್ನು ಪಡೆಯಲಿದೆ, ಆದರೆ ಈ ಬಾರಿ ಅಲ್ಲ. ಯೋಗಿಯನ್ನು ಸೋಲಿಸುವುದು ನಮ್ಮ ಆದ್ಯತೆ. ಎಐಎಂಐಎಂ ಪಕ್ಷವು ಈಗಿನ್ನೂ ಗೆಲ್ಲುವ ಹಂತದಲ್ಲಿಲ್ಲ**

**ಮತ್ಲೂಬ್ ಆಲಂ,** ಟೀ ಅಂಗಡಿ ಮಾಲೀಕ



## ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 61

### ಭಸ್ಮ ರುದ್ರಾಕ್ಷ ಧರಿಸದೆ ಪೂಜಿಸಬಾರದು

ಪಾರ್ಥಿವಲಿಂಗಗಳ ಸಂಖ್ಯೆಗಳೆಷ್ಟು – ಅಂತ ಸೂತಮುನಿಯನ್ನು ಕೇಳುತ್ತಾರೆ. ಆಗ ಸೂತಮುನಿಯು 'ಯಾವುದನ್ನು ಅನುಷ್ಠಾನ ಮಾತ್ರದಿಂದಲೇ, ನರನು ಕೃತಾರ್ಥನಾಗುವನೋ ಅಂತಹ ಪಾರ್ಥಿವಲಿಂಗ ಪೂಜಾವಿಧಿಯನ್ನು ತಿಳಿಸುತ್ತೇನೆ ಕೇಳಿ' ಎನ್ನುತ್ತಾನೆ.

ವಿದ್ಯೆಯನ್ನ ಅಪೇಕ್ಷಿಸುವ ಪುರುಷನು ಸಾವಿರ ಪಾರ್ಥಿವಲಿಂಗಗಳನ್ನು ಅರ್ಚಿಸಬೇಕು. ಧನವನ್ನ ಅಪೇಕ್ಷಿಸುವ ಪುರುಷನು ಐದುನೂರು ಪಾರ್ಥಿವ ಲಿಂಗಗಳನ್ನು, ಪುತ್ರರನ್ನ ಅಪೇಕ್ಷಿಸುವವನು ಒಂದೂವರೆ ಸಾವಿರ ಲಿಂಗಗಳನ್ನು, ವಸ್ತ್ರವನ್ನ ಅಪೇಕ್ಷಿಸುವವನು ಐನೂರು ಲಿಂಗಗಳನ್ನು ಪೂಜಿಸಬೇಕು. ಮುಕ್ತಿಯನ್ನ ಅನಪೇಕ್ಷಿಸುವವನು ಕೋಟಿಲಿಂಗಗಳನ್ನು ಅರ್ಚಿಸಬೇಕು.

ಪ್ರತಿದಿನವೂ ಒಂದು ಲಿಂಗವನ್ನು ಪೂಜಿಸಿದರೆ ಪಾಪನಾಶವಾಗುವುದು. ಹೀಗೆ ಪಾರ್ಥಿವಲಿಂಗಗಳನ್ನು ಪೂಜಿಸಿದರೆ ಕೋಟಿ ಯಜ್ಞಗಳ ಫಲ ಲಭಿಸುವುದು. ಮುಕ್ತಿಯನ್ನ ಅಪೇಕ್ಷಿಸುವವರಿಗೆ ಮುಕ್ತಿಯೂ, ಭೋಗಗಳನ್ನ ಅಪೇಕ್ಷಿಸುವವರಿಗೆ ಭೋಗವೂ ಲಭಿಸುವುದು. ಪಾರ್ಥಿವಲಿಂಗವನ್ನ ಅರ್ಚಿಸದೆ ದುರಾಚಾರಿಯಾಗಿ ದುರ್ಜೀವನ ನಡೆಸುತ್ತಾ, ಯಾರು ಕಾಲವನ್ನು ಕಳೆಯುತ್ತಾರೋ ಅವರಿಗೆ ಮಹತ್ತಾದ ಹಾನಿಯು ಪ್ರಾಪ್ತಿಯಾಗುವುದು.

ಕಲಿಯುಗದಲ್ಲಿ ಲಿಂಗಪೂಜೆಯೇ ಶ್ರೇಷ್ಠವಾದುದು. ಎಲ್ಲ ದಾನಗಳು, ಅನೇಕ ಬಗೆಯ ವ್ರತಗಳು, ತೀರ್ಥಗಳು, ನಿಯಮಗಳು ಮತ್ತು ಯಜ್ಞಗಳೆಲ್ಲವೂ ಒಂದು. ಪಾರ್ಥಿವಲಿಂಗಾರ್ಚನೆಯೇ ಒಂದು. ಶಿವಲಿಂಗವು ಭೋಗ ಮತ್ತು ಮೋಕ್ಷಗಳನ್ನುಂಟುಮಾಡುವುದು. ಎಲ್ಲಾ ವಿಪತ್ತುಗಳನ್ನೂ ನಿವಾರಿಸುವುದು. ನಿತ್ಯವೂ ಲಿಂಗವನ್ನು ಪೂಜಿಸಿದರೆ ಶಿವನ ಸ್ವರೂಪ ಲಭಿಸುವುದು.

ಲಿಂಗಗಳಲ್ಲಿ ಶಿವನಾಮಮಯವಾದ ಲಿಂಗಗಳನ್ನೇ ಮಹರ್ಷಿಗಳು ಪೂಜಿಸಬೇಕು. ನಾಲ್ಕು ಅಂಗುಲ ಎತ್ತರವಾಗಿದ್ದು ಪೀಠದೊಡನೆ ಇರುವ ರಮ್ಯವಾದ ಲಿಂಗವು ಉತ್ತಮವಾದುದು. ಎರಡು ಅಂಗುಲ ಎತ್ತರವಾದ ಲಿಂಗವು ಮಧ್ಯಮವಾದುದು. ಒಂದು ಅಂಗುಲ ಎತ್ತರವಾದುದು ಅಧಮವಾದುದು. ಹೆಚ್ಚು ಪ್ರಮಾಣವುಳ್ಳ ಲಿಂಗವೇ ಶ್ರೇಷ್ಠವಾದುದು. ನಿತ್ಯವೂ ಭಕ್ತಿಶ್ರದ್ಧೆಗಳಿಂದ ಅನೇಕ ಲಿಂಗಗಳನ್ನು ಪೂಜಿಸುವವನು, ಇಷ್ಟಾರ್ಥಗಳನ್ನೆಲ್ಲಾ ಪಡೆಯುವನು.

ಶಿವಲಿಂಗಾರ್ಚನ ಹೊರತು, ಪುಣ್ಯತಮವಾದ ಇನ್ನೊಂದು ಕರ್ಮವು ನಾಲ್ಕು ವೇದಗಳಲ್ಲಿಯೂ ಇಲ್ಲ. ವಿದ್ವಾಂಸನಾದವನು ಎಲ್ಲಾ ವೈದಿಕ ಕರ್ಮಗಳನ್ನೂ ಬಿಟ್ಟು, ಈ ಪಾರ್ಥಿವಲಿಂಗವನ್ನು ಪೂಜಿಸಿದರೆ ಚರಾಚರಾತ್ಮಕವಾದ ಇಡೀ ಜಗತ್ತನ್ನು ಪೂಜಿಸಿದಂತಾಗುವುದು. ಅಜ್ಞಾನವೆಂಬ ಕತ್ತಲೆಯಿಂದ ಕುರುಡರಾಗಿಯೂ, ವಿಷಯಗಳಲ್ಲೇ ಆಸಕ್ತರಾಗಿರುವ ಸಂಸಾರಿಗಳಿಗೆ ಲಿಂಗಪೂಜೆಯ ಹೊರತು ಸಂಸಾರಸಾಗರವನ್ನು ದಾಟಿಸುವ ನೌಕೆಯು ಬೇರೊಂದಿಲ್ಲ.

ದಧೀಚಿಮುನಿ ಮತ್ತು ಗೌತಮಋಷಿ ಮೊದಲಾದವರಿಂದ ಶಾಪಗ್ರಸ್ತರಾಗಿರು ವಂತಹವರಿಗೆ ವೈದಿಕಕರ್ಮದಲ್ಲಿ ಶ್ರದ್ಧೆಯುಂಟಾಗುವುದಿಲ್ಲ. ವೈದಿಕಕರ್ಮಗಳನ್ನೂ ಸ್ಮಾರ್ ಕರ್ಮಗಳನ್ನೂ ತಿರಸ್ಕರಿಸಿ, ಬೇರೆ ಕರ್ಮಗಳನ್ನು ಮಾಡುವವನು ಯಾವ ಫಲವನ್ನೂ ಪಡೆಯಲಾರ. ವಿಧಿವತ್ತಾಗಿ ನೈವೇದ್ಯದವರೆಗೆ ಶಂಭುವನ್ನರ್ಚಿಸಿ, ಅಲ್ಲಿಯೇ ಅವನ ಮೂರು ಜಗದ್ರೂಪಗಳಾಗಿರುವ ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಚಂದ್ರ, ಯಜಮಾನ ಎಂಬ ಎಂಟು ಮೂರ್ತಿಗಳನ್ನು ಪೂಜಿಸ ಬೇಕು. ಶರ್ವ, ಭವ, ರುದ್ರ, ಉಗ್ರ, ಭೀಮ, ಈಶ್ವರ, ಮಹಾದೇವ, ಪಶುಪತಿ – ಈ ಎಂಟು ಈಶ್ವರಸ್ವರೂಪಗಳನ್ನು ಅರ್ಚಿಸಬೇಕು.

ಆಮೇಲೆ ಈಶಾನನೇ ಮೊದಲಾದ ಶಂಕರನ ಪರಿವಾರ ಗಣಗಳನ್ನೂ ಗಂಧ, ಅಕ್ಷತೆ, ಬಿಲ್ವಪತ್ರೆಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಬೇಕು. ಈಶಾನ, ನಂದೀಶ್ವರ, ಚಂಡ, ಮಹಾಕಾಲ, ಭೃಂಗಿ, ವೃಷ, ಸ್ಕಂದ, ಕಪರ್ದೀಶ, ಸೋಮ, ಶುಕ್ರ, ಅವರುಗಳು ಈಶ್ವರನ ಪರಿವಾರ. ಇವರನ್ನು ಕ್ರಮವಾಗಿ ಅರ್ಚಿಸಬೇಕು. ಮುಂಭಾಗದಲ್ಲಿ ವೀರಭದ್ರನನ್ನೂ, ಹಿಂಭಾಗದಲ್ಲಿ ಕೀರ್ತಿಮುಖನನ್ನೂ ಪೂಜಿಸ ಬೇಕು. ಆ ಮೇಲೆ ಏಕಾದಶ ರುದ್ರರನ್ನು ವಿಧಿವತ್ತಾಗಿ ಅರ್ಚಿಸಬೇಕು. ನಂತರ ಶಿವಪಂಚಾಕ್ಷರೀಜಪವನ್ನು ಮಾಡಿ, ಶತರುದ್ರೀಯ ಪಾರಾಯಣವನ್ನು ಮಾಡಿ, ಶಿವನನ್ನು ಸ್ತುತಿಸಿ, ಪ್ರದಕ್ಷಿಣ ನಮಸ್ಕಾರವನ್ನು ಮಾಡಿದ ನಂತರ ಲಿಂಗವನ್ನು ವಿಸರ್ಜಿಸಬೇಕು.

ರಾತ್ರಿಯಲ್ಲಿ ಶುದ್ಧನಾಗಿದ್ದು, ಶಿವಪೂಜೆ ಮತ್ತು ಮಿಕ್ಕ ದೇವರ ಪೂಜೆಗಳನ್ನು ಉತ್ತರಮುಖವಾಗಿ ಕುಳಿತು ಮಾಡಬೇಕು. ಪೂರ್ವದಿಕ್ಕಿಗೂ ಶಂಕರನೆದುರಾಗಿಯೂ ಪಶ್ಚಿಮದಿಕ್ಕಿಗೂ ಬೆನ್ನು ಹಾಕಿಕೊಂಡು ಕುಳಿತುಕೊಳ್ಳಬಾರದು. ಆದುದರಿಂದ ಗ್ರಾಹ್ಯವಾದ ದಿಕ್ಕನ್ನು ಆಶ್ರಯಿಸಬೇಕು. ಭಸ್ಮವನ್ನು ಹಚ್ಚದೆ, ರುದ್ರಾಕ್ಷ ಮಾಲೆಯನ್ನು ಧರಿಸದೆ, ಬಿಲ್ವಪತ್ರಗಳಿಲ್ಲದೆ ಶಿವನನ್ನು ಪೂಜಿಸಬಾರದು. ಭಸ್ಮವು ಎಲ್ಲಿಯೂ ಸಿಗದಿದ್ದರೆ, ಶುದ್ಧವಾದ ಮಣ್ಣಿನಿಂದ ಹಣೆಗೆ ಮೂರು ಪಟ್ಟೆಗಳನ್ನು ಹಚ್ಚಿಕೊಳ್ಳಬೇಕು ಎಂದು ಸೂತಮುನಿ ಹೇಳುವುದರೊಂದಿಗೆ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯುತ್ತದೆ.

# ಕಾಶಿ ವಿಶ್ವನಾಥ ದೇವಾಲಯಕ್ಕೆ ಪ್ರಿಯಾಂಕಾ, ರಾಹುಲ್ ಭೇಟಿ

**ವಾರಾಣಸಿ (ಪಿಟಿಐ):** ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಇಲ್ಲಿಯ ಕಾಶಿ ವಿಶ್ವನಾಥ ದೇವಾಲಯಕ್ಕೆ ಶುಕ್ರವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಏಳನೇ ಹಂತದ ಮತದಾನಕ್ಕೆ ಕೆಲವೇ ದಿನಗಳು ಬಾಕಿ ಇರುವಂತೆ ಅವರು ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ.

ರಾಹುಲ್ ಮತ್ತು ಪ್ರಿಯಾಂಕಾ ಅವರು ವಿಮಾನ ನಿಲ್ದಾಣದಿಂದ ನೇರವಾಗಿ ದೇವಸ್ಥಾನಕ್ಕೆ ಬಂದರು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಕಾಶಿ ವಿಶ್ವನಾಥ ದೇವಾಲಯಕ್ಕೆ ಭೇಟಿ ನೀಡುವ ಕೆಲ ಗಂಟೆಗಳ ಮೊದಲು ರಾಹುಲ್ ಮತ್ತು ಪ್ರಿಯಾಂಕಾ ಅವರು ದೇವಸ್ಥಾನಕ್ಕೆ ಭೇಟಿ ನೀಡಿದರು. ಅದಕ್ಕೂ ಮೊದಲು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಈ ದೇವಸ್ಥಾನಕ್ಕೆ ಭೇಟಿ ನೀಡಿದ್ದರು.

## ಪದಬಂಧ 4888

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಶರೀರ ಇಲ್ಲದವ (3)
3.ಈ ಪರಿ ತಪ್ಪಿಸಿಕೊಳ್ಳುವಿಕೆ! (3)
5.ಸಂಕಟದಿಂದ ಕಟ್ಟದ ತೆರಿಗೆ! (2)
6.ಜಟಕಾ ಬಂಡಿ ಎನಿಸಿರುವ ಜೀವನ (3)
7.ರಿಕಾಪುವನ್ನು ಕದ್ದಿರುವ ಶತ್ರು! (2)
9.ತಿರುಗಿ ನಿಂತು ಹೀಗೆ ನಿಂದಿಸು (2)
11.ಆನಂದದಲ್ಲಿ ಕೊನೆಗೊಳ್ಳು ವಂಥದ್ದು (3)
13.ಹತ್ತಿರ ಸುಳಿಯುತ್ತಿರುವ ಆಕಳು! (2)
14.ಮಲಗುವಾಗ ಕಾಣಿಸಿದ ಚಾರ (3)
15.ಜನ ಒಪ್ಪಿಸಿದ ಕಾಣಿಕೆ (3)

**ಮೇಲಿಂದ ಕೆಳಕ್ಕೆ**

1.ಕಾಗೆಬಂಗಾರ ಇಲ್ಲಿದೆ (3)
2.ಈ ಬಡವ ಹಿಂದಿಯವ! (3)
3.ತಪರಾಕಿ ನಂತರ ಮಾಡಿದ ಹೊಗಳಿಕೆ! (3)
4.ದುರಸ್ತಿಯನ್ನು ಹೀಗೆನ್ನಿ (3)
5.ವರ್ತುಲಾಕಾರವಾಗಿ ಸುತ್ತಿ ಸುತ್ತಿ ಬರುವ ಗಾಳಿ (5)
8.ಈ ರೀತಿ ಮಾತಿನಲ್ಲಿ ನಯವಾಗಿ ಉಬ್ಬಿಸು! (5)
10.ದೊಡ್ಡ ನೌಕೆಯಿದು (3)
11.ಶ್ರೀ ಕೃಷ್ಣನ ಸ್ನೇಹಿತ (3)
12.ತನಯ ಹೀಗೆ ಮಗ್ನ! (3)
13.ಪಚ್ಚೆಯ ಬಣ್ಣ (3)



### 4887ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಪರಮಾವಧಿ
3.ಮೊಸರು
5.ತಲೆಬರಹ
7.ಶಿರ9.ಕುಠಾರ
11.ಭವಿ
13.ವಿಮಾನಯಾನ
15.ವಂತಿಗೆ16.ಆಸೆಬುರುಕ

**ಮೇಲಿಂದ ಕೆಳಕ್ಕೆ:**
1.ಪರದೇಶಿ2.ವನಿತ
4.ಸನಿಹ6.ಬರ್ಬರ
8.ರದ್ದು9.ಕುಲೀನ
10.ಲಾಭ12.ವಿಧ್ವಂಸಕ
13.ವಿನಂತಿ
14.ನಕಾಸೆ

## ಸುಡೊಕು 5274

| | | | | | | | | |
|---|---|---|---|---|---|---|---|---|
| 1 | | 3 | 5 | | 6 | | 4 | 7 |
| | | | | 4 | | | | |
| 7 | | 4 | 9 | | | 5 | | 3 |
| 9 | 1 | | | | | | | 8 |
| | | 7 | | 9 | | | 1 | |
| 5 | 2 | | | | | | | 4 |
| 8 | | 1 | | | | | 6 | |
| | 5 | | 1 | | 4 | 8 | | 9 |
| 4 | | 9 | | 6 | | | 5 | |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5273 ಸುಡೊಕು

| | | | | | | | | |
|---|---|---|---|---|---|---|---|---|
| 3 | 7 | 6 | 8 | 4 | 2 | 5 | 1 | 9 |
| 5 | 1 | 8 | 6 | 3 | 9 | 7 | 4 | 2 |
| 2 | 9 | 4 | 5 | 7 | 1 | 3 | 6 | 8 |
| 7 | 8 | 9 | 1 | 2 | 6 | 4 | 5 | 3 |
| 1 | 2 | 3 | 4 | 9 | 5 | 6 | 8 | 7 |
| 6 | 4 | 5 | 7 | 8 | 3 | 9 | 2 | 1 |
| 8 | 3 | 7 | 2 | 6 | 4 | 1 | 9 | 5 |
| 4 | 5 | 2 | 9 | 1 | 7 | 8 | 3 | 6 |
| 9 | 6 | 1 | 3 | 5 | 8 | 2 | 7 | 4 |

## ಗುಂಡಣ್ಣ


ಇವತ್ತಿನ ಅರ್ಥಶಾಸ್ತ್ರದ ತರಗತಿಯಲ್ಲಿ 'ಸುಲಭವಾಗಿ ಹಣ ಗಳಿಸುವುದು ಹೇಗೆ?' ಈ ವಿಷಯದ ಮೇಲೆ ಪಾಠ ಮಾಡಿದ್ದರು
ಆ ವಿಷಯ ನಿಜಕ್ಕೂ ತುಂಬಾ ಆಸಕ್ತಿದಾಯಕ
ಆದರೆ ಆ ಕ್ಲಾಸ್ ತುಂಬಾನೇ ಬೋರಿಂಗ್ ಆಗಿತ್ತು
'ಗಳಿಸಿದ ಹಣವನ್ನು ಖರ್ಚು ಮಾಡುವುದು ಹೇಗೆ?' ಎಂಬ ವಿಷಯದ ಬಗ್ಗೆ ಪಾಠ ಮಾಡಿದರೆ ಆಸಕ್ತಿ ಇರುತ್ತದೆ
© 2022 by King Features Syndicate, Inc. World Rights reserved
YOUNG & MARSHALL
www.Blondie.com
2-24

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮಾರ್ಚ್ 5, 2022

**ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ-ಶಿಶಿರ ಋತು ಕುಂಭ ಮಾಸದ 21 ನೇ ದಿನ ತಿಥಿ:** (ಫಾಲ್ಗುಣ ಶುಕ್ಲ) ತೃತೀಯ ಗಂ. 20-36 ನಕ್ಷತ್ರ: ರೇವತಿ ಗಂ. 26-29 ಯೋಗ: ಶುಕ್ಲ ಗಂ. 24-35, ಕರಣ: ತೈತಿಲ ಗಂ. 08-35. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-48 ಸೂರ್ಯಾಸ್ತ : 06-36 ಮುಸ್ಲಿಂ ದಿನಾಂಕ : 01 ಶಬನ್ ಅದೃಷ್ಟ ಸಂಖ್ಯೆ: 1, 8

**ಮೇಷ:** ನಿಮ್ಮ ಮೃದುಧೋರಣೆ ಸಿಬ್ಬಂದಿ ವರ್ಗಕ್ಕೆ ಮತ್ತು ಪರಿವಾರಕ್ಕೆ ಆಶ್ಚರ್ಯವೆನಿಸುವುದು. ನಿಮ್ಮ ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ನೀವಾಗಿಯೇ ಅದರ ಫಲವನ್ನು ನಿರೀಕ್ಷಿಸಬೇಡಿ.

**ವೃಷಭ:** ವಾಹನ ಚಾಲನೆ ಅಥವಾ ಕಬ್ಬಿಣ ಕೆಲಸ ಮಾಡುವವರು ಕಾಳಜಿ ವಹಿಸಿ. ವಿದ್ಯಾರ್ಥಿಗಳು ಹೆಚ್ಚಿನ ಅಭ್ಯಾಸ ನಡೆಸುವುದು ಅಗತ್ಯ. ಸತ್ಕಾರ್ಯಗಳಿಂದಾಗಿ ಮನೆಯಲ್ಲಿ ಸಡಗರವಿರುವುದು. ಹಣ್ಣಿನ ವ್ಯಾಪಾರಿಗಳಿಗೆ ಇಂದು ಲಾಭದ ದಿನ.

**ಮಿಥುನ:** ಕೆಲಸ-ಕಾರ್ಯಗಳಲ್ಲಿ ಕಷ್ಟಗಳು ಎದುರಾಗಬಹುದು, ಹಾಗೆಂದು ಕರ್ತವ್ಯ ನಿರ್ಲಕ್ಷಿಸಬೇಡಿ. ಸಹೋದ್ಯೋಗಿಗಳು ಸಹಕಾರ ನೀಡಿದರೂ ಸ್ವಾರ್ಥ ಮನೋಭಾವ ಹೊಂದಿರುತ್ತಾರೆ. ಚಿತ್ರಕಲೆಯಲ್ಲಿರುವ ಉತ್ಸಾಹ ವೃದ್ಧಿ.

**ಕರ್ಕಾಟಕ:** ಮಹಿಳೆಯರಿಗೆ ತನ್ನ ತವರು ಮನೆಯಲ್ಲಿ ನಡೆದ ದುರ್ಘಟನೆಯು ಭಾವುಕರನ್ನಾಗಿ ಮಾಡಲಿದೆ. ಅವಿವೇಕಿಗಳ ನಡುವೆ ವಾದಿಸಲು ಹೋಗಬೇಡಿ. ವಿವೇಕಯುಕ್ತವಾದ ನಡವಳಿಕೆಯು ನಿಮಗೆ ಪ್ರಯೋಜನಗಳನ್ನು ನೀಡುತ್ತದೆ.

**ಸಿಂಹ:** ನಿಮ್ಮಿಂದ ಪ್ರಯೋಜನ ಪಡೆದ, ಜೀವನಾನುಭವ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವರು. ಈ ಘಟನೆಯನ್ನು ನಂಬುವುದು ಕಷ್ಟಕರವಾಗಲಿದೆ. ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಸಮಯ ಕಳೆಯಿರಿ.

**ಕನ್ಯಾ:** ವೈವಾಹಿಕ ಜೀವನದಲ್ಲಿ ನಿಮ್ಮ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ, ಅದು ಅಷ್ಟು ಸುಲಭವಾಗಿ ನಡೆಯುವುದಿಲ್ಲ. ಉನ್ನತ ಅಧಿಕಾರಿಗಳ ಮೇಲಿದ್ದ ತಪ್ಪು ತಿಳಿವಳಿಕೆಗಳು ದೂರಾಗುವುದು.

**ತುಲಾ:** ಧನಾಗಹನಕ್ಕೆ ಹಲವು ರೀತಿಯ ಅವಕಾಶಗಳು ಇದ್ದರೂ, ನಿಮ್ಮ ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆ, ಆತ್ಮವಿಶ್ವಾಸ ಕೂಡ ಅಷ್ಟೇ ಅಗತ್ಯವಿರುತ್ತದೆ. ರಾಜಕೀಯ ವ್ಯಕ್ತಿಗಳಿಗೆ ದುರಹಂಕಾರಿ ಎನ್ನುವ ಪಟ್ಟ ಸಿಗುವ ಲಕ್ಷಣಗಳಿವೆ.

**ವೃಶ್ಚಿಕ:** ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ಕತೆ, ಕವನಗಳ ಬರವಣಿಗೆಯಲ್ಲಿ ಅಥವಾ ಪುಸ್ತಕಗಳ ಅಧ್ಯಯನದಲ್ಲಿ ಹೆಚ್ಚಿನ ಸಮಯ ಕಳೆಯುವಿರಿ.

**ಧನು:** ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸದಿಂದ ಅನುಕೂಲ. ರಚನಾತ್ಮಕ ಕೆಲಸಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದರಿಂದ ಸಂತಸ ಪ್ರಾಪ್ತಿಯಾಗಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ತೃಪ್ತಿಕರ ಆದಾಯವಿದೆ.

**ಮಕರ:** ಅನಿರೀಕ್ಷಿತವಾದ ವರ್ಗಾವಣೆಯಿಂದ ಅನುಕೂಲ. ಕುಟುಂಬದ ಅಭಿವೃದ್ಧಿಗಾಗಿ ಉತ್ತಮ ಯೋಚನೆಗಳು ನಿಮ್ಮೆಡೆಗೆ ಬರಲಿದೆ, ಅದನ್ನು ಪ್ರಯೋಜನಕಾರಿಯಾಗಿ ಉಪಯೋಗಿಸಿಕೊಳ್ಳಿ. ಪ್ರಯಾಣದಿಂದ ಆಯಾಸ.

**ಕುಂಭ:** ನಿಮ್ಮಲ್ಲಿರುವ ಮಾತಿನ ಚತುರತೆಯಿಂದ ನಿಮ್ಮ ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ಅನಿವಾರ್ಯವಾಗಿ ಅಪೇಕ್ಷಿಸುವಂತಹ ಜನರಿಗೆ ಸಹಾಯ ಮಾಡುವುದರಿಂದ ಪುಣ್ಯ ಸಂಪಾದಿಸಬಹುದು.

**ಮೀನ:** ದೈಹಿಕವಾಗಿ ಬಲಾಢ್ಯರಾಗಿರುವ ನಿಮಗೆ ಮಾನಸಿಕವಾಗಿ ಬಹಳ ಹೊಡೆತ ಬೀಳುವ ಸಂಭವ. ಕುಟುಂಬ ವರ್ಗದಲ್ಲಿ ಆರೋಗ್ಯ ಉತ್ತಮವಾಗಿರುವುದು. ವಾರ್ಷಿಕವಾಗಿ ಮಾಡುವ ದೇವತಾ ಕಾರ್ಯಗಳತ್ತ ಗಮನವನ್ನು ನೀಡಿ.

## ದಿನದ ಬೆಳವಣಿಗೆಗಳು

- ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿದ್ದ 369 ಭಾರತೀಯರನ್ನು ಎರಡು ಏರ್ ಇಂಡಿಯಾ ವಿಮಾನಗಳು ಬುಕಾರೆಸ್ಟ್, ಬುಡಾಪೆಸ್ಟ್ ಮೂಲಕ ಶುಕ್ರವಾರ ಸ್ವದೇಶಕ್ಕೆ ಕರೆತಂದಿವೆ–ವಿದೇಶಾಂಗ ಸಚಿವಾಲಯ
- ಯುದ್ಧಪೀಡಿತ ಉಕ್ರೇನ್‌ನಿಂದ 48 ವಿಮಾನಗಳಲ್ಲಿ 10300 ಭಾರತೀಯರನ್ನು ವಾಪಸ್ ಕರೆತರಲಾಗಿದೆ– ವಿದೇಶಾಂಗ ಸಚಿವಾಲಯ
- ಉಕ್ರೇನ್‌ನ ಪೂರ್ವಭಾಗದ ನಗರಗಳಲ್ಲಿ ಸಿಲುಕಿರುವ ಭಾರತೀಯರನ್ನು ರಷ್ಯಾದಿಂದ ಸ್ಥಳಾಂತರಿಸುವ ಕಾರ್ಯಕ್ಕಾಗಿ ವಾಯುಪಡೆಯು ಸರಕು ಸಾಗಣೆಗೆ ಬಳಸುವ ಎರಡು ‘ಐಎಲ್–76’ ವಿಮಾನಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ
- ಉಕ್ರೇನ್‌ನಲ್ಲಿ ರಷ್ಯಾ ಪಡೆಗಳು ಪರಮಾಣು ವಿದ್ಯುತ್ ಮೂಲಸೌಕರ್ಯ ವಶಪಡಿಸಿಕೊಂಡಿರುವುದನ್ನು ವಿರೋಧಿಸಿ ಪ್ರತಿಭಟಿಸುವಂತೆ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ, ರಷ್ಯಾ ಜನತೆಗೆ ಮನವಿ ಮಾಡಿದ್ದಾರೆ
- ಉಕ್ರೇನ್‌ನ ಸಶಸ್ತ್ರ ಪಡೆಗಳು ಮೈಕೊಲೈವ್ ಪ್ರದೇಶದಲ್ಲಿ ರಷ್ಯಾದ ಸ್ವಯಂ ಚಾಲಿತ ವಿಮಾನ ನಿಗ್ರಹ (ಪ್ಯಾಂಟ್ಸರ್–ಸಿ1) ಕ್ಷಿಪಣಿ ವಾಹನ ವಶಪಡಿಸಿಕೊಂಡಿವೆ
- ಅಮೆರಿಕದಲ್ಲಿರುವ ಉಕ್ರೇನ್ ಪ್ರಜೆಗಳಿಗೆ ಮಾನವೀಯ ನೆಲೆಯಲ್ಲಿ ನೆರವು ನೀಡುವುದಾಗಿ ಅಧ್ಯಕ್ಷ ಜೋ ಬೈಡೆನ್ ಸರ್ಕಾರ ಘೋಷಣೆ
- ರಷ್ಯಾ-ಉಕ್ರೇನ್ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಯಿತು
- ‘ರಷ್ಯಾದವರೇ ಯಾರಾದರೂ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಹತ್ಯೆ ಮಾಡಬೇಕು’ ಎಂದು ಅಮೆರಿಕ ಸೆನೆಟ್‌ನ ರಿಪಬ್ಲಿಕನ್ ಪಕ್ಷದ ಸದಸ್ಯ ಲಿಂಡ್ಸೆ ಗ್ರಹಾಂ ಹೇಳಿಕೆ
- ಉಕ್ರೇನ್ ಬಿಕ್ಕಟ್ಟಿನಲ್ಲಿ ಭಾರತ ರಷ್ಯಾ ಪರವಿರಲಿದೆ ಎಂದು ಅಮೆರಿಕ ಭಾವಿಸುವುದಿಲ್ಲ– ಅಮೆರಿಕದ ಉನ್ನತ ರಾಜತಾಂತ್ರಿಕ ಅಧಿಕಾರಿ ಪ್ಯಾಟ್ರಿಶಿಯಲ್ ಲ್ಯಾಸಿನಾ ಹೇಳಿಕೆ
- ಆಕ್ರಮಣದ ವೇಳೆ ರಷ್ಯಾ ಸೈನಿಕರು ಉಕ್ರೇನ್‌ನ ನಗರಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಎಸಗುತ್ತಿದ್ದಾರೆ– ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಹೇಳಿಕೆ
- ಉಕ್ರೇನ್ ವಾಯು ಪ್ರದೇಶವನ್ನು ವಿಮಾನ ಹಾರಾಟ ನಿಷೇಧ ವಲಯವೆಂದು ಘೋಷಿಸುವಂತೆ ಝೆಲೆನ್‌ಸ್ಕಿ ಇಟ್ಟಿರುವ ಬೇಡಿಕೆ ತಿರಸ್ಕರಿಸಿದ ನ್ಯಾಟೊ

### ಉಕ್ರೇನ್‌ನಿಂದ ಹಿಂದಿರುಗಿದ ವೈದ್ಯ ವಿದ್ಯಾರ್ಥಿಗಳ ಶಿಕ್ಷಣದ ಭವಿಷ್ಯ: ಶೀಘ್ರದಲ್ಲೇ ಮಹತ್ವದ ಸಭೆ

# ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪರ್ಯಾಯ ಮಾರ್ಗ?

ನವದೆಹಲಿ (ಪಿಟಿಐ): ಉಕ್ರೇನ್‌ನಿಂದ ವಾಪಸಾಗಿರುವ ವಿದ್ಯಾರ್ಥಿಗಳು ವೈದ್ಯಕೀಯ ಕೋರ್ಸ್ ಅನ್ನು ದೇಶದಲ್ಲಿ ಅಥವಾ ಅನ್ಯ ವಿದೇಶದಲ್ಲಿ ಪೂರ್ಣಗೊಳಿಸಲು ಅವಕಾಶ ಕಲ್ಪಿಸುವ ಕುರಿತು ಚಿಂತನೆ ನಡೆದಿದೆ.

ಪರ್ಯಾಯ ಮಾರ್ಗಗಳತ್ತ ಕೇಂದ್ರ ಆರೋಗ್ಯ ಸಚಿವಾಲಯ ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಚರ್ಚೆ ಆರಂಭಿಸಿದ್ದು, ಪೂರಕವಾಗಿ ಸದ್ಯ ಇರುವ ನಿಯಮಗಳನ್ನು ಸಡಿಲಗೊಳಿಸುವ ಸಾಧ್ಯತೆಗಳನ್ನೂ ಪರಿಶೀಲಿಸುತ್ತಿದೆ.

ಎನ್‌ಎಂಸಿ, ಆರೋಗ್ಯ ಸಚಿವಾಲಯ, ವಿದೇಶಾಂಗ ಸಚಿವಾಲಯ ಮತ್ತು ನೀತಿ ಆಯೋಗದ ಅಧಿಕಾರಿಗಳು ಈ ವಿಷಯವನ್ನು ಚರ್ಚಿಸಲು ಶೀಘ್ರದಲ್ಲಿಯೇ ಮಹತ್ವದ ಸಭೆಯನ್ನು ನಡೆಸಲಿದ್ದಾರೆ. ಈಗ ಎದುರಾಗಿರುವ ವಿಶೇಷ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮಾನವೀಯತೆ ಮತ್ತು ಅನುಕಂಪದ ಆಧಾರದಲ್ಲಿ ಈ ಅಂಶವನ್ನು ಪರಿಶೀಲಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

**ಚರ್ಚೆ ಆರಂಭ:** ‘ಎನ್‌ಎಂಸಿ (ವಿದೇಶಿ ವೈದ್ಯ ಪದವಿ ಪರವಾನಗಿ) ನಿಯಮಗಳು 2021’ ಅನ್ನು ಸಡಿಲಿಸುವ ಸಾಧ್ಯತೆಗಳ ಕುರಿತು ಆರೋಗ್ಯ ಸಚಿವಾಲಯ ಮತ್ತು ಎನ್‌ಎಂಸಿ ಈಗಾಗಲೇ ಚರ್ಚೆಯನ್ನು ಆರಂಭಿಸಿವೆ ಎಂದು ತಿಳಿಸಿವೆ.

ಉಕ್ರೇನ್ ಬೆಳವಣಿಗೆಯಿಂದಾಗಿ ಬಾಧಿತರಾಗಿರುವ ಭಾರತೀಯ ವಿದ್ಯಾರ್ಥಿಗಳು ತಮ್ಮ ಕೋರ್ಸ್ ಅನ್ನು ಸ್ಥಳೀಯವಾಗಿ ಖಾಸಗಿ ಕಾಲೇಜುಗಳಲ್ಲಿ ಪೂರ್ಣಗೊಳಿಸಲು ಅಥವಾ ಬೇರೆ ವಿದೇಶವೊಂದರ ಕಾಲೇಜಿಗೆ ಪ್ರವೇಶವನ್ನು ವರ್ಗಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಸಾಧ್ಯತೆಗಳ ಕುರಿತಂತೆಯೂ ಚಿಂತನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಪರ್ಯಾಯ ಮಾರ್ಗಗಳನ್ನು ಹುಡುಕಲು ಹೆಚ್ಚು ಚಿಂತನೆ ನಡೆಸಬೇಕಾದ ಹಾಗೂ ವಿಸ್ತೃತವಾಗಿ ಚರ್ಚೆಯನ್ನು ನಡೆಸಬೇಕಾಗಿರುವ ಅಗತ್ಯವಿದೆ. ಈಗಿನ ಸಂದರ್ಭ ಗಮನದಲ್ಲಿಟ್ಟುಕೊಂಡೇ ಈ ಎಲ್ಲ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು ಎಂದು ವಿವರಿಸಿವೆ.

ರಾಷ್ಟ್ರೀಯ ವೈದ್ಯಕೀಯ ಆಯೋಗ (ವಿದೇಶಾಂಗ ವೈದ್ಯಕೀಯ ಪದವಿ ಪರವಾನಗಿ) 2021ರಂತೆ, ವಿದ್ಯಾರ್ಥಿಗಳು ತರಬೇತಿ, ಇಂಟರ್ನ್‌ಶಿಪ್ ಸೇರಿದಂತೆ ಇಡೀ ಕೋರ್ಸ್ ಅನ್ನು ವಿದೇಶದ ಒಂದೇ ಸಂಸ್ಥೆಯಿಂದ ಪೂರ್ಣಗೊಳಿಸುವುದು ಕಡ್ಡಾಯ. ಭಾಗಶಃ ಇಂಟರ್ನ್‌ಶಿಪ್ ಅಥವಾ ತರಬೇತಿಯನ್ನು ಭಾರತ ಅಥವಾ ಇನ್ನಾವುದೇ ದೇಶದಲ್ಲಿ ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲ.

ಉಕ್ರೇನ್‌ನಲ್ಲಿ ಸದ್ಯ ಆರು ವರ್ಷದ ಎಂಬಿಬಿಎಸ್ ಕೋರ್ಸ್ ಮತ್ತು ಎರಡು ವರ್ಷದ ಇಂಟರ್ನ್‌ಶಿಪ್ ಕಾರ್ಯಕ್ರಮ ಇದೆ. ಭಾರತದಲ್ಲಿನ ಖಾಸಗಿ ವೈದ್ಯಕೀಯ ಕಾಲೇಜುಗಳ ಶುಲ್ಕಕ್ಕೆ ಹೋಲಿಸಿದರೆ, ಇಲ್ಲಿ ಶಿಕ್ಷಣ ಕೈಗೆಟುಕುವ ದರದಲ್ಲಿ ಇದೆ. ಸಾವಿರಾರು ವಿದ್ಯಾರ್ಥಿಗಳು ಉಕ್ರೇನ್‌ಗೆ ವೈದ್ಯಕೀಯ ಶಿಕ್ಷಣಕ್ಕಾಗಿ ತೆರಳಿದ್ದು, ಅವರ ಶಿಕ್ಷಣದ ಭವಿಷ್ಯ ಈಗ ಅಡಕತ್ತರಿಯಲ್ಲಿ ಸಿಕ್ಕಂತಾಗಿದೆ.

## ಸುಮಿ: ವಿದ್ಯಾರ್ಥಿಗಳ ರಕ್ಷಣೆಗೆ ಮೊರೆ

**ನವದೆಹಲಿ:** ‘ರಷ್ಯಾದ ಗಡಿಗೆ ಪ್ರಯಾಣಿಸಲು ಉಕ್ರೇನ್ ಸರ್ಕಾರ ಅವಕಾಶ ನೀಡುತ್ತಿಲ್ಲ. ದಯವಿಟ್ಟು ನಿಮ್ಮ ಕೈಲಾದಷ್ಟು ಸಹಾಯ ಮಾಡಿ. ಇಲ್ಲದಿದ್ದರೆ ನಮ್ಮ ಸಾವು ಖಚಿತ’ ಎಂದು ಈಶಾನ್ಯ ಉಕ್ರೇನ್‌ನ ಸುಮಿ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಸಿಲುಕಿಕೊಂಡಿರುವ ಸುಮಾರು 700 ಭಾರತೀಯ ವಿದ್ಯಾರ್ಥಿಗಳು ರಕ್ಷಣೆಗೆ ಮೊರೆ ಇಟ್ಟಿದ್ದಾರೆ.

‘ನಮ್ಮಲ್ಲಿರುವ ಕುಡಿಯುವ ನೀರು ಖಾಲಿಯಾಗುತ್ತಿದೆ. ಈ ಪ್ರದೇಶದಲ್ಲಿ ವಿದ್ಯುತ್ ಸಂಪರ್ಕ ಕೂಡ ಕಡಿತಗೊಂಡಿದೆ’ ಎಂದು ಬಂಕರ್‌ನಲ್ಲಿ ಆಶ್ರಯ ಪಡೆದಿರುವ ಎಂಬಿಬಿಎಸ್ ವಿದ್ಯಾರ್ಥಿಗಳಾದ ಅಂಜೀನಾ ನೌಶಾದ್, ರೈಫಾ ಫಾತಿಮಾ ಮತ್ತು ಶಬ್ನಾ ಆಶಿಕ್ ತಿಳಿಸಿದ್ದಾರೆ.

‘ಸುಮಿ ಸ್ಟೇಟ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು 90 ನಿಮಿಷಗಳ ಪ್ರಯಾಣ ಮಾಡಿದರೆ ರಷ್ಯಾ ಗಡಿಗೆ ತಲುಪಬಹುದು. ಅಲ್ಲಿ ಬಸ್‌ಗಳೂ ಸಿದ್ಧಗೊಂಡಿವೆ, ಆದರೆ ವಿಶ್ವವಿದ್ಯಾಲಯದ ಆವರಣದಿಂದ ಹೊರಬರಲು ಅವಕಾಶ ನೀಡುತ್ತಿಲ್ಲ’ ಎಂದೂ ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

‘ಸುಮಿಯಲ್ಲಿ ಅಂದಾಜು 700ರಿಂದ 800 ವಿದ್ಯಾರ್ಥಿಗಳು ಸಿಲುಕಿಕೊಂಡಿದ್ದಾರೆ. ಸ್ಥಳಾಂತರದ ಬಗ್ಗೆ ನಮಗೆ ಯಾವುದೇ ಸೂಚನೆ ಲಭಿಸಿಲ್ಲ. ನಾವು ಭರವಸೆ ಕಳೆದುಕೊಂಡಿದ್ದೇವೆ’ ಎಂದು ವೈದ್ಯ ವಿದ್ಯಾರ್ಥಿನಿ ರಾಧಿಕಾ ಸಂಗ್ವಾನ್ ಎಂಬುವವರು ಟ್ವೀಟ್ ಮಾಡಿದ್ದಾರೆ.

## ಸಿಲುಕಿಕೊಂಡವರ ಆತಂಕ ಅರ್ಥ ಮಾಡಿಕೊಳ್ಳಿ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

**ನವದೆಹಲಿ:** ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರ ಆತಂಕದ ಬಗ್ಗೆಯೂ ಯೋಚಿಸಿ ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಶುಕ್ರವಾರ ಹೇಳಿತು.

ಉಕ್ರೇನ್‌ನಿಂದ ಭಾರತೀಯರನ್ನು ತೆರವುಗೊಳಿಸುತ್ತಿರುವ ಕಾರ್ಯಾಚರಣೆ ಕುರಿತು ಮಾಹಿತಿ ನೀಡಿದ ಕೇಂದ್ರ ಸರ್ಕಾರಕ್ಕೆ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ಈ ಮಾತುಗಳನ್ನು ಹೇಳಿತು.

‘ಈ ಹಿಂದೆ ನಡೆದ ಯುದ್ಧ ಹಾಗೂ ಇತರ ಸಂಘರ್ಷದಂತಹ ಸನ್ನಿವೇಶಗಳಿಂದ ನಾವು ಪಾಠ ಕಲಿತಿಲ್ಲ ಎಂಬುದು ದುರದೃಷ್ಟಕರ. ಈ ಬಗ್ಗೆ ಹೆಚ್ಚಿಗೆ ಏನೂ ಹೇಳುವುದಿಲ್ಲ. ಆದರೆ, ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳ ಪಾಲಕರಲ್ಲಿ ಆತಂಕ ಮನೆ ಮಾಡಿದೆ’ ಎಂದು ಪೀಠ ಹೇಳಿತು.

ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರೂ ನ್ಯಾಯಪೀಠದಲ್ಲಿದ್ದರು.

ಇದಕ್ಕೂ ಮುನ್ನ, ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು, ‘ಉಕ್ರೇನ್‌ನ ಯುದ್ಧ ವಲಯದಿಂದ ಈವರೆಗೆ 17,000 ವಿದ್ಯಾರ್ಥಿಗಳನ್ನು ಕರೆತರಲಾಗಿದೆ. ಇನ್ನೂ 7 ಸಾವಿರ ಮಂದಿ ಅಲ್ಲಿ ಸಿಲುಕಿದ್ದಾರೆ’ ಎಂಬ ಮಾಹಿತಿಯನ್ನು ಪೀಠಕ್ಕೆ ತಿಳಿಸಿದರು.

ವಿದ್ಯಾರ್ಥಿಗಳ ಸ್ಥಳಾಂತರ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮವನ್ನು ಶ್ಲಾಘಿಸಿದ ಪೀಠ, ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳು ಮತ್ತು ಭಾರತದಲ್ಲಿರುವ ಅವರ ಪೋಷಕರಿಗಾಗಿ ‘ಆನ್‌ಲೈನ್ ಸಹಾಯವಾಣಿ’ ಆರಂಭಿಸುವ ಕುರಿತು ಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

ವಿದ್ಯಾರ್ಥಿಗಳನ್ನು ಭಾರತಕ್ಕೆ ಕರೆತರುವ ವಿಷಯಗಳ ಅರ್ಜಿಗಳಿಗೆ ಸಂಬಂಧಿಸಿ ಆದೇಶಗಳನ್ನು ಹೊರಡಿಸದಂತೆ ಎಲ್ಲ ಹೈಕೋರ್ಟ್‌ಗಳಿಗೆ ತಿಳಿಸುವಂತೆ ಸೂಚಿಸಿದ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಮಾರ್ಚ್ 11ಕ್ಕೆ ಮುಂದೂಡಿತು.

## ಯುದ್ಧ ಜ್ವಾಲೆ...

ಉಕ್ರೇನ್‌ನ ರಾಜಧಾನಿ ಕೀವ್ ಹೊರ ವಲಯದ ಇರ್ಪಿನ್ ನಗರದಲ್ಲಿ ರಷ್ಯಾ ಪಡೆಯ ಶೆಲ್ ದಾಳಿಗೆ ಮನೆ ಹೊತ್ತಿ ಉರಿಯಿತು. ನೆಲೆ ಕಳೆದುಕೊಂಡ ನಿರಾಶ್ರಿತ ವ್ಯಕ್ತಿ ಆಸರೆ ಅರಸಿ ವಲಸೆ ಹೊರಟಿರುವುದು – ಎಎಫ್‌ಪಿ ಚಿತ್ರ

### ಹಾನಿಯಿಂದ ವಿಕಿರಣ ಸೋರುವಿಕೆ ಆತಂಕ ಸದ್ಯ ನಿವಾರಣೆ

# ಅಣು ವಿದ್ಯುತ್ ಸ್ಥಾವರದ ಮೇಲೆ ಶೆಲ್ ದಾಳಿ

ಕೀವ್, ವಿಯೆನ್ನಾ, ಮಾಸ್ಕೊ, ಬ್ರುಸೆಲ್ಸ್ (ರಾಯಿಟರ್ಸ್/ ಎಎಫ್‌ಪಿ/ ಎಪಿ): ಉಕ್ರೇನ್ ಮೇಲೆ ರಷ್ಯಾದ ಆಕ್ರಮಣ ಮುಂದುವರಿದಿದ್ದು, ಶುಕ್ರವಾರ ಬೆಳಗಿನ ಜಾವ ರಷ್ಯಾ ಪಡೆ ನಡೆಸಿದ ಶೆಲ್‌ದಾಳಿಯಿಂದ ಝುಪೋರಿಝಿಯಾದಲ್ಲಿರುವ ಯುರೋಪ್‌ನ ಅತಿದೊಡ್ಡ ಪರಮಾಣು ವಿದ್ಯುತ್ ಸ್ಥಾವರದಲ್ಲಿ ಬೆಂಕಿ ಹೊತ್ತಿಕೊಂಡಿದೆ. ರಷ್ಯಾ ಪಡೆಗಳು ಈ ಸ್ಥಾವರ ನಿಯಂತ್ರಣಕ್ಕೆ ತೆಗೆದುಕೊಂಡಿವೆ.

‘ಶೆಲ್ ದಾಳಿಯಿಂದ ಸ್ಥಾವರದ ತರಬೇತಿ ಕಟ್ಟಡ ಮತ್ತು ಪ್ರಯೋಗಾಲಯ ಮಾತ್ರ ಬೆಂಕಿಗೆ ಆಹುತಿಯಾಗಿದೆ ಎಂದು ಸ್ಥಾವರದ ನಿರ್ವಾಹಕರು ಹೇಳಿದ್ದಾರೆ’ ಎಂದು ಝುಪೋರಿಝಿಯಾದ ಮಿಲಿಟರಿ ಆಡಳಿತದ ಮುಖ್ಯಸ್ಥ ಒಲೆಕ್ಸಾಂಡರ್ ಸ್ಟಾರುಖ್ ಮಾಹಿತಿ ನೀಡಿದ್ದಾರೆ.

ಸ್ಥಾವರದಲ್ಲಿ ವಿಕಿರಣ ಸೋರಿಕೆಯಾಗುತ್ತಿಲ್ಲ ಎಂದು ಉಕ್ರೇನ್‌ನ ಪರಮಾಣು ನಿಯಂತ್ರಕ ತಿಳಿಸಿರುವುದಾಗಿ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಏಜೆನ್ಸಿ(ಐಎಇಎ) ಟ್ವಿಟರ್‌ನಲ್ಲಿ ತಿಳಿಸಿದೆ.

ಈ ಮೂಲಕ ಜಗತ್ತು ಸದ್ಯ ಸಮಾಧಾನದ ನಿಟ್ಟುಸಿರು ಬಿಟ್ಟಿದೆ.

‘ರಷ್ಯಾದ ಶೆಲ್ ದಾಳಿಯಿಂದ ಐದು ಅಂತಸ್ತಿನ ಕಟ್ಟಡಕ್ಕೆ ಬೆಂಕಿ ಬಿದ್ದಿದೆ. ಸದ್ಯ ಬೆಂಕಿಯನ್ನು ನಂದಿಸಲಾಗಿದೆ. ಯುರೋಪಿನ ಅತ್ಯಂತ ದೊಡ್ಡ ಅಣು ವಿದ್ಯುತ್ ಸ್ಥಾವರವನ್ನು ರಷ್ಯಾ ಪಡೆಗಳು ವಶಪಡಿಸಿಕೊಂಡಿರುವುದರಿಂದ ದೊಡ್ಡ ಅಣು ವಿಪತ್ತಿನ ಅಪಾಯ ಎದುರಾಗಿದೆ’ ಎಂದು ಉಕ್ರೇನ್ ಹೇಳಿದೆ.

‘ಎನರ್‌ಹೋಡರ್‌ನಲ್ಲಿರುವ ನಗರದ ಝುಪೋರಿಝಿಯಾದಲ್ಲಿರುವ ಸ್ಥಾವರದಲ್ಲಿ ವಿಕಿರಣ ಹೊರಸೂಸುವಿಕೆ ಮಟ್ಟದಲ್ಲಿ ಯಾವುದೇ ಬದಲಾವಣೆಗಳು ಈವರೆಗೆ ಕಂಡುಬಂದಿಲ್ಲ. ಸ್ಥಾವರದ ರಿಯಾಕ್ಟರ್ 1ನೇ ವಿಭಾಗದಲ್ಲಿ ಆಗಿರುವ ಹಾನಿ ಪರಿಶೀಲಿಸಲು ಸಿಬ್ಬಂದಿ ಕಾರ್ಯನಿರತರಾಗಿದ್ದಾರೆ. ಪರಮಾಣು ಇಂಧನ ಸಂಗ್ರಹಾಗಾರಕ್ಕೆ ಯಾವುದೇ ಹಾನಿಯಾದ ಲಕ್ಷಣ ಕಾಣಿಸಿಲ್ಲ’ ಎಂದು ಉಕ್ರೇನ್ ಪರಮಾಣು ನಿಯಂತ್ರಕ ಅಧಿಕಾರಿಗಳು ಹೇಳಿದ್ದಾರೆ.

‘ಪರಮಾಣು ಇಂಧನ ತಂಪಾಗಿಸುವ ಸಾಮರ್ಥ್ಯದ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಒಂದು ವೇಳೆ ಇಂತಹ ಸಾಮರ್ಥ್ಯವನ್ನು ಸ್ಥಾವರವು ಹಾನಿಯಿಂದ ಕಳೆದುಕೊಂಡರೆ 1986ರ ಚೆರ್ನೊಬಿಲ್ ದುರಂತ ಅಥವಾ 2011ರಲ್ಲಿ ಭೂಕಂಪ -ಮತ್ತು ಸುನಾಮಿಯಿಂದ ಜಪಾನ್‌ನ ಫುಕುಶಿಮಾ ಅಣು ವಿದ್ಯುತ್ ಸ್ಥಾವರದಲ್ಲಿ ಉಂಟಾದ ವಿಕಿರಣ ಸೋರುವಿಕೆಗಿಂತಲೂ ಭೀಕರ ದುರಂತಕ್ಕೆ ವಿಶ್ವ ಸಾಕ್ಷಿಯಾಗಲಿದೆ’ ಎಂದು ಅಧಿಕಾರಿಗಳು ‘ಫೇಸ್‌ಬುಕ್’ಗೆ ಹೇಳಿಕೆ ನೀಡಿದ್ದಾರೆ.

ಸ್ಥಾವರದ ಮೇಲೆ ದಾಳಿ ಆರಂಭವಾಗುತ್ತಿದ್ದಂತೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಅಮೆರಿಕ ಅಧ್ಯಕ್ಷ ಜೊ ಬೈಡನ್ ಅವರು ದೂರವಾಣಿಯಲ್ಲಿ ಚರ್ಚೆ ನಡೆಸಿದರು.

‘ಚೆರ್ನೊಬಿಲ್ ದುರಂತ ಮರುಕಳಿಸಬೇಕೆಂದು ರಷ್ಯಾ ಬಯಸುತ್ತಿದೆ. ಅದು ಅಣು ಭಯೋತ್ಪಾದನೆ ನಡೆಸುತ್ತಿದೆ’ ಎಂದು ಝೆಲೆನ್‌ಸ್ಕಿ ಇದೇ ಸಂದರ್ಭ ಆಕ್ರೋಶ ವ್ಯಕ್ತಪಡಿಸಿದರು.

**ದಾಳಿ ನಿಲ್ಲಿಸಲು ಮನವಿ:** ಪರಮಾಣು ಸ್ಥಾವರಗಳ ಮೇಲೆ ದಾಳಿ ನಡೆಸುವುದನ್ನು ತಕ್ಷಣ ನಿಲ್ಲಿಸುವಂತೆ ರಷ್ಯಾಗೆ ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಮನವಿ ಮಾಡಿದ್ದಾರೆ.

‘ಈ ಸ್ಥಾವರ ಸ್ಫೋಟಗೊಂಡರೆ ಚೆರ್ನೊಬಿಲ್ ದುರಂತಕ್ಕಿಂತಲೂ ಹತ್ತುಪಟ್ಟು ದೊಡ್ಡ ದುರಂತ ಸಂಭವಿಸಲಿದೆ. ಸ್ಥಾವರದ ಬೆಂಕಿ ನಂದಿಸಲು ಅಗ್ನಿಶಾಮಕ ಪಡೆಗೆ ಅವಕಾಶ ನೀಡಬೇಕು’ ಎಂದು ಕುಲೆಬಾ ಟ್ವಿಟರ್‌ನಲ್ಲಿ ಮನವಿ ಮಾಡಿದ್ದಾರೆ.

1986ರ ಚೆರ್ನೊಬಿಲ್ ದುರಂತದ ಪ್ರದೇಶವೂ ಸೇರಿ ಉಕ್ರೇನ್‌ನ ಪರಮಾಣು ವಿದ್ಯುತ್ ಘಟಕಗಳ ಮೇಲೆ ಎಲ್ಲ ಬಗೆಯ ದಾಳಿಗಳನ್ನು ನಿಲ್ಲಿಸುವಂತೆ ರಷ್ಯಾಗೆ ಈಗಾಗಲೇ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಏಜೆನ್ಸಿ (ಐಎಇಎ) ಒತ್ತಾಯಿಸಿದೆ.

ಉಕ್ರೇನ್‌ನಲ್ಲಿ ಪರಮಾಣು ವಿದ್ಯುತ್ ಸ್ಥಾವರದ ಮೇಲೆ ರಷ್ಯಾ ಪಡೆಗಳು ನಡೆಸಿರುವ ಶೆಲ್ ದಾಳಿಯನ್ನು ಖಂಡಿಸಿರುವ ನ್ಯಾಟೊ, ‘ಇದು ರಷ್ಯಾದ ಬೇಜವಾಬ್ದಾರಿತನದ ನಡೆ’ ಎಂದು ಕಿಡಿಕಾರಿದೆ.

**‘ಉಕ್ರೇನ್ ವಿಧ್ವಂಸಕರಿಂದ ದಾಳಿ’:** ‘ಪರಮಾಣು ವಿದ್ಯುತ್ ಸ್ಥಾವರದ ಮೇಲೆ ಉಕ್ರೇನ್ ವಿಧ್ವಂಸಕರು ದಾಳಿ ನಡೆಸಿದ್ದಾರೆ. ಇದೊಂದು ರಾಕ್ಷಸೀಯ ಪ್ರಚೋದನೆ’ ಎಂದು ರಷ್ಯಾ ಆರೋಪಿಸಿದೆ.

‘ಕಳೆದ ರಾತ್ರಿ ವಿದ್ಯುತ್ ಸ್ಥಾವರದ ಪಕ್ಕದ ಭೂಪ್ರದೇಶದಲ್ಲಿ ದಾಳಿ ನಡೆಸಿರುವ ಕೀವ್‌ನ ರಾಷ್ಟ್ರೀಯತಾವಾದಿ ಆಡಳಿತವು ರಾಕ್ಷಸೀಯ ಪ್ರಚೋದನೆ ನೀಡಲು ಪ್ರಯತ್ನಿಸಿದೆ. ಪರಮಾಣು ಸ್ಥಾವರ ಎಂದಿನಂತೆ ಕಾರ್ಯನಿರ್ವಹಿಸುತ್ತಿದೆ. ಫೆ.28ರಿಂದಲೂ ಈ ಪ್ರದೇಶವು ರಷ್ಯಾದ ನಿಯಂತ್ರಣದಲ್ಲಿದೆ’ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಇಗೊರ್ ಕೊನಾಶೆಂಕೋವ್ ಹೇಳಿದ್ದಾರೆ.



ಉಕ್ರೇನ್‌ನ ಎನೆರ್‌ಹೋಡರ್‌ನಲ್ಲಿರುವ ಝುಪೋರಿಝಿಯಾ ಪರಮಾಣು ವಿದ್ಯುತ್ ಉತ್ಪಾದನೆ ಸ್ಥಾವರದ ಪ್ರಯೋಗಾಲಯ ಕಟ್ಟಡ ರಷ್ಯಾ ಪಡೆ ಶುಕ್ರವಾರ ನಸುಕಿನಲ್ಲಿ ನಡೆಸಿದ ಶೆಲ್ ದಾಳಿಯಿಂದ ಹೊತ್ತಿ ಉರಿಯಿತು – ಎಪಿ/ಪಿಟಿಐ ಚಿತ್ರ

### ಸ್ಥಾವರದ ವಿಶೇಷತೆ ಏನು?

- 2014ರಲ್ಲಿ ರಷ್ಯಾ ನಿಯಂತ್ರಣದಲ್ಲಿರುವ ಕ್ರಿಮಿಯಾದಿಂದ ಇದು 200 ಕಿ.ಮೀ. ದೂರದಲ್ಲಿದೆ
- ಉಕ್ರೇನಿನಲ್ಲಿರುವ ನಾಲ್ಕು ಅಣು ವಿದ್ಯುತ್ ಸ್ಥಾವರಗಳಲ್ಲೇ ಇದು ಅತ್ಯಂತ ದೊಡ್ಡದು
- ಈ ಸ್ಥಾವರ ಉಕ್ರೇನ್‌ನ ಶೇ 50ರಷ್ಟು ವಿದ್ಯುತ್ ಪೂರೈಸುತ್ತದೆ
- ಇಷ್ಟೊಂದು ದೊಡ್ಡ ಪರಮಾಣು ಶಕ್ತಿ ಯೋಜನೆಯ ಸ್ಥಾವರ ಮೊದಲ ಬಾರಿಗೆ ಯುದ್ಧದಿಂದ ಹಾನಿಗೊಳಗಾಗಿದೆ– ಐಎಇಎ ಹೇಳಿಕೆ
- ತಲಾ 950 ಮೆಗಾವಾಟ್ (ಒಟ್ಟು 5.7 ಗಿಗಾ ವಾಟ್) ವಿದ್ಯುತ್ ಉತ್ಪಾದಿಸುವ 6 ಘಟಕಗಳು ಇಲ್ಲಿವೆ– ಐಎಇಎ
- 1ನೇ ಘಟಕ ಕಾರ್ಯ ಸ್ಥಗಿತಗೊಳಿಸಿದೆ
- 2 ಮತ್ತು 3ನೇ ಘಟಕಗಳು ಗ್ರಿಡ್‌ನಿಂದ ಸಂಪರ್ಕ ಕಡಿದುಕೊಂಡಿವೆ. ಇಂಧನ ತಣಿಸಲು ಪ್ರಕ್ರಿಯೆ ನಡೆಯುತ್ತಿದೆ
- 4ನೇ ಘಟಕ ಕಾರ್ಯನಿರ್ವಹಿಸುತ್ತಿದ್ದು, 690 ಮೆಗಾ ವಾಟ್ ವಿದ್ಯುತ್ ಉತ್ಪಾದಿಸುತ್ತಿದೆ
- 5 ಮತ್ತು 6 ನೇ ಘಟಕಗಳನ್ನು ತಂಪುಗೊಳಿಸಲಾಗುತ್ತಿದೆ
- ಇದರ ಮೊದಲ ಘಟಕ 1984ರಲ್ಲಿ ಮತ್ತು ಆರನೇ ಘಟಕ 1995ರಲ್ಲಿ ಕಾರ್ಯಾರಂಭ ಮಾಡಿದೆ.

# ಭಾರತ ಮತ್ತೆ ತಟಸ್ಥ ನಿಲುವು

ಜಿನೀವಾ/ ವಿಶ್ವಸಂಸ್ಥೆ (ಪಿಟಿಐ): ಉಕ್ರೇನ್‌ನಲ್ಲಿ ರಷ್ಯಾ ನಡೆಸುತ್ತಿರುವ ಆಕ್ರಮಣದಲ್ಲಿನ ಹಿಂಸಾಚಾರದ ಬಗ್ಗೆ ತುರ್ತು ತನಿಖೆಗಾಗಿ ಅಂತರರಾಷ್ಟ್ರೀಯ ಸ್ವತಂತ್ರ ಆಯೋಗ ರಚಿಸಲು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ (ಯುಎನ್‌ಎಚ್‌ಆರ್‌ಸಿ) ಶುಕ್ರವಾರ ತೆಗೆದುಕೊಂಡ ನಿರ್ಣಯ ಸಂಬಂಧದ ಮತ ಚಲಾವಣೆಯಿಂದ ಭಾರತ ಹೊರಗುಳಿದು, ಉಕ್ರೇನ್ ಬಿಕ್ಕಟ್ಟಿನಲ್ಲಿ ತನ್ನ ತಟಸ್ಥ ನಿಲುವು ಮುಂದುವರಿಸಿದೆ.

ಅಮೆರಿಕ, ಫ್ರಾನ್ಸ್, ಜರ್ಮನಿ, ಜಪಾನ್, ನೇಪಾಳ, ಯುಎಇ, ಬ್ರಿಟನ್ ನಿರ್ಣಯದ ಕರಡನ್ನು ಬೆಂಬಲಿಸಿ ಮತ ಚಲಾಯಿಸಿದವು. ನಿರ್ಣಯದ ಪರವಾಗಿ ಒಟ್ಟು 47 ರಾಷ್ಟ್ರಗಳು ಮತ ಚಲಾಯಿಸಿವೆ. ವಿರುದ್ಧವಾಗಿ ರಷ್ಯಾ ಮತ್ತು ಎರಿಟ್ರಿಯಾ ಮಾತ್ರ ವಿರುದ್ಧವಾಗಿ ಮತ ಚಲಾಯಿಸಿದವು. ರಷ್ಯಾದ ಸಾಂಪ್ರದಾಯಿಕ ಬೆಂಬಲಿಗರಾದ ಚೀನಾ, ವೆನೆಜುವೆಲಾ ಮತ್ತು ಕ್ಯೂಬಾ ಸೇರಿ 13 ರಾಷ್ಟ್ರಗಳು ಮತದಾನದಿಂದ ದೂರ ಉಳಿದವು.

‘ಉಕ್ರೇನ್ ಮೇಲಿನ ರಷ್ಯಾ ಆಕ್ರಮಣದ ಬಗ್ಗೆ ತುರ್ತು ತನಿಖೆಗಾಗಿ ಸ್ವತಂತ್ರ ಅಂತರರಾಷ್ಟ್ರೀಯ ಆಯೋಗವನ್ನು ರಚಿಸಲು ನಿರ್ಧರಿಸಲಾಗಿದೆ’ ಎಂದು ಯುಎನ್‌ಎಚ್‌ಆರ್‌ಸಿ ಟ್ವೀಟ್‌ನಲ್ಲಿ ತಿಳಿಸಿದೆ.

ಕಳೆದ ವಾರ ನಡೆದ ವಿಶ್ವಸಂಸ್ಥೆಯ 15ನೇ ರಾಷ್ಟ್ರೀಯ ಭದ್ರತಾ ಸಮಾವೇಶ ಮತ್ತು 193 ಸದಸ್ಯ ರಾಷ್ಟ್ರಗಳ ಸಾಮಾನ್ಯ ಅಧಿವೇಶನದಲ್ಲಿ ಪ್ರಮುಖ ರಾಷ್ಟ್ರಗಳು ರಷ್ಯಾ ವಿರುದ್ಧ ತೆಗೆದುಕೊಂಡ ಎರಡು ನಿರ್ಣಯಗಳಿಂದಲೂ ಭಾರತ ಹೊರಗುಳಿದು, ತಟಸ್ಥ ನಿಲುವು ಅನುಸರಿಸಿತ್ತು.

## ‘ರಷ್ಯಾ ಮೂಲಕ ಸ್ಥಳಾಂತರ’

**ನವದೆಹಲಿ (ಪಿಟಿಐ):** ಯುದ್ಧಪೀಡಿತ ಉಕ್ರೇನ್‌ನ ಪೂರ್ವಭಾಗದ ನಗರಗಳಲ್ಲಿ ಸಿಲುಕಿರುವ ಭಾರತೀಯರನ್ನು ತೆರವುಗೊಳಿಸುವ ಕಾರ್ಯಕ್ಕಾಗಿ ವಾಯುಪಡೆಯು ಸರಕು ಸಾಗಣೆಗೆ ಬಳಸುವ ಎರಡು ‘ಐಎಲ್–76’ ವಿಮಾನಗಳನ್ನು ಮೀಸಲು ಇರಿಸಿದೆ.

ಹಾರ್ಕಿವ್ ಹಾಗೂ ಸುಮಿ ನಗರಗಳಲ್ಲಿ ಸಿಲುಕಿರುವವರನ್ನು ರಷ್ಯಾ ರಾಜಧಾನಿ ಮಾಸ್ಕೊ ಮೂಲಕ ಭಾರತಕ್ಕೆ ಕರೆತರುವ ಸಲುವಾಗಿ ಈ ವಿಮಾನಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

‘ಉಕ್ರೇನ್‌ನ ಪೂರ್ವಭಾಗದಲ್ಲಿ ಕಾಳಗ ತೀವ್ರಗೊಂಡಿದೆ. ಇಲ್ಲಿ ಸಿಲುಕಿರುವ ಭಾರತೀಯರಿಗೆ ಪಶ್ಚಿಮ ಭಾಗದ ಗಡಿಗೆ ಸಾಗಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ರಷ್ಯಾ ಪಡೆಗಳ ನೆರವಿನಿಂದ ಇವರನ್ನು ಮಾಸ್ಕೊಕ್ಕೆ ಕರೆತಂದು, ಅಲ್ಲಿಂದ ಭಾರತಕ್ಕೆ ಕರೆತರಲು ಯೋಜಿಸಲಾಗಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

### ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ವಾರ್ ವಿಶ್ಲೇಷಣೆ

# ರಷ್ಯಾ ಪಡೆಗೆ ಹಿನ್ನಡೆಯಾಗಿದೆಯೇ?

ವಾಷಿಂಗ್ಟನ್ (ಎಪಿ): ಉಕ್ರೇನ್ ರಾಜಧಾನಿ ಕೀವ್ ಅನ್ನು ವಶಪಡಿಸಿಕೊಳ್ಳುವ ಗುರಿಯೊಂದಿಗೆ ಮುನ್ನುಗ್ಗಿರುವ ರಷ್ಯಾದ ಬೃಹತ್ ಸೇನಾ ಪಡೆ ವಿವಿಧ ಕಾರಣಗಳಿಂದಾಗಿ ಕೀವ್ ನಗರದಿಂದ 15 ಕಿ.ಮೀ ದೂರದಲ್ಲಿ ಕೆಲ ದಿನಗಳಿಂದ ಸಿಲುಕಿದೆ. ಅಲ್ಲಿಂದ ಮುಂದೆ ಚಲಿಸುವುದು ಈ ಪಡೆಗೆ ಸವಾಲಾಗಿ ಪರಿಣಮಿಸಿದೆ.

ಯುದ್ಧದ ಎಂಟು ದಿನಗಳ ಬಳಿಕ, ರಷ್ಯಾದ ಸರಬರಾಜು ಟ್ರಕ್‌ಗಳು, ಪಡೆಗಳು ಮತ್ತು ಶಸ್ತ್ರಾಸ್ತ್ರಗಳ ಸಾಗಣೆಗೆ ಇಂಧನ, ಆಹಾರದ ಕೊರತೆ ಕಾಡುತ್ತಿದೆ. ಅಲ್ಲದೆ ಇವು ಮುಂದೆ ಸಾಗಲು ಹವಾಮಾನವೂ ಪ್ರತಿಕೂಲವಾಗಿದ್ದು, ಕೆಸರಿನಿಂದ ಕೂಡಿರುವ ಪ್ರದೇಶವು ಚಲನೆಗೆ ಸವಾಲಾಗಿ ಪರಿಣಮಿಸಿದೆ.

ರಷ್ಯಾದ ಸೇನೆಯ ವಾಹನಗಳ ಆಕ್ರಮಣವನ್ನು ಉಕ್ರೇನ್ ಪಡೆಗಳು ಸಮರ್ಪಕವಾಗಿ ಎದುರಿಸಿವೆ. ಅಲ್ಲದೆ, ರಷ್ಯಾ ವಾಹನಗಳು ಮುನ್ನುಗ್ಗಲು ಸಾಧ್ಯವಾಗದಂತೆ ಸಂಚಾರ ದಟ್ಟಣೆಯನ್ನೂ ಸೃಷ್ಟಿಸಿವೆ. ಆದರೆ ರಷ್ಯನ್ನರು ಸಮರ್ಪಕವಾಗಿ ವಾಯು ದಾಳಿ ನಡೆಸಿದ್ದಾರೆ ಎಂದು ಪಾಶ್ಚಿಮಾತ್ಯ ಅಧಿಕಾರಿಗಳು ತಿಳಿಸಿದ್ದಾರೆ.

‘ಇದು ರಷ್ಯಾ ಸೇನಾ ಕಾರ್ಯಾಚರಣೆಯ ನ್ಯೂನತೆಯ ಸಂಕೇತವಾಗಿರಬಹುದು. ದೊಡ್ಡ ಪ್ರಮಾಣದ ಕಾರ್ಯಾಚರಣೆ ವೇಳೆ ವಾಯು, ಭೂ ಮತ್ತು ನೌಕಾ ಪಡೆಗಳನ್ನು ಸಂಯೋಜಿಸುವಲ್ಲಿ ಅನುಭವದ ಕೊರತೆ ಇರಬಹುದು’ ಎಂದು ‘ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ವಾರ್’ನ ರಷ್ಯಾದ ವಿಶ್ಲೇಷಕರಾದ ಮೇಸನ್ ಕ್ಲಾರ್ಕ್ ವಿಶ್ಲೇಷಿಸಿದ್ದಾರೆ.

ಆದರೆ ಉಕ್ರೇನ್ ಪಡೆಯ ವಿರುದ್ಧ ರಷ್ಯಾ ಸೇನೆ ಮೇಲುಗೈ ಸಾಧಿಸುವುದನ್ನು ತಡೆಯುವುದು ಅಸಂಭವವಾಗಿದೆ. ಅಂತಿಮವಾಗಿ ರಷ್ಯನ್ನರು ಉಕ್ರೇನಿಯನ್ ಪಡೆಗಳನ್ನು ಸೋಲಿಸಿ ಕೀವ್ ಅನ್ನು ವಶಕ್ಕೆ ಪಡೆಯುತ್ತಾರೆ ಎಂದು ಕ್ಲಾರ್ಕ್ ಹೇಳಿದ್ದಾರೆ.

ಉಕ್ರೇನ್‌ನ ರಾಜಧಾನಿ ಕೀವ್ ಪಶ್ಚಿಮದಲ್ಲಿರುವ ಬುಚಾ ನಗರದಲ್ಲಿ ರಷ್ಯಾದ ಶಸ್ತ್ರಸಜ್ಜಿತ ವಾಹನಗಳನ್ನು ಉಕ್ರೇನ್ ಪಡೆಗಳು ನಾಶಪಡಿಸಿವೆ ಎಎಫ್‌ಪಿ ಚಿತ್ರ

## ಭಾರತದ ವಿದ್ಯಾರ್ಥಿಗೆ ಗುಂಡೇಟು

ಹರ್ಜೋತ್ ಸಿಂಗ್

**ಕೀವ್:** ರಷ್ಯಾವು ಕೀವ್ ಮೇಲೆ ದಾಳಿ ನಡೆಸುತ್ತಿದ್ದ ಸಂದರ್ಭದಲ್ಲಿ ಅಲ್ಲಿಂದ ತೆರಳಲು ಯತ್ನಿಸಿದ್ದ ಭಾರತದ ವಿದ್ಯಾರ್ಥಿಯೊಬ್ಬರು ಕಳೆದ ಭಾನುವಾರ ಗುಂಡಿನ ದಾಳಿಗೆ ಒಳಗಾಗಿದ್ದರು ಎಂಬ ವಿಷಯ ಐದು ದಿನಗಳ ಬಳಿಕ ಗೊತ್ತಾಗಿದೆ.

ಹರ್ಜೋತ್ ಸಿಂಗ್ ಅವರಿಗೆ ಗುಂಡು ತಗುಲಿತ್ತು. ತೀವ್ರ ಗಾಯಗೊಂಡು ರಸ್ತೆಯಲ್ಲಿ ಬಿದ್ದಿದ್ದ ಅವರನ್ನು ಕೆಲ ಗಂಟೆಗಳ ಬಳಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ನನ್ನ ದೇಹ ಹೊಕ್ಕಿದ್ದ ಗುಂಡನ್ನು ವೈದ್ಯರು ತೆಗೆದಿದ್ದಾರೆ’ ಎಂದು ದೆಹಲಿಯ ಹರ್ಜೋತ್ ಸಿಂಗ್ ‘ಎನ್‌ಡಿಟಿವಿ’ಗೆ ಹೇಳಿದ್ದಾರೆ.

‘ಹೆಚ್ಚು ಸಾವು– ನೋವು ಸಂಭವಿಸದಂತೆ, ಸಾಧ್ಯವಾದಷ್ಟು ಜನರನ್ನು ಸ್ಥಳಾಂತರಿಸುವ ಪ್ರಯತ್ನ ಮಾಡುತ್ತಿದ್ದೇವೆ’ ಎಂದು ನಾಗರಿಕ ವಿಮಾನಯಾನ ಸಚಿವ ವಿ.ಕೆ. ಸಿಂಗ್ ತಿಳಿಸಿದ್ದಾರೆ.

## ಯುದ್ಧಭೂಮಿ: ಇನ್ನೂ 1000 ಭಾರತೀಯರು

**ನವದೆಹಲಿ:** ಉಕ್ರೇನ್‌ನ ಯುದ್ಧಭೂಮಿಯಾಗಿ ಪರಿವರ್ತನೆಗೊಂಡಿರುವ ಹಾರ್ಕಿವ್ ಹಾಗೂ ಸುಮಿಗಳಲ್ಲಿ ಈಗಲೂ ಒಂದು ಸಾವಿರ ಮಂದಿ ಭಾರತೀಯರು ಸಿಲುಕಿಕೊಂಡಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

‘ಹಾರ್ಕಿವ್‌ನಲ್ಲಿ 300 ಮಂದಿ ಹಾಗೂ ಸುಮಿಯಲ್ಲಿ 700 ಮಂದಿ ಇದ್ದಾರೆ. ಅವರೆಲ್ಲರನ್ನೂ ಬಸ್‌ಗಳಲ್ಲಿ ಕರೆತರುವ ಪ್ರಯತ್ನ ನಡೆದಿದೆ. ಈಗಾಗಲೇ ಬಸ್‌ಗಳನ್ನು ಗುರುತಿಸಲಾಗಿದ್ದು, ಐದು ಬಸ್‌ಗಳು ಸಂಚಾರ ಆರಂಭಿಸಿವೆ’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಗ್ಚಿ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದಕ್ಕೆ ಮೊದಲು ಸುಮಿಯ ಹೋಟೆಲ್ ಒಂದರಲ್ಲಿ ಉಳಿದುಕೊಂಡಿದ್ದ ಭಾರತೀಯ ವಿದ್ಯಾರ್ಥಿಗಳ ಗುಂಪು ವಿಡಿಯೊ ಕಳುಹಿಸಿ, ತಮಗೆ ನೀರಿಲ್ಲ, ಆಹಾರ ಇಲ್ಲ, ಹೊರಗಡೆ ಕುಟುಕುವ ಚಳಿ ಇದೆ ಎಂದು ಹೇಳಿಕೊಂಡಿದ್ದರು.

ಇದುವರೆಗೆ 20 ಸಾವಿರ ಮಂದಿ ಉಕ್ರೇನ್‌ನಿಂದ ಗಡಿ ಭಾಗಗಳತ್ತ ಬಂದಿದ್ದು, 48 ವಿಮಾನಗಳಲ್ಲಿ 10,300 ಮಂದಿಯನ್ನು ಭಾರತಕ್ಕೆ ಕರೆತರಲಾಗಿದೆ ಎಂದರು.

# ‘ಪುಟಿನ್‌ರನ್ನು ರಷ್ಯಾದವರೇ ಕೊಲ್ಲಲಿ’

ವಾಷಿಂಗ್ಟನ್ (ಎಎಫ್‌ಪಿ): 'ರಷ್ಯಾದ ಯಾರಾದರೂ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಹತ್ಯೆ ಮಾಡಬೇಕು' ಎಂದು ಅಮೆರಿಕ ಸೆನೆಟ್‌ನ ರಿಪಬ್ಲಿಕನ್ ಪಕ್ಷದ ಸದಸ್ಯ ಲಿಂಡ್ಸೆ ಗ್ರಹಾಂ ಅವರು ಟಿ.ವಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

‘ಈ ಯುದ್ಧ ಹೇಗೆ ಕೊನೆಗೊಳ್ಳಬೇಕು? ರಷ್ಯಾದಲ್ಲಿರುವ ಯಾರಾದರೂ ಮುಂದೆ ಬರಬೇಕು. ಈ ವ್ಯಕ್ತಿಯನ್ನು ಮುಗಿಸಬೇಕು’ ಎಂದು ಸೆನೆಟರ್ ಫಾಕ್ಸ್ ನ್ಯೂಸ್ ಸಂದರ್ಶಕ ಸೀನ್ ಹ್ಯಾನಿಟಿಗೆ ಹೇಳಿದರು.

ಟಿ.ವಿ ಸಂದರ್ಶನದ ಬಳಿಕ ಅವರು ತಮ್ಮ ವೈಯಕ್ತಿಕ ಟ್ವಿಟರ್ ಖಾತೆಯಲ್ಲೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ‘ಇದನ್ನು ಸರಿಪಡಿಸಬೇಕಾದವರು ರಷ್ಯಾದ ಜನರು ಮಾತ್ರ’ ಎಂದು ಅವರು ಬರೆದುಕೊಂಡಿದ್ದಾರೆ.

‘ರಷ್ಯಾದಲ್ಲಿ ಯಾರಾದರೂ ಬ್ರೂಟಸ್‌ನಂಥವರು ಇದ್ದಾರೆಯೇ?’ ಎಂದು ಅವರು ಪ್ರಶ್ನೆ ಮಾಡಿದ್ದಾರೆ. ರೋಮನ್ ಆಡಳಿತಗಾರ ಜೂಲಿಯಸ್ ಸೀಸರ್‌ನ ಹಂತಕರಲ್ಲಿ ಬ್ರೂಟಸ್ ಕೂಡ ಒಬ್ಬ. ಆತನ ಉದಾಹರಣೆಯನ್ನು ಲಿಂಡ್ಸೆ ಪುಟಿನ್ ವಿಚಾರದಲ್ಲೂ ನೀಡಿದ್ದಾರೆ.

ರಷ್ಯಾದ ಸೇನೆಯಲ್ಲಿ ಯಶಸ್ವಿ ‘ಕರ್ನಲ್ ಸ್ಟಾಫೆನ್‌ಬರ್ಗ್’ ಯಾರಾದರೂ ಇದ್ದಾರೆಯೇ ಎಂದೂ ಅವರು ಆಶ್ಚರ್ಯ ವ್ಯಕ್ತಪಡಿಸಿದರು. ಸ್ಟಾಫೆನ್‌ಬರ್ಗ್ ಅವರು 1944ರಲ್ಲಿ ಜರ್ಮನಿಯ ಸರ್ವಾಧಿಕಾರಿ ಅಡಾಲ್ಫ್ ಹಿಟ್ಲರ್ ಅವರನ್ನು ಕೊಲ್ಲಲು ವಿಫಲ ಯತ್ನ ನಡೆಸಿದ ಸೇನಾ ಅಧಿಕಾರಿ.

ರಿಪಬ್ಲಿಕನ್ ಪಕ್ಷದವರಾದ ಲಿಂಡ್ಸೆ, ಅಮೆರಿಕ ಕಾಂಗ್ರೆಸ್‌ನಲ್ಲಿ 20 ವರ್ಷ ಸೇವೆ ಸಲ್ಲಿಸಿದ್ದಾರೆ. ಒಂದೊಮ್ಮೆ ಅಧ್ಯಕ್ಷ ಟ್ರಂಪ್‌ಗೆ ಆತ್ಮೀಯರಾಗಿದ್ದ ಅವರು, 2016ರ ಅಧ್ಯಕ್ಷೀಯ ಚುನಾವಣೆಗೆ ರಿಪಬ್ಲಿಕನ್ ಪಕ್ಷದ ಪ್ರಾಥಮಿಕ ಸ್ಪರ್ಧಿಯಾಗಿದ್ದರು. ನಂತರ ಅವರು ನಾಮಪತ್ರ ಹಿಂಪಡೆದಿದ್ದರು.

# ಪ್ರೀತಿಯ ‘ಕ್ರಿಸ್ಟಲ್’ ಕರೆತಂದ ಮೈಸೂರಿನ ಯುವತಿ!

ಪ್ರಜಾವಾಣಿ ವಾರ್ತೆ

**ನವದೆಹಲಿ:** ಯುದ್ಧಪೀಡಿತ ಉಕ್ರೇನ್‌ನ ಹಾರ್ಕಿವ್‌ನಿಂದ ಶುಕ್ರವಾರ ವಾಪಸಾದ 4ನೇ ವರ್ಷದ ವೈದ್ಯಕೀಯ ವಿದ್ಯಾರ್ಥಿನಿ, ಶರಣ್ಯಶ್ರೀ ಪರಮೇಶ್ವರಪ್ಪ ತನ್ನೊಂದಿಗೆ ತನ್ನ ಪ್ರೀತಿಯ ‘ಕ್ರಿಸ್ಟಲ್’ ಬೆಕ್ಕನ್ನೂ ಕರೆತಂದಿದ್ದಾರೆ.

ಸಾಕಷ್ಟು ಕಷ್ಟಪಟ್ಟು ಉಕ್ರೇನ್ ಗಡಿ ದಾಟಿ, ಪೋಲೆಂಡ್ ಮೂಲಕ ಭಾರತಕ್ಕೆ ಬಂದಿಳಿದಿರುವ ಮೈಸೂರಿನ ಈ ಯುವತಿ, ಆತನಿಗೋಸ್ಕರ ತನ್ನೆಲ್ಲ ಸಾಮಾನು– ಸರಂಜಾಮನ್ನೆಲ್ಲ ಅಲ್ಲೇ ಬಿಟ್ಟು ಬಂದಿದ್ದಾರೆ. ಅಂದಹಾಗೆ, ಉಕ್ರೇನ್‌ನಲ್ಲೇ ಹುಟ್ಟಿ ಬೆಳೆದಿರುವ ‘ಕ್ರಿಸ್ಟಲ್’ ಜೊತೆಗಿನ ಈಕೆಯ ಸ್ನೇಹ ಸಂಬಂಧ ಕೇವಲ ಎರಡು ವರ್ಷದ್ದು.

‘ಯುದ್ಧಭೂಮಿಯಲ್ಲಿ ಪ್ರಾಣ ಹೋದರೂ ಚಿಂತೆಯಿಲ್ಲ ಆತನನ್ನು ಮಾತ್ರ ಬಿಟ್ಟು ತಾಯ್ನಾಡಿಗೆ ಮರಳಲಾರೆ’ ಎಂದು ನಿರ್ಧರಿಸಿದ್ದ ಈ ಯುವತಿ, ಆತನೊಂದಿಗೆ ಹೆಜ್ಜೆ ಇರಿಸಿದ್ದು, ಎಲ್ಲ ಸಂಕಷ್ಟ ಎದುರಿಸಿ ಇಬ್ಬರೂ ಜೊತೆಯಾಗಿ ಬಂದಿಳಿದಿದ್ದಾರೆ.

‘ಕ್ರಿಸ್ಟಲ್’ಗೆ ಕೊರೊನಾ ಲಸಿಕೆ ಸೇರಿದಂತೆ ಎಲ್ಲ ರೀತಿಯ ಲಸಿಕೆಗಳನ್ನು ಕೊಡಿಸಲಾಗಿದೆ. ಆತನ ದೇಹದೊಳಗೆ, ಮಾಲೀಕರ ವಿವರ ಇರುವ ಮೈಕ್ರೊ ಚಿಪ್ ಇದ್ದುದರಿಂದ ಗಡಿಯಲ್ಲಿ ಸಮಸ್ಯೆ ಆಗಲಿಲ್ಲ’ ಎಂದು ಶರಣ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಾಕು ಪ್ರಾಣಿಗಳು, ಮಹಿಳೆಯರು, 18 ವರ್ಷದೊಳಗಿನ ಮಕ್ಕಳು ಮತ್ತು 60 ದಾಟಿದ ವೃದ್ಧರಿಗೆ ಆದ್ಯತೆ ಮೇಲೆ ಪೋಲಂಡ್ ಗಡಿಯಲ್ಲಿ ಸುಲಭ ಪ್ರವೇಶಾವಕಾಶ ನೀಡಿದ್ದರಿಂದ ಹೆಚ್ಚು ಸಮಸ್ಯೆ ಆಗಲಿಲ್ಲ. ಈತ ಮೈಸೂರಿನ ಹವಾಮಾನಕ್ಕೆ ಹೊಂದಿಕೊಂಡುಬಿಟ್ಟರೆ ಸಾಕು’ ಎಂದು ಅವರು ಹೇಳಿದರು.

‘ಕ್ರಿಸ್ಟಲ್’ ಜೊತೆ ಶರಣ್ಯಶ್ರೀ

# ಸುಳ್ಳು ಸುದ್ದಿ: 15 ವರ್ಷ ಜೈಲು



ಸಾಂದರ್ಭಿಕ ಚಿತ್ರ

ಮಾಸ್ಕೊ (ಎಪಿ): ಮಿಲಿಟರಿ ಕಾರ್ಯಾಚರಣೆ ಕುರಿತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುಳ್ಳು ಸುದ್ದಿ ಹರಡುವವರಿಗೆ 15 ವರ್ಷ ಜೈಲು ಶಿಕ್ಷೆ ವಿಧಿಸುವ ಹೊಸ ಮಸೂದೆಯನ್ನು ರಷ್ಯಾ ಸಂಸತ್ ಅಂಗೀಕರಿಸಿದೆ ಎಂದು ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ಶುಕ್ರವಾರ ವರದಿ ಮಾಡಿದೆ.

ಮಸೂದೆಯು ಈಗ ಮೇಲ್ಮನೆಯಲ್ಲಿದ್ದು, ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅಂಕಿತದ ಹಾಕಿದ ಬಳಿಕ ಕಾನೂನು ಆಗಿ ರೂಪುಗೊಳ್ಳಲಿದೆ. ಇದು ಶನಿವಾರದಿಂದಲೇ ಜಾರಿಯಾಗಲಿದೆ ಎಂದು ಸ್ಪೀಕರ್ ವ್ಯಾಚೆಸ್ಲಾವ್ ವೋಲಿಡಿನ್ ಹೇಳಿದ್ದಾರೆ.

ಇದರ ಪ್ರಕಾರ ಸುಳ್ಳು ಹರಡುವವರ ವಿರುದ್ಧ ರಷ್ಯಾ ಅಧಿಕಾರಿಗಳು ಕ್ರಮ ಕೈಗೊಂಡು 3ರಿಂದ 15 ವರ್ಷದವರೆಗೂ ಜೈಲು ಶಿಕ್ಷೆ ವಿಧಿಸಬಹುದು. ಜತೆಗೆ ರಷ್ಯಾದ ಮೇಲೆ ನಿರ್ಬಂಧ ವಿಧಿಸಲು ಕರೆ ನೀಡುವ ಸುದ್ದಿಗಳನ್ನು ಪ್ರಸಾರ ಮಾಡುವುದನ್ನೂ ಈ ಮಸೂದೆ ನಿಷೇಧಿಸುತ್ತದೆ.

ಮಸೂದೆ ಅಂಗೀಕಾರಗೊಂಡ ಕೆಲ ಗಂಟೆಗಳಲ್ಲಿಯೇ ವೆಬ್‌ಸೈಟ್ ಒಂದನ್ನು ಮುಚ್ಚಲಾಗಿದೆ. ರಷ್ಯಾದ ಮಾಧ್ಯಮ ಲೋಕದ ಮೇಲೆ ಈ ಮಸೂದೆ ಭಾರಿ ಪರಿಣಾಮ ಬೀರಲಿದೆ ಎಂದು ಹೇಳಲಾಗುತ್ತಿದೆ. ಈಗಾಗಲೇ ಪ್ರಮುಖ ರೇಡಿಯೊ ಅನ್ನು ಮುಚ್ಚಲಾಗಿದ್ದು, ಟಿವಿ ವಾಹಿನಿಯೊಂದು ಸಹ ತನ್ನ ಪ್ರಸಾರ ಸ್ಥಗಿತಗೊಳಿಸಿದೆ.

# ಬೇಡಿಕೆ ಈಡೇರಿಸದ ಸರ್ಕಾರ: ಸಿಐಟಿಯು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

'ಬೇಡಿಕೆ ಈಡೇರಿಸಲು ರಾಜ್ಯ ಸರ್ಕಾರ ಹಿಂದೇಟು ಹಾಕುತ್ತಿದೆ' ಎಂದು ಆರೋಪಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

**ಬೆಂಗಳೂರು:** 'ರಾಜ್ಯದಲ್ಲಿರುವ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು– ಸಹಾಯಕಿಯರು ಹಾಗೂ ಶಾಲಾ ಬಿಸಿಯೂಟ ತಯಾರಕರಿಗೆ ಅನ್ಯಾಯ ಮಾಡುತ್ತಿರುವ ರಾಜ್ಯ ಸರ್ಕಾರ, ಬೇಡಿಕೆ ಈಡೇರಿಸಲು ಹಿಂದೇಟು ಹಾಕುತ್ತಿದೆ' ಎಂದು ಆರೋಪಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಸಂಘಟನೆಗಳ ಪದಾಧಿಕಾರಿಗಳು ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯ ಅಂಗನವಾಡಿ ನೌಕರರ ಸಂಘ, ರಾಜ್ಯ ಆಟೊ ರಿಕ್ಷಾ ಚಾಲಕರ ಒಕ್ಕೂಟ, ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಒಕ್ಕೂಟದ (ಎಐಟಿಯುಸಿ) ಸದಸ್ಯರು ಹಾಗೂ ಅಸಂಘಟಿತ ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಬಜೆಟ್ ಅಧಿವೇಶನ ಚಲೊ' ಪ್ರತಿಭಟನೆಗಾಗಿ ರಾಜ್ಯದ ವಿವಿಧ ಜಿಲ್ಲೆಗಳಿಂದ ನಗರಕ್ಕೆ ಬಂದಿದ್ದ ಪ್ರತಿಭಟನಕಾರರು, ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದರು. ಸಿಐಟಿಯು ಬಾವುಟ ಹಿಡಿದು ಘೋಷಣಾ ಫಲಕ ಪ್ರದರ್ಶಿಸಿದರು. ಬಹಿರಂಗ ಸಭೆ ನಡೆಸಿದರು.

'ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು– ಸಹಾಯಕಿಯರು ಹಾಗೂ ಶಾಲಾ ಬಿಸಿಯೂಟ ತಯಾರಕರು ಹಲವು ಸಮಸ್ಯೆ ಎದುರಿಸುತ್ತಿದ್ದಾರೆ. ಕನಿಷ್ಠ ವೇತನ ಸಿಗದೇ ಜೀವನ ಸಾಗಿಸಲು ಕಷ್ಟಪಡುತ್ತಿದ್ದಾರೆ. ಇವರ ಅಗತ್ಯ ಬೇಡಿಕೆಗಳನ್ನು ಈಡೇರಿಸುವಂತೆ ಹಲವು ಬಾರಿ ಪ್ರತಿಭಟನೆ ನಡೆಸಲಾಗಿದೆ. ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದ ರಾಜ್ಯ ಸರ್ಕಾರ ಮಾತು ತಪ್ಪಿದೆ' ಎಂದು ಸಿಐಟಿಯು ಅಧ್ಯಕ್ಷೆ ಎಸ್. ವರಲಕ್ಷ್ಮಿ ಆರೋಪಿಸಿದರು.

'ಕಾರ್ಮಿಕರಿಗೆ ಕನಿಷ್ಠ ₹ 24 ಸಾವಿರ ವೇತನ ನಿಗದಿಪಡಿಸಬೇಕು. ಅಸಂಘಟಿತ ಕಾರ್ಮಿಕರ ಅಭಿವೃದ್ಧಿಗಾಗಿ ಸ್ಥಾಪಿಸಿರುವ 'ಕಾರ್ಮಿಕರ ಕಲ್ಯಾಣ ಮಂಡಳಿ'ಗೆ ₹ 500 ಕೋಟಿ ಅನುದಾನ ನೀಡಬೇಕು. ಅಂಗನವಾಡಿ ಸಹಾಯಕಿಯರು ಹಾಗೂ ಕಾರ್ಯಕರ್ತೆಯರಿಗೆ ಕನಿಷ್ಠ ವೇತನ ನಿಗದಿಪಡಿಸಬೇಕು. ಅನುಕಂಪದ ಆಧಾರದಲ್ಲಿ ಮಗಳಿಗೆ ಕೆಲಸ ನೀಡಲಾಗುತ್ತಿದ್ದು, ಸೊಸೆಯಂದಿರನ್ನೂ ಕೆಲಸಕ್ಕೆ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಒಕ್ಕೂಟದ ಅಧ್ಯಕ್ಷ ಹೊನ್ನಪ್ಪ ಮರೆನ್ನನವರ, 'ಬಿಸಿಯೂಟ ತಯಾರಕರಿಗೆ ಮಾಸಿಕ ಕನಿಷ್ಠ ₹ 21 ಸಾವಿರ ವೇತನ ನಿಗದಿಪಡಿಸಬೇಕು. ನಿವೃತ್ತರಿಗೆ ಮಾಸಿಕ ₹ 5 ಸಾವಿರ ಪಿಂಚಣಿ ನೀಡಬೇಕು. ಬಿಸಿಯೂಟ ತಯಾರಿ ಜವಾಬ್ದಾರಿಯನ್ನು ಯಾವುದೇ ಖಾಸಗಿ ಸಂಸ್ಥೆಗಳಿಗೆ ನೀಡಬಾರದು' ಎಂದು ಒತ್ತಾಯಿಸಿದರು.

**ಸಚಿವ, ಅಧಿಕಾರಿಗಳ ಭೇಟಿ:** ಪ್ರತಿಭಟನಾ ಸ್ಥಳಕ್ಕೆ ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹಾಗೂ ಕಾರ್ಮಿಕ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಮನವಿ ಸ್ವೀಕರಿಸಿದರು. ಸಂಘಟನೆ ಮುಖಂಡರ ಸಮ್ಮುಖದಲ್ಲಿ ಸಭೆ ನಡೆಸಿ, ಬೇಡಿಕೆ ಈಡೇರಿಕೆ ಬಗ್ಗೆ ಚರ್ಚಿಸುವ ಭರವಸೆ ನೀಡಿದರು. ಅದಕ್ಕೆ ಒಪ್ಪಿದ ಬಿಸಿಯೂಟ ತಯಾರಕರು, ಕಾರ್ಮಿಕರು ಪ್ರತಿಭಟನೆ ಅಂತ್ಯಗೊಳಿಸಿದರು.

### ಅಂಗನವಾಡಿ ನೌಕರರ ಪ್ರತಿಭಟನೆ ಮುಂದುವರಿಕೆ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಾಗಲಿ, ಅಧಿಕಾರಿಗಳಾಗಲಿ ಯಾರೊಬ್ಬರೂ ಪ್ರತಿಭಟನಾ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಲಿಲ್ಲ. ಹೀಗಾಗಿ, ಅಂಗನವಾಡಿ ನೌಕರರು ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ಮುಂದುವರಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯುಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ 12
ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ
ವಿ. ಆರ್. ವನಿತಾ
ಸ್ಟ್ರೇಟ್ ಡ್ರೈವ್
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ

## ಪಾಕಿಸ್ತಾನ: ಶಿಯಾ ಮಸೀದಿಯಲ್ಲಿ ಆತ್ಮಾಹುತಿ ದಾಳಿ, 56 ಸಾವು

**ಪೆಶಾವರ (ಎಎಫ್‌ಪಿ/ರಾಯಿಟರ್ಸ್):** ವಾಯುವ್ಯ ಪಾಕಿಸ್ತಾನದ ನಗರ ಪೆಶಾವರದಲ್ಲಿಯ ಶಿಯಾ ಮಸೀದಿಯೊಂದರಲ್ಲಿ ಶುಕ್ರವಾರ ಸಂಭವಿಸಿದ ಆತ್ಮಾಹುತಿ ಬಾಂಬ್ ದಾಳಿಯೊಂದರಲ್ಲಿ ಕನಿಷ್ಠ 56 ಜನರು ಮೃತಪಟ್ಟಿದ್ದು, 200 ಜನರು ಗಾಯಗೊಂಡಿದ್ದಾರೆ.

ಪೆಶಾವರದ ಕೊಚಾ ರಿಸಾಲ್ದಾರ್ ಪ್ರದೇಶದಲ್ಲಿಯ ಜಾಮಿಯಾ ಪ್ರದೇಶದಲ್ಲಿ ಪ್ರಾರ್ಥನೆಗೆ ಕೆಲವೇ ಕ್ಷಣಗಳು ಬಾಕಿ ಇದ್ದಾಗ ಬಾಂಬ್ ಸ್ಫೋಟಿಸಿದೆ ಎಂದು ಪ್ರತ್ಯಕ್ಷದರ್ಶಿ ಜಾಹಿದ್ ಖಾನ್ ಎಂಬುವವರು ಹೇಳಿದರು.

'ಮಸೀದಿ ಪ್ರವೇಶಿಸುವ ಮೊದಲು ವ್ಯಕ್ತಿಯೊಬ್ಬ ಇಬ್ಬರು ಪೊಲೀಸರಿಗೆ ಗುಂಡು ಹಾರಿಸುತ್ತಿರುವುದು ಕಾಣಿಸಿತು. ಬಳಿಕ ಮಸೀದಿಯೊಳಗೆ ದೊಡ್ಡ ಸದ್ದೊಂದು ಕೇಳಿಸಿತು' ಎಂದರು.

ರಾವಲ್ಪಿಂಡಿಯಲ್ಲಿ ನಡೆಯುತ್ತಿರುವ ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ನಡುವಿನ ಕ್ರಿಕೆಟ್ ಟೆಸ್ಟ್ ಪಂದ್ಯದ ಮೊದಲ ದಿನವೇ ಈ ಘಟನೆ ನಡೆದಿದೆ.

### ಸ್ವಾಧೀನ ಕಳೆದುಕೊಂಡ ವಿದ್ಯಾರ್ಥಿಗಳ ದೇಹ

# ಸಹೋದರರ ಸ್ಥಿತಿ ಚಿಂತಾಜನಕ

● ರವಿ ಆರ್. ತಿಮ್ಮಾಪುರ

ಮಧುಚಂದ್ರ

ಮನುಚಂದ್ರ

**ಆನವಟ್ಟಿ (ಸೊರಬ ತಾ.):** ಎರಡು ತಿಂಗಳ ಹಿಂದೆ ಕೋವಿಡ್ ಲಸಿಕೆ ನೀಡಿದ ಬಳಿಕ ಅಡ್ಡ ಪರಿಣಾಮದಿಂದಾಗಿ ಅಸ್ವಸ್ಥಗೊಂಡಿದ್ದ ಎಣ್ಣೆಕೊಪ್ಪ ಲಂಬಾಣಿ ತಾಂಡಾದ ಇಬ್ಬರು ಸಹೋದರರ ಸ್ಥಿತಿ ಇದೀಗ ಚಿಂತಾಜನಕವಾಗಿದೆ.

ಜನವರಿ 4ರಂದು ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ದ್ವಿತೀಯ ಪಿಯು ವಿದ್ಯಾರ್ಥಿ ಮಧುಚಂದ್ರ (18) ಹಾಗೂ ಜ.12 ರಂದು ಆತನ ತಮ್ಮನಾದ ಸಾಗರದ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಮನುಚಂದ್ರನಿಗೆ ಕೋವಿಡ್ ಲಸಿಕೆ ನೀಡಲಾಗಿತ್ತು. ಲಸಿಕೆ ಪಡೆದ ಬಳಿಕ ಅಡ್ಡ ಪರಿಣಾಮದಿಂದಾಗಿ ಸಹೋದರರ ದೇಹದ ಅಂಗಾಂಗಗಳು ಸ್ವಾಧೀನ ಕಳೆದುಕೊಂಡಿವೆ. ಮಧುಚಂದ್ರನಿಗೆ ಲಸಿಕೆ ಪಡೆದ ರಾತ್ರಿ ತೀವ್ರ ಜ್ವರ ಕಾಣಿಸಿಕೊಂಡಿತ್ತು. ಆನವಟ್ಟಿ ಆಸ್ಪತ್ರೆಗೆ ಕರೆದೊಯ್ದಾಗ, ಸಾಮಾನ್ಯ ಜ್ವರ ಎಂದು ಹೇಳಿ ಮನೆಗೆ ಕಳುಹಿಸಿದ್ದರು. ಬೆಳಿಗ್ಗೆ ಪೂರ್ತಿ ಶರೀರವೇ ಸ್ವಾಧೀನ ತಪ್ಪಿದಾಗ ಆತಂಕಗೊಂಡ ಪೋಷಕರು ಮತ್ತೆ ಆನವಟ್ಟಿ ವೈದ್ಯರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿಂದ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಯಿತು. ಈಚೆಗೆ ಸ್ವಲ್ಪ ಮಟ್ಟಿನ ಚೇತರಿಕೆ ಕಾಣಿಸಿಕೊಂಡಿದೆ. ಲಸಿಕೆ ನೀಡಿರುವ ಬಲ ಭಾಗದ ಕೈ-ಕಾಲು ಪೂರ್ತಿ ಸ್ವಾಧೀನ ಕಳೆದುಕೊಂಡಿವೆ. ಮಲಗಿದಲ್ಲೇ ಮಲ-ಮೂತ್ರ ವಿಸರ್ಜನೆ ಮಾಡಿಸಬೇಕಾದ ಸ್ಥಿತಿಯಿದೆ.

ಒಂದು ವಾರದ ಅಂತರದಲ್ಲಿ ಲಸಿಕೆ ಪಡೆದ ಮನುಚಂದ್ರನಿಗೂ ರಾತ್ರಿ ಜ್ವರ ಕಾಣಿಸಿಕೊಂಡಿತು. 4 ದಿನಗಳ ಬಳಿಕ ಮೂತ್ರ ಕಟ್ಟಿಕೊಂಡಿತು. ತಕ್ಷಣ ವಸತಿ ಶಾಲೆಯವರು ಸಾಗರ ಆಸ್ಪತ್ರೆಗೆ ದಾಖಲಿಸಿದರು. ಬಳಿಕ ಶಿವಮೊಗ್ಗದ ಮೆಗ್ಗಾನ್, ನಂಜಪ್ಪ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದರೂ ಪ್ರಯೋಜನವಾಗಲಿಲ್ಲ. ಬೆಂಗಳೂರಿನ ಬೌರಿಂಗ್, ವಿಕ್ಟೋರಿಯಾ ಸೇರಿ ಪ್ರತಿಷ್ಠಿತ ಆಸ್ಪತ್ರೆಯವರು ದಾಖಲಿಸಿಕೊಳ್ಳಲಿಲ್ಲ. ಈಗ ಬೆಂಗಳೂರಿನ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ನಿರಂತರ ಮೂತ್ರ ವಿಸರ್ಜನೆ ಆಗುತ್ತಿದೆ. ತೊದಲು ಮಾತನಾಡುತ್ತಿದ್ದು, ಬಾಲಕನ ಸ್ಥಿತಿ ಗಂಭೀರವಾಗಿದೆ' ಎನ್ನುತ್ತಾರೆ ಚಿಕ್ಕಪ್ಪ ಪುಟ್ಟಾನಾಯ್ಕ.

'ಶಾಸಕರು, ಸಚಿವರು ಯಾರೂ ಮನಗೆ ಬಂದಿಲ್ಲ. ಅಧಿಕಾರಿಗಳಿಗೆ, ಶಿಕ್ಷಣ ಸಚಿವರಿಗೆ, ಆರೋಗ್ಯ ಸಚಿವ ಸುಧಾಕರ್ ಅವರಿಗೆ ಮನವಿಪತ್ರ ಸಲ್ಲಿಸಿದ್ದೇವೆ. ಯಾರಿಂದಲೂ ನೆರವು ಸಿಕ್ಕಿಲ್ಲ' ಎಂದು ಅಳಲು ತೊಡಿಕೊಳ್ಳುತ್ತಾರೆ ಮಧುಚಂದ್ರನ ತಂದೆ ಚಂದ್ರಾ ನಾಯ್ಕ.

### ಔಷಧಕ್ಕಾಗಿ ಜಮೀನು ಮಾರಾಟ

ಚಂದ್ರಾ ನಾಯ್ಕ ಹಾಗೂ ಶಾಂತಿ ಬಾಯಿ ದಂಪತಿಗೆ ಪುತ್ರರಾದ ಮಧುಚಂದ್ರ, ಮನುಚಂದ್ರ ಜೊತೆಗೆ ಒಬ್ಬ ಪುತ್ರಿಯೂ ಇದ್ದಾಳೆ. ಕೂಲಿ ಮಾಡಿಕೊಂಡು ಸಂಸಾರ ನಡೆಸುತ್ತಿದ್ದರು. ಮಕ್ಕಳ ಆರೈಕೆಯಲ್ಲೇ ನಿರತರಾಗಿರುವ ದಂಪತಿ ಈಗ ಕೂಲಿಯೂ ಇಲ್ಲದೆ ಸಂಕಷ್ಟಕ್ಕೀಡಾಗಿದ್ದಾರೆ. ಇದುವರೆಗೆ ಔಷಧ, ಓಡಾಟಕ್ಕೆ ₹ 3 ಲಕ್ಷಕ್ಕೂ ಹೆಚ್ಚು ಖರ್ಚಾಗಿದೆ. ಕುಟುಂಬಕ್ಕೆ ಆಸರೆಯಾಗಿದ್ದ ಒಂದು ಎಕರೆ ಜಮೀನನ್ನೂ ಮಕ್ಕಳ ಔಷಧಕ್ಕಾಗಿ ಮಾರಾಟ ಮಾಡಿದ್ದಾರೆ.

### ಫಿಸಿಯೊಥೆರಪಿ ನೀಡುತ್ತಿದ್ದೇವೆ

ಮಧುಚಂದ್ರನಿಗೆ ಕೋವಿಡ್ ಲಸಿಕೆ ಅಡ್ಡ ಪರಿಣಾಮ ಆಗಿ ಚಿಕಿತ್ಸೆ ನೀಡಲಾಗಿತ್ತು. ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದೆ. ಒಂದೆರಡು ತಿಂಗಳಲ್ಲಿ ಕೈ-ಕಾಲುಗಳು ಸ್ವಾಧೀನಕ್ಕೆ ಬರುವ ಲಕ್ಷಣಗಳಿವೆ. ಮೆದುಳು ಇನ್ನೂ ಸುಧಾರಣೆ ಆಗಬೇಕಿದೆ. 3 ದಿನಗಳಿಗೆ ಒಮ್ಮೆ ಅವರ ಮನೆಗೆ ಹೋಗಿ ಫಿಸಿಯೊಥೆರಪಿ ಮಾಡುತ್ತಿದ್ದೇವೆ.

**–ವಿನಯ್ ಕುಮಾರ್ ಪಾಟೀಲ್,** ಸೊರಬ ತಾಲ್ಲೂಕು ಆರೋಗ್ಯಾಧಿಕಾರಿ

## ಸಿ.ಎಂ 'ತವರು ಜಿಲ್ಲೆ'ಗೆ ಬಂಪರ್ ಕೊಡುಗೆ

**ಹಾವೇರಿ:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ ಚೊಚ್ಚಲ 'ರಾಜ್ಯ ಬಜೆಟ್'ನಲ್ಲಿ ತವರು ಜಿಲ್ಲೆ ಹಾವೇರಿಗೆ ನಿರೀಕ್ಷೆಯಂತೆಯೇ ಬಂಪರ್ ಕೊಡುಗೆ ನೀಡಿದ್ದಾರೆ.

'ಏಲಕ್ಕಿ ಕಂಪಿನ ನಾಡಿನ' ಹಲವಾರು ತಾಲ್ಲೂಕುಗಳಿಗೆ ವಿವಿಧ ಯೋಜನೆಗಳನ್ನು ಘೋಷಿಸಿದ್ದರೂ, 'ತವರು ಕ್ಷೇತ್ರ' ಶಿಗ್ಗಾವಿ–ಸವಣೂರಿಗೆ ಭರ ಪೂರ ಉಡುಗೊರೆ ಕೊಟ್ಟಿದ್ದಾರೆ.

ಶಿಗ್ಗಾವಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ 250 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೆ, ಶಿಗ್ಗಾವಿಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ತರಬೇತುದಾರರಿಗೆ ತರಬೇತಿ ಕೇಂದ್ರ, ಶಿಗ್ಗಾವಿಯಲ್ಲಿ ಬಸ್ ಘಟಕ ಮತ್ತು ಚಾಲನಾ ತರಬೇತಿ ಕೇಂದ್ರಕ್ಕೆ ₹28 ಕೋಟಿ, ಸವಣೂರು ತಾಲ್ಲೂಕಿನಲ್ಲಿ ಒಂದು ಹೊಸ ಆಯುರ್ವೇದ ಕಾಲೇಜು ಸ್ಥಾಪನೆ ಘೋಷಣೆ ಮೂಲಕ 'ತವರು ಕ್ಷೇತ್ರ'ದ ಪ್ರೇಮವನ್ನು ಮೆರೆದಿದ್ದಾರೆ.

ಹಿರೇಕೆರೂರಿನಲ್ಲಿ ಗೋವಿನ ಜೋಳ ಸಂಶೋಧನಾ ಕೇಂದ್ರ, ಹಾನಗಲ್‌ನಲ್ಲಿ ಮಾವು ಸಂಸ್ಕರಣಾ ಘಟಕ, ಕಾಲೇಜುಗಳ ಮೇಲ್ವಿಚಾರಣೆ ಸುಧಾರಣೆಗೆ ಹಾವೇರಿ ಸೇರಿ 7 ಜಿಲ್ಲೆಗಳಲ್ಲಿ ವಿನೂತನ ಮಾದರಿಯ ವಿವಿ ಸ್ಥಾಪನೆ, ಹಾವೇರಿ ಸೇರಿ ನಾಲ್ಕು ಜಿಲ್ಲೆಗಳಲ್ಲಿ 'ಮುಖ್ಯಮಂತ್ರಿ ಆರೋಗ್ಯ ವಾಹಿನಿ' ಹೆಸರಿನ ಸಂಚಾರಿ ಕ್ಲಿನಿಕ್, ಚರ್ಮ ಕುಶಲಕರ್ಮಿಗಳಿಗೆ ಹಾವೇರಿಯಲ್ಲಿ ಸಾಮಾನ್ಯ ಸೌಲಭ್ಯ ಸಮುಚ್ಚಯ ಸ್ಥಾಪನೆಗೆ ಆದ್ಯತೆ ನೀಡಿದ್ದು, ಇನ್ನೂ ಹಲವು ಯೋಜನೆಗಳನ್ನು ಘೋಷಿಸಿದ್ದಾರೆ.

### ಗುಂಡ್ಲುಪೇಟೆ; 6 ಮಂದಿಗೆ ಗಾಯ, ಕ್ವಾರಿ ಮ್ಯಾನೇಜರ್ ಬಂಧನ

# ಬಿಳಿಕಲ್ಲು ಕ್ವಾರಿಯಲ್ಲಿ ಕುಸಿತ, ಇಬ್ಬರ ಸಾವು?

ಪ್ರಜಾವಾಣಿ ವಾರ್ತೆ

ಮಣ್ಣಿನಲ್ಲಿ ಸಿಲುಕಿಕೊಂಡಿದ್ದ ಟಿಪ್ಪರ್‌ನಲ್ಲಿದ್ದ ಚಾಲಕನನ್ನು ರಕ್ಷಿಸಲು ನಡೆದ ಕಾರ್ಯಾಚರಣೆ

**ಗುಂಡ್ಲುಪೇಟೆ (ಚಾಮರಾಜನಗರ):** ತಾಲ್ಲೂಕಿನ ಮಡಹಳ್ಳಿಯಲ್ಲಿರುವ ಬಿಳಿಕಲ್ಲು ಕ್ವಾರಿಯಲ್ಲಿ ಶುಕ್ರವಾರ ಭಾರಿ ಕುಸಿತ ಸಂಭವಿಸಿದ್ದು, ಇಬ್ಬರು ಕಾರ್ಮಿಕರು ಮಣ್ಣಿನ ಅಡಿಯಲ್ಲಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ.

ಹಿಟಾಚಿಯಲ್ಲಿ ಸಿಲುಕಿಕೊಂಡಿದ್ದ ಕೇರಳದ ನೂರುದ್ದೀನ್ ಎಂಬುವವರನ್ನು ಕಾರ್ಯಾಚರಣೆ ನಡೆಸಿ ರಕ್ಷಿಸಲಾಗಿದೆ. ಬಬ್ಲೂ, ಇಮ್ರಾನ್ ಎಂಬ ಮಹಾರಾಷ್ಟ್ರದ ಇಬ್ಬರು ಕಾರ್ಮಿಕರು ನಾಪತ್ತೆಯಾಗಿದ್ದು, ಅವರು ಮಣ್ಣಿನ ಅಡಿಯಲ್ಲಿ ಸಿಲುಕಿರುವ ಸಾಧ್ಯತೆ ಇದೆ. ಕ್ವಾರಿ ಮ್ಯಾನೇಜರ್ ನವೀದ್ ಎಂಬುವವರನ್ನು ಬಂಧಿಸಲಾಗಿದೆ.

'ಎಷ್ಟು ಜನ ಸಿಲುಕಿರಬಹುದು ಎಂಬ ಮಾಹಿತಿ ಲಭ್ಯವಾಗಿಲ್ಲ' ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ತಿಳಿಸಿದ್ದಾರೆ.

ಗ್ರಾಮದ ಸರ್ವೆ ನಂ 192ರಲ್ಲಿ 10 ಮಂದಿಗೆ ಗಣಿಗಾರಿಕೆಗೆ ಗುತ್ತಿಗೆ ನೀಡಲಾಗಿದೆ.

ಗುಡ್ಡ ಕುಸಿತ ಆದ ಗಣಿಯನ್ನು (ಒಂದು ಎಕರೆ ಜಾಗ) ತಾಲ್ಲೂಕಿನ ಬೊಮ್ಮಲಾಪುರದ ಮಹೇಂದ್ರ ಎಂಬುವವರು ಗುತ್ತಿಗೆಗೆ ಪಡೆದಿದ್ದರು. ಅವರು ಕೇರಳದ ಹಕೀಂ ಎಂಬುವವರಿಗೆ ಉಪ ಗುತ್ತಿಗೆ ನೀಡಿದ್ದರು. ಕೇರಳ ಹಾಗೂ ಮಹಾರಾಷ್ಟ್ರ ಮೂಲದ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ.

'ಗಣಿಯು ಅರ್ಧ ಚಂದ್ರಾಕೃತಿಯಲ್ಲಿದ್ದು, 100 ಅಡಿಗೂ ಹೆಚ್ಚು ಆಳವಿದೆ. ತಳಭಾಗದಲ್ಲಿ ಗಣಿಗಾರಿಕೆ ನಡೆಸಿ ಟೊಳ್ಳಾಗಿದ್ದರಿಂದ, ಮೇಲ್ಭಾಗದಲ್ಲಿ ಭಾರ ಹೆಚ್ಚಾಗಿ ಗುಡ್ಡ ಕುಸಿದಿರುವ ಸಾಧ್ಯತೆ ಇದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಡಿ.ಸಿ, ಎಸ್‌ಪಿ ಭೇಟಿ:** ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಭೇಟಿ ನೀಡಿದ್ದರು.

'ಕುಸಿತಕ್ಕೆ ಕಾರಣವನ್ನು ಪತ್ತೆ ಹಚ್ಚಲಾಗುವುದು. ಏಳು ಮಂದಿಯನ್ನು ರಕ್ಷಿಸಲಾಗಿದೆ. ಸಾವಿನ ಬಗ್ಗೆ ನಿಖರ ಮಾಹಿತಿ ಇಲ್ಲ' ಎಂದು ಜಿಲ್ಲಾಧಿಕಾರಿ ಹೇಳಿದರು.

**ಇದುವರೆಗೆ ಸಾವಿನ ವರದಿಯಾಗಿಲ್ಲ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ತಂಡಗಳು ಕಾರ್ಯಾಚರಣೆ ನಡೆಸಲಿವೆ. ಗಣಿ ಸಚಿವರೊಂದಿಗೆ ಮಾತನಾಡಿದ್ದೇನೆ. ಇಲಾಖೆಯ ತಂಡವನ್ನೂ ಕಳುಹಿಸಲಾಗಿದೆ.**

**ವಿ.ಸೋಮಣ್ಣ,** ಜಿಲ್ಲಾ ಉಸ್ತುವಾರಿ ಸಚಿವ

### ಏಳು ಕಾರ್ಮಿಕರ ರಕ್ಷಣೆ

ಬೆಳಿಗ್ಗೆ 11.30ರ ಹೊತ್ತಿಗೆ ಗುಡ್ಡ ಕುಸಿಯಲು ಆರಂಭಿಸುತ್ತಿದ್ದಂತೆಯೇ ಆರು ಕಾರ್ಮಿಕರು ಓಡಿ ಪ್ರಾಣ ಉಳಿಸಿಕೊಂಡಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ. ಟಿಪ್ಪರ್‌ನಲ್ಲಿ ಸಿಲುಕಿದ್ದ ಚಾಲಕ ನೂರುದ್ದೀನ್ ಅವರನ್ನು, ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ಮೂರು ಗಂಟೆಗಳ ಸತತ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

**ಏಳುಮಂದಿಗೆ ತೀವ್ರ ಏಟು:** ಗಾಯಗೊಂಡಿರುವ ಏಳು ಮಂದಿಯಲ್ಲಿ ನಾಲ್ವರಿಗೆ ತೀವ್ರವಾಗಿ ಏಟಾಗಿದೆ ಎಂದು ಹೇಳಲಾಗಿದೆ.

ಕುಸಿತದ ಜಾಗದಲ್ಲಿದ್ದ ಕಂಪ್ರೆಸರ್‌ಗಳು ಪೂರ್ಣವಾಗಿ ಮಣ್ಣಿನಡಿ ಸಿಲುಕಿವೆ. ಐದು ಟಿಪ್ಪರ್, ಮೂರು ಹಿಟಾಚಿಗಳಿಗೆ ಹಾನಿಯಾಗಿವೆ.

'40ರಿಂದ 50 ಅಡಿ ಎತ್ತರಕ್ಕೆ ಕಲ್ಲು, ಮಣ್ಣು ರಾಶಿ ಬಿದ್ದಿದ್ದು, ತೆರವು ಕಾರ್ಯಾಚರಣೆಗೆ ಹೆಚ್ಚು ಸಮಯ ಬೇಕು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಷೇರುಪೇಟೆ ವಹಿವಾಟು



### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 16,498 |
| ಇಂದಿನ ಅಂತ್ಯ | 16,245 |
| ▼ | 253 |
| ದಿನದ ಕನಿಷ್ಠ | 16,133 |

### ವಿನಿಮಯ ದರ

| | |
|---|---|
| $ ಡಾಲರ್ | 76.17 |
| £ ಪೌಂಡ್ | 101.32 |
| € ಯುರೊ | 83.89 |
| ¥ ಯೆನ್ (100ಕ್ಕೆ) | 66 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹390 |
| 12 ಮೊಟ್ಟೆಗೆ | ₹58 |
| ಮೈಸೂರು | |
| 100 ಮೊಟ್ಟೆಗೆ | ₹395 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1530 (1540) |
| ಸೋಯಾ (ರಿಫೈನ್ಡ್) | ₹1540 (1610) |
| ಸೂರ್ಯಕಾಂತಿ (ರಿಫೈನ್ಡ್) | 1650 (---) |
| ಪಾಮೋಲಿನ್ | ₹1525 (1572) |

### ತೆಂಗು ಧಾರಣೆ (ಸಾವಿರಕ್ಕೆ)

| | |
|---|---|
| ಮಂಗಳೂರು | |
| 1ನೇ ದರ್ಜೆ | ₹18000-20000 |
| 2ನೇ ದರ್ಜೆ | ₹10000-16000 |

### ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 430-450 |
| ನಡುಗೋಲು | 500-550 |
| ರಾಶಿ | 600-650 |
| ರಾಶಿ ಉತ್ತಮ | 650-700 |
| ಜರಡಿ | 750-800 |
| ಹರಕಿದ್ದು | 1100-1150 |
| ಹಸಿರು ಸಾಧಾರಣ | 600-700 |
| ಹಸಿರು ಉತ್ತಮ | 900-950 |
| ಹಸಿರು ಅತಿ ಉತ್ತಮ | 1200-1250 |
| ಕಾಳು ಮೆಣಸು | 490-495 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 12500-25000 |
| ಹೊಸತು | 27500-45000 |
| ಹಳತು | 46000-53000 |
| **ಹೊಸನಗರ** | |
| ಬಿಳಿಗೋಟು | 20709-26599 |
| ಚಾಲಿ | 31609-36629 |
| ಕೆಂಪುಗೋಟು | 28500-33499 |
| ರಾಶಿ | 40610-46439 |
| **ಕಾರ್ಕಳ** | |
| ಹೊಸತು | 40000-44500 |
| ಹಳತು | 46000-53000 |
| **ಕುಮಟ** | |
| ಚಿಪ್ಪು | 23999-29999 |
| ಕೋಕ | 15609-25609 |
| ಹಳೆಚಾಲಿ | 46019-48429 |
| ಹೊಸಚಾಲಿ | 36019-40419 |
| **ಪುತ್ತೂರು** | |
| ಕೋಕ | 11000-26000 |
| ಹೊಸತು | 27500-45000 |
| **ಸಿದ್ದಾಪುರ** | |
| ಬಿಳಿಗೋಟು | 23108-30808 |
| ಚಾಲಿ | 43099-43099 |
| ಕೋಕ | 20099-28999 |
| ಹೊಸಚಾಲಿ | 36699-40099 |
| ಕೆಂಪುಗೋಟು | 25799-32399 |
| ರಾಶಿ | 45409-46799 |
| ತಟ್ಟಿಬೆಟ್ಟೆ | 37689-44669 |
| **ಶಿರಸಿ** | |
| ಬೆಟ್ಟೆ | 21899-45381 |
| ಬಿಳಿಗೋಟು | 16009-34619 |
| ಚಾಲಿ | 33699-41401 |
| ರಾಶಿ | 41001-47566 |
| **ಯಲ್ಲಾಪುರ** | |
| ಬಿಳಿಗೋಟು | 26199-32491 |
| ಹೊಸಚಾಲಿ | 35369-41599 |
| ಕೋಕ | 18899-28299 |
| ಕೆಂಪುಗೋಟು | 28900-36969 |
| ರಾಶಿ | 46139-53620 |
| ತಟ್ಟಿಬೆಟ್ಟೆ | 38069-45519 |

### ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

| ಮೂಡಿಗೆರೆ | | ಹಾಸನ | | |
|---|---|---|---|---|
| | ಮುದ್ರಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 15800 | 15600 | 15550 | 222.90 ಸೆಂಟ್ಸ್ |
| ಎಸಿ | 7560 | 7600 | 7650 | |
| ಆರ್‌ಪಿ | 7900 | 8100 | 8250 | ಲಂಡನ್ |
| ಆರ್‌ಸಿ | 4000 | 3800 | 3875 | 2013 ಡಾಲರ್ಸ್ |

# ಕೈಗಾರಿಕಾ ಬೆಳವಣಿಗೆ: ಹಿಂದುಳಿದ ರಾಜ್ಯ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಕೋವಿಡ್ ನಂತರ ಕೈಗಾರಿಕಾ ವಲಯದಲ್ಲಿ ಕುಸಿತ
- ಈಕ್ವಿಟಿ ಮೂಲಕ ಬಂಡವಾಳ ಸಂಗ್ರಹಿಸಲು ಪ್ರೋತ್ಸಾಹ
- ಉದ್ಯೋಗ ಬೆಳವಣಿಗೆ ದರದಲ್ಲಿಯೂ ಇಳಿಕೆ

ಸಾಂದರ್ಭಿಕ ಚಿತ್ರ (ಎಎಫ್‌ಪಿ)

**ಬೆಂಗಳೂರು:** ಕೈಗಾರಿಕಾ ವಲಯದ ಬೆಳವಣಿಗೆಯಲ್ಲಿ ರಾಜ್ಯವು ಹಿಂದೆ ಉಳಿದಿರುವುದನ್ನು 2021–22ನೇ ಸಾಲಿನ ಆರ್ಥಿಕ ಸಮೀಕ್ಷೆ ವರದಿಯು ವಿವರಿಸಿದೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಕೈಗಾರಿಕಾ ವಲಯದ ವಾರ್ಷಿಕ ಸರಾಸರಿ ಬೆಳವಣಿಗೆ ಪ್ರಮಾಣವು ಶೇಕಡ 6.1ರಷ್ಟು ಮಾತ್ರ ಇದೆ. ಆದರೆ, ಇದೇ ಅವಧಿಯಲ್ಲಿ ರಾಜ್ಯದ ಕೃಷಿ ಮತ್ತು ಸೇವಾ ವಲಯಗಳು ಕ್ರಮವಾಗಿ ಶೇ 16.6ರಷ್ಟು ಹಾಗೂ ಶೇ 11.6ರಷ್ಟು ವಾರ್ಷಿಕ ಸರಾಸರಿ ಬೆಳವಣಿಗೆ ದಾಖಲಿಸಿವೆ.

ರಾಜ್ಯದ ಕೈಗಾರಿಕಾ ಬೆಳವಣಿಗೆ ದರವು ಹಿಂದೆ ಉಳಿದಿರುವ ಕಾರಣ, ಉದ್ಯೋಗ ಬೆಳವಣಿಗೆ ದರವು ತೀವ್ರ ಕುಸಿತ ಕಂಡಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಅಷ್ಟೇ ಅಲ್ಲ, 'ಕೈಗಾರಿಕಾ ವಲಯಕ್ಕೆ ನೀಡಿರುವ ಬೆಂಬಲ ಹಾಗೂ ಸಹಾಯವು ಅಸಮರ್ಪಕವಾಗಿದೆ. ಕೃಷಿ ವಲಯದಲ್ಲಿನ ಹೆಚ್ಚುವರಿ ಕಾರ್ಮಿಕರಿಗೆ ಕೌಶಲ ನೀಡಿ ಅವರನ್ನು ಕೈಗಾರಿಕಾ ವಲಯಕ್ಕೆ ವರ್ಗಾವಣೆ ಮಾಡುವ ಅಗತ್ಯವಿದೆ. ಕೈಗಾರಿಕಾ ವಲಯಕ್ಕೆ ಅಗತ್ಯ ಇರುವ ಬಂಡವಾಳ ಹೂಡಿಕೆಗೆ ಅವಕಾಶ ನೀಡುವ ಅಗತ್ಯ ಕೂಡ ಇದೆ' ಎಂದು ವರದಿಯು ಪ್ರತಿಪಾದಿಸಿದೆ.

ಕೋವಿಡ್ ಸಾಂಕ್ರಾಮಿಕದ ವ್ಯತಿರಿಕ್ತ ಪರಿಣಾಮವು ಕೈಗಾರಿಕಾ ವಲಯದ ಮೇಲೆ ಆಗಿದೆ. ಕೋವಿಡ್‌ಗೂ ಮೊದಲಿನ ವರ್ಷದಲ್ಲಿ (2019-20ರಲ್ಲಿ) ರಾಜ್ಯದ ಅರ್ಥ ವ್ಯವಸ್ಥೆಗೆ ಸೇವಾ ವಲಯದ ಕೊಡುಗೆ ಶೇ 66.3ರಷ್ಟು, ಕೈಗಾರಿಕಾ ವಲಯದ ಕೊಡುಗೆ ಶೇ 21.3ರಷ್ಟು ಹಾಗೂ ಕೃಷಿ ವಲಯದ ಕೊಡುಗೆ ಶೇ 12.3ರಷ್ಟು ಇತ್ತು. ಆದರೆ, 2020–21ನೇ ಸಾಲಿನಲ್ಲಿ ರಾಜ್ಯದ ಒಟ್ಟು ಆರ್ಥಿಕತೆಗೆ ಕೈಗಾರಿಕಾ ವಲಯದ ಕೊಡುಗೆಯು ಶೇ 19.4ಕ್ಕೆ ಇಳಿಕೆಯಾಗಿದೆ. ಈ ಅವಧಿಯಲ್ಲಿ ಕೃಷಿ ವಲಯದ ಕೊಡುಗೆಯು ಶೇ 14.3ಕ್ಕೆ ಹೆಚ್ಚಳ ಕಂಡಿದೆ. ಸೇವಾ ವಲಯದ ಕೊಡುಗೆಯಲ್ಲಿ ಬದಲಾವಣೆ ಆಗಿಲ್ಲ.

ಕೇಂದ್ರ ಸರ್ಕಾರದ ತುರ್ತು ಸಾಲ ಖಾತರಿ ಯೋಜನೆಯ ಅಡಿಯಲ್ಲಿ (ಇಸಿಎಲ್‌ಜಿಎಸ್) ಕರ್ನಾಟಕದಲ್ಲಿ ನೀಡಿರುವ ಸಾಲದ ಪ್ರಮಾಣವು ರಾಜ್ಯದ ಜಿಡಿಪಿ ಪಾಲಿಗಿಂತಲೂ ಕಡಿಮೆ ಇದೆ. ಹೀಗಾಗಿ, ಕೋವಿಡ್‌ನಿಂದಾಗಿ ತೊಂದರೆಗೆ ಒಳಗಾದ ವಹಿವಾಟುಗಳಿಗೆ ಈ ಯೋಜನೆಯ ಅಡಿಯಲ್ಲಿ ಸಾಲ ವಿತರಣೆ ಮಾಡಲು ಸರ್ಕಾರವು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯನ್ನು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕು ಎಂದು ಆರ್ಥಿಕ ಸಮೀಕ್ಷೆಯು ಸಲಹೆ ಮಾಡಿದೆ.

ರಾಜ್ಯದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮ ವಲಯವು ತನ್ನ ಬಂಡವಾಳದ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಲದ ಮೇಲೆ ಹೆಚ್ಚು ಅವಲಂಬಿತವಾಗಿದೆ. ಹೀಗಾಗಿ, ಎಂಎಸ್‌ಎಂಇ ವಲಯಕ್ಕೆ ಈಕ್ವಿಟಿ ಮೂಲಕ ಬಂಡವಾಳ ಸಂಗ್ರಹಿಸಲು ನೆರವಾಗಬಹುದು ಎಂಬ ಸಲಹೆ ಕೂಡ ವರದಿಯಲ್ಲಿ ಅಡಕವಾಗಿದೆ.

# ರಷ್ಯಾ–ಉಕ್ರೇನ್ ಸಂಘರ್ಷ: ಸೆನ್ಸೆಕ್ಸ್ 769 ಅಂಶ ಇಳಿಕೆ

**ಮುಖ್ಯಾಂಶಗಳು**

- ಬಿಎಸ್‌ಇ ಮಿಡ್ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2.36ರವರೆಗೆ ಇಳಿಕೆ
- ಹಾಂಗ್‌ಕಾಂಗ್, ಶಾಂಘೈ, ಟೋಕಿಯೊ ಮಾರುಕಟ್ಟೆಗಳಲ್ಲಿಯೂ ವಹಿವಾಟು ಇಳಿಕೆ

**ಮುಂಬೈ (ಪಿಟಿಐ):** ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವು ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ನಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ, ಕಚ್ಚಾತೈಲ ದರ ಏರಿಕೆ ಹಾಗೂ ವಿದೇಶಿ ಬಂಡವಾಳ ಹೊರಹರಿವಿನ ಕಾರಣಗಳು ಸಹ ಸೂಚ್ಯಂಕದ ಇಳಿಕೆಗೆ ಕಾರಣವಾಗಿವೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನ ಒಂದು ಹಂತದಲ್ಲಿ 1,200 ಅಂಶಗಳಷ್ಟು ಕುಸಿತ ಕಂಡಿತ್ತು. ಆ ಬಳಿಕ ವಹಿವಾಟು ತುಸು ಚೇತರಿಕೆ ಕಂಡಿತು. ಅಂತಿಮವಾಗಿ 769 ಅಂಶ ಇಳಿಕೆಯೊಂದಿಗೆ 54,334 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 253 ಅಂಶ ಇಳಿಕೆ ಕಂಡು 16,245 ಅಂಶಗಳಿಗೆ ತಲುಪಿತು.

'ಉಕ್ರೇನ್‌ನಲ್ಲಿ ಇರುವ ಯುರೋಪಿನ ಅತಿದೊಡ್ಡ ಅಣುಸ್ಥಾವರದ ಮೇಲೆ ರಷ್ಯಾ ದಾಳಿ ನಡೆಸಿದೆ ಎನ್ನುವ ವರದಿಯಿಂದಾಗಿ ಜಾಗತಿಕ ಷೇರುಪೇಟೆಗಳಲ್ಲಿ ಮಾರಾಟದ ಒತ್ತಡ ಕಂಡುಬಂತು. ಪೂರೈಕೆಯ ಸಮಸ್ಯೆ ಎದುರಾಗಬಹುದು ಎನ್ನುವ ಆತಂಕದಿಂದ ಕಚ್ಚಾ ತೈಲ ದರ ಏರಿಕೆ ಕಂಡಿತು. ತೈಲ ದರ ಏರಿಕೆಯಿಂದಾಗಿ ಹಣದುಬ್ಬರ ದರವು ಆರ್‌ಬಿಐ ಅಂದಾಜು ಮಾಡಿರುವುದಕ್ಕಿಂತಲೂ ಹೆಚ್ಚಿನ ಮಟ್ಟಕ್ಕೆ ಏರಿಕೆ ಕಾಣಲಿದೆ ಎನ್ನುವ ಕಳವಳ ಮೂಡಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

### ₹ 76ಕ್ಕಿಂತ ಕೆಳಗಿಳಿದ ರೂಪಾಯಿ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 23 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 76.17ರಂತೆ ವಿನಿಮಯಗೊಂಡಿತು. 2021ರ ಡಿಸೆಂಬರ್ 15ರ ನಂತರದ ಕನಿಷ್ಠ ಮಟ್ಟ ಇದಾಗಿದೆ. ಬ್ರೆಂಟ್ ಕಚ್ಚಾ ತೈಲ ದರ ಶೇ 0.80ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 111.3 ಡಾಲರ್‌ಗಳಿಗೆ ತಲುಪಿದೆ.

# ಪ್ರಯಾಣಿಕ ವಾಹನ ರಿಟೇಲ್ ಮಾರಾಟ ಶೇ 8ರಷ್ಟು ಇಳಿಕೆ

**ಮುಂಬೈ (ಪಿಟಿಐ):** ದೇಶಿ ಪ್ರಯಾಣಿಕ ವಾಹನ ರಿಟೇಲ್ ಮಾರಾಟವು 2021ರ ಫೆಬ್ರುವರಿಗೆ ಹೋಲಿಸಿದರೆ 2022ರ ಫೆಬ್ರುವರಿಯಲ್ಲಿ ಶೇಕಡ 8ರಷ್ಟು ಇಳಿಕೆ ಆಗಿದೆ ಎಂದು ಭಾರತೀಯ ವಾಹನ ವಿತರಕರ ಒಕ್ಕೂಟ (ಎಫ್‌ಎಡಿಎ) ಹೇಳಿದೆ.

ಸೆಮಿಕಂಡಕ್ಟರ್ ಚಿಪ್ ಕೊರತೆಯಿಂದಾಗಿ ಕಂಪನಿ ಗಳು ತಯಾರಿಕಾ ನಷ್ಟ ಅನುಭವಿಸು ವಂತಾಗಿದೆ. ಇದರಿಂದಾಗಿ ಮಾರಾಟ ದಲ್ಲಿ ಇಳಿಕೆ ಕಂಡುಬಂದಿದೆ ಎಂದು ಅದು ತಿಳಿಸಿದೆ.

2021ರ ಫೆಬ್ರುವರಿಯಲ್ಲಿ 2.58 ಲಕ್ಷ ಪ್ರಯಾಣಿಕ ವಾಹನಗಳು ಮಾರಾಟ ಆಗಿದ್ದವು. ಇದು 2022ರ ಫೆಬ್ರುವರಿಯಲ್ಲಿ 2.38 ಲಕ್ಷಕ್ಕೆ ಇಳಿಕೆ ಆಗಿದೆ.

ಪ್ರಯಾಣಿಕ ವಾಹನ ವಿಭಾಗವು ಹೊಸ ವಾಹನಗಳ ಬಿಡುಗಡೆ ಮತ್ತು ಪೂರೈಕೆಯಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆ ಕಂಡರೂ ಗ್ರಾಹಕರಿಂದ ಬಂದ ಬೇಡಿಕೆ ಪೂರೈಸಲು ಆಗಿಲ್ಲ. ಹೊಸ ವಾಹನ ಪಡೆಯಲು ಗ್ರಾಹಕರು ಕಾಯಬೇಕಾದ ಅವಧಿಯು ಕಳೆದ ಕೆಲವು ತಿಂಗಳುಗಳಲ್ಲಿ ಇದ್ದಷ್ಟೇ ಇದೆ. ಅದರಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಸಂಘರ್ಷವು ಸೆಮಿಕಂಡಕ್ಟರ್ ತಯಾರಿಕೆಯ ಮೇಲೆ ಇನ್ನಷ್ಟು ಪರಿಣಾಮ ಉಂಟು ಮಾಡಬಹುದು ಎಂದು ಒಕ್ಕೂಟವು ಎಚ್ಚರಿಕೆ ನೀಡಿದೆ.

ಅತ್ಯಂತ ವಿರಳವಾದ ಪಲೇಡಿಯಂ ಲೋಹವನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ದೇಶಗಳಲ್ಲಿ ರಷ್ಯಾ ಕೂಡ ಒಂದು. ಸೆಮಿಕಂಡಕ್ಟರ್ ತಯಾರಿಕೆಗೆ ಈ ಲೋಹ ಅತ್ಯವಶ್ಯಕ. ಇನ್ನೊಂದೆಡೆ, ನಿಯಾನ್ ಗ್ಯಾಸ್ ತಯಾರಿಕೆ ಮತ್ತು ರಫ್ತಿನಲ್ಲಿ ಉಕ್ರೇನ್ ಸಹ ಪ್ರಮುಖ ಪಾತ್ರ ವಹಿಸುತ್ತಿದೆ. ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ನಿಯಾನ್ ಗ್ಯಾಸ್ ಬಳಸಲಾಗುತ್ತದೆ ಎಂದು ಅವರು ವಿವರಿಸಿದ್ದಾರೆ.

ದ್ವಿಚಕ್ರ ವಾಹನ ಮಾರಾಟ ಶೇ 10.67ರಷ್ಟು, ಟ್ರ್ಯಾಕ್ಟರ್ ಮಾರಾಟ ಶೇ 18.87ರಷ್ಟು ಇಳಿಕೆ ಆಗಿದೆ. ವಾಣಿಜ್ಯ ವಾಹನಗಳ ಮಾರಾಟ ಶೇ 7.41ರಷ್ಟು ಹೆಚ್ಚಾಗಿದೆ. ಎಲ್ಲ ವಿಭಾಗಗಳನ್ನೂ ಒಳಗೊಂಡು ಒಟ್ಟಾರೆ ಮಾರಾಟವು ಶೇ 9.21ರಷ್ಟು ಇಳಿಕೆ ಆಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ಫೆಬ್ರುವರಿಯಲ್ಲಿ ಸೇವಾ ಚಟುವಟಿಕೆ ಅಲ್ಪ ಹೆಚ್ಚಳ

**ನವದೆಹಲಿ (ಪಿಟಿಐ):** ಬೇಡಿಕೆ ಸ್ಥಿತಿಯಲ್ಲಿ ಸುಧಾರಣೆ ಹಾಗೂ ಕೊರೊನಾ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಿಂದಾಗಿ ದೇಶದ ಸೇವಾ ವಲಯದ ಚಟುವಟಿಕೆಗಳು ಫೆಬ್ರುವರಿಯಲ್ಲಿ ಅಲ್ಪ ಏರಿಕೆ ಕಂಡಿವೆ ಎಂದು ಐಎಚ್‌ಎಸ್ ಮಾರ್ಕಿಟ್ ಇಂಡಿಯಾ ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಸೂಚ್ಯಂಕವು ಜನವರಿಯಲ್ಲಿ 51.5ರಷ್ಟು ಇತ್ತು. ಅದು ಫೆಬ್ರುವರಿಯಲ್ಲಿ 51.8ಕ್ಕೆ ಏರಿಕೆ ಆಗಿದೆ. ಆದರೆ, ಜುಲೈ ನಂತರದ ಎರಡನೆಯ ಅತ್ಯಂತ ಮಂದಗತಿಯ ಬೆಳವಣಿಗೆ ಇದಾಗಿದೆ ಎಂದು ತಿಳಿಸಿದೆ.

ಹೊಸ ಯೋಜನೆಗಳು ಮತ್ತು ಸೇವಾ ಚಟುವಟಿಕೆಗಳು ನಿಧಾನಗತಿಯ ಬೆಳವಣಿಗೆ ಸಾಧಿಸಿವೆ. ಹಣದುಬ್ಬರದ ಒತ್ತಡ, ಕಚ್ಚಾ ಸಾಮಗ್ರಿಗಳ ಕೊರತೆ ಮತ್ತು ಸ್ಥಳೀಯ ಚುನಾವಣೆಗಳು ಬೆಳವಣಿಗೆಯ ಮೇಲೆ ಪರಿಣಾಮ ಉಂಟುಮಾಡಿವೆ ಎಂದು ಐಎಚ್‌ಎಸ್ ಮಾರ್ಕಿಟ್ ಇಂಡಿಯಾದ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

## ಸಿಂಗಪುರ: ಭಾರತದ ಪ್ರಯಾಣಿಕರಿಗೆ ಕ್ವಾರಂಟೈನ್ ರದ್ದು

**ಸಿಂಗಪುರ(ಪಿಟಿಐ):** ಭಾರತದ ವಿವಿಧ ನಗರಗಳಿಂದ ಆಗಮಿಸುವ ಲಸಿಕೆ ಪಡೆದ ಪ್ರಯಾಣಿಕರು ಇದೇ 16ರಿಂದ ಕಡ್ಡಾಯ ಕ್ವಾರಂಟೈನ್ ನಿಯಮ ಇಲ್ಲದೆ ಸಿಂಗಪುರವನ್ನು ಪ್ರವೇಶಿಸಬಹುದಾಗಿದೆ ಎಂದು ಸಿಂಗಪುರದ ಸಾರಿಗೆ ಸಚಿವ ಎಸ್. ಈಶ್ವರನ್ ಶುಕ್ರವಾರ ಪ್ರಕಟಿಸಿದ್ದಾರೆ.

## ₹ 12ರಷ್ಟು ಹೆಚ್ಚಿಸಬೇಕು ಇಂಧನ ಬೆಲೆ:ವರದಿ

**ನವದೆಹಲಿ (ಪಿಟಿಐ):** ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಹೆಚ್ಚಾಗುತ್ತಿರುವ ಕಾರಣ, ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದಿಂದ ಲಾಭವೂ ಇಲ್ಲದ, ನಷ್ಟವೂ ಇಲ್ಲದ ಸ್ಥಿತಿ ತಲುಪಬೇಕು ಎಂದಾದರೆ ಮಾರ್ಚ್ 16ಕ್ಕೆ ಮೊದಲು ಅವುಗಳ ಬೆಲೆಯನ್ನು ಲೀಟರ್‌ಗೆ ₹ 12.1ರಷ್ಟು ಹೆಚ್ಚಿಸಬೇಕು ಎಂದು ಐಸಿಐಸಿಐ ಸೆಕ್ಯುರಿಟೀಸ್ ಅಂದಾಜಿಸಿದೆ. ತೈಲ ಮಾರಾಟ ಕಂಪನಿಗಳ ಲಾಭಾಂಶ ಪರಿಗಣಿಸಿದರೆ ತೈಲೋತ್ಪನ್ನಗಳ ಬೆಲೆ ಲೀಟರಿಗೆ ₹ 15.1ರವರೆಗೆ ಹೆಚ್ಚಿಸಬೇಕಿದೆ ವರದಿ ಹೇಳಿದೆ.

### ಮುಂಬೈ ಧಾರಣೆ

**ಶೇಂಗಾ**

4-3-2022

| | |
|---|---|
| ಜಾವಾ 70/80(ಹೊಸ) | 10100-10200 |
| ಜಾವಾ 80/90(ಹೊಸ) | 9600-9700 |
| ದಪ್ಪ ಮಧ್ಯಪ್ರದೇಶ(ಹೊಸ) | 9600-9650 |
| ದಪ್ಪ ಗುಜರಾತ್(ಹೊಸ) | 8500-8600 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1540 (1550) |
| ಒಂದು ವಾರದ ಡೆಲಿವರಿ | 1535 (1545) |
| ಸೋಯಾ ಕಚ್ಚಾ | 1555 (1545) |
| ಪಾಮ್ ವಾರದ ಡೆಲಿವರಿ | 1523 (1570) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | --- (---) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
51,450 (51,350)
ಬೆಳ್ಳಿ ಕೆ.ಜಿ 67,900 (68,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

### ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹1500-2700 |
| ಮಧ್ಯಮ | ₹1000-1500 |
| ಸಣ್ಣ | ₹500-1000 |

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

# ಆಶಿಶ್ ಮಿಶ್ರಾ ಜಾಮೀನು ರದ್ದು ಅರ್ಜಿ ಮಾರ್ಚ್ 11ಕ್ಕೆ ವಿಚಾರಣೆ

ನವದೆಹಲಿ: ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರಿಗೆ ಅಲಹಾಬಾದ್ ಹೈಕೋರ್ಟ್ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನು ಮಾರ್ಚ್ 11ರಂದು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿಗೆ ಸೂಚಿಸಿದೆ.

ಲಖಿಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ನಾಲ್ವರು ರೈತರು ಸೇರಿ ಒಟ್ಟು ಎಂಟು ಮಂದಿ ಸಾವಿಗೀಡಾಗಿದ್ದರು. ಆಶಿಶ್ ಅವರಿಗೆ ಜಾಮೀನು ಮಂಜೂರಾಗಿರುವುದನ್ನು ಉಲ್ಲೇಖಿಸಿ ಪ್ರಕರಣದ ಇತರ ಆರೋಪಿಗಳು ಕೂಡ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗುತ್ತಿದ್ದಾರೆ ಎಂದು ವಕೀಲ ಪ್ರಶಾಂತ್ ಭೂಷಣ್ ಅವರು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಗಮನಿಸಿದ ನ್ಯಾಯಪೀಠವು ಆಶಿಶ್ ಮಿಶ್ರಾ ಅವರಿಗೆ ಮಂಜೂರಾಗಿರುವ ಜಾಮೀನನ್ನು ರದ್ದು ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯನ್ನು ಮಾರ್ಚ್ 11ರಂದು ಕೈಗೆತ್ತಿಕೊಳ್ಳುವುದಾಗಿ ತಿಳಿಸಿತು.

‘ಆಶಿಶ್ ಮಿಶ್ರಾ ಅವರಿಗೆ ಜಾಮೀನು ಮಂಜೂರು ಮಾಡುವ ಸಂದರ್ಭದಲ್ಲಿ ಅಲಹಾಬಾದ್ ಹೈಕೋರ್ಟ್, ಕಾನೂನಿನ ನಿಯಮಗಳನ್ನು ಪರಿಪಾಲಿಸಿಲ್ಲ. ಅಲ್ಲದೇ, ಸಾಕ್ಷ್ಯಗಳ ನಾಶ ಸೇರಿದಂತೆ ಇತರ ಅಂಶಗಳನ್ನೂ ಪರಿಗಣಿಸಿಲ್ಲ. ಪ್ರಕರಣದ ಇತರ ಆರೋಪಿಗಳೂ ಜಾಮೀನು ಕೋರಿದ್ದು, ಸದ್ಯಕ್ಕೆ ಅವರ ಜಾಮೀನು ಅರ್ಜಿಗಳನ್ನು ಪರಿಗಣಿಸದಂತೆ ಹೈಕೋರ್ಟ್‌ಗೆ ನಿರ್ದೇಶನ ನೀಡಬೇಕು’ ಎಂದೂ ವಕೀಲ ಪ್ರಶಾಂತ್ ಭೂಷಣ್ ಸುಪ್ರೀಂ ಕೋರ್ಟ್‌ಗೆ ಕೋರಿದರು.

# ಬಿಹಾರ ಪಟಾಕಿ ಕಾರ್ಖಾನೆ ಸ್ಫೋಟ, 10 ಸಾವು

ಬಾಗಲ್ಪುರ (ಬಿಹಾರ) (ಪಿಟಿಐ): ಇಲ್ಲಿನ ಮನೆಯೊಳಗೆ ಅಕ್ರಮವಾಗಿ ನಡೆಸುತ್ತಿದ್ದ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದೆ. ಈ ದುರಂತದಲ್ಲಿ ಹತ್ತು ಮಂದಿ ಮೃತಪಟ್ಟಿದ್ದು, ಒಂಬತ್ತು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಗೊಂಡಿರುವವರನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಾಗಲ್ಪುರ ಜಿಲ್ಲೆಯ ಕಜ್ಬಲಿಚಕ್ ಪ್ರದೇಶದಲ್ಲಿ ಮಹೇಂದ್ರ ಮಂಡಲ್ ಎಂಬುವವರ ಮನೆಯಲ್ಲಿ ಈ ಸ್ಫೋಟ ಸಂಭವಿಸಿದ್ದು, ಸಮೀಪದ ಎರಡೂ ಮನೆಗಳ ಕಟ್ಟಡ ಸಹ ಕುಸಿದಿವೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಸುಬ್ರತ್ ಕುಮಾರ್ ಅವರು ತಿಳಿಸಿದ್ದಾರೆ.

ಸ್ಫೋಟದ ಕಾರಣ ತಿಳಿಯಲು ಬಾಂಬ್ ನಿಷ್ಕ್ರಿಯ ದಳ ಮತ್ತು ವಿಧಿವಿಜ್ಞಾನ ತಜ್ಞರು ಮಾದರಿ ಸಂಗ್ರಹಿಸಿದ್ದಾರೆ. ಛಿದ್ರಗೊಂಡ ಹತ್ತು ಮೃತ ದೇಹಗಳ ಗುರುತನ್ನು ಸ್ಥಳೀಯ ಆಡಳಿತವು ಇನ್ನೂ ದೃಢಪಡಿಸಿಲ್ಲ.

ಈ ಹಿಂದೆಯೂ ಮಹೇಂದ್ರ ಮಂಡಲ್ ಮನೆಯೊಳಗೆ ಅಕ್ರಮ ಪಟಾಕಿ ತಯಾರಿಸುತ್ತಿದ್ದ ಸಂದರ್ಭದಲ್ಲಿ ಇದೇ ರೀತಿ ಸ್ಫೋಟ ಸಂಭವಿಸಿ ಅವರ ಪತ್ನಿ ಸೇರಿ ಮೂವರು ಮೃತಪಟ್ಟಿದ್ದರು ಎನ್ನಲಾಗಿದೆ.

ಬಿಹಾರದ ಬಾಗಲ್ಪುರ ಜಿಲ್ಲೆಯಲ್ಲಿ ಮನೆಯೊಂದರಲ್ಲಿ ಅಕ್ರಮವಾಗಿ ನಡೆಸುತ್ತಿದ್ದ ಪಟಾಕಿ ಕಾರ್ಖಾನೆ ಸ್ಫೋಟಗೊಂಡಿದ್ದು, ಜೆಸಿಬಿ ಮೂಲಕ ಅವಶೇಷಗಳನ್ನು ತೆರವುಗೊಳಿಸಲಾಯಿತು.

# ತಮಿಳುನಾಡು: 21 ಪಾಲಿಕೆಗಳಲ್ಲಿ ಡಿಎಂಕೆ ಮೈತ್ರಿಕೂಟ ಅಧಿಕಾರಕ್ಕೆ

ಚೆನ್ನೈ: ತಮಿಳುನಾಡಿನ ನಗರ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಆಡಳಿತಾರೂಢ ಡಿಎಂಕೆ ಮತ್ತು ಅದರ ಮಿತ್ರ ಪಕ್ಷ ಕಾಂಗ್ರೆಸ್, ಶುಕ್ರವಾರ ರಾಜ್ಯದ ಎಲ್ಲಾ 21 ನಗರಪಾಲಿಕೆಗಳಲ್ಲಿ ಆಡಳಿತ ಮಂಡಳಿಗಳನ್ನು ರಚಿಸಿದೆ.

ನಗರಸಭೆ/ಪುರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಗಳಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟವು ಶೇ 90ರಷ್ಟು ನಗರಸಭೆ ಮತ್ತು ಶೇ 80ರಷ್ಟು ಪುರಸಭೆಗಳಲ್ಲಿ ಜಯ ಗಳಿಸಿದೆ.

21 ಮಹಾನಗರಪಾಲಿಕೆಗಳ ಮೇಯರ್ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಡಿಎಂಕೆ ಹಾಗೂ ಮಿತ್ರಪಕ್ಷ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದ 19 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚೆನ್ನೈ ಮೇಯರ್ ಆಗಿ ಪ್ರಿಯಾ ರಾಜನ್ ಆಯ್ಕೆಯಾಗಿದ್ದಾರೆ. ಇವರು ಗ್ರೇಟರ್ ಚೆನ್ನೈ ಕಾರ್ಪೊರೇಷನ್‌ನಲ್ಲಿ (ಜಿಸಿಸಿ) ಮೊದಲ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿದ ಪರಿಶಿಷ್ಟ ಜಾತಿಗೆ ಸೇರಿದ ಮೇಯರ್ ಆಗಿದ್ದಾರೆ. ಕಾಂಗ್ರೆಸ್‌ನಿಂದ ಮಾಡಿದ್ದ ಆಟೊ ಚಾಲಕ ಕೆ. ಶರವಣನ್ ಅವರು ಕುಂಭಕೋಣಂ ಪಾಲಿಕೆಯ ಮೇಯರ್ ಆಗಿ ಆಯ್ಕೆಯಾಗಿದ್ದಾರೆ.

# ₹ 1,523 ಕೋಟಿ ವೆಚ್ಚದ ಯೋಜನೆಗೆ ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ಬಿಎಸ್‌ಎಫ್ ಹಾಗೂ ಸಿಆರ್‌ಪಿಎಫ್ ಸೇರಿದಂತೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳಿಗೆ (ಸಿಎಪಿಎಫ್) ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಖರೀದಿ ಹಾಗೂ ಐಟಿ ಮೂಲಸೌಕರ್ಯಗಳ ಸುಧಾರಣೆಗಾಗಿ ₹ 1,523 ಕೋಟಿ ವೆಚ್ಚದ ಯೋಜನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

‘ಸಿಎಪಿಎಫ್‌ಗಳ ಆಧುನೀಕರಣ ಯೋಜನೆ–4ರ ಅನುಷ್ಠಾನದಿಂದ ಈ ಪಡೆಗಳ ಒಟ್ಟಾರೆ ಕಾರ್ಯಕ್ಷಮತೆ ಹಾಗೂ ಯುದ್ಧಸನ್ನದ್ಧತೆ ಸುಧಾರಿಸಲಿದೆ. ಇದು ದೇಶದ ಆಂತರಿಕ ಭದ್ರತೆಗೆ ಬಲ ತುಂಬಲಿದೆ’ ಎಂದು ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

‘ಈ ಯೋಜನೆಯ ಅವಧಿ 2026ರ ಮಾರ್ಚ್ 31ರ ವರೆಗೆ ಇರಲಿದೆ. ಈ ಪಡೆಗಳನ್ನು ನಿಯೋಜನೆ ಮಾಡುವ ಸ್ಥಳದ ಅವಶ್ಯಕತೆಗಳಿಗೆ ತಕ್ಕಂತೆ ಶಸ್ತ್ರಾಸ್ತ್ರಗಳ ಖರೀದಿಗೆ ಈ ಯೋಜನೆ ಒತ್ತು ನೀಡುವುದು. ಪಡೆಗಳಿಗೆ ಸಂಬಂಧಿಸಿದ ಐಟಿ ಮೂಲಸೌಕರ್ಯಗಳನ್ನು ಸಹ ಮೇಲ್ದರ್ಜೆಗೇರಿಸಲಾಗುತ್ತದೆ’ ಎಂದೂ ಪ್ರಕಟಣೆ ತಿಳಿಸಿದೆ.

‘ಅಂತರರಾಷ್ಟ್ರೀಯ ಗಡಿ, ನಿಯಂತ್ರಣ ರೇಖೆ ವಾಸ್ತವ ನಿಯಂತ್ರಣ ರೇಖೆ ಬಳಿ, ಎಡಪಂಥೀಯ ಉಗ್ರವಾದ ಬಾಧಿತ ಪ್ರದೇಶಗಳು, ಜಮ್ಮು–ಕಾಶ್ಮೀರ, ಲಡಾಖ್‌ನಂತಹ ಸಂಘರ್ಷಕ್ಕೆ ಒಳಗಾದ ಹಾಗೂ ಬಂಡುಕೋರರಿಂದಾಗಿ ನಲುಗಿರುವ ಈಶಾನ್ಯ ರಾಜ್ಯಗಳಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಲು ಈ ಯೋಜನೆ ಸರ್ಕಾರಕ್ಕೆ ಮತ್ತಷ್ಟೂ ಬಲ ತುಂಬಲಿದೆ’ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಸಿಐಎಸ್‌ಎಫ್, ಐಟಿಬಿಪಿ, ಎಸ್‌ಎಸ್‌ಬಿ, ಎನ್‌ಎಸ್‌ಜಿ ಹಾಗೂ ಅಸ್ಸಾಂ ರೈಫಲ್ಸ್ ಸಹ ಸಿಎಪಿಎಫ್ ವ್ಯಾಪ್ತಿಗೆ ಬರುತ್ತವೆ.

# ಸುಸ್ಥಿರ ಇಂಧನ ಮೂಲಗಳಿಂದ ಮಾತ್ರ ಸುಸ್ಥಿರ ಅಭಿವೃದ್ಧಿ: ಮೋದಿ

ನವದೆಹಲಿ: ‘ಸುಸ್ಥಿರ ಇಂಧನ ಮೂಲಗಳಿಂದ ಮಾತ್ರ ಸುಸ್ಥಿರ ಅಭಿವೃದ್ಧಿ ಸಾಧ್ಯ. ಇದೇ ದೇಶದ ಮುನ್ನೋಟವೂ ಆಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದರು.

‘ಸುಸ್ಥಿರ ಅಭಿವೃದ್ಧಿಗಾಗಿ ಇಂಧನ’ ಎಂಬ ವಿಷಯ ಕುರಿತು ಆಯೋಜಿಸಿದ್ದ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

# ಸಚಿವ ರಾಣೆಯನ್ನು ಬಂಧಿಸದಂತೆ ಕೋರ್ಟ್ ಆದೇಶ

ಮುಂಬೈ(ಪಿಟಿಐ): ಮಾನನಷ್ಟ ಪ್ರಕರಣವೊಂದರ ಸಂಬಂಧ ಕೇಂದ್ರ ಸಚಿವ ನಾರಾಯಣ ರಾಣೆ ಹಾಗೂ ಅವರ ಪುತ್ರ, ಶಾಸಕ ನಿತೇಶ್ ರಾಣೆ ಅವರನ್ನು ಮಾ.10ರವರೆಗೆ ಬಂಧಿಸದಂತೆ ಇಲ್ಲಿನ ನ್ಯಾಯಾಲಯವೊಂದು ಮಧ್ಯಂತರ ರಕ್ಷಣೆ ನೀಡಿದೆ.

ನಿಗೂಢವಾಗಿ ಸಾವಿಗೀಡಾದ ಬಾಲಿವುಡ್ ನಟ ಸುಶಾಂತ್ ಸಿಂಗ್ ರಜಪೂತ್ ಅವರ ವ್ಯವಸ್ಥಾಪಕಿ ದಿ. ದಿಶಾ ಸಾಲಿಯನ್ ಕುರಿತಾಗಿ ನೀಡಿದ ಹೇಳಿಕೆ ಸಂಬಂಧದ ಮಾನನಷ್ಟ ಪ್ರಕರಣದಲ್ಲಿ ಈ ಇಬ್ಬರೂ ನಾಯಕರು ಬಂಧನದ ಭೀತಿ ಎದುರಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ತಂದೆ ಮತ್ತು ಪುತ್ರ ದಿಂಡೋಶಿ ಸೆಷನ್ಸ್ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು.

# ರೈಲುಗಳ ಡಿಕ್ಕಿ ತಡೆ ಪರೀಕ್ಷೆ ಯಶಸ್ವಿ

ನವದೆಹಲಿ: ರೈಲುಗಳು ಡಿಕ್ಕಿಯಾಗುವುದನ್ನು ತಡೆಯುವ, ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿರುವ ವ್ಯವಸ್ಥೆಯ (ಕವಚ) ಯಶಸ್ವಿ ಪರೀಕ್ಷೆಯನ್ನು ಶುಕ್ರವಾರ ನೆರವೇರಿಸಲಾಯಿತು.

ಸಿಕಂದರಾಬಾದ್ ಬಳಿಯ ಗುಲ್ಲಗೂಡ–ಚಿತಗಿಡ್ಡ ರೈಲು ನಿಲ್ದಾಣಗಳ ನಡುವೆ ಈ ವ್ಯವಸ್ಥೆಯ ಪರೀಕ್ಷೆಯನ್ನು ನಡೆಸಲಾಯಿತು.

ಗುಲ್ಲಗೂಡ ರೈಲು ನಿಲ್ದಾಣದಿಂದ ಹೊರಟ ರೈಲಿನಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿದ್ದರು. ಚಿತಗಿಡ್ಡದಿಂದ ಗುಲ್ಲಗೂಡ ಕಡೆಗೆ ಚಲಿಸಿದ ರೈಲಿನಲ್ಲಿ ರೈಲ್ವೆ ಮಂಡಳಿಯ ಅಧ್ಯಕ್ಷ ಹಾಗೂ ಸಿಇಒ ವಿ.ಕೆ.ತ್ರಿಪಾಠಿ ಪ್ರಯಾಣಿಸಿದರು. ಈ ರೈಲುಗಳು ಅತ್ಯಂತ ವೇಗವಾಗಿ ಚಲಿಸಿದವು. ರೈಲುಗಳ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಲಿದೆ ಎಂಬಷ್ಟರಲ್ಲಿಯೇ, ‘ಕವಚ’ ವ್ಯವಸ್ಥೆಯು ಸ್ವಯಂಚಾಲಿತವಾಗಿ ಬ್ರೇಕ್ ಹಾಕಿತು. ಆಗ ರೈಲುಗಳು 380 ಮೀಟರ್‌ಗಳ ಅಂತರದಲ್ಲಿ ನಿಲುಗಡೆಯಾದವು ಎಂದು ದಕ್ಷಿಣ ಕೇಂದ್ರೀಯ ರೈಲ್ವೆ ತಿಳಿಸಿದೆ.

ರೈಲುಗಳು ‘ರೆಡ್ ಸಿಗ್ನಲ್’ ಅನ್ನು ದಾಟಿ ಚಲುಸುವುದು ಸಹ ಪರೀಕ್ಷೆಯ ಭಾಗವಾಗಿತ್ತು. ಆದರೆ, ‘ರೆಡ್ ಸಿಗ್ನಲ್’ ದಾಟದಂತೆ ತಡೆಯುವ ವ್ಯವಸ್ಥೆಯನ್ನು ‘ಕವಚ’ ಹೊಂದಿದ್ದು, ಅದು ತತ್‌ಕ್ಷಣವೇ ಕಾರ್ಯಪ್ರವೃತ್ತವಾಗಿ ಬ್ರೇಕ್ ಹಾಕಿತು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:KW-1&2:ಟೆಂ:2021–22:4467 ದಿನಾಂಕ:28–02–2022

ಟೆಂಡರ್ ಮುಂದೂಡುವ ಪ್ರಕಟಣೆ

**2021–22ನೇ ಸಾಲಿನ ಲೆಕ್ಕ ಶೀರ್ಷಿಕೆ: 5054–ವಿಶೇಷ ಅಭಿವೃದ್ಧಿ ಯೋಜನೆಯ ಸಾಮಾನ್ಯ ಉಪ ಯೋಜನೆ, 5054–ವಿಶೇಷ ಅಭಿವೃದ್ಧಿ ಯೋಜನೆಯ ಎಸ್.ಸಿ.ಪಿ ಉಪ ಯೋಜನೆ, 3054–ರಾಜ್ಯ ಹೆದ್ದಾರಿ ನಿರ್ವಹಣೆ (ಯೋಜನೇತರ) ಮತ್ತು 3054–ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ (ಯೋಜನೇತರ) ಅಡಿಗಳಲ್ಲಿ ಮಂಜೂರಾದ ಕಾಮಗಾರಿಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ KW-1&2ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in.** ಮುಖಾಂತರ ಭಾಗವಹಿಸಬಹುದು. **ಕಾಮಗಾರಿಗಳ** ವರ್ಕ ಇಂಡೆಂಟ್ ಸಂಖ್ಯೆ: 149312, 149311, 149313, 149314, 149134, & 142820 **(ಒಟ್ಟು 6 ಕಾಮಗಾರಿಗಳು) ಅಂದಾಜು ಮೊತ್ತ ಗರಿಷ್ಠ ರೂ. 4.30 ಲಕ್ಷಗಳು, ಕನಿಷ್ಟ ರೂ. 48.40 ಲಕ್ಷಗಳು** ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ದಿನಾಂಕ: **28–02–2022**ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **09–03–2022** ಸಮಯ 16.00 ಗಂಟೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **10–03–2022** ಸಮಯ 16.30 ಗಂಟೆ, ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಇ.ಎಂ.ಡಿ., ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು, ಲೋ.ಇ ವಿಭಾಗ, ಕೊಪ್ಪಳ
ಡಿಐಪಿಆರ್/ಕೊಪ್ಪಳ/575/ಎಂಸಿಎ/2021–22

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ:08338/ 273859 ಇ–ಮೇಲ್:eepwdckd@gmail.com

ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/6928 ದಿನಾಂಕ: 02/03/2022

ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2021–22/6663 ದಿನಾಂಕ: 22/02/2022 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕ್ರ.ಸಂ. 1 ರಲ್ಲಿನ ಕಾಮಗಾರಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1) ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 07–03–2022 ರಂದು (11.00 ಗಂಟೆಗೆ) 2) ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 08–03–2022 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 10–03–2022 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 14–03–2022 (ಸಾಯಂಕಾಲ 4.30 ಗಂಟೆಗೆ) 5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ”

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1703/MCA/2021-22

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು–560 001
ದೂರವಾಣಿ: 080– 2558 6520 / 2558 9112 ಫ್ಯಾಕ್ಸ್: 080–2558 6321
ಇಮೇಲ್; ho@kspcb.gov.in ವೆಬ್‌ಸೈಟ್: www.kspcb.karnataka.gov.in

ಮಾನಿಮಂ/83/ಹಿಪಅ/ಗಣಿ/ಪಸಾಸ/2021-22/6559 ದಿನಾಂಕ: 04-03-2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

**ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್** ಇವರು ಕೃಷ್ಣ ನದಿ ತೀರದಲ್ಲಿರುವ ಹೆಮ್ಮಡಗಿ ಮರಳು ಗಣಿಗಾರಿಕೆ ವಲಯ (YDG-10) ದ ಸರ್ವೆ ನಂ. 92/2, 91/3, 96(ಪಿ), 97, 98 ಮತ್ತು 99, ಹೆಮ್ಮಡಗಿ ಗ್ರಾಮ, ಶೋರಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ 30–00 ಎಕರೆ (12.14 ಹೆಕ್ಟರ್) ಪ್ರದೇಶದಲ್ಲಿ ಯೋಜನಾ ಅವದಿಗೆ ವರ್ಷಕ್ಕೆ 1,12,761 ಟನ್ ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆ ಉದ್ದಿಮೆದಾರರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference (TOR) ಪತ್ರ ಸಂಖ್ಯೆ: SEIAA 349 MIN 2021 ದಿನಾಂಕ: 13.10.2021 ಮತ್ತು ದಿನಾಂಕ: 10.01.2022 ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ವಿಳಾಸ: ಡಾ. ಎಸ್.ಎನ್. ಸೋಲಾಂಕರ್, I/C ಮ್ಯಾನೇಜರ್ (ಎಕ್ಸಪ್ಲೋರೆಷನ್), ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಹಟ್ಟಿ, ರಾಯಚೂರು–584 115. ಕರ್ನಾಟಕ.**
2. **ಉದ್ದೇಶಿತ ಯೋಜನೆಯ ಸ್ಥಳ: ಹೆಮ್ಮಡಗಿ ಸಾಮಾನ್ಯ ಮರಳು ಬ್ಲಾಕ್ ನಂ.10, ಸರ್ವೆ ನಂ. 92/2, 91/3, 96(ಪಿ), 97, 98 ಮತ್ತು 99 ಹೆಮ್ಮಡಗಿ ಗ್ರಾಮ, ಶೋರಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.**
3. **ಯೋಜನೆಯ ಕಾರ್ಯ ಚಟುವಟಿಕೆ:** ವರ್ಷಕ್ಕೆ 1,12,761 ಟನ್ ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆ
4. **ಮಾಲಿನ್ಯ ನಿಯಂತ್ರಣ ಕ್ರಮಗಳು:** ಕ್ವಾರಿ ಕಛೇರಿಯಿಂದ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ರಾಸಾಯನಿಕ ಶೌಚಾಲಯಕ್ಕೆ ಬಿಡಲಾಗುವುದು. ಮಳೆಗಾಲದಲ್ಲಿ ಗಣಿ ಹೊಂಡಗಳಲ್ಲಿ ಸಂಗ್ರಹವಾದ ಮಳೆನೀರನ್ನು ಧೂಳು ನಿಗ್ರಹಕ್ಕೆ ಮತ್ತು ತೋಟಗಾರಿಕೆಗೆ ಬಳಸಲಾಗುತ್ತದೆ. ಸಾಗಿಸುವ ಮತ್ತು ಪ್ರವೇಶ ರಸ್ತೆಗಳಲ್ಲಿ ನಿಯಮಿತವಾಗಿ ನೀರನ್ನು ಸಿಂಪಡಿಸಲಾಗುತ್ತದೆ. ಡೀಸಲ್ ಎಂಜಿನ್‌ಗಳಿಂದ ಹೊರಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ಗುತ್ತಿಗೆ ಪ್ರದೇಶದ ಸುರಕ್ಷತಾ ವಲಯದ ಉದ್ದಕ್ಕೂ ಮತ್ತು ಇಡೀ ಪ್ರದೇಶದಲ್ಲಿರುವ ಹೊಂಡಗಳ, ಡಂಪ್‌ಗಳ ಹಾಗೂ ಸ್ಟಾಕ್‌ಗಳ ಪರಧಿಯ ಉದ್ದಕ್ಕೂ ದಟ್ಟವಾದ ಹಸಿರು ಪಟ್ಟಿಯನ್ನು ಅಭಿವೃದ್ಧಿಮಾಡಲಾಗುತ್ತದೆ.
5. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ಉದ್ದೇಶಿತ ಯೋಜನಾ ಸ್ಥಳ, ಹೆಮ್ಮಡಗಿ ಗ್ರಾಮ, ಶೋರಾಪುರ ತಾಲ್ಲೂಕು, ಯಾದಗಿರಿ ಜಿಲ್ಲೆ, ದಿನಾಂಕ: 04.04.2022(ಸೋಮವಾರ) ರಂದು ಮಧ್ಯಾಹ್ನ: 12:00 ಗಂಟೆಗೆ**
6. **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ:** ಅ) ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ ಜಿಲ್ಲೆ, ಯಾದಗಿರಿ. ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಯಾದಗಿರಿ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಯಾದಗಿರಿ. **ಈ**) ತಾಲ್ಲೂಕು ಪಂಚಾಯಿತಿ, ಶೋರಾಪುರ. **ಉ**) ಗ್ರಾಮ ಪಂಚಾಯಿತಿ ಕಾರ್ಯಾಲಯ, ಸುಗುರ್. **ಊ**) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ. **ಋ**) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ. 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001. **ಎ**) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

**ಸೂಚನೆ:** ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ, ಯಾದಗಿರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಕಾರ್ಯಕಾರಿ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ,
ಉಡುಪಿ ವಿಭಾಗ, ಉಡುಪಿ E-mail : eepwdudp02@gmail.com
ನಂ/ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ–67/2021–22/ಎಇ2 ದಿನಾಂಕ: 03.03.2022

ಅಲ್ಪಾವಧಿ ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗೆ 'ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್' https://www.eproc.Karnataka.gov.in" ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ **11.03.2022 ರ ಸಂಜೆ –5.30** ಘಂಟೆವರೆಗೆ **ಅರ್ಹ ಗುತ್ತಿಗೆದಾರರು:** 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ. **ಕಾಮಗಾರಿಯ ಹೆಸರು:** ಹೆಬ್ರಿ ತಾಲೂಕು, ಮುದ್ರಾಡಿ –ಹೆಬ್ರಿ –ಬ್ರಹ್ಮಾವರ ರಾಜ್ಯಹೆದ್ದಾರಿಯ ಕಿ.ಮೀ. 7.00 ರಿಂದ ಕಿ.ಮೀ. 10.20ರ ವರೆಗೆ ರಸ್ತೆಯನ್ನು ಅಭಿವೃದ್ಧಿಪಡಿಸುವುದು. (148121) **ಟೆಂಡರಿಗಿರಿಸಿದ ಅಂದಾಜು ಮೊಬಲಗು: ರೂ. 173.68 ಲಕ್ಷ. ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.**

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರು,
ವಾಸಾಇಂ/ಸನಿಉ/ಎಂಸಿಎ/700/21–22 ದಿ:04.03.2022 ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಪ್ರಧಾನ ಇಂಜಿನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂಖ್ಯೆ. ಪ್ರಇಂ/05/ಪಿಆರ್‌ಎಎಂಸಿ/ರಸು/2021–22 ದಿನಾಂಕ : 04.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಬೆಳಗಾಂ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ 04 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್‌ನಿಂದ (**www.eproc.karnataka.gov.in**) ದಿನಾಂಕ : **05.03.2022** ರಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪ್ರಧಾನ ಇಂಜನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ., ಬೆಂಗಳೂರುರಲ್ಲಿ ಪಡೆಯಬಹುದಾಗಿರುತ್ತದೆ. ಇ–ಮೇಲ್ : **cepramc@kpwd.gov.in**

ವಾ.ಸಂ.ಇ/ಬೆಂ.ನ/ಶ್ರೇಷ್ಠ/3596/2021–22 ಸಹಿ/– ಕಾರ್ಯಪಾಲಕ ಇಂಜನಿಯರ್, ಪಿಆರ್‌ಎಎಂಸಿ

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notification

The Karnataka State Cricket Association, M. Chinnaswamy Stadium, Cubbon Road, Bangalore, invites sealed tenders from GST Compliant for setting up of restaurant kitchen at Hubli & Belgaum cricket grounds.
The details of issue/submission of tender document are as follows :-
1. Name of the work :- Setting up of restaurant Kitchen at Hubli & Belgaum Cricket grounds
2. Estimated Cost :- Rs. 3.07 Crores
3. Earnest Money Deposit :- Rs. 3,07,000/- should be enclosed in the technical bid
4. Cost of tender form :- Rs. 15,000/- plus GST (Non Refundable)
5. Date of issue of tender form :- 05/03/2022 to 24/3/2022
6. Pre-bid Meeting :- 29/3/2022
7. Last date of submission of filled tender form two covers bid system (Technical & Commercial Separately) :- 04/04/2022 before 4.30 p.m Technical bid will be opened on same day. If any delay, will be intimated.
8. Completion of work by :- 3 (Three) months from the date of work order

Tender documents may be obtained from the Office of the KSCA, by submitting a requisition in the company's letter head between 11.00 a.m to 5.00 p.m on any working days. For any clarification please contact Mr.H.A.Venkateshprasad, AGM Civil Engineering Dept, Mobile No. 9945604515/8150900022

Hon. Secretary, KSCA

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ,
ಕೃಭಾಜನಿನಿ, ಅರಣ್ಯ ವಿಭಾಗ, ಆಲಮಟ್ಟಿ.ದೂರವಾಣಿ: 08426–281410.
ಸಂ:ಕೃಭಾಜನಿನಿ/ಉಅಸಂ/ಬಿಯುಡಿ/ಡಿಟಿಪಿ/ಎಲ್.ಎಸ್.ಯೋ/ಇ–ಟೆಂಡರ್/2021–22/1029 ದಿನಾಂಕ:02.03.2022

3ನೇ ಕರೆ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ:1) ಈ ಕಾರ್ಯಾಲಯದ ಟೆಂಡರ್ ಪ್ರಕಟಣೆ ಪತ್ರ ಸಂ: ಕೃಭಾಜನಿನಿ/ಉಅಸಂ/ಬಿಯುಡಿ/ಡಿಟಿಪಿ/ಎಲ್.ಎಸ್.ಯೋ/ಇ–ಟೆಂಡರ್/2021–22/936 ದಿನಾಂಕ: 02.02.2022. 2) ಈ ಕಾರ್ಯಾಲಯದ ಟೆಂಡರ್ ಪ್ರಕಟಣೆ ಪತ್ರ ಸಂ: ಕೃಭಾಜನಿನಿ/ ಉಅಸಂ/ಬಿಯುಡಿ/ಡಿಟಿಪಿ/ಎಲ್.ಎಸ್.ಯೋ/ಇ–ಟೆಂಡರ್/2021–22/996 ದಿನಾಂಕ: 18.02.2022

ಈ ಕೆಳಗೆ ನಮೂದಿಸಿದ ಲ್ಯಾಂಡಸ್ಕೇಪ (ಎಲ್.ಎಸ್) ಯೋಜನೆಯ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧೀನಿಯಮದಡಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.e-proc.karnataka.gov.in ವೆಬ್ ಸೈಟ್ ಮೂಲಕ ಪಡೆದುಕೊಳ್ಳಬಹುದು. ಇ–ಪ್ರೊಕ್ಯೂರ್‌ಮೆಂಟ್ ನಿಗದಿಪಡಿಸಿದಂತೆ ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮುಖಾಂತರ ಪಾವತಿಸತಕ್ಕದ್ದು. ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಈ ಕೆಳಗಿನಂತಿವೆ.

| ಕ್ರ.ಸಂ | ವಿವರ | 3ನೇ ಕರೆ ಟೆಂಡರ್ ದಿನಾಂಕ |
|---|---|---|
| 1 | ಟೆಂಡರ್ ಪ್ರಕಟಿಸುವ ದಿನಾಂಕ | **02.03.2022** ಸಂಜೆ 5.00 ಘಂಟೆಯವರೆಗೆ |
| 2 | ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | **09.03.2022** ಸಂಜೆ 5.00 ಘಂಟೆಯವರೆಗೆ |
| 3 | ಟೆಕ್ನಿಕಲ್ ಬಿಡ್ ತೆರೆಯುವ ಕೊನೆಯ ದಿನಾಂಕ | **11.03.2022** ಬೆಳಿಗ್ಗೆ 11.00 ಘಂಟೆಗೆ |
| 4 | ಆರ್ಥಿಕ ಬಿಡ್ ತೆರೆಯುವ ಕೊನೆಯ ದಿನಾಂಕ | **14.03.2022** ಬೆಳಿಗ್ಗೆ 11.00 ಘಂಟೆಗೆ |

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೃಭಾಜನಿನಿ,ಅರಣ್ಯ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/563/ಎಂಸಿಎ/2021–22

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190
ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/14,15,16/2021–22 ದಿನಾಂಕ: 02.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in - ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ:080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು. **ಕಾಮಗಾರಿಯ ಹೆಸರು:** 1) ತುಮಕೂರು ನಗರದಲ್ಲಿ ಜಿಮ್‌ನಾಸ್ಟಿಕ್ ಸೆಂಟರ್ ಅಭಿವೃದ್ಧಿ. ಕಾಮಗಾರಿಯ ಮೊತ್ತ **ರೂ.2.32ಕೋಟಿಗಳು** ಇಎಂಡಿ **ರೂ.3,48,600/–** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17.03.2022** ಟೆಂಡರ್ ತೆರೆಯುವ ದಿನಾಂಕ: **18.03.2022. 2)** ತುಮಕೂರು ನಗರ ಕೇಂದ್ರ ಗ್ರಂಥಾಲಯಕ್ಕೆ ಒಳಾಂಗಣ ಕೆಲಸ ಮತ್ತು ಪೀಠೋಪಕರಣಗಳ ಸರಬರಾಜು ಮತ್ತು ಅಳವಡಿಕೆ. ಕಾಮಗಾರಿಯ ಮೊತ್ತ **ರೂ.2.2 ಕೋಟಿಗಳು,** ಇಎಂಡಿ **ರೂ.3,30,000/–,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17.03.2022.** ಟೆಂಡರ್ ತೆರೆಯುವ ದಿನಾಂಕ: **18.03.2022, 3)** ತುಮಕೂರು ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಹಿರಿಯ ನಾಗರೀಕರ ಉದ್ಯಾನವನ ಮತ್ತು ಮಕ್ಕಳ ಆಟದ ಮೈದಾನ ಮತ್ತು ಸಂಬಂಧಿತ ಸಾಮಗ್ರಿಗಳ ಸರಬರಾಜು ಮತ್ತು ಅಳವಡಿಕೆ, ಕಾಮಗಾರಿಯ ಮೊತ್ತ **ರೂ.64.16 ಲಕ್ಷಗಳು** ಇಎಂಡಿ **ರೂ.1,28,300/–,** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17.03.2022,** ಟೆಂಡರ್ ತೆರೆಯುವ ದಿನಾಂಕ: **18.03.2022.** ಟೆಂಡರ್ ದಾಸ್ತಾನನ್ನು ದಿನಾಂಕ: **03.03.2022** ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ವ್ಯವಸ್ಥಾಪಕ ನಿರ್ದೇಶಕರು ಮತ್ತು
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.
DIPR/TUM/703/MCA/2021-22

MANGALURU SMART CITY
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ವಿಳಾಸ: ಎಮ್.ಜಿ. ರಸ್ತೆ, ಲಾಲ್‌ಭಾಗ್, ಮಂಗಳೂರು–575003, ದಕ್ಷಿಣ ಕನ್ನಡ, ಕರ್ನಾಟಕ.
CIN: U74999KA2017PLC102010 Phone: 0824-2986321
Email id: smartcitymangaluru@gmail.com Website: www.mangalurusmartcity.net

UDD/2021-22/OW/WORK_INDENT 1502/Call-2
Date:04/03/2022
ಜಾಹಿರಾತು ನಂ: 127/2021-22

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಯಡಿ “ಪ್ರಾಮಿನೇಡ್ ಡೆವೆಲಪ್ಮೆಂಟ್ ಆಫ್ ವಾಟರ್‌ಫ್ರಂಟ್ ಪ್ರಾಜೆಕ್ಟ್ ಫಾರ್ ಮಂಗಳೂರು ಸ್ಮಾರ್ಟ್ ಸಿಟಿ ಹಂತ–1B (Landscaping & PHE Works)” ಯೋಜನೆಗಾಗಿ ಟೆಂಡರ್ ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು http://www.eproc.karnataka.gov.inಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
DIPR/ADM/MCA/1104/21-22 dt.04.3.2022

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 080– 22250017 /22250018 ಇ–ಮೇಲ್ mdkmvstdc@gmail.com
WEB: http://www.karnataka.gov.in/kmvstdcl/Pages/home.aspx

ಸಂ. ಕಮವಾಪಪಅನಿನಿ/ಅಲೆಮಾರಿ ವಿಭಾಗ/ಪಪ್ರ/ಸಿ.ಆರ್.–01/2021–22 ದಿನಾಂಕ: 4–3–2022

ವಿಸ್ತರಣಾ ಪ್ರಕಟಣೆ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಡಿ 2021–22ನೇ ಸಾಲಿಗೆ **ಪರಿಶಿಷ್ಟ ಪಂಗಡದ ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯಗಳಿಗೆ, ದೌರ್ಜನ್ಯ ಸಂತ್ರಸ್ತರಿಗೆ, ಮಾಜಿ ದೇವದಾಸಿಯರಿಗೆ, ಅಂತರ್ಜಾತಿ ವಿವಾಹಿತ ದಂಪತಿಗಳಿಗೆ, ವಿಧವೆಯರು/ಒಂಟಿ ಮಹಿಳೆಯರು, ಮೀನುಗಾರರಿಗೆ** ವಸತಿ ರಹಿತ ನಿವೇಶನ (ಸೈಟ್) ಹೊಂದಿದ ಫಲಾಪೇಕ್ಷಿಗಳಿಗೆ ಮನೆ ನಿರ್ಮಿಸಿ ಕೊಡಲು ಮನೆ (ವಸತಿ) ನಿರ್ಮಾಣ ಯೋಜನೆಯಡಿಯಲ್ಲಿ ಫಲಾಪೇಕ್ಷಿಗಳಿಂದ ಉಚಿತ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ನಿಗಮದಿಂದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು:**

(1) ಅರ್ಜಿದಾರರು ಪರಿಶಿಷ್ಟ ಪಂಗಡದ ಅಲೆಮಾರಿ ಸಮುದಾಯಕ್ಕೆ ಸೇರಿದವರಾಗಿರಬೇಕು ಹಾಗೂ ಕಳೆದ ಕನಿಷ್ಟ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. (2) ಅರ್ಜಿದಾರರು 18 ವರ್ಷ ಮೇಲ್ಪಟ್ಟವರಾಗಿರಬೇಕು. (3) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶವಾದಲ್ಲಿ ರೂ.98,000/– ಹಾಗೂ ನಗರ ಪ್ರದೇಶವಾದಲ್ಲಿ ರೂ.1,20,000/– ಮಿತಿಯೊಳಗಿರಬೇಕು. (4) ಅರ್ಜಿದಾರರ ಕುಟಂಬದ ಯಾವುದೇ ಸದಸ್ಯರು ಸರ್ಕಾರಿ / ಅರೆ ಸರ್ಕಾರಿ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು. (5) ಜಿಲ್ಲೆಯಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಈಗಾಗಲೇ ನೋಂದಣಿ ಮಾಡಿಕೊಂಡಿರುವ ಪರಿಶಿಷ್ಟ ಪಂಗಡದ ಅಂಗವಿಕಲ ಫಲಾನುಭವಿಗಳ ಲಭ್ಯವಿರುವ ಪಟ್ಟಿಯಿಂದ ಅಂಗವಿಕಲರನ್ನು ನೇರವಾಗಿ ಸಂದರ್ಶನ ಮಾಡಿ ಶೇ.5ರಷ್ಟು ಮೀಸಲಾತಿಯನ್ನು ನೀಡಿ ಸೌಲಭ್ಯ ಕಲ್ಪಿಸಲಾಗುವುದು.

**ಫಲಾಪೇಕ್ಷಿಯು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು:**

(1) ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರ, (2) ಜಾತಿ ಪ್ರಮಾಣ ಪತ್ರ, (3) ಕುಟುಂಬದ ವಾರ್ಷಿಕ ವರಮಾನ ಪತ್ರ, (4) ಪಡಿತರ ಚೀಟಿ / ಆಧಾರ್ ಕಾರ್ಡ್/ ಮತದಾರರ ಗುರುತಿನ ಚೀಟಿ, (5) ಅರ್ಜಿದಾರರು ಹೊಂದಿರುವ ಬ್ಯಾಂಕ್ ಉಳಿತಾಯ ಖಾತೆಯ ವಿವರಗಳನ್ನೊಳಗೊಂಡ ಪಾಸ್ ಬುಕ್‌ನ ಮೊದಲ ಪುಟದ ಪ್ರತಿ ಮತ್ತು (6) ನಿರಾಕ್ಷೇಪಣಾ ಪತ್ರ, ಖಾತೆ, ಸೈಟ್/ನಿವೇಶನಕ್ಕೆ ಸಂಬಂಧಪಟ್ಟ ದಾಖಲಾತಿಗಳು.

**ಸಂಪರ್ಕಿಸಬಹುದಾದ ನಿಗಮದ ಜಿಲ್ಲಾ ಕಛೇರಿಗಳ ದೂರವಾಣಿ ಸಂಖ್ಯೆಗಳು:**

(1) **ಬೆಂಗಳೂರು ನಗರ:** 080–22220867, (2) **ಬೆಂಗಳೂರು ಗ್ರಾಮಾಂತರ:** 080–22220867, (3) **ಬಾಗಲಕೋಟೆ:** 08354–235016, (4) **ಬೀದರ್:** 8482233147, (5) **ವಿಜಯಪುರ:** 08352–276743, (6) **ಬಳ್ಳಾರಿ:** 08392–245551, (7) **ಬೆಳಗಾವಿ:** 0831–2451252, (8) **ಚಾಮರಾಜನಗರ:** 08226–223856, (9) **ಚಿಕ್ಕಮಗಳೂರು:** 08262–220717, (10) **ಚಿತ್ರದುರ್ಗ:** 08194–221055, (11) **ಚಿಕ್ಕಬಳ್ಳಾಪುರ:** 08156–277161, (12) **ದಾವಣಗೆರೆ:** 08192–233309, (13) **ಧಾರವಾಡ:** 0836–2460855, (14) **ಗದಗ:** 08372–239557, (15) **ಕಲಬುರ್ಗಿ:** 08472–221331, (16) **ಹಾಸನ:** 08172–235336, (17) **ಹಾವೇರಿ:** 08375–234408, (18) **ಕಾರವಾರ:** 08382–226903, (19) **ಕೋಲಾರ:** 08152–222561, (20) **ಕೊಪ್ಪಳ:** 08539–221176, (21) **ಮಂಡ್ಯ:** 08232–221157, (22) **ಮಂಗಳೂರು:** 0824–2420114, (23) **ಮಡಿಕೇರಿ:** 08272–229983, (24) **ಮೈಸೂರು:** 0821–2430022, (25) **ರಾಯಚೂರು:** 08532–220486, (26) **ರಾಮನಗರ:** 080–29782111, (27) **ಶಿವಮೊಗ್ಗ:** 08182–276776, (28) **ತುಮಕೂರು:** 0816–2280165, (29) **ಉಡುಪಿ:** 0820–2574884 ಮತ್ತು (30) **ಯಾದಗಿರಿ:** 08473–253271.

* ಆಫ್‌ಲೈನ್ ಅರ್ಜಿ ದಿನಾಂಕ: **25–02–2022** ರಿಂದ ಕೊನೆಯ ದಿನಾಂಕ: **15–03–2022** ರ ವರೆಗೆ ವಿಸ್ತರಿಸಲಾಗಿರುತ್ತದೆ.
* ಆನ್‌ಲೈನ್ ಅರ್ಜಿ ದಿನಾಂಕ: **28–02–2022** ರಿಂದ ಕೊನೆಯ ದಿನಾಂಕ: **15–03–2022** ರ ವರೆಗೆ ವಿಸ್ತರಿಸಲಾಗಿರುತ್ತದೆ.

**ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಕಛೇರಿಯಿಂದ ಹಾಗೂ ನಿಗಮದ ವೆಬ್ ಸೈಟ್ www.karnataka.gov.in/kmvstdcl** ನಿಂದ ಪಡೆಯಬಹುದು.

ಸಹಿ/–.
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ
ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು
ವಾ.ಸಾ.ಸಂ.ಇ/ಬೆಂ.ನಗರ/3602/ಆಕಾರ್/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–21/ಎಇ–2/2021–22 /3435 ದಿನಾಂಕ:–02.03.2022

ಅವಧಿ ವಿಸ್ತರಣೆ ಪ್ರಕಟಣೆ

ವಿಷಯ : ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ ಮಾಡುವ ಬಗ್ಗೆ.
ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–21/ಜೆಇ/2021–22 ದಿನಾಂಕ: 24.02.2022.
ಈ ಕಚೇರಿ ಪ್ರಕಟಣೆ ಸಂಖ್ಯೆ: ಐಎಫ್‌ಟಿ–21/2021–22 ದಿನಾಂಕ 24.02.2022ರ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿದೆ.

| | ಕ್ರ.ಸಂ 03, 09 ಮತ್ತು 10 ಕೆಡಬ್ಲ್ಯೂ–3ರ ಕಾಮಗಾರಿಗಳಿಗೆ | ಕ್ರ.ಸಂ 02 ಮತ್ತು 07 ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ |
|---|---|---|
| 1. ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗಧಿಪಡಿಸಿದ ದಿನಾಂಕ : | 04.03.2022 ಸಂಜೆ 4.00 ಗಂಟೆಯವರೆಗೆ | 08.03.2022 ಸಂಜೆ 4.00 ಗಂಟೆಯವರೆಗೆ |
| 2. ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿನಾಂಕ | – | 10.03.2022 ಬೆಳಿಗ್ಗೆ 11.00 ಗಂಟೆಗೆ |
| 3. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : | 10.03.2022 ಸಂಜೆ 4.00 ಗಂಟೆಯವರೆಗೆ | 14.03.2022 ಸಂಜೆ 4.00 ಗಂಟೆಯವರೆಗೆ |
| 4. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : | 11.03.2022 ಸಂಜೆ 4.30 ಗಂಟೆಯವರೆಗೆ | 15.03.2022 ಸಂಜೆ 4.30 ಗಂಟೆಯವರೆಗೆ |
| 5. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : | 14.03.2022 ಸಂಜೆ 4.30 ಗಂಟೆಯವರೆಗೆ | 17.03.2022 ಸಂಜೆ 4.30 ಗಂಟೆಯವರೆಗೆ |

ಉಳಿದಂತೆ ಟೆಂಡರ್ ಪ್ರಕ್ರಿಯೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದಾಗಿದೆ ಹಾಗೂ ಈ ಕಚೇರಿಯನ್ನು ಸಂಪರ್ಕಿಸುವುದು. **ದೂ. ಸಂಖ್ಯೆ : 08192 231530**

ವಾಸಾಇ/ಡಿವಿಜಿ/812/ಎಂಸಿಎ/2021–22 ಸಹಿ/–ಕಾರ್ಯಪಾಲಕ ಅಭಿಯಂತರರು., ಲೋಬಂ.ಒ.ಜ., ದಾವಣಗೆರೆ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 25536567/26096832/910 ಫ್ಯಾಕ್ಸ್: 080–25536105 Email: purchase@kmf.coop

ಸಂ. ಕಹಾಮ/ಖರೀದಿ/ಇ–ಪ್ರೊಕ್./ಟೆಂಡರ್–404/2021–22 ದಿನಾಂಕ: 03.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳವು ಬೆಂಗಳೂರು ವತಿಯಿಂದ ಕಹಾಮ ಘಟಕಗಳಾದ ಮಾತೃ ಡೇರಿ,ಯಲಹಂಕ ಮತ್ತು ನಂದಿನಿ ಐಸ್ ಕ್ರೀಂ ಘಟಕ, ಬಳ್ಳಾರಿಗೆ ಅವಶ್ಯಕವಿರುವ ಈ ಕೆಳಗೆ ತಿಳಿಸಿರುವ ಸಾಮಗ್ರಿ / ಸೇವೆಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಸಾಮಗ್ರಿಗಳ ವಿವರ | ಅಂದಾಜು ಪರಿಮಾಣ | ಇ.ಎಂ.ಡಿ (ರೂ.) |
|---|---|---|---|
| 1 | ಕಹಾಮ ಘಟಕಗಳಾದ ಮಾತೃ ಡೇರಿ,ಯಲಹಂಕ ಮತ್ತು ನಂದಿನಿ ಐಸ್ ಕ್ರೀಂ ಘಟಕ, ಬಳ್ಳಾರಿಗೆ ಅವಶ್ಯಕವಿರುವ ವಿವಿಧ ಪ್ಯಾಕಿಂಗ್ ಸಾಮಗ್ರಿಗಳು/ದಿನ ಬಳಕೆ ವಸ್ತುಗಳ ಖರೀದಿಸುವ ಮತ್ತು ಸೇವೆಯನ್ನು ಒದಗಿಸುವ ಬಗ್ಗೆ. | *ಸಾಮಗ್ರಿವಾರು ಬೇಡಿಕೆ ಮತ್ತು ಇ.ಎಂ.ಡಿ ವಿವರಗಳನ್ನು ಟೆಂಡರ್ ದಾಖಲೆಯಲ್ಲಿ ಪಡೆಯಬಹುದು. | |

ಟೆಂಡರ್ ದಾಖಲಾತಿಯನ್ನು E-Proc ವೆಬ್‌ಸೈಟ್ https://www.eproc.karnataka.gov.in ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಹಾಗೂ Helpline No: 080-23010900 / 23010901.

| | |
|---|---|
| ಟೆಂಡರ್ ಶುರುವಾಗುವ ದಿನಾಂಕ | 03.03.2022 |
| ಪೂರ್ವಬಾವಿ ಸಭೆ | 08.03.2022 ರಂದು 11.00 ಘಂಟೆಗೆ |
| ಟೆಂಡರ್ ಅಪ್ ಲೋಡಿಂಗ್ ಮಾಡಲು ಕಡೆಯ ದಿನಾಂಕ | 14.03.2022 ರಂದು 17.00 ಘಂಟೆಯವರೆಗೆ |
| ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 15.03.2022 ರಂದು 17.05 ಘಂಟೆಗೆ |
| ವಾಣಿಜ್ಯ ಬಿಡ್ ತೆರೆಯುವ ದಿನಾಂಕ | ತಾಂತ್ರಿಕ ಟೆಂಡರ್ ವಿಶ್ಲೇಷಣೆಯ ನಂತರ |

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಪ್ರಜಾವಾಣಿ ಶನಿವಾರ, 5 ಮಾರ್ಚ್ 2022

# ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

# ಆಕರ್ಷಣೆ ಸಹಜ, ನಿಯಂತ್ರಣ ನಿಮ್ಮೊಳಗಿದೆ

**ಏನಾದ್ರೂ ಕೇಳ್ಬೋದು**

ನಡಹಳ್ಳಿ ವಸಂತ್

- **22ರ ಯುವತಿ. ಸ್ಪರ್ಧಾತ್ಮಕ ಪರೀಕ್ಷೆಗೆ ಓದುತ್ತಿದ್ದೇನೆ. ನನಗೆ ಪ್ರಿಯಕರನಿದ್ದು ಅದು ಮನೆಯವರಿಗೆ ತಿಳಿದಿದೆ. ಓದುವ ಸಮಯದಲ್ಲಿ ಲೈಂಗಿಕ ಆಕರ್ಷಣೆಯಿಂದ ಮನಸ್ಸು ವಿಚಲಿತವಾಗುತ್ತದೆ. ಮದುವೆಗೆ ಮೊದಲು ಲೈಂಗಿಕ ಆಕರ್ಷಣೆಗಳು ಮೂಡುವುದು ತಪ್ಪೇ? ಲೈಂಗಿಕಕ್ರಿಯೆ ನಡೆಸುವುದು ತಪ್ಪೇ? ಪರಿಹಾರವೇನು?**

**ಹೆಸರು,** ಊರು ತಿಳಿಸಿಲ್ಲ.

- **25ರ ಬಿಇ ಪದವೀಧರ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದುತ್ತಿದ್ದೇನೆ. ಓದುವುದಕ್ಕೆ ಕುಳಿತಾಗ ಲೈಂಗಿಕ ಆಲೋಚನೆಗಳು ಬರುತ್ತವೆ. ಹಿಡಿತದಲ್ಲಿಡುವುದಕ್ಕೆ ಪ್ರಯತ್ನಿಸಿದರೂ ಸಾಧ್ಯವಾಗುತ್ತಿಲ್ಲ. ಪರಿಹಾರವೇನು?**

**ಹೆಸರು,** ಊರು ತಿಳಿಸಿಲ್ಲ.

ಈ ರೀತಿಯ ಸಾಕಷ್ಟು ಪ್ರಶ್ನೆಗಳಿರುವುದರಿಂದ ಒಟ್ಟಾಗಿ ಉತ್ತರಿಸುತ್ತಿದ್ದೇನೆ. ಗಂಡು ಹೆಣ್ಣುಗಳಿಬ್ಬರಲ್ಲಿಯೂ ದೇಹ ಬೆಳೆಯುತ್ತಾ ಬಂದಂತೆ ಲೈಂಗಿಕ ಹಾರ್ಮೋನ್‌ಗಳು ಉತ್ಪತ್ತಿಯಾಗುತ್ತವೆ. ಇವು ಸಂತಾನಾಭಿವೃದ್ಧಿಗೆ ದೇಹವನ್ನು ಸಿದ್ಧಪಡಿಸುವುದಲ್ಲದೆ ಪರಸ್ಪರ ಆಕರ್ಷಣೆಯನ್ನು ಮೂಡಿಸಿ ಗಂಡು ಹೆಣ್ಣನ್ನು ಹತ್ತಿರವಾಗಿಸುತ್ತದೆ. ಹಾಗಾಗಿ ನಿಮ್ಮೊಳಗೆ ಮೂಡುತ್ತಿರುವ ಲೈಂಗಿಕ ಆಕರ್ಷಣೆ ಪ್ರಾಕೃತಿಕವಾದದ್ದು ಮತ್ತು ಸಹಜವಾದದ್ದು. ನಮ್ಮ ತಾತ ಮುತ್ತಾತಂದಿರ ಕಾಲದಲ್ಲಿ ಸುಮಾರು 18-19 ವರ್ಷಕ್ಕೇ ಮದುವೆಯಾಗುತ್ತಿತ್ತು. ಆದರೆ ಇವತ್ತಿನ ಶೈಕ್ಷಣಿಕ ಸಾಮಾಜಿಕ ಆರ್ಥಿಕ ವ್ಯವಸ್ಥೆಯಲ್ಲಿ ಇದು ಸಾಧ್ಯವಾಗುವುದಿಲ್ಲ. ಇದಕ್ಕೆ ಅನುಗುಣವಾಗಿ ಕಾನೂನಿನಲ್ಲಿಯೂ ಬದಲಾವಣೆಗಳಾಗಿವೆ. ಹಾಗಾಗಿ ವೈವಾಹಿಕ ಬದುಕಿಗೆ ಕಾಲಿಡುವವರೆಗೆ ಲೈಂಗಿಕ ಆಕರ್ಷಣೆಯನ್ನು ನಿಭಾಯಿಸುವುದು ಅನಿವಾರ್ಯ.

ಮನಸ್ಸಿನಲ್ಲಿ ಮೂಡುವ ಆಕರ್ಷಣೆಗಳನ್ನು ಬಲವಂತವಾಗಿ ಹೊರತಳ್ಳಲು ಪ್ರಯತ್ನಿಸಿದಷ್ಟೂ ಅದು ಹೆಚ್ಚುಹೆಚ್ಚಾಗಿ ಕಾಡುತ್ತದೆ. ಇದರಿಂದ ಓದು, ವೃತ್ತಿಗೆ ತೊಂದರೆಯಾದಾಗ ನಿಮ್ಮೊಳಗೆ ಪಾಪಪ್ರಜ್ಞೆ, ಹಿಂಜರಿಕೆ ಮೂಡಬಹುದು. ಹಾಗಾಗಿ ಲೈಂಗಿಕ ಆಕರ್ಷಣೆಗಳು ಸಹಜವೆಂದು ಒಪ್ಪಿಕೊಳ್ಳುವುದನ್ನು ಅಭ್ಯಾಸ ಮಾಡಬೇಕು. ಆಕರ್ಷಣೆಗಳು ಮೂಡಿದ ತಕ್ಷಣ ದೇಹ ಮನಸ್ಸುಗಳಲ್ಲಿ ಆಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಸ್ವೀಕರಿಸಿ. ಹಾಗೆಯೇ ಉಸಿರಾಟವನ್ನು ಆಳವಾಗಿ ನಿಧಾನವಾಗಿ ಮಾಡುತ್ತಾ ದೇಹವನ್ನು ಸಡಿಲ ಬಿಡುತ್ತಾ ಹೋದರೆ ಒತ್ತಡ ಕಡಿಮೆಯಾಗುತ್ತದೆ.

ಆಕರ್ಷಣೆ ಸಹಜ ಎಂದುಕೊಂಡರೂ ಅವುಗಳಿಗೆ ವಶವಾಗದಂತೆ ತಡೆಯುವ ಸ್ವಯಂನಿಯತ್ರಣ ಶಕ್ತಿಯು ನಮ್ಮೆಲ್ಲರಲ್ಲಿ ಇರುತ್ತದೆ. ಹಾಗಾಗಿ ಒತ್ತಡಗಳು ತೀವ್ರವಾದಾಗ ಲೈಂಗಿಕ ಭಾವನೆಗಳನ್ನು ಆನಂದಿಸುತ್ತಲೇ ಇವುಗಳನ್ನು ಪಡೆದುಕೊಳ್ಳಲು ಸಮಯವಿನ್ನೂ ಸೂಕ್ತವಾಗಿಲ್ಲ ಎಂದು ನೆನಪಿಸಿಕೊಳ್ಳಿ. ಲೈಂಗಿಕ ಒತ್ತಡವನ್ನು ತಾತ್ಕಾಲಿಕವಾಗಿ ಶಮನ ಮಾಡಿಕೊಳ್ಳಲು ಹಸ್ತಮೈಥುನ ಸಂಪೂರ್ಣ ಸುರಕ್ಷಿತವಾದ ಮಾರ್ಗ. ಹೀಗೆ ಆಕರ್ಷಣೆಯನ್ನು ಒಪ್ಪಿಕೊಳ್ಳುವುದು ಮತ್ತು ಆನಂದಿಸುವುದು-ದೇಹವನ್ನು ಸಡಿಲಬಿಡುತ್ತಾ ಒತ್ತಡವನ್ನು ನಿಭಾಯಿಸುವುದು-ಅಗತ್ಯವೆನ್ನಿಸಿದರೆ ನಿಮ್ಮನ್ನೇ ತೃಪ್ತಿಪಡಿಸಿಕೊಳ್ಳುವುದು, ಇವುಗಳಿಂದ ನಿಮ್ಮೊಳಗಿನ ಸ್ವಯಂ ನಿಯಂತ್ರಣ ಶಕ್ತಿ ಸಮರ್ಥವಾಗಿ ಕೆಲಸಮಾಡುತ್ತದೆ.

ಮಾನಸಿಕ ಒತ್ತಡ ಆತಂಕ ಹಿಂಜರಿಕೆ ಭವಿಷ್ಯದ ಅನಿಶ್ಚಿತತೆ ಮುಂತಾದವು ಹೆಚ್ಚಾಗಿ ಕಾಡಿದಾಗ ಇವುಗಳನ್ನು ಮರೆಯುವ ಉಪಾಯವಾಗಿ ಕಾಮವನ್ನು ನಿಮಗೆ ಅರಿವಿಲ್ಲದಂತೆಯೇ ಬಳಸುವ ಸಾಧ್ಯತೆಗಳಿವೆ. ಆಗ ಕಾಮದ ಆಕರ್ಷಣೆ ನಶೆಯಾಗಿ ಅಂಟಿಕೊಂಡು ಸದಾ ಕಾಡುತ್ತದೆ. ಇದಕ್ಕಾಗಿ ಒಬ್ಬರೇ ಕುಳಿತು ಆತ್ಮಶೋಧನೆ ಮಾಡಿಕೊಳ್ಳಿ ಅಥವಾ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಿರಿ.

ವಿವಾಹಕ್ಕೆ ಮೊದಲು ಪ್ರಿಯಕರನೊಡನೆ ದೈಹಿಕ ಸಂಬಂಧವನ್ನು ಬೆಳೆಸುವುದರಲ್ಲಿ ಸರಿತಪ್ಪುಗಳ ಪ್ರಶ್ನೆಯಿಲ್ಲ. ಅದು ನಿಮ್ಮ ವೈಯಕ್ತಿಕ ಆಯ್ಕೆ. ಈ ವಿಚಾರವನ್ನು ಇಬ್ಬರೂ ಚರ್ಚೆ ಮಾಡಿದ್ದೀರಾ? ಲೈಂಗಿಕ ಸಂಪರ್ಕಕ್ಕೆ ಇಬ್ಬರದ್ದೂ ಒಮ್ಮತವಿದೆಯೇ? ಅನಿವಾರ್ಯ ಕಾರಣಗಳಿಗಾಗಿ ಭವಿಷ್ಯದಲ್ಲಿ ಜೀವನಸಂಗಾತಿಗಳಾಗಲು ಸಾಧ್ಯವಾಗದೆ ಹೋದರೆ ವಿವಾಹಪೂರ್ವ ಲೈಂಗಿಕತೆ ನಿಮ್ಮೊಳಗೆ ಮೂಡಿಸುವ ಭಾವನೆಗಳೇನು? ಅದನ್ನು ಗುಟ್ಟಾಗಿ ಇಟ್ಟುಕೊಳ್ಳಲು ಬಯಸುತ್ತೀರಾ? ಹೀಗೆ ಜೀವಮಾನವಿಡೀ ಗುಟ್ಟನ್ನು ಮುಚ್ಚಿಟ್ಟುಕೊಳ್ಳುವುದು ನಿಮ್ಮನ್ನು ಮಾನಸಿಕವಾಗಿ ಕುಗ್ಗಿಸಬಹುದೇ? ಇಂತಹ ಹಲವಾರು ಪ್ರಶ್ನೆಗಳಿಗೆ ನಿಮ್ಮೊಳಗೇ ಉತ್ತರ ಹುಡುಕಿಕೊಳ್ಳಿ. ಜೊತೆಗೆ ನಿಮ್ಮ ಪ್ರಿಯಕರನೊಡನೆಯೂ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳಿ.

❖

## ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

---

### ಇದು ಪರೀಕ್ಷಾ ಸಮಯ

# ಮಗುವಿಗೂ ತಾಯಿಗೂ ಬೇಕು ಸಿದ್ಧತೆ

ಡಾ. ಕೆ. ಬಿ. ರಂಗಸ್ವಾಮಿ

ಕಳೆದ ಎರಡು ವರ್ಷಗಳಿಂದ ಕೊರೊನಾ ಹಾವಳಿಯಿಂದ ಅಸ್ತವ್ಯಸ್ತಗೊಂಡಿದ್ದ ಶಿಕ್ಷಣ ವ್ಯವಸ್ಥೆ ನಿಧಾನಕ್ಕೆ ಚೇತರಿಸಿಕೊಳ್ಳತೊಡಗಿದೆ. ಕಂಪ್ಯೂಟರ್ ಮತ್ತು ಮೊಬೈಲ್ ಸ್ಕ್ರೀನಿನ ಮೇಲೆ ಕಣ್ಣು ಕೀಲಿಸಿ ಕುಳಿತಿರುತ್ತಿದ್ದ ಮಕ್ಕಳು ಶಾಲೆಗೆ ಹೋಗಿ ಪಾಠ ಕೇಳುತ್ತಿದ್ದಾರೆ. ಆನ್‌ಲೈನ್ ಪಾಠಕ್ಕೆ ಒಗ್ಗಿದ್ದವರು ನಿಧಾನವಾಗಿ ಆಫ್‌ಲೈನ್ ಪಾಠಕ್ಕೆ ಹೊಂದಿಕೊಳ್ಳುತ್ತಿದ್ದಾರೆ.

ಬದಲಾದ ಕಲಿಕಾ ವಾತಾವರಣದಿಂದ ಕೆಲ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಕೋವಿಡ್ ನಂತರ ಶಾಲೆಗಳಲ್ಲಿ ನಡೆದಿರುವ ‘ಕಿರು ಪರೀಕ್ಷೆ’ಗಳಲ್ಲಿ ಮಕ್ಕಳು ತೋರಿರುವ ‘ಪರ್ಫಾರ್ಮೆನ್ಸ್’, ಅವರ ಕಲಿಕಾ ಸಾಮರ್ಥ್ಯವನ್ನು ಅನಾವರಣಗೊಳಿಸಿದೆ. ಇದರಿಂದ ಪೋಷಕರು ಆತಂಕಗೊಂಡಿದ್ದಾರೆ. ಈ ಸ್ಥಿತಿಯಲ್ಲೇ ಮಕ್ಕಳು ವಾರ್ಷಿಕ ಪರೀಕ್ಷೆ ಬರೆಯಬೇಕಿದ್ದು, ಮಕ್ಕಳು ಸಹಜವಾಗಿ ಒತ್ತಡಕ್ಕೊಳಗಾಗುತ್ತಿದ್ದಾರೆ. ಕೆಲವು ಮಕ್ಕಳು ಖಿನ್ನತೆಗೆ ಒಳಗಾಗುವ ಸಾಧ್ಯತೆಯೂ ಇರುತ್ತದೆ.

> ‘ಕೋವಿಡ್’ ಕಾರಣದಿಂದ ಆನ್‌ಲೈನ್ ಶಿಕ್ಷಣಕ್ಕೆ ಒಗ್ಗಿಹೋಗಿದ್ದ ಮಕ್ಕಳು ಈಗ ತರಗತಿಗೆ ಹಾಜರಾಗಿ ಪಾಠ ಕೇಳುತ್ತಿದ್ದು, ಪರೀಕ್ಷೆ ಬರೆಯಲು ಸಜ್ಜಾಗುತ್ತಿದ್ದಾರೆ. ಈ ಸಮಯದಲ್ಲಿ ಮಕ್ಕಳ ಮನಸ್ಸಿನ ಮೇಲೆ ಒತ್ತಡ ಉಂಟಾಗದಂತೆ ನೋಡಿಕೊಳ್ಳಲು ಪೋಷಕರು ಅನುಸರಿಸಬೇಕಾದ ಕ್ರಮಗಳನ್ನು ಇಲ್ಲಿ ವಿವರಿಸಲಾಗಿದೆ.

ಈ ಹಂತದಲ್ಲಿ ತಾಯಂದಿರು ಸನ್ನಿವೇಶವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಆದರೆ, ಹಳಿತಪ್ಪಿರುವ ಮಕ್ಕಳ ಕಲಿಕೆಯನ್ನು ಸರಿದಾರಿಗೆ ತರುವುದು ಶಿಕ್ಷಕರು ಹಾಗೂ ಪೋಷಕರಿಗೆ ಸವಾಲಿನ ಕೆಲಸವೇ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಬೋಧನಾ ವಿಧಾನವನ್ನು ಪರಿಷ್ಕರಿಸಿಕೊಂಡು, ಸರಳ ಕಲಿಕಾ ವಿಧಾನಗಳು ಮತ್ತು ಪ್ರಾತ್ಯಕ್ಷಿಕೆಗಳನ್ನು ಅನುಸರಿಸಬೇಕು. ಇದೇ ವೇಳೆ ಪೋಷಕರು, ಮಕ್ಕಳ ಬಗ್ಗೆ ಹೆಚ್ಚು ನಿಗಾವಹಿಸಬೇಕು. ಈ ದಿಸೆಯಲ್ಲಿ ಮಕ್ಕಳು ಮತ್ತು ತಾಯಂದಿರು ವಹಿಸಬೇಕಾದ ಒಂದಿಷ್ಟು ಮುಂಜಾಗ್ರತೆಗಳ ಬಗ್ಗೆ ಗಮನಹರಿಸೋಣ.

### ತಾಯಂದಿರು ಏನು ಮಾಡಬೇಕು?

- ಹೆಚ್ಚಿನ ಅಂಕ ಗಳಿಕೆಗಾಗಿ ಮಕ್ಕಳ ಮೇಲೆ ಒತ್ತಡ ಹಾಕಬೇಡಿ. ಅವರ ಜವಾಬ್ದಾರಿಯನ್ನಷ್ಟೇ ಅವರಿಗೆ ತಿಳಿಸಿಕೊಟ್ಟರೆ ಸಾಕು.
- ಬೇರೆ ಮಕ್ಕಳ ಜೊತೆ ಹೋಲಿಕೆ ಸಲ್ಲ. ಪ್ರತಿ ಮಗು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುತ್ತದೆ. ಅದನ್ನು ಗುರುತಿಸಿ ಪೋಷಿಸಬೇಕು. ತಮ್ಮ ಮಗುವಿನ ಪ್ರತಿಭೆಯ ಕುರಿತು ಅಭಿಮಾನವಿರಲಿ ಮತ್ತು ಉತ್ತೇಜನವಿರಲಿ.
- ಮಕ್ಕಳಿಗೆ ಸೂಕ್ತ ಸಮಯಕ್ಕೆ ಹಣ್ಣು, ತರಕಾರಿಯಂತಹ ಪೌಷ್ಟಿಕ ಆಹಾರ ನೀಡಿ. ಸರಿಯಾಗಿ ನಿದ್ದೆ ಮಾಡುವಂತೆ ಗಮನಹರಿಸಿ. ಆಹಾರ ಹಿತ-ಮಿತವಾಗಿರಲಿ. ಸಮಯಕ್ಕೆ ಸರಿಯಾಗಿ ಆಹಾರ ನೀಡಿ. ಇದು ಮಕ್ಕಳ ಬೌದ್ಧಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.
- ಆಹಾರದಷ್ಟೇ ಸಮರ್ಪಕವಾದ ನಿದ್ದೆ ಬಹಳ ಮುಖ್ಯ. ಮಗು ಸರಿಯಾಗಿ ನಿದ್ರಿಸುವಂತೆ ಗಮನಹರಿಸಿ.
- ಇಷ್ಟು ದಿನ ಅಂಟಿಕೊಂಡಿದ್ದ ಮೊಬೈಲ್ ಅನ್ನು ಒಮ್ಮೆಗೇ ಬಿಡಿಸುವುದು ಕಷ್ಟಸಾಧ್ಯ. ಆದರೆ ಅದರ ಬಳಕೆ ಮಿತವಾಗಿರುವಂತೆ ನೋಡಿಕೊಳ್ಳಿ. ಮಗು ಮೊಬೈಲ್‌ನಲ್ಲಿ ಏನನ್ನು ನೋಡುತ್ತದೆ ಎಂಬುದರ ಬಗ್ಗೆ ಗಮನವಿರಲಿ, ಅಷ್ಟೇ. ಹಾಗೆಂದು, ಸದಾ ಸಂದೇಹಾಸ್ಪದವಾಗಿ ನೋಡುವುದು ಬೇಡ. ಅದು ಮಗುವಿನ ಮನಸ್ಸಿನ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು.
- ಗೆಳೆಯರೊಂದಿಗಿನ ಒಡನಾಟಕ್ಕೆ ಅತಿಯಾದ ನಿರ್ಬಂಧ ಹಾಕಬೇಡಿ. ಆದರೆ ಅವರ ಚಲನವಲನಗಳ ಬಗ್ಗೆ ನಿಗಾ ವಹಿಸಬೇಕು.
- ಬೇಸಿಗೆ ಪ್ರಾರಂಭವಾಗುತ್ತಿದ್ದಂತೆ ವಾಂತಿಭೇದಿ, ಕಾಮಾಲೆಯಂತಹ ರೋಗಗಳ ಸಂಭವನೀಯತೆ ಹೆಚ್ಚು. ಹಾಗಾಗಿ ಆಹಾರ, ಪಾನೀಯಗಳ ಸೇವನೆ ಮತ್ತು ಪರಿಸರದ ಸ್ವಚ್ಛತೆ ಬಗ್ಗೆ ನಿಗಾ ವಹಿಸಿ. ಮಗುವಿನ ಯಾವುದೇ ಅನಾರೋಗ್ಯದ ಬಗ್ಗೆ ಉದಾಸೀನ ಬೇಡ. ವೈದ್ಯರ ಬಳಿ ಸೂಕ್ತ ಚಿಕಿತ್ಸೆ ಕೊಡಿಸಿ.
- ಹದಿನೈದು ವರ್ಷ ಮೀರಿರುವ ಮಕ್ಕಳಿಗೆ ಕೊರೊನಾ ಲಸಿಕೆಯನ್ನು ತಪ್ಪದೇ ಹಾಕಿಸಿ.
- ಕೊರೊನಾ ಸಮುದಾಯದಲ್ಲಿ ಇನ್ನೂ ಇದೆ. ಹಾಗಾಗಿ ಎಲ್ಲಾ ಮುನ್ನೆಚ್ಚರಿಕೆಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಗುವಿಗೆ ತಿಳಿಹೇಳಬೇಕು.

### ಮಕ್ಕಳು ಏನು ಮಾಡಬೇಕು ?

- ಪರೀಕ್ಷೆ ಸಮೀಪಿಸುತ್ತಿದೆ. ಪಾಠಗಳನ್ನು ಪುನರ್‌ಮನನ ಮಾಡಿಕೊಳ್ಳಿ. ಇದರಿಂದ ಪರೀಕ್ಷೆ ವೇಳೆ ಹೆಚ್ಚು ಒತ್ತಡಕ್ಕೊಳಗಾಗುವುದನ್ನು ತಪ್ಪಿಸಬಹುದು.
- ಓದಿದ್ದನ್ನು ಬರೆದು ಅಭ್ಯಾಸ ಮಾಡಿ. ಆಗ ಚೆನ್ನಾಗಿ ನೆನಪಿನಲ್ಲಿ ಉಳಿಯುತ್ತದೆ.
- ಸುಲಭವೆನಿಸುವ ವಿಷಯಗಳಿಗಿಂತ ಕ್ಲಿಷ್ಟಕರ ವಿಷಯಗಳಿಗೆ ಹೆಚ್ಚು ಒತ್ತು ನೀಡಬೇಕು.
- ಸಹಪಾಠಿಗಳ ಜೊತೆ ಚರ್ಚಿಸುವುದು ವಿಷಯವನ್ನು ನೆನಪಿಟ್ಟುಕೊಳ್ಳಲು ಸಹಕಾರಿ.
- ಯಾವುದೇ ವಿಷಯದಲ್ಲಿ ಏನೇ ಸಂದೇಹವಿದ್ದರೂ ನೇರವಾಗಿ ಶಿಕ್ಷಕರನ್ನು ಕೇಳಿ ಬಗೆಹರಿಸಿಕೊಳ್ಳಬೇಕು.
- ಮೊಬೈಲ್ ಮತ್ತು ಟಿ.ವಿ ವೀಕ್ಷಣೆ ಮಿತವಾಗಿರಲಿ. ಆದರೆ, ಸಾಹಿತ್ಯ, ಸಂಗೀತಗಳಂತಹ ಪಠ್ಯೇತರ ಚಟುವಟಿಕೆಗಳಿಗೂ ಸ್ವಲ್ಪ ಸಮಯ ಕೊಡಿ.
- ನೆನಪಿನ ಶಕ್ತಿಗೂ ನಿದ್ರೆಗೂ ನೇರ ಸಂಬಂಧವಿದೆ. ಆದುದರಿಂದ 7ರಿಂದ 8 ಗಂಟೆಗಳ ಕಾಲ ಗುಣಮಟ್ಟದ ನಿದ್ರೆ ಅತ್ಯಗತ್ಯ. ಓದಿನ ನೆಪದಲ್ಲಿ ರಾತ್ರಿ ಬಹಳ ಹೊತ್ತಿನವರೆಗೆ ನಿದ್ದೆಗೆಡಬಾರದು. ಮುಂಜಾನೆಯ ಓದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಲು ಸಹಕಾರಿ.
- ನಡಿಗೆ, ಓಟ ಮತ್ತಿತರ ಲಘು ವ್ಯಾಯಾಮಗಳು ಮನಸ್ಸನ್ನು ಪ್ರಫುಲ್ಲವಾಗಿರಿಸುತ್ತವೆ. ಆಟೋಟಗಳಿಗೆ ಸಮಯ ನಿಗದಿಯಾಗಿರಲಿ. ಧ್ಯಾನ ಮತ್ತು ಪ್ರಾಣಾಯಾಮ ನೆನಪಿನ ಶಕ್ತಿ ಹೆಚ್ಚಿಸುತ್ತವೆ. ಮಾತ್ರವಲ್ಲ, ನೆನಪಿನ ಶಕ್ತಿ ವೃದ್ಧಿಗೆ, ಸಕಾರಾತ್ಮಕ ಚಿಂತಿಸಲು ನೆರವಾಗುತ್ತವೆ.
- ಸಮಯಕ್ಕೆ ಸರಿಯಾಗಿ ಊಟ ಮಾಡಿ. ಬೆಳಗಿನ ಉಪಾಹಾರ ತಪ್ಪಿಸಬೇಡಿ. ಏಕೆಂದರೆ ದಿನಪೂರ್ತಿ ಲವಲವಿಕೆಯಿಂದಿರಲು ಬೆಳಗಿನ ಉಪಹಾರವೇ ಮೂಲಾಧಾರ. ರಾತ್ರಿ ಭೋಜನ ಲಘುವಾಗಿರಲಿ. ಕಾಫಿ, ಚಹಾದ ಸೇವನೆ ಮಿತವಾಗಿರಲಿ. ತಾಜಾ ಹಣ್ಣುಗಳ ಸೇವನೆ ಒಳ್ಳೆಯದು. ಒಣಹಣ್ಣುಗಳು ನೆನಪಿನ ಶಕ್ತಿ ವೃದ್ಧಿಸಲು ಮತ್ತು ಮನಸ್ಸನ್ನು ಶಾಂತವಾಗಿರಿಸಲು ಸಹಕಾರಿ. ಕರಿದ ಪದಾರ್ಥ, ಜಂಕ್ ಫುಡ್‌ಗಳ ಸೇವನೆ ಮೇಲೆ ನಿಯಂತ್ರಣವಿರಲಿ.
- ಇನ್ನೇನು ಬಿಸಿಲು ಹೆಚ್ಚಾಗಲಿದೆ. ದಾಹ ತಣಿಸಲು ಮತ್ತು ನಿರ್ಜಲತೆ (DEHYDRATION) ತಡೆಗೆ ಆಗಾಗ ನೀರು ಕುಡಿಯುತ್ತಿರಬೇಕು. ಎಳನೀರು, ಹಣ್ಣಿನ ರಸದಂತಹ ತಾಜಾ ದ್ರವಾಹಾರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸೇವಿಸಬೇಕು.

(ಲೇಖಕರು: ಪ್ರಾಧ್ಯಾಪಕರು,ಮಕ್ಕಳ ವಿಭಾಗ,
ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯ ತುಮಕೂರು)

---

# ಮೊಟ್ಟೆಯ ಖಾದ್ಯ ವೈವಿಧ್ಯ

**ನಳಪಾಕ**

## ಎಗ್ ಮಸಾಲ ಫ್ರೈ

**ಬೇಕಾಗುವ ಸಾಮಗ್ರಿಗಳು:** ಮೊಟ್ಟೆ – 4 (ಬೇಯಿಸಿದ್ದು), ಎಣ್ಣೆ – 3 ಚಮಚ, ಜೀರಿಗೆ – ಅರ್ಧ ಚಮಚ, ಬೆಳ್ಳುಳ್ಳಿ ಎಸಳು – 8, ಕರಿಬೇವು– 8 ರಿಂದ 10 ಎಲೆ, ಅರಿಸಿನ ಪುಡಿ – ಅರ್ಧ ಚಮಚ, ಖಾರದಪುಡಿ – 1 ಚಮಚ, ಕಾಳುಮೆಣಸಿನ ಪುಡಿ – ಅರ್ಧ ಚಮಚ, ಚಿಕನ್ ಮಸಾಲ – 1 ಚಮಚ, ಕೊತ್ತಂಬರಿ ಪುಡಿ – ಅರ್ಧ ಚಮಚ, ಉಪ್ಪು – ರುಚಿಗೆ, ಎಣ್ಣೆ – ಹುರಿಯಲು

**ತಯಾರಿಸುವ ವಿಧಾನ:** ಪ್ಯಾನ್‌ನಲ್ಲಿ ಎಣ್ಣೆ ಹಾಕಿ 2 ನಿಮಿಷ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ಬೆಳ್ಳುಳ್ಳಿ, ಜೀರಿಗೆ ಹಾಗೂ ಕರಿಬೇವು ಹಾಕಿ ಪರಿಮಳ ಬರುವವರೆಗೂ ಹುರಿಯಿರಿ. ಅದಕ್ಕೆ ಅರಿಸಿನ ಪುಡಿ, ಖಾರದಪುಡಿ, ಕಾಳುಮೆಣಸಿನ ಪುಡಿ, ಚಿಕನ್ ಮಸಾಲ ಪುಡಿ, ಕೊತ್ತಂಬರಿ ಪುಡಿ ಹಾಗೂ ಉಪ್ಪು ಸೇರಿಸಿ ಒಂದು ನಿಮಿಷ ಕೈಯಾಡಿಸಿ. ಅದಕ್ಕೆ ಮೊಟ್ಟೆ ಸೇರಿಸಿ ಒಂದು ನಿಮಿಷ ಹುರಿಯಿರಿ. ಮೊಟ್ಟೆಯ ಸಂಪೂರ್ಣ ಭಾಗಕ್ಕೆ ಮಸಾಲೆ ಹಿಡಿಯುವಂತೆ ಮೊಟ್ಟೆಯನ್ನು ಮಸಾಲೆಯಲ್ಲಿ ತಿರುಗಿಸಿ. ಇದು ಚೆನ್ನಾಗಿ ಹಿಡಿದ ಮೇಲೆ ಕೊತ್ತಂಬರಿ ಸೊಪ್ಪು ಉದುರಿಸಿ.

❖

## ಎಗ್ ಪೆಪ್ಪರ್ ಡ್ರೈ

**ಬೇಕಾಗುವ ಸಾಮಗ್ರಿಗಳು:** ಬೇಯಿಸಿದ ಮೊಟ್ಟೆ – 3, ಎಣ್ಣೆ – 2 ಚಮಚ, ಈರುಳ್ಳಿ – 2 ದೊಡ್ಡದು, ಹಸಿಮೆಣಸು – 2, ಕರಿಬೇವು – 10 ಎಲೆಗಳು, ಖಾರದಪುಡಿ – ಅರ್ಧ ಚಮಚ, ಅರಿಸಿನ ಪುಡಿ – ಚಿಟಿಕೆ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – ಅರ್ಧ ಚಮಚ, ಕಾಳುಮೆಣಸಿನ ಹುಡಿ – ಅರ್ಧ ಚಮಚ

**ತಯಾರಿಸುವ ವಿಧಾನ:** ಪ್ಯಾನ್‌ನಲ್ಲಿ ಎಣ್ಣೆ ಬಿಸಿ ಮಾಡಿ. ಅದಕ್ಕೆ ಉಪ್ಪು ಹಾಗೂ ಅರಿಸಿನ ಪುಡಿ ಸೇರಿಸಿ ಕೈಯಾಡಿಸಿ. ಅದಕ್ಕೆ ಬೇಯಿಸಿದ ಮೊಟ್ಟೆಯನ್ನು ಎರಡು ಭಾಗ ಮಾಡಿ ಸೇರಿಸಿ ಎರಡೂ ಭಾಗವನ್ನು ಚೆನ್ನಾಗಿ ಹುರಿದು ಪ್ಲೇಟ್‌ನಲ್ಲಿ ತೆಗೆದು ಇರಿಸಿಕೊಳ್ಳಿ. ನಂತರ ಅದೇ ಎಣ್ಣೆಗೆ ಕತ್ತರಿಸಿದ ಈರುಳ್ಳಿ, ಹಸಿಮೆಣಸು ಹಾಗೂ ಕರಿಬೇವು ಸೇರಿಸಿ ಈರುಳ್ಳಿ ಮೆತ್ತಾಗಾಗುವರೆಗೂ ಹುರಿಯಿರಿ. ಅದಕ್ಕೆ ಖಾರದಪುಡಿ, ಅರಿಸಿನ ಹಾಗೂ ಉಪ್ಪು ಸೇರಿಸಿ. ನಂತರ ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ವಾಸನೆ ಹೋಗುವವರೆಗೂ ಹುರಿಯಿರಿ. ಈ ಮಿಶ್ರಣಕ್ಕೆ ಕಾಳುಮೆಣಸಿನ ಹುಡಿ ಸೇರಿಸಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ. ಚೆನ್ನಾಗಿ ಮಿಶ್ರಣವಾದ ಮೇಲೆ, ಇದಕ್ಕೆ ಬೇಯಿಸಿದ ಮೊಟ್ಟೆಯನ್ನು ಅರ್ಧಭಾಗ ಮಾಡಿ ಹಾಕಿ ಸಣ್ಣ ಉರಿಯಲ್ಲಿ ಬೇಯಿಸಿ. ಮೊಟ್ಟೆಯ ಎಲ್ಲಾ ಬದಿಗೂ ಮಿಶ್ರಣ ಹಿಡಿಯುವಂತೆ ನೋಡಿಕೊಳ್ಳಿ. ಆದರೆ ಮೊಟ್ಟೆಯನ್ನು ಎಚ್ಚರದಿಂದ ತಿರುವಿ ಹಾಕಿ. ಮೊಟ್ಟೆ ಹಾಕಿದ ಮೇಲೆ ಒಂದೆರಡು ನಿಮಿಷ ಕುದಿಸಿ.

❖

---

JOCKEY
FACTORY SECONDS
UPTO 50% OFF*
INNERWEAR | LEISUREWEAR | ACTIVEWEAR
KIDSWEAR | SOCKS
• 10 am to 8 pm • Open All Days • Master/Visa Card Accepted
* T & C apply

Venues in Bangalore
• Malleswaram: The Canara Union, No.42, 8th Main, Canara Union Road - 560 003
• Jayanagar: Premachandra Kalyana Mahal, T.Mariyappa Road, 2nd Block, (Near Ashoka Pillar) - 560 011
• Rajarajeswari Nagar: Vasavi Mahal Kalyana Mantapa, No.606, Next To Reliance Digital, Ideal Homes I Phase - 560 098
• Rajajinagar: Raja Rajeshwari Kalyana Mantapa, 2nd Block, Dr. Rajkumar Road - 560 010
• Vijay Nagar: Five O Gallery, No.50, 17th Cross, M.C. Road, Near Vijay Nagar Bus Stop - 560 040
• Infantry Road: Safina Plaza, No.84/85 - 560 001
• Bannerghatta Road: Santhome Parish Church Hall, Hulimavu, Near Meenakshi Mall - 560 076
• Banashankari: Sri Hari Kalyana Mantap, 30th Main, Banshankari, B.S.K. 3rd Stage, Near K.I.M.S. - 560 085
• Koramangala: Apoorva International, #35A, Raheja Arcade, Opp Star Box - 560 095
• Basavanagudi: Amolak Apparels, #104, Bull Temple Road, Near Ramakrishna Ashram - 560 019
Org. by: Surya Agency Pvt. Ltd.

GRT JEWELLERS Since 1964
ಇದೀಗ
ಬೆಂಗಳೂರು, RR ನಗರದಲ್ಲಿ
ಚಿನ್ನದ ಮೇಲೆ ಪ್ರತಿ ಗ್ರಾಂಗೆ ₹50* ಕಡಿಮೆ
ಆಭರಣ ಖರೀದಿ
ಹಳೆಯ ಚಿನ್ನದ ಮೇಲೆ ಪ್ರತಿ ಗ್ರಾಂಗೆ ₹50* ಹೆಚ್ಚಾಗಿ ಪಡೆಯಿರಿ
ಆಭರಣ ಎಕ್ಸ್‌ಛೇಂಜ್
ವಜ್ರದ ಮೇಲೆ ಒಂದು ಕ್ಯಾರೆಟ್‌ಗೆ ₹7500* ಕಡಿತ
25%* ಕಡಿತ, ಬೆಳ್ಳಿ ಸಾಮಾಗ್ರಿಗಳ ಮಜೂರಿಯ ಮೇಲೆ
10%* ಕಡಿತ, ಬೆಳ್ಳಿ ಆಭರಣಗಳ MRPಯ ಮೇಲೆ
ನಮ್ಮ ಜ್ಯುವೆಲರಿ ಪರ್ಚೇಸ್ ಪ್ಲಾನ್ ಸೇರಿರಿ ಹಾಗೂ ಆಕರ್ಷಕ ಎರಡು ಗಿಫ್ಟ್‌ಗಳನ್ನು ಪಡೆಯಿರಿ.
*ಈ ಆಫರ್ RR ನಗರ ಶೋರೂಮ್‌ನಲ್ಲಿ ಸೀಮಿತ ಅವಧಿಗೆ ಮಾತ್ರ ಲಭ್ಯ. ಇದು ಚಿನ್ನದ ನಾಣ್ಯಗಳು ಹಾಗೂ ಬಾರ್‌ಗಳಿಗೆ ಅನ್ವಯಿಸುವುದಿಲ್ಲ. ಇದನ್ನು ಬೇರೆ ಯಾವುದೇ ಆಫರ್‌ಗಳ ಜೊತೆ ಸೇರಿಸಲಾಗುವುದಿಲ್ಲ. ಈ ಆಫರ್ 7%ಗಿಂತ ಕಡಿಮೆ ವೇಸ್ಟೇಜ್ (VA) ಇರುವ ಆಭರಣಗಳಿಗೆ ಅನ್ವಯಿಸುವುದಿಲ್ಲ. ನಿಯಮ ನಿಬಂಧನೆಗಳು ಅನ್ವಯಿಸುತ್ತವೆ.
*Avail attractive gifts on UPI payments.
NO-32 & 33, JAWAHARLAL NEHRU ROAD, BEML 3RD STAGE, (NEAR BEML COMPLEX, NEXT TO GANESHA TEMPLE) RAJA RAJESWARI NAGAR (RR NAGAR), BENGALURU - 560 060. PH: 080 - 2334 1515.
Shop online at: www.oriana.com | mail@grtjewels.com | GRT LIVE VIDEO SHOPPING Shop from the comfort of your home

# ರಾಜ್ಯ ಬಜೆಟ್ 2022-23

### ಹೊಸ ಯೋಜನೆಗಳು

- ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ 'ಎಲಿವೇಟ್' ಯೋಜನೆಯಡಿ ಗುರುತಿಸಿದ ಮಹಿಳಾ ಉದ್ಯಮಿಗಳು ಮತ್ತು ಮಹಿಳೆ ನೇತೃತ್ವದ ಸ್ಟಾರ್ಟ್ ಅಪ್‌ಗಳಿಗೆ ₹ 10 ಲಕ್ಷ ಸಾಲ
- ಪ್ರತಿ ಜಿಲ್ಲೆಯಲ್ಲಿ ಎರಡು ತಾಲ್ಲೂಕು ಕೇಂದ್ರಗಳಲ್ಲಿ ಹೆಚ್ಚು ಮಹಿಳಾ ಕಾರ್ಮಿಕರ ಸಾಂದ್ರತೆ ಇರುವ ಪ್ರದೇಶಗಳಲ್ಲಿ ಶಿಶುಪಾಲನಾ ಕೇಂದ್ರಗಳ ಸ್ಥಾಪನೆ

ಕೃಷಿ, ಶಿಕ್ಷಣ, ಆರೋಗ್ಯ, ಮಹಿಳಾ ಸಬಲೀಕರಣ ಒಳಗೊಂಡಂತೆ ನವ ಕರ್ನಾಟಕ ನಿರ್ಮಾಣ ಮಾಡುವ, ಇಡೀ ರಾಜ್ಯವನ್ನು ಸರ್ವತೋಮುಖ ಅಭಿವೃದ್ಧಿಯತ್ತ ಕೊಂಡೊಯ್ಯುವ ದೃಢ ಸಂಕಲ್ಪದ ಬಜೆಟ್. ಮೋದಿಯವರ ಆತ್ಮನಿರ್ಭರ ಭಾರತ ಕಲ್ಪನೆ ಈ ಬಜೆಟ್‌ನಲ್ಲಿ ಪ್ರತಿಫಲಿಸಿದೆ

**ಪ್ರಲ್ಹಾದ ಜೋಶಿ,** ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

### 100 'ಅಂಬೇಡ್ಕರ್ ವಿದ್ಯಾರ್ಥಿ ನಿಲಯ'

ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡದ ಯೋಜನೆ (ಎಸ್‌ಸಿಪಿ, ಟಿಎಸ್‌ಪಿ) ಅಡಿ ಈ ಸಮುದಾಯದ ವಿದ್ಯಾರ್ಥಿಗಳಿಗೆ 100 'ಡಾ.ಬಿ.ಆರ್ ಅಂಬೇಡ್ಕರ್ ವಿದ್ಯಾರ್ಥಿ ನಿಲಯ'ಗಳನ್ನು ಹಾಗೂ ₹ 750 ಕೋಟಿ ವೆಚ್ಚದಲ್ಲಿ 10 ಕ್ರೈಸ್ ವಸತಿ ಶಾಲೆಗಳ ಕಟ್ಟಡಗಳನ್ನು ಲೋಕೋಪಯೋಗಿ ಇಲಾಖೆ ಮೂಲಕ ನಿರ್ಮಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಅಲ್ಲದೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಬಾಡಿಗೆ ಕಟ್ಟಡದಲ್ಲಿರುವ ವಿದ್ಯಾರ್ಥಿ ನಿಲಯಗಳ ಬದಲು ₹ 165 ಕೋಟಿ ವೆಚ್ಚದಲ್ಲಿ 50 'ಕನಕದಾಸ' ವಿದ್ಯಾರ್ಥಿನಿಲಯ ನಿರ್ಮಿಸುವ ಪ್ರಸ್ತಾವವೂ ಆಯವ್ಯಯದಲ್ಲಿದೆ

# ಅಭಿವೃದ್ಧಿಯ ಎಂಜಿನ್‌ಗಳಿಗೆ ಸಿಕ್ಕ 'ಇಂಧನ'

ವಿಶ್ಲೇಷಣೆ

**ರಾಜೇಶ್ವರಿ**

**ಕೋವಿಡ್** ಹೊಡೆತ, ಆರ್ಥಿಕತೆಯ ಕುಸಿತ, ಹೀಗೆ ಸಾಲು ಸಾಲು ಸವಾಲುಗಳ ನಡುವೆ ರಾಜ್ಯ ಸರ್ಕಾರ ಬಜೆಟ್ ಮಂಡಿಸಿದೆ. ನಮ್ಮ ಅಭಿವೃದ್ಧಿ ಕಾರ್ಯಸೂಚಿಯ ಎಲ್ಲಾ ಅಂಶಗಳಲ್ಲಿ ಶಿಕ್ಷಣ, ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣ ತುಂಬಾ ಮುಖ್ಯವಾಗಿದೆ. ದೇಶವು ಇಂದು ಮಹಿಳಾ ಅಭಿವೃದ್ಧಿಯ ಮಾದರಿಯಿಂದ ಮಹಿಳಾ ನೇತೃತ್ವದ ಅಭಿವೃದ್ಧಿಗೆ ವೇಗವಾಗಿ ಚಲಿಸುತ್ತಿದೆ. ಈ ನಿಟ್ಟಿನಲ್ಲಿ 2022-23 ರ ಈ ಬಜೆಟ್ ಶಿಕ್ಷಣ ಮತ್ತು ಮಹಿಳಾ ಸಬಲೀಕರಣ ಭವಿಷ್ಯದ ಆರ್ಥಿಕ ಬೆಳವಣಿಗೆಗೆ ಪ್ರಮುಖ ಎಂಜಿನ್ ಎಂದು ಒಪ್ಪಿಕೊಳ್ಳುವ ಮೂಲಕ ರಾಜ್ಯದ ಅಭಿವೃದ್ಧಿಗೆ ಶಿಕ್ಷಣ, ಉದ್ಯೋಗ, ಸಬಲೀಕರಣ ಎಂಬ ತ್ರಿವಳಿ ಸೂತ್ರ ಘೋಷಿಸಿದೆ.

ಪ್ರಸಕ್ತ ಬಜೆಟ್‌ನಲ್ಲಿ ಮಹಿಳಾ ಸಬಲೀಕರಣಕ್ಕಾಗಿ 43,188 ಕೋಟಿ ಘೋಷಿಸಲಾಗಿದೆ. ಇದು ಒಟ್ಟು ಬಜೆಟ್‌ನ 17 ಪ್ರತಿಶತ ಪಾಲನ್ನು ಹೊಂದಿದೆ. ರಾಜ್ಯದೆಲ್ಲೆಡೆ 300 ಮಹಿಳಾ ಸ್ವಾಸ್ಥ್ಯ ಕೇಂದ್ರ ಸ್ಥಾಪನೆಗೆ ಅವಕಾಶ, ಮಹಿಳಾ ಸ್ಟಾರ್ಟ್‌ಅಪ್‌ಗೆ ₹ 10 ಲಕ್ಷ ನೇರ ಸಾಲ, ಉದ್ಯೋಗಸ್ಥ ಮಹಿಳೆಯರಿಗೆ ಹೊಸ ವಸತಿನಿಲಯ ನಿರ್ಮಾಣ, ಬಾಲ್ಯ ವಿವಾಹ ತಡೆಗೆ ಸ್ಫೂರ್ತಿ ಯೋಜನೆ ವಿಸ್ತರಣೆಗೆ ನಿರ್ಧರಿಸಲಾಗಿದೆ. ಆಶಾ ಕಾರ್ಯಕರ್ತೆಯರು ಭಾರತದ ಗ್ರಾಮೀಣ ಆರೋಗ್ಯದ ಬೆನ್ನೆಲುಬು. ಈ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸಿದ ಸರಕಾರದ ಕ್ರಮ ಸ್ವಾಗತಾರ್ಹ.

ಇನ್ನು ಶಿಕ್ಷಣ ಕ್ಷೇತ್ರವನ್ನು ನೋಡುವುದಾದರೆ, ಬಜೆಟ್‌ನ 12 ಪ್ರತಿಶತ ಪಾಲನ್ನು ಹೊಂದಿದೆ. ಹಿಂದಿನ ಬಜೆಟ್‌ಗೆ ಹೋಲಿಸಿದರೆ ಇದು ಶೇಕಡಾ 7.72ರಷ್ಟು ಹೆಚ್ಚಳವಾಗಿದೆ. ರಾಜ್ಯದಲ್ಲಿ ಮೊದಲ ಬಾರಿಗೆ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗೆ ₹ 500 ಕೋಟಿ ಅನುದಾನ ಮೀಸಲಿಡಲಾಗಿದೆ. ಆಶಾದಾಯಕವಾಗಿ, ಇದು ಸರ್ಕಾರಿ ವಲಯದ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬಹುದು ಮತ್ತು ಸರ್ಕಾರಿ ಶಾಲೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸಹ ಪರಿಹರಿಸಬಹುದು. ರಾಷ್ಟ್ರೀಯ ಶಿಕ್ಷಣ ನೀತಿ 2022ರ ಪ್ರಕಾರ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ವಯಸ್ಕ ಶಿಕ್ಷಣ ಕ್ಷೇತ್ರಗಳಿಗೆ ನೂತನ ಪಠ್ಯಕ್ರಮ ರಚನೆ ಮಾಡಲು ಯೋಜನೆ ಹಾಕಿಕೊಳ್ಳಲಾಗಿದೆ. ಸರ್ಕಾರವು ಈ ನೀತಿಯನ್ನು ಹೆಚ್ಚು ವ್ಯವಸ್ಥಿತವಾಗಿ ಜಾರಿಗೊಳಿಸುವುದರ ಮೂಲಕ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಇದಲ್ಲದೆ, ಹೋಬಳಿ ಮಟ್ಟದಲ್ಲಿ ಮಾದರಿ ಶಾಲೆಗಳಾಗಿ ಮೂಲಭೂತ ಸೌಕರ್ಯವಿರುವ ಶಾಲೆಗಳ ಉನ್ನತೀಕರಣ, ಸರಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಪೀಠೋಪಕರಣ ಒದಗಿಸಲು ₹ 100 ಕೋಟಿ ಮೀಸಲಿಡಲಾಗಿದೆ.

ರಾಜ್ಯದ ಏಳು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಕರ್ನಾಟಕ ತಂತ್ರಜ್ಞಾನ ಸಂಸ್ಥೆಗಳನ್ನಾಗಿ ಉನ್ನತೀಕರಣ ಮಾಡಲು ಹೊರಟಿರುವುದು ಸಕಾರಾತ್ಮಕ ಹೆಜ್ಜೆ. ಬಡವರಿಗೆ ಕೂಡ ವೈದ್ಯಕೀಯ ಶಿಕ್ಷಣ ಅವಕಾಶ ನೀಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದ್ದು, ಎಲ್ಲಾ ತಾಲ್ಲೂಕಿನಲ್ಲಿ ನೀಟ್ ಪರೀಕ್ಷಾ ತರಬೇತಿ, ವೈದ್ಯಕೀಯ ಶಿಕ್ಷಣ ಪಡೆಯಲು ಇಚ್ಛಿಸುವ ಬಡ ವಿದ್ಯಾರ್ಥಿಗಳಿಗೆ ಬ್ಯಾಂಕ್‌ನಿಂದ ಶೈಕ್ಷಣಿಕ ಸಾಲ ಒದಗಿಸುವ ನೆರವು ನೀಡಲು ನಿರ್ಧರಿಸಿರುವುದು ಒಳ್ಳೆಯ ಬೆಳವಣಿಗೆ.

ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಮಹಿಳೆಯರ ಸಬಲೀಕರಣಕ್ಕೆ ಬಹಳ ಮುಖ್ಯವಾದ ಲಿಂಗ ವೇತನದ ಅಂತರವನ್ನು ಮುಚ್ಚಲು ಸಮಾನ ವೇತನ ನೀತಿಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಕೋವಿಡ್ ನಂತರದ ವರ್ಷಗಳಲ್ಲಿ ಡಿಜಿಟಲೀಕರಣ ಮತ್ತು ಇ-ಕಲಿಕೆಯ ಕಡೆಗೆ ಸ್ಪಷ್ಟವಾದ ನಡೆಯನ್ನು ಪರಿಗಣಿಸಿ, ಅಗತ್ಯವಿರುವ ತಂತ್ರಜ್ಞಾನ ಮತ್ತು ಡಿಜಿಟಲ್ ಮೂಲಸೌಕರ್ಯವನ್ನು ಸ್ಥಾಪಿಸಲು ಹೆಚ್ಚಿನ ವೆಚ್ಚದ ಅಗತ್ಯವಿದೆ. ಇದಲ್ಲದೆ, ಕೋವಿಡ್‌ನಿಂದಾಗಿ, ಗ್ರಾಮೀಣ ಪ್ರದೇಶದ ಮಕ್ಕಳು ಮತ್ತು ದುರ್ಬಲ ವರ್ಗದ ಮಕ್ಕಳು ಸುಮಾರು ಎರಡು ವರ್ಷಗಳ ಔಪಚಾರಿಕ ಶಿಕ್ಷಣವನ್ನು ಕಳೆದುಕೊಂಡಿದ್ದಾರೆ. ರಾಜ್ಯದಲ್ಲಿ ಲಕ್ಷಗಟ್ಟಲೆ ಮಕ್ಕಳು ಶಾಲೆಗೆ ಮರಳದಿರಬಹುದು. ಅದರಲ್ಲೂ ಹೆಣ್ಣು ಮಕ್ಕಳು ಹೆಚ್ಚಿನ ತೊಂದರೆ ಅನುಭವಿಸಿದ್ದಾರೆ. ಮಕ್ಕಳು ಮತ್ತೆ ಶಾಲೆಯತ್ತ ಮುಖ ಮಾಡುವಂತೆ ವಿಶೇಷ ಯೋಜನೆ ರೂಪಿಸುವ ಅಗತ್ಯವಿತ್ತು.

ಭಾರತದಲ್ಲಿ ಮಹಿಳಾ ಸಬಲೀಕರಣವು ಅನೇಕ ಅಸ್ಥಿರಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಮಹಿಳಾ ಸಬಲೀಕರಣದ ನೀತಿಗಳು ರಾಷ್ಟ್ರೀಯ, ರಾಜ್ಯ ಮತ್ತು ಸ್ಥಳೀಯ (ಪಂಚಾಯತ್) ಮಟ್ಟದಲ್ಲಿ ಹಲವು ಕ್ಷೇತ್ರಗಳಲ್ಲಿ ಅಸ್ತಿತ್ವದಲ್ಲಿವೆ. ಸಮುದಾಯ ಮಟ್ಟದಲ್ಲಿ ನೀತಿ ಪ್ರಗತಿಗಳು ಮತ್ತು ವಾಸ್ತವಿಕ ಅಭ್ಯಾಸಗಳ ನಡುವೆ ಗಮನಾರ್ಹ ಅಂತರಗಳಿವೆ. ಆ ಅಂತರವನ್ನು ತುಂಬುವ ಕೆಲಸವನ್ನು ಇನ್ನಷ್ಟು ಆಸ್ಥೆಯಿಂದ ಸರ್ಕಾರ ಮಾಡಬೇಕಿತ್ತು.

ಲೇಖಕರು: ಸಹಾಯಕ ಪ್ರಾಧ್ಯಾಪಕರು,
ಅರ್ಥಶಾಸ್ತ್ರ ವಿಭಾಗ, ಕ್ರೈಸ್ಟ್ ಸಂಸ್ಥೆ



### ಮಹಿಳೆ ಮತ್ತು ಮಕ್ಕಳಿಗೆ ಎಷ್ಟು ಅನುದಾನ?

ಬಜೆಟ್ ಗಾತ್ರ ₹2.65 ಲಕ್ಷ ಕೋಟಿ

₹1.81 ಲಕ್ಷ ಕೋಟಿ ಇತರ ಕ್ಷೇತ್ರಗಳಿಗೆ ನೀಡಿದ ಅನುದಾನ ಮತ್ತು ಇತರ ವೆಚ್ಚಗಳು
16.2% ಪ್ರಮಾಣ
15.4% ಪ್ರಮಾಣ
68.4% ಪ್ರಮಾಣ
₹43,188 ಕೋಟಿ ಮಹಿಳೆಯರ ಉದ್ದೇಶಿತ ಸಮಗ್ರ ಯೋಜನೆಗಳಿಗೆ ಮೀಸಲಿಟ್ಟಿರುವ ಒಟ್ಟು ಅನುದಾನ
₹40,944 ಕೋಟಿ ಮಕ್ಕಳ ಉದ್ದೇಶಿತ ಸಮಗ್ರ ಯೋಜನೆಗಳಿಗೆ ಮೀಸಲಿಟ್ಟಿರುವ ಒಟ್ಟು ಅನುದಾನ

2022–23ನೇ ಸಾಲಿನ ಬಜೆಟ್‌ನಲ್ಲಿ ₹2,65,720 ಕೋಟಿ ಅನುದಾನ ಹಂಚಿಕೆ ಪ್ರಕಟಿಸಲಾಗಿದೆ. ಇದರಲ್ಲಿ ಮಹಿಳೆಯರಿಗೆ ಈ ಬಾರಿ ₹43,188 ಕೋಟಿ ಹಂಚಿಕೆ ಮಾಡಲಾಗಿದೆ. ಇದು ಒಟ್ಟು ವೆಚ್ಚದಲ್ಲಿ ಶೇ 16.2%ರಷ್ಟಿದೆ. ಒಟ್ಟು ಅನುದಾನ ಹಂಚಿಕೆಯಲ್ಲಿ ಮಕ್ಕಳ ಉದ್ದೇಶಿತ ಯೋಜನೆಗಳಿಗೆ ಈ ಬಾರಿ ₹40,944 ಕೋಟಿ ಮೀಸಲಿಡಲಾಗಿದೆ. ಇದು ಒಟ್ಟು ಹಂಚಿಕೆಯಲ್ಲಿ ಶೇ 15.4%ರಷ್ಟಿದೆ

### ಅನುದಾನ ಹೆಚ್ಚಳ (₹ ಕೋಟಿಗಳಲ್ಲಿ)

ಮಕ್ಕಳ ಸಮಗ್ರ ಯೋಜನೆಗಳಿಗೆ ಹಂಚಿಕೆ ಮಾಡಲಾದ ಅನುದಾನ ಈ ಬಾರಿ ಏರಿಕೆಯಾಗಿದೆ. 2020–21ರಲ್ಲಿ ₹36,340 ಕೋಟಿ ಇದ್ದ ಅನುದಾನವನ್ನು 2021–22ನೇ ಸಾಲಿನಲ್ಲಿ ₹37,527 ಕೋಟಿಗೆ ಏರಿಸಲಾಗಿತ್ತು. ಈ ಬಾರಿ ಅಂದರೆ, 2022–23ನೇ ಸಾಲಿನಲ್ಲಿ ₹40,944 ಕೋಟಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ

### ಮಕ್ಕಳ ಶಿಕ್ಷಣಕ್ಕೆ ಸಿಂಹಪಾಲು

ಮಕ್ಕಳಿಗೆ ಪ್ರಸಕ್ತ ಬಜೆಟ್‌ನಲ್ಲಿ ವಿನಿಯೋಗಿಸಲು ನಿರ್ಧರಿಸಲಾಗಿರುವ ₹40,944 ಕೋಟಿ ಅನುದಾನದ ಪೈಕಿ ಶಿಕ್ಷಣ ಕ್ಷೇತ್ರಕ್ಕೆ ಸಿಂಹಪಾಲು ಸಿಕ್ಕಿದೆ. ಈ ಮೊತ್ತದಲ್ಲಿ ಶೇ 69.35ರಷ್ಟು ಪಾಲು ಶಿಕ್ಷಣಕ್ಕೆ ಮೀಸಲಾಗಿದೆ. ಉಳಿದಂತೆ ಪೋಷಣೆಗೆ ಶೇ 17.96, ಆರೋಗ್ಯಕ್ಕೆ ಶೇ 11.39ರಷ್ಟು ಪಾಲು ನೀಡಲಾಗಿದೆ

## ಶಿಕ್ಷಣ, ಕೌಶಲಾಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಒಟ್ಟಾರೆ ಕೊಟ್ಟಿದ್ದೇನು

### ಪ್ರಾಥಮಿಕ/ಪ್ರೌಢ ಶಿಕ್ಷಣ

- ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ₹ 500 ಕೋಟಿ ಅನುದಾನ.
- ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು ಹೋಬಳಿ ಮಟ್ಟದಲ್ಲಿ ಮೂಲಭೂತ ಸೌಕರ್ಯವಿರುವ ಶಾಲೆಗಳು 'ಮಾದರಿ ಶಾಲೆ'ಗಳಾಗಿ ಉನ್ನತೀಕರಣ.
- ಸರ್ಕಾರಿ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಪೀಠೋಪಕರಣ ಒದಗಿಸಲು ₹ 100 ಕೋಟಿ ಅನುದಾನ.
- ಆಯ್ದ ಪ್ರೌಢಶಾಲೆಗಳನ್ನು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಪದವಿಪೂರ್ವ ಕಾಲೇಜುಗಳಾಗಿ ಉನ್ನತೀಕರಣ.

### ಉನ್ನತ ಶಿಕ್ಷಣ

- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 'ಮುಖ್ಯಮಂತ್ರಿ ವಿದ್ಯಾರ್ಥಿ ಮಾರ್ಗದರ್ಶಿನಿ' ಯೋಜನೆಯಡಿ ಆನ್‌ಲೈನ್ ಮೂಲಕ ಉಚಿತ ಕೋಚಿಂಗ್.
- 'ಕರ್ನಾಟಕ ತಂತ್ರಜ್ಞಾನ ಸಂಸ್ಥೆ'ಗಳಾಗಿ ರಾಜ್ಯದ ಏಳು ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಉನ್ನತೀಕರಣ. ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಪ್ಪಂದ.
- ಕಾಲೇಜುಗಳ ಮೇಲ್ವಿಚಾರಣೆ ಸುಧಾರಿಸಲು ಶೈಕ್ಷಣಿಕವಾಗಿ ಹಿಂದುಳಿದ ಚಾಮರಾಜನಗರ, ಹಾವೇರಿ, ಹಾಸನ, ಕೊಡಗು, ಕೊಪ್ಪಳ, ಬೀದರ್ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಿನೂತನ ಮಾದರಿ ವಿಶ್ವವಿದ್ಯಾಲಯಗಳ ಸ್ಥಾಪನೆ.

### ಕೌಶಲಾಭಿವೃದ್ಧಿ/ಉದ್ಯೋಗ ಸೃಷ್ಟಿ

- 2022–23ನೇ ವರ್ಷವನ್ನು 'ಜೀವನೋಪಾಯ ವರ್ಷ'ವೆಂದು ಆಚರಣೆ. ₹ 1,100 ಕೋಟಿ ಕ್ರಿಯಾಯೋಜನೆ ಪ್ರಸ್ತಾಪ.
- 2022–23ರ ಅವಧಿಯಲ್ಲಿ 2.50 ಲಕ್ಷ ಅಭ್ಯರ್ಥಿಗಳಿಗೆ ಕೌಶಲ ತರಬೇತಿ.
- ಆಯ್ದ ಸ್ವ- ಸಹಾಯ ಸಂಘಗಳಿಗೆ ತಲಾ ₹ 1.5 ಲಕ್ಷ ನೆರವು. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ₹ 500 ಕೋಟಿ ಅನುದಾನ ಮೀಸಲು. ಪರಿಶಿಷ್ಟ ಜಾತಿ ಮತ್ತು ಪಂಗಡವರಿಗೆ ಆದ್ಯತೆ ನೀಡಲು ₹ 50 ಕೋಟಿ ಮೊತ್ತದಲ್ಲಿ ಕಾರ್ಯಕ್ರಮ. ₹ 3.9 ಲಕ್ಷ ಮಹಿಳೆಯರಿಗೆ ಅನುಕೂಲ.

### ಮಹಿಳಾ ಸಬಲೀಕರಣ, ಮಕ್ಕಳ ಕಲ್ಯಾಣ ಆಶಯ

# ಆರ್ಥಿಕ ನೆರವು; 'ಅಸ್ಮಿತೆ'ಯ ಬಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕುಟುಂಬ ಪಾಲಿಸುವ, ಸಮಾಜ ಕಟ್ಟುವ ಮಹಿಳಾ ಸಮುದಾಯವನ್ನು ಸೆಳೆದು, ಒಲವು ಗಳಿಸಲು ಮುಖ್ಯಮಂತ್ರಿ ಕಸರತ್ತು ನಡೆಸಿರುವುದು ಬಜೆಟ್‌ನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ದೊಡ್ಡ ವರ್ಗವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಸಬಲೀಕರಿಸಿ, ಸ್ವಾವಲಂಬಿಗಳಾಗಿಸುವ ಆಶಯ, ಲೆಕ್ಕಾಚಾರದಲ್ಲಿ ಮಹಿಳಾ ಉದ್ದೇಶಿತ ಯೋಜನೆಗಳಿಗೆ ಅನುದಾನ ಒದಗಿಸಲಾಗಿದೆ.

ಪರಸ್ಪರ ಸಹಕಾರದ ಹಸ್ತ ಚಾಚುತ್ತ, ಒಬ್ಬರ ಬಾಳಿಗೆ ಇನ್ನೊಬ್ಬರು ನೆರವಾಗುವ ಸ್ವ ಸಹಾಯ ಸಂಘಗಳಿಗೆ ಆರ್ಥಿಕ ಸ್ವಾತಂತ್ರ್ಯ ಒದಗಿಸುವ ಪ್ರಸ್ತಾವ ಬಜೆಟ್‌ನಲ್ಲಿದೆ. ಈ ಹಿಂದಿನ ಸಾಲಿನಲ್ಲಿ ಬಿ.ಎಸ್. ಯಡಿಯೂರಪ್ಪ ಮಂಡಿಸಿದ್ದ ಬಜೆಟ್‌ನಲ್ಲಿಯೂ ಮಹಿಳಾಪರ ಒಲವು ಇತ್ತು. ಅದೇ ಹಾದಿ ತುಳಿದಿರುವ ಬೊಮ್ಮಾಯಿ, ಈ ಬಾರಿ ಆರ್ಥಿಕ ನೆರವಿನ ಹಸ್ತವನ್ನು ಇನ್ನಷ್ಟು ಚಾಚಿದ್ದಾರೆ.

ಮಹಿಳಾ ಸ್ವಸಹಾಯ ಸಂಘಗಳು ವಿಪರೀತವಾದ ದಾಖಲೆಗಳನ್ನು ಸಂಗ್ರಹಿಸಿ, ಸಾಲಕ್ಕಾಗಿ ಬ್ಯಾಂಕುಗಳಿಗೆ ಅಲೆಯುವ ಪ್ರಕ್ರಿಯೆಯಿಂದ ಮುಕ್ತಗೊಳಿಸುವ ದೂರದೃಷ್ಟಿ ಬಜೆಟ್‌ನಲ್ಲಿದೆ. ಅಂದರೆ, ಈ ಸಂಘಗಳು ವಾಣಿಜ್ಯ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯುವುದು ಕಷ್ಟಸಾಧ್ಯ. ಅದನ್ನು ಮನಗಂಡಿರುವ ಬೊಮ್ಮಾಯಿ, ಸಾರ್ವಜನಿಕ ವಲಯದ ಬ್ಯಾಂಕುಗಳ ಸಹಯೋಗದೊಂದಿಗೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯದ ಮೂಲಕ ಏಕಗವಾಕ್ಷಿ ಸಾಲ ಸೌಲಭ್ಯ ಒದಗಿಸುವ ಮಾತು ನೀಡಿದೆ. ಅಷ್ಟೇ ಅಲ್ಲ, ಈ ಉದ್ದೇಶಕ್ಕೆಂದೇ ಸಾರ್ವಜನಿಕ ವಲಯದ ಒಂದು ಬ್ಯಾಂಕೊಂದನ್ನು ಆಧಾರ್ 'ಆ್ಯಂಕರ್ ಬ್ಯಾಂಕ್' (ಆಧಾರ್ ಬ್ಯಾಂಕ್) ಎಂದು ಗುರುತಿಸುವುದಾಗಿ ಹೇಳಿದೆ.

ಮಹಿಳಾ ಸ್ವ ಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವುದು ಸದ್ಯದ ಸವಾಲು. ಈ ಉತ್ಪನ್ನಗಳಿಗೆ ಬ್ರ್ಯಾಂಡಿಂಗ್, ಮೌಲ್ಯವರ್ಧನೆ, ಆಕರ್ಷಣೀಯ ಪ್ಯಾಕಿಂಗ್ ವ್ಯವಸ್ಥೆಯನ್ನು ಒದಗಿಸಿ, ಬೃಹತ್ ಮಟ್ಟದಲ್ಲಿ ಮಾರುಕಟ್ಟೆ ಒದಗಿಸಿ, ದೊಡ್ಡ ಮಟ್ಟದಲ್ಲಿ ಮಾರುಕಟ್ಟೆ ವೇದಿಕೆ ಒದಗಿಸಲು 'ಅಸ್ಮಿತೆ' ಎಂಬ ಕಾರ್ಯಕ್ರಮ ಪ್ರಕಟಿಸಲಾಗಿದೆ. ಈ ಉದ್ದೇಶಕ್ಕಾಗಿ ಹೋಬಳಿ ಜಿಲ್ಲೆ, ರಾಜ್ಯಮಟ್ಟದಲ್ಲಿ ಮಾರಾಟ ಮೇಳಗಳನ್ನು ನಡೆಸಲಾಗುವುದು. ಸರ್ಕಾರದ ವಿವಿಧ ಇಲಾಖೆಗಳಡಿಯಲ್ಲಿ ಮಾಡಲಾಗುವ ಸಂಗ್ರಹಣೆಯಲ್ಲಿ ಸ್ವಸಹಾಯ ಸಂಘಗಳಿಂದ ತಯಾರಿಸಿ ಉತ್ಪನ್ನಗಳಿಗೆ ಆದ್ಯತೆ ನೀಡುವ ಮತ್ತು ಈ ಸ್ವಸಹಾಯ ಗುಂಪುಗಳನ್ನು ಉತ್ತೇಜಿಸಲು ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದು ಸರ್ಕಾರಿ ಕಚೇರಿ ಸಂಕೀರ್ಣದಲ್ಲಿ ಈ ಸಂಘಗಳು ನಡೆಸುವ ಕ್ಯಾಂಟೀನ್ ಮತ್ತು ಮಾರಾಟ ಮಳಿಗೆ ಸ್ಥಾಪಿಸುವ ಪ್ರಸ್ತಾವವೂ ಇದೆ.

**ಸ್ವಸಹಾಯ ಸಂಘಕ್ಕೆ 'ಅಮೃತ' ಸ್ಪರ್ಶ:** ಸ್ವಸಹಾಯ ಸಂಘಗಳನ್ನು ಸಣ್ಣ ಉದ್ಯಮಗಳಾಗಿ ಮಾಡಲು ಅಮೃತ ಯೋಜನೆ ಘೋಷಿಸಲಾಗಿದೆ. ವೇತನ, ವಹಿವಾಟು, ಉದ್ಯೋಗ ಮತ್ತು ರಫ್ತು ಹೆಚ್ಚಳ ಗುರಿಯೊಂದಿಗೆ ಚಿಕ್ಕಬಳ್ಳಾಪುರದಲ್ಲಿ ಚರ್ಮದ ಬೊಂಬೆ, ಧಾರವಾಡದಲ್ಲಿ ಕಸೂತಿ, ಕೊಪ್ಪಳದಲ್ಲಿ ಕೌದಿ ಮತ್ತು ಕಿನ್ನಾಳ ಬೊಂಬೆ, ಮೈಸೂರಿನಲ್ಲಿ ಅಗರಬತ್ತಿ, ನವಲಗುಂದದಲ್ಲಿ ಜಮಖಾನಾ, ಚನ್ನಪಟ್ಟಣದಲ್ಲಿ ಆಟಿಕೆ ಹಾಗೂ ಇಳಕಲ್, ಗುಳೇದಗುಡ್ಡ, ಬೆಳಗಾವಿ - ಶಹಾಪುರ, ಶಿಡ್ಲಘಟ್ಟ ಮತ್ತು ಮೊಳಕಾಲ್ಮುರಿನಲ್ಲಿ ಸೀರೆ ಮೈಕ್ರೋಕ್ಲಸ್ಟರ್ ಅಭಿವೃದ್ಧಿ.



- ವಿಚ್ಛೇದಿತ, ಅವಿವಾಹಿತ ಮಹಿಳೆ, ವಿಧವಾ ವೇತನ, ಲೈಂಗಿಕ ಅಲ್ಪಸಂಖ್ಯಾತರ ಮಾಸಿಕ ಪಿಂಚಣಿ ₹ 600ರಿಂದ 800ಗೆ ಹೆಚ್ಚಳ
- ಆ್ಯಸಿಡ್ ದಾಳಿಗೊಳಗಾದ ಮಹಿಳೆಯರ ಪಿಂಚಣಿ ₹ 3 ಸಾವಿರದಿಂದ ₹ 10 ಸಾವಿರಕ್ಕೆ ಹೆಚ್ಚಳ,
- ರೈತ ಮಹಿಳೆಯರನ್ನು ಪ್ರೋತ್ಸಾಹಿಸಲು ಕೃಷಿ ಪ್ರಶಸ್ತಿ, ಕೃಷಿ ಪಂಡಿತ ಪ್ರಶಸ್ತಿ
- ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಮಂಗಳೂರು, ಕಲಬುರಗಿಯಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯ
- 18 ವರ್ಷ ಪೂರ್ಣಗೊಂಡ ಸಂಕಷ್ಟದಲ್ಲಿರುವ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಹಾಗೂ ವೃತ್ತಿಪರ ಕೌಶಲ ತರಬೇತಿಗೆ ಆರು ಅನುಪಾಲನೆ ಗೃಹ
- ಬಾಲ್ಯ ವಿವಾಹ ತಡೆಗೆ ಕೊಪ್ಪಳದಲ್ಲಿ ಅನುಷ್ಠಾನಗೊಂಡಿರುವ ಸ್ಫೂರ್ತಿ ಯೋಜನೆ ವಿಸ್ತರಣೆ

# ಸಕಲರಿಗೂ ಕೊಡುಗೆಯ ಗುರಿ–ಚುನಾವಣಾ ತಯಾರಿ

ಒಂದನೇ ಪುಟದಿಂದ

ತೆರಿಗೆ ಸಂಗ್ರಹ ಮಾಡುವ ಎಲ್ಲ ಇಲಾಖೆಗಳಲ್ಲಿ ಹೆಚ್ಚಿನ ದಕ್ಷತೆ ತರುವುದಾಗಿ ಹೇಳಿದ್ದಾರಾದರೂ ಅದು ಅನುಷ್ಠಾನವಾಗುವ ಬಗೆಯ ವಿವರವನ್ನೇ ನೀಡಿಲ್ಲ. ಬಜೆಟ್‌ನಲ್ಲಿ ಆಕರ್ಷಕ ಘೋಷಣೆಗಳಿದ್ದರೂ ಅದಕ್ಕೆ ಅಗತ್ಯವಾದ ಅನುದಾನದ ಹಂಚಿಕೆಯನ್ನೇ ಮಾಡಿಲ್ಲ. ಸಾಲದ ಮೇಲೆಯೇ ಕಣ್ಣಿಟ್ಟು ಭರವಸೆಯ ಬಣ್ಣದ ಗೋಪುರವನ್ನೇ ತೋರಿಸಿದ್ದಾರೆ. ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಲ ಮಾಡಿಯೇ ಎಲ್ಲರನ್ನೂ ಓಲೈಸುವ, ಪಕ್ಷದ ಕಡೆಗೆ ಸೆಳೆಯುವ ಕಸರತ್ತನ್ನೂ ಮಾಡಿದ್ದಾರೆ.

'ನವ ಕರ್ನಾಟಕದ ಮೂಲಕ ನವಭಾರತ ನಿರ್ಮಾಣ' ಎಂದು ಮುಖ್ಯಮಂತ್ರಿಯವರು ಹೇಳಿಕೊಂಡರೂ ಅದಕ್ಕೆ ಅಗತ್ಯವಾದ ಹೆದ್ದಾರಿ ಹೋಗಲಿ, ಕಿರುದಾರಿಯೂ ಕಾಣಿಸುವುದಿಲ್ಲ.

₹5.18 ಲಕ್ಷ ಕೋಟಿ ಸಾಲ: ಸಂಪನ್ಮೂಲದ ಕೊರತೆ ತುಂಬಲು ₹ 72,000 ಕೋಟಿ ಸಾಲ ಪಡೆಯುವುದಾಗಿ ಬೊಮ್ಮಾಯಿ ಹೇಳಿದ್ದಾರೆ. ರಾಜಸ್ವ ಕೊರತೆಯು ₹14,699 ಕೋಟಿಗಳೆಂದು ಅಂದಾಜು ಮಾಡಲಾಗಿದ್ದು, ವಿತ್ತೀಯ ಕೊರತೆ ₹61,564 ಕೋಟಿ ಆಗಲಿದೆ ಎಂದು ನಿರೀಕ್ಷಿಸಲಾಗಿದೆ. ಅದು ರಾಜ್ಯದ ಆಂತರಿಕ ಉತ್ಪನ್ನದ ಶೇ 3.26ರಷ್ಟು ಆಗಲಿದೆ. 2022–23ರ ಕೊನೆಯಲ್ಲಿ ₹5,18,366 ಕೋಟಿಗಳ ಒಟ್ಟು ಹೊಣೆಗಾರಿಕೆಗಳು (ರಾಜ್ಯದ ಒಟ್ಟು ಸಾಲ) ರಾಜ್ಯದ ಆಂತರಿಕ ಉತ್ಪನ್ನದ ಶೇ 27.49ರಷ್ಟು ಆಗಲಿದೆ ಎಂದು ಅಂದಾಜಿಸಲಾಗಿದೆ. ಇದಕ್ಕಾಗಿ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯ್ದೆ–2002ಕ್ಕೆ ತಿದ್ದುಪಡಿ ತರುವುದಾಗಿಯೂ ಹೇಳಿಕೊಂಡಿದ್ದಾರೆ.



ದೇವಾಲಯಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಬೇಕು ಎಂಬ ಕೂಗಿಗೂ ಕಿವಿಗೊಟ್ಟಿರುವ ಅವರು, ಪುಣ್ಯಕೋಟಿ ಗೋದತ್ತು ಯೋಜನೆ, ಗೋಮಾತಾ ಸಹಕಾರ ಸಂಘದ ಸ್ಥಾಪಿಸುವುದಾಗಿ ಘೋಷಿಸುವ ಮೂಲಕ 'ಸಂಘ' ನಿಷ್ಠೆಯನ್ನೂ ಪ್ರದರ್ಶಿಸಿದ್ದಾರೆ. ದೆಹಲಿ ಸರ್ಕಾರದ ಮೊಹಲ್ಲಾ ಕ್ಲಿನಿಕ್‌ಗಳ ಮಾದರಿಯಲ್ಲೇ ರಾಜ್ಯದಲ್ಲಿ 'ನಮ್ಮ ಕ್ಲಿನಿಕ್'ಗಳ ಸ್ಥಾಪನೆಗೆ ಹೆಜ್ಜೆ ಇಟ್ಟಿದ್ದಾರೆ.

ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಿಗೆ ₹3 ಸಾವಿರ ಕೋಟಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ₹3 ಸಾವಿರ ಕೋಟಿ ಅನುದಾನ ಘೋಷಿಸಲಾಗಿದ್ದು, ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ ಜಿಲ್ಲೆಗಳು ಹಿಂದುಳಿದಿವೆ ಎಂಬ ಕಳಂಕ ತೊಳೆಯುವ ಪ್ರಯತ್ನ ಬಜೆಟ್‌ನಲ್ಲಿ ಇದೆ.

ನಾರಾಯಣಗುರುಗಳ ಸ್ತಬ್ಧಚಿತ್ರ ವಿವಾದದಿಂದಾಗಿ ಮುನಿಸಿಕೊಂಡಿರುವ ಈಡಿಗ ಸಮುದಾಯವನ್ನು ಸಮಾಧಾನಪಡಿಸುವ ಪ್ರಯತ್ನವನ್ನೂ ಬೊಮ್ಮಾಯಿ ಮಾಡಿದ್ದಾರೆ. ನಾರಾಯಣಗುರುಗಳ ಸ್ಮರಣಾರ್ಥ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ತಲಾ ಒಂದು ನಾರಾಯಣಗುರು ವಸತಿ ಶಾಲೆ ಪ್ರಾರಂಭಿಸುವ ಘೋಷಣೆ ಮಾಡಿದ್ದಾರೆ.

ಮಾದರಿ ಶಾಲೆ ನಿರ್ಮಾಣ, ಪೀಠೋಪಕರಣ ಖರೀದಿ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ಅಡಿ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಕರ ಶಿಕ್ಷಣ, ವಯಸ್ಕರ ಶಿಕ್ಷಣದ ನೂತನ ಪಠ್ಯಕ್ರಮ ಜಾರಿ ಘೋಷಿಸಲಾಗಿದೆ. ಇದಕ್ಕೆ ₹ 1 ಲಕ್ಷ ಕೋಟಿ (ಜಿಡಿಪಿಯ ಶೇ 6ರಷ್ಟು) ಬೇಕು. ಈಗ ನೀಡಿರುವುದು ಅದರ ಮೂರನೇ ಒಂದರಷ್ಟು. ಹೀಗಾಗಿ, ನೂತನ ಶಿಕ್ಷಣ ನೀತಿಯ ಪರಿಣಾಮಕಾರಿ ಅನುಷ್ಠಾನ ಸಾಧ್ಯವೇ ಇಲ್ಲ.

**ಪುರುಷೋತ್ತಮ ಬಿಳಿಮಲೆ,** ನಿವೃತ್ತ ಪ್ರಾಧ್ಯಾಪಕ, ಜೆಎನ್‌ಯು, ನವದೆಹಲಿ

ರಾಷ್ಟ್ರೀಯ ಶಿಕ್ಷಣ ನೀತಿ ಅಡಿ ರಾಜ್ಯದ 20,000 ಅಂಗನವಾಡಿಗಳಲ್ಲಿ ನೂತನ ಪಠ್ಯಕ್ರಮ ಜಾರಿಗೆ ಮುಂದಾಗಿರುವುದು ವಿಶೇಷ ಅಂಶ. ವಿನೂತನ ಮಾದರಿಯ ಏಳು ವಿಶ್ವವಿದ್ಯಾಲಯಗಳ ಸ್ಥಾಪನೆ, ಏಳು ಎಂಜಿನಿಯರಿಂಗ್ ಕಾಲೇಜುಗಳ ಉನ್ನತೀಕರಣ, ಸರ್ಕಾರಿ ಕಾಲೇಜುಗಳ ನ್ಯಾಕ್ ಮಾನ್ಯತೆಗೆ ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ. ಮೂಲ ಸೌಕರ್ಯ ಅಭಿವೃದ್ಧಿಗೆ ಕ್ರಮ ಕೈಗೊಂಡಿರುವುದು ಶಿಕ್ಷಣದ ಗುಣಮಟ್ಟ ಸುಧಾರಣೆಗೆ ನೆರವಾಗಲಿದೆ.

**ಎಂ.ಕೆ. ಶ್ರೀಧರ್,** ಶಿಕ್ಷಣ ತಜ್ಞ

ಲೈಂಗಿಕ ದಮನಿತರಲ್ಲಿ ಸಾವಿರಾರು ಅಪ್ರಾಪ್ತರು, ಅಂಗವಿಕಲರು, ಎಚ್‌ಐವಿ ಸೋಂಕಿತರು, ವಯಸ್ಸಾದವರು ಪುನರ್ವಸತಿಗೆ ಕಾಯುತ್ತಲೇ ಇದ್ದಾರೆ. ಗ್ರಾಮಗಳಲ್ಲಿ ಗುಡಿ ಕೈಗಾರಿಕೆ ಸ್ಥಾಪನೆ, ಹೆಣ್ಣುಭ್ರೂಣ ಹತ್ಯೆ ತಡೆಗಾಗಿ ವಿಕೇಂದ್ರೀಕೃತ ಆಯೋಗ, ಬಾಲ್ಯವಿವಾಹ ತಡೆ, ಹೆಣ್ಣುಮಕ್ಕಳ ನಾಪತ್ತೆ, ಕಳ್ಳಸಾಗಾಣಿಕೆ ಹಾಗೂ ಮಾರಾಟ ಜಾಲಗಳ ನಿಯಂತ್ರಣಕ್ಕೆ ಸಶಕ್ತ ಯೋಜನೆಗಳಿಗಾಗಿ ನಮ್ಮ ಬೇಡಿಕೆಗೆ ಗಮನ ಹರಿಸಿಲ್ಲ.

**ರೂಪ ಹಾಸನ,** ಲೇಖಕಿ

ಈ ಬಜೆಟ್ ಮಹಿಳೆಯರ ನೋವುಗಳಿಗೆ ಮುಲಾಮು ಹಚ್ಚುವುದಿಲ್ಲ. ಮಹಿಳಾ ಸ್ವಾತಂತ್ರ್ಯ, ಸ್ವಾವಲಂಬನೆಗೆ ಒತ್ತು ನೀಡಿಲ್ಲ. ಮಹಿಳೆಯರ ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡಲು ಅಗತ್ಯ ಇರುವುದು ಮೂಲಸೌಕರ್ಯ ಅಭಿವೃದ್ಧಿಯೇ ಹೊರತು ಸಲಹಾ ಕೇಂದ್ರವಲ್ಲ. ಇದು ನಿಜಕ್ಕೂ ಮಹಿಳೆಯರ ಪರವಾದ ಬಜೆಟ್ ಅಲ್ಲ, ಇದೊಂದು ತೀರ್ಥಯಾತ್ರೆ ಬಜೆಟ್!

**ಜ್ಯೋತಿ ಎ.,** ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವುಮೆನ್ (ಎನ್‌ಎಫ್‌ಐಡಬ್ಲ್ಯು) ರಾಜ್ಯ ಘಟಕದ ಅಧ್ಯಕ್ಷೆ

ಕರ್ನಾಟಕ ಬಜೆಟ್ ಮತ್ತು ಕೇಂದ್ರ ಬಜೆಟ್‌ಗಳೆರಡರಲ್ಲೂ ಮಹಿಳೆಯರ ಆದ್ಯತೆಯ ಕ್ಷೇತ್ರಗಳನ್ನು ಕಡೆಗಣಿಸಿರುವುದು ನಿರಾಸೆಯುಂಟುಮಾಡಿದೆ. ಕೋವಿಡ್ ನಂತರದ ಆರ್ಥಿಕ ಸಮೀಕ್ಷೆಯು ರಾಜ್ಯದಲ್ಲಿ ಉದ್ಯೋಗದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಮಟ್ಟ ಇಳಿದಿರುವುದನ್ನು ಬೊಟ್ಟು ಮಾಡಿದೆ. ಆದರೆ, ಇಡೀ ಬಜೆಟ್‌ನಲ್ಲಿ ಎಲ್ಲೂ ಅದನ್ನು ಗುರುತಿಸುವ ಪ್ರಯತ್ನ ಮಾಡಿಲ್ಲ.

**ಮಲ್ಲಿಗೆ ಸಿರಿಮನೆ,** ಕರ್ನಾಟಕ ಜನಶಕ್ತಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ

# ರಾಜ್ಯ ಬಜೆಟ್ 2022-23

## ಹೊಸ ಯೋಜನೆಗಳು

1. ರಾಜ್ಯದ 15 ಪ್ರವಾಸಿ ತಾಣಗಳ ಎಆರ್/ವಿಆರ್ ತುಣುಕುಗಳ ಸೃಜನೆಗೆ ₹15 ಕೋಟಿ
2. ಧಾರವಾಡದಲ್ಲಿ 'ಎಫ್‌ಎಂಸಿಜಿ ಕ್ಲಸ್ಟರ್' ಅಭಿವೃದ್ಧಿ

'ನೀಟ್'ಗೆ ತರಬೇತಿ ನೀಡುವಂಥ ಕಣ್ಣೊರೆಸುವ ಯೋಜನೆ ಪ್ರಕಟಿಸಿದ್ದಾರೆ. ಹೆಚ್ಚಿನ ಯೋಜನೆಗಳು ಹಾವೇರಿ ಜಿಲ್ಲೆಗೇ ಸೀಮಿತವಾಗಿವೆ. ಮುಖ್ಯಮಂತ್ರಿ ತಮ್ಮ ತವರು ಜಿಲ್ಲೆಯನ್ನೇ ರಾಜ್ಯ ಎಂದು ಭಾವಿಸಿದ್ದಾರೆ

**ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ವಿಪಕ್ಷ ನಾಯಕ

# ಜನಪ್ರಿಯ, ಪ್ರಗತಿಪರ ಸಮತೋಲಿತ ಬಜೆಟ್



ವಿಶ್ಲೇಷಣೆ

**ಡಾ.ಎಸ್.ಆರ್.ಕೇಶವ**

ರಾಜ್ಯ ಬಜೆಟ್ ಜನಪ್ರಿಯ ಮತ್ತು ಪ್ರಗತಿಪರ ಬಜೆಟ್‌ನ ಮಿಶ್ರಣದೊಂದಿಗೆ ಸಮತೋಲನ ಕಾಯುವ ಗುರಿಯನ್ನು ಹೊಂದಿದೆ. ಈ ಬಜೆಟ್‌ನ ಮುಖ್ಯ ಗಮನವು 'ಪಂಚ ಸೂತ್ರ'ದ ಮೂಲಕ ಅಭಿವೃದ್ಧಿಯತ್ತ ನಾಡನ್ನು ಕೊಂಡೊಯ್ಯುವುದೇ ಆಗಿದೆ. ಉದ್ಯಮದಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಸಾಧಿಸುವುದು, ಹಿಂದುಳಿದ ಪ್ರದೇಶಗಳಲ್ಲಿ ಆರೋಗ್ಯ ಮತ್ತು ಶಿಕ್ಷಣದಂತಹ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಸುಧಾರಿಸುವುದು ಐದು ಸೂತ್ರಗಳಲ್ಲಿ ಸೇರಿವೆ.

ಸೇವಾ ವಲಯದ ಅಭಿವೃದ್ಧಿಯು ಬೆಳವಣಿಗೆಗೆ ಪ್ರಚೋದನೆಯನ್ನು ನೀಡುತ್ತದೆ. ಆದರೆ, ಇದು ಹೆಚ್ಚಿನ ಉದ್ಯೋಗಗಳನ್ನು ಒದಗಿಸುವುದಿಲ್ಲ. ಆದ್ದರಿಂದ, ಸೇವಾ ವಲಯದ ಜತೆಗೆ, ಕೈಗಾರಿಕಾ ವಲಯ ಮತ್ತು ಮೂಲಸೌಕರ್ಯದಲ್ಲಿನ ಹೂಡಿಕೆಯು ಬೆಳವಣಿಗೆಗೆ ಪ್ರಮುಖವಾಗಿದೆ. ಏಕೆಂದರೆ, ಅದು ಉದ್ಯೋಗ, ಆದಾಯ ಮತ್ತು ರಫ್ತುಗಳನ್ನು ನೀಡುತ್ತದೆ. ಆದ್ದರಿಂದ, ಈ ಬಜೆಟ್‌ನಲ್ಲಿ 'ನವ ಭಾರತಕ್ಕಾಗಿ ನವ ಕರ್ನಾಟಕ'ದ ಗುರಿಯನ್ನು ಸಾಕಾರಗೊಳಿಸಲು ಯೋಜಿತ ಮತ್ತು ಪರಿಸರ ಸ್ನೇಹಿ ಸಮಗ್ರ ಟೌನ್‌ಶಿಪ್‌ಗಳನ್ನು ಒದಗಿಸುವ ಮೂಲಕ ಜವಳಿ, ಆಟಿಕೆ ತಯಾರಿಕೆ, ಎಫ್‌ಎಂಸಿಜಿ, ಚರ್ಮದ ಉತ್ಪನ್ನಗಳು, ಆಹಾರ ಸಂಸ್ಕರಣೆ ಮತ್ತು ಆಭರಣಗಳಂತಹ ಕಾರ್ಮಿಕ-ತೀವ್ರ ಕೈಗಾರಿಕೆಗಳನ್ನು ಯೋಜಿಸಲಾಗಿದೆ. ಮೈಕ್ರೋಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸುವ ಮೂಲಕ ಒಂದು ಜಿಲ್ಲೆಯ ಒಂದು ಉತ್ಪನ್ನದ ಅಡಿಯಲ್ಲಿ ಸೂಕ್ಷ್ಮ ಕೈಗಾರಿಕೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಉದಾಹರಣೆಗೆ, ಚಿಕ್ಕಬಳ್ಳಾಪುರದಲ್ಲಿ ತೊಗಲು ಗೊಂಬೆಗಳು, ಧಾರವಾಡದಲ್ಲಿ ಕಸೂತಿ, ಕೊಪ್ಪಳದಲ್ಲಿ ಕೌದಿ ಮತ್ತು ಕಿನ್ನಾಳ ಆಟಿಕೆಗಳು ಇತ್ಯಾದಿ.

ಬೆಂಗಳೂರು ಹೊರತುಪಡಿಸಿ ಪಟ್ಟಣ ಮತ್ತು ಜಿಲ್ಲೆಗಳಲ್ಲಿ ಕೈಗಾರಿಕೆಗಳಿಗೆ ಉತ್ತೇಜನ ನೀಡಿರುವುದು ಸ್ವಾಗತಾರ್ಹ ಕ್ರಮ. ಆದರೆ, ಇದರ ಯಶಸ್ಸು ಅನುಕೂಲಕರವಾದ ಕೈಗಾರಿಕಾ ವಾತಾವರಣವನ್ನು ಸೃಷ್ಟಿಸಲು ಉತ್ತಮ ಮೂಲಸೌಕರ್ಯವನ್ನು ಒದಗಿಸುವುದರ ಮೇಲೆ ಅವಲಂಬಿತವಾಗಿದೆ. ಇತರ ಸಮಸ್ಯೆಗಳ ಮಧ್ಯೆ ಪದೇ ಪದೇ ವಿದ್ಯುತ್ ಅಡೆತಡೆಗಳು ಸಾಮಾನ್ಯವಾಗಿದೆ. ಈ ಬಜೆಟ್ ಸಹ 5 ಜಿಲ್ಲೆಗಳ 15 ಕೈಗಾರಿಕಾ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ಆಗಾಗ್ಗೆ ಅಡಚಣೆಗಳನ್ನು ಎದುರಿಸುತ್ತಿರುವ ವಿದ್ಯುತ್ ಸರಬರಾಜಿನ ಅಡಚಣೆ ಸರಿಪಡಿಸಲು ಸೂಚಿಸಿದೆ. 1977 ರಿಂದ ಜಾರಿಯಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಅಷ್ಟು ಯಶಸ್ವಿಯಾಗದ ಕಾರಣಗಳಿಂದ ಪಾಠಗಳನ್ನು ಕಲಿಯಬೇಕಾಗಿದೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ಕೈಗಾರಿಕಾ ಒಗ್ಗೂಡಿಸುವಿಕೆಯ ಕಾರಣಗಳು ಅದಕ್ಕೆ ಕಾರಣಗಳನ್ನು ವಿವರಿಸುತ್ತವೆ.

ಉತ್ತಮ ಆರೋಗ್ಯ ಮೂಲಸೌಕರ್ಯಗಳ ಬಗ್ಗೆ ಹೆಮ್ಮೆಪಡುವ ಹೊರತಾಗಿಯೂ, ಕರ್ನಾಟಕವು ಇತ್ತೀಚೆಗೆ ಘೋಷಿಸಲಾದ ನೀತಿ ಆಯೋಗ ಸೂಚ್ಯಂಕದಲ್ಲಿ 19ನೇ ಸ್ಥಾನದಲ್ಲಿದೆ ಮತ್ತು ದೇಶದ ದೊಡ್ಡ ರಾಜ್ಯಗಳಲ್ಲಿ ದೊಡ್ಡ ರಾಜ್ಯಗಳಲ್ಲಿ ಕೊನೆಯ ಸ್ಥಾನದಲ್ಲಿದೆ. ಆದ್ದರಿಂದ, 100 ತಾಲ್ಲೂಕುಗಳಲ್ಲಿ ಆರೋಗ್ಯ ಸೇವೆಗಳನ್ನು ಬಲಪಡಿಸುವುದು ಮತ್ತು 102 ತಾಲ್ಲೂಕುಗಳಲ್ಲಿ ಮಕ್ಕಳ ಅಪೌಷ್ಟಿಕತೆಯನ್ನು ನಿವಾರಿಸುವುದು ಮತ್ತು ಉಚಿತ ಡಯಾಲಿಸಿಸ್ ಅನ್ನು ದ್ವಿಗುಣಗೊಳಿಸುವುದು, ತಾಲ್ಲೂಕು ಮಟ್ಟದಲ್ಲಿ ಹೃದಯರಕ್ತನಾಳದ ಸೇವೆಗಳನ್ನು ಒದಗಿಸುವುದು, ಆಸ್ಪತ್ರೆಗಳ ಉನ್ನತೀಕರಣ ಸ್ವಾಗತಾರ್ಹ ಕ್ರಮ. ಆದರೆ, ಬಜೆಟ್‌ನಲ್ಲಿ ಘೋಷಿಸಲಾದ ಉತ್ತಮ ಉದ್ದೇಶಿತ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಕರ್ನಾಟಕವು ಭಾರತದ ಯಶಸ್ವಿ ರಾಜ್ಯಗಳಲ್ಲಿ ಒಂದಾದರೂ ಆರೋಗ್ಯ ಸೂಚಕಗಳಲ್ಲಿ ವಿಫಲವಾಗಲು ಕಾರಣಗಳನ್ನು ಗಮನಿಸಬೇಕಿದೆ.

ಮೂಲಸೌಕರ್ಯದಲ್ಲಿನ ಹೂಡಿಕೆಯು ಉದ್ಯೋಗಾವಕಾಶಗಳ ಹೆಚ್ಚಳಕ್ಕೆ ಮತ್ತು ಜನರ ಜೀವನಮಟ್ಟದಲ್ಲಿನ ಹೆಚ್ಚಳಕ್ಕೆ ಕಾರಣವಾಗುತ್ತದೆ. 2,275 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಅಭಿವೃದ್ಧಿ, 1,008 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳ ಮರು ಡಾಂಬರೀಕರಣ, ಗ್ರೇಡ್ ಸಪರೇಟರ್, ಮೇಲ್ಸೇತುವೆ, ಮೆಟ್ರೊ ರೈಲುಗಳಿಗೆ ಹಂಚಿಕೆ, ಬೆಂಗಳೂರಿನ ಉಪನಗರ ರೈಲು ಮತ್ತು ಕೆಲವು ಹೊಸ ಮಾರ್ಗಗಳಿಗೆ ತನ್ನ ಪಾಲಿನ ಹಂಚಿಕೆಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಬೆಂಗಳೂರು ಹೊರತುಪಡಿಸಿ ಇತರೆ ಪಟ್ಟಣಗಳು ಮತ್ತು ನಗರಗಳ ಅಭಿವೃದ್ಧಿಗೆ ಒತ್ತು ನೀಡಿರುವುದು ಸ್ವಾಗತಾರ್ಹ. ಹಿಂದಿನ ವರ್ಷಗಳ ಪ್ರಾಯೋಗಿಕ ಪುರಾವೆಗಳು ಹೇಳುವಂತೆ, ಕಾಗದದ ಮೇಲೆ ಭರವಸೆ ನೀಡುವುದಕ್ಕೂ ಮತ್ತು ವಾಸ್ತವವಾಗಿ ಕಾರ್ಯಗತಗೊಳಿಸುವ ಅಂಶಗಳ ನಡುವೆ ಸಾಕಷ್ಟು ಅಂತರಗಳಿವೆ. ಆದ್ದರಿಂದ, ಈ ಬಜೆಟ್ ನೀತಿ ಮತ್ತು ಘೋಷಣೆಗಳ ಯಶಸ್ಸಿಗೆ ಕಾಲಮಿತಿಯಲ್ಲಿ ಅನುಷ್ಠಾನ ಮಾಡುವುದೇ ನಿರ್ಣಾಯಕವಾಗುತ್ತದೆ.

ಲೇಖಕರು:ಅರ್ಥಶಾಸ್ತ್ರ ಪ್ರಾಧ್ಯಾಪಕರು
ಬೆಂಗಳೂರು ವಿಶ್ವವಿದ್ಯಾಲಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

## ತಾಲ್ಲೂಕುವಾರು ಕೌನ್ಸೆಲಿಂಗ್

ಎಸ್‌ಸಿ,ಎಸ್‌ಟಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಬೇಡಿಕೆ ಮತ್ತು ಹಂಚಿಕೆಯನ್ನು ಸರಿದೂಗಿಸಲು ಸಿಇಟಿ ಮಾದರಿಯ ಕೌನ್ಸೆಲಿಂಗ್ ವ್ಯವಸ್ಥೆ ಜಾರಿಗೊಳಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ನಿಲಯವಾರು ಅರ್ಜಿ ಸ್ವೀಕರಿಸುವ ಬದಲಿಗೆ ತಾಲ್ಲೂಕುವಾರು ಅರ್ಜಿ ಸ್ವೀಕರಿಸಿ, ಕೌನ್ಸೆಲಿಂಗ್ ಮೂಲಕ ಸೀಟು ಹಂಚಿಕೆ ಮಾಡುವ ವ್ಯವಸ್ಥೆ ಜಾರಿಗೆ ಬರಲಿದೆ.

## ನವನಗರ ಅಭಿವೃದ್ಧಿಗೆ ಒತ್ತು

**ಬೆಂಗಳೂರು:** ನವಕರ್ನಾಟಕ ನಿರ್ಮಾಣಕ್ಕಾಗಿ ಪ್ರತಿ ವಿಭಾಗದಲ್ಲಿ ತಲಾ ಒಂದು ಪರಿಸರಸ್ನೇಹಿ ಹಾಗೂ ಯೋಜನಾಬದ್ಧ ನವನಗರ ಅಭಿವೃದ್ಧಿಪಡಿಸಲು ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ರಾಜ್ಯದಲ್ಲಿ ದೊಡ್ಡ ಗಾತ್ರದ ಹೂಡಿಕೆ ಪ್ರದೇಶಗಳು ಮತ್ತು ಕೈಗಾರಿಕಾ ವಸಾಹತುಗಳ ಸ್ಥಾಪನೆ, ಕಾರ್ಯಾಚರಣೆ, ನಿಯಂತ್ರಣ ಹಾಗೂ ನಿರ್ವಹಣೆಗಾಗಿ 'ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ಅಧಿನಿಯಮ' ರಚನೆ ಹಾಗೂ ತುಮಕೂರು ಮತ್ತು ಧಾರವಾಡದಲ್ಲಿ 'ವಿಶೇಷ ಹೂಡಿಕೆ ಪ್ರದೇಶ ಅಧಿಸೂಚನೆ' ರೂಪಿಸಲು ತೀರ್ಮಾನಿಸಲಾಗಿದೆ.

- ಬೆಂಗಳೂರಿನಲ್ಲಿ 'ಮೆಗಾ ಜ್ಯುವೆಲ್ಲರಿ ಪಾರ್ಕ್ ಸ್ಥಾಪನೆ. 10 ಸಾವಿರ ಮಂದಿಗೆ ಉದ್ಯೋಗಾವಕಾಶ.
- ಸರ್ಕಾರದಿಂದ ಮುಂದಿನ ಎರಡು ವರ್ಷ ಮೈಷುಗರ್ ಕಾರ್ಖಾನೆ ನಿರ್ವಹಣೆ. ಯಂತ್ರೋಪಕರಣ ದುರಸ್ತಿಗೆ ₹50 ಕೋಟಿ ಅನುದಾನ.
- ಕಲಬುರಗಿ ಹಾಗೂ ವಿಜಯಪುರದಲ್ಲಿ ಮೆಗಾ-ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆಗೆ ಕೇಂದ್ರಕ್ಕೆ ಪ್ರಸ್ತಾವನೆ.
- ನವಲಗುಂದ ಮತ್ತು ರಾಣೆಬೆನ್ನೂರಿನಲ್ಲಿ ಜವಳಿ ಪಾರ್ಕ್ ಸ್ಥಾಪನೆ. 5 ಸಾವಿರ ಉದ್ಯೋಗ ಸೃಷ್ಟಿ.
- ಬಳ್ಳಾರಿಯಲ್ಲಿ ಜೀನ್ಸ್ ಮತ್ತು ಉಡುಪು ಸಂಬಂಧಿತ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪನೆ.
- ರಾಜ್ಯದಲ್ಲಿ ಸೆಮಿಕಂಡಕ್ಟರ್ ತಯಾರಿಕಾ ಉದ್ಯಮಗಳ ಸ್ಥಾಪನೆಗೆ ಪ್ರೋತ್ಸಾಹ.
- ಕಲ್ಯಾಣ ಕರ್ನಾಟಕ ಭಾಗದ ನಾವಿನ್ಯತೆಯುಳ್ಳ 25 ನವೋದ್ಯಮಗಳನ್ನು ಉತ್ತೇಜಿಸಲು 'ಎಲಿವೇಟ್-ಕಲ್ಯಾಣ ಕರ್ನಾಟಕ' ಕಾರ್ಯಕ್ರಮ.
- ಮೈಸೂರು, ಮಂಗಳೂರು, ಹುಬ್ಬಳ್ಳಿಯಲ್ಲಿನ ಸ್ಟಾರ್ಟಪ್‌ಗಳಿಗೆ ಪ್ರೋತ್ಸಾಹ ನೀಡಲು ತಲಾ ₹20 ಕೋಟಿ ವೆಚ್ಚದಲ್ಲಿ 'ಬಿಯಾಂಡ್ ಬೆಂಗಳೂರು ಕ್ಲಸ್ಟರ್ ಸೀಡ್ ಫಂಡ್ ಫಾರ್ ಸ್ಟಾರ್ಟಪ್ಸ್' ಸ್ಥಾಪನೆ. ಪ್ರಸಕ್ತ ಸಾಲಿನಲ್ಲಿ ₹12 ಕೋಟಿ ಅನುದಾನ.
- ಬೆಳಗಾವಿಯಲ್ಲಿ ₹150 ಕೋಟಿ ವೆಚ್ಚದಲ್ಲಿ 'ಗ್ಲೋಬಲ್ ಎಮರ್ಜಿಂಗ್ ಟೆಕ್ನಾಲಜಿ ಡಿಸೈನ್ ಸೆಂಟರ್'
- ಮೈಸೂರಿನಲ್ಲಿ ₹30 ಕೋಟಿ ವೆಚ್ಚದಲ್ಲಿ 'ಮೈಸೂರು ದಿ ಗ್ಲೋಬಲ್ ಟೆಕ್ನಾಲಜಿ ಸೆಂಟರ್ ಪ್ಲಗ್ ಆ್ಯಂಡ್ ಪ್ಲೇ' ಸೌಲಭ್ಯ ಕಲ್ಪಿಸಲು ನಿರ್ಧಾರ. ಇದಕ್ಕಾಗಿ 2022-23ರಲ್ಲಿ ₹10 ಕೋಟಿ ಅನುದಾನ.
- ಕೇಂದ್ರ ಮತ್ತು ಉದ್ಯಮಿಗಳ ಸಹಭಾಗಿತ್ವದಲ್ಲಿ ₹50 ಕೋಟಿ ವೆಚ್ಚದಲ್ಲಿ 'ಕರ್ನಾಟಕ ಆ್ಯಕ್ಸಲರೇಷನ್-ನೆಟ್‌ವರ್ಕ್' ಸ್ಥಾಪನೆ. ಮೊದಲ ಹಂತದಲ್ಲಿ ₹20 ಕೋಟಿ ಅನುದಾನ.

## ಕಾರವಾರದಲ್ಲಿ ಜಲಸಾರಿಗೆ ಮೀನುಗಾರಿಕೆ ತರಬೇತಿ ಸಂಸ್ಥೆ

**ಬೆಂಗಳೂರು:** ಕಾರವಾರದಲ್ಲಿ ರಾಜ್ಯದ ಮೊದಲ ಜಲಸಾರಿಗೆ ಮತ್ತು ಮೀನುಗಾರಿಕೆ ತರಬೇತಿ ಸಂಸ್ಥೆ ಸ್ಥಾಪಿಸಲು ನಿರ್ಧರಿಸಲಾಗಿದೆ. ಕಾರವಾರ ಬಂದರು ವಿಸ್ತರಣೆಗೂ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ.

- ಕೇಂದ್ರದ ಸಾಗರ ಮಾಲಾ ಯೋಜನೆಯಡಿ ಅಂದಾಜು ₹1,880 ಕೋಟಿ ವೆಚ್ಚದಲ್ಲಿ 24 ಯೋಜನೆಗಳ ಅನುಷ್ಠಾನ.
- ಬೈಂದೂರು ಹಾಗೂ ಮಲ್ಪೆಯಲ್ಲಿ ವಿವಿಧೋದ್ದೇಶ ಬಂದರು ನಿರ್ಮಾಣದ ಕಾರ್ಯಸಾಧ್ಯತೆ ಬಗ್ಗೆ ವರದಿ ತಯಾರಿ.
- ಉತ್ತರ ಕನ್ನಡ ಜಿಲ್ಲೆಯ ಮಾಜಾಳಿಯಲ್ಲಿ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ₹250 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಮೀನುಗಾರಿಕಾ ಬಂದರು ನಿರ್ಮಾಣ.
- ಕೇಣಿ-ಬೇಲೆಕೇರಿಯಲ್ಲಿ ಗ್ರೀನ್ ಫೀಲ್ಡ್ ಬಂದರು ಅಭಿವೃದ್ಧಿ.
- ₹350 ಕೋಟಿ ವೆಚ್ಚದಲ್ಲಿ ಹಳೆ ಮಂಗಳೂರು ಬಂದರಿನಲ್ಲಿ ಲಕ್ಷದ್ವೀಪ ಪ್ರದೇಶಕ್ಕೆ ಮೀಸಲಾದ ಜೆಟ್ಟಿ ಮತ್ತು ಇತರ ಮೌಲಸೌಕರ್ಯ ಕಲ್ಪಿಸಲು ಒತ್ತು.
- ಕರಾವಳಿ ಭಾಗದ ಜಲಮೂಲಗಳನ್ನು ಕಲುಷಿತಗೊಳಿಸುತ್ತಿರುವ ಪ್ಲಾಸ್ಟಿಕ್ ಮಾಲಿನ್ಯ ನಿರ್ವಹಿಸಲು ವಿಶ್ವಬ್ಯಾಂಕ್ ನೆರವಿನೊಂದಿಗೆ ಮುಂದಿನ 5 ವರ್ಷಗಳಲ್ಲಿ 'ಬ್ಲೂ ಪ್ಲಾಸ್ಟಿಕ್ ನಿರ್ವಹಣೆ ಯೋಜನೆ' ಜಾರಿ. ಇದಕ್ಕಾಗಿ ₹840 ಕೋಟಿ.

Your health
is our priority
yahoo!

'ಎಲ್ಲರಿಗೂ ಆರೋಗ್ಯ; ಎಲ್ಲೆಡೆಯೂ ಆರೋಗ್ಯ' ಜಾರಿಗೆ ಯತ್ನ • 300 ಮಹಿಳಾ ಸ್ವಾಸ್ಥ್ಯ ಕೇಂದ್ರಗಳ ಸ್ಥಾಪನೆ

# ನಗರಗಳಲ್ಲಿ 438 'ನಮ್ಮ ಕ್ಲಿನಿಕ್' ಸ್ಥಾಪನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಎಲ್ಲರಿಗೂ ಆರೋಗ್ಯ; ಎಲ್ಲೆಡೆಯೂ ಆರೋಗ್ಯ'ದ ಆಶಯವನ್ನು ಜಾರಿಗೊಳಿಸುವ ನಿಟ್ಟನಲ್ಲಿ ಆರೋಗ್ಯ ವಲಯಕ್ಕೆ ಮಹತ್ವದ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಈ ಬಾರಿಯ ಬಜೆಟ್‌ನಲ್ಲಿ ₹13,982 ಕೋಟಿ ಮೊತ್ತವನ್ನು ಮೀಸಲಿಡಲು ಉದ್ದೇಶಿಸಲಾಗಿದ್ದು, ಇದು ಒಟ್ಟಾರೆ ಅನುದಾನ ಹಂಚಿಕೆಯ ಶೇ 5ರಷ್ಟಾಗಿದೆ. ಹಿಂದಿನ ವರ್ಷ ₹11,908 ಕೋಟಿ ಒದಗಿಸಲಾಗಿದ್ದು, ಇದು ಒಟ್ಟು ಮೊತ್ತದಲ್ಲಿನ ಶೇ4ರಷ್ಟಿತ್ತು.

ಬೆಂಗಳೂರಿನ ಎಲ್ಲ ವಾರ್ಡ್‌ಗಳಲ್ಲಿ ಹಾಗೂ ರಾಜ್ಯದ ಪ್ರಮುಖ ನಗರಗಳಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ತಪಾಸಣೆಗೆ ಒಟ್ಟು 438 'ನಮ್ಮ ಕ್ಲಿನಿಕ್'ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಮೂಲಕ ನಾಗರಿಕರಿಗೆ ತ್ವರಿತಗತಿಯಲ್ಲಿ ಚಿಕಿತ್ಸೆ ನೀಡುವ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಕ್ಲಿನಿಕ್‌ಗಳಲ್ಲಿ ಸಾಂಕ್ರಾಮಿಕವಲ್ಲದ ರೋಗಗಳ ಪತ್ತೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ತಜ್ಞರ ಬಳಿ ಕಳುಹಿಸುವ ಸೇವೆ ಒದಗಿಸಲಾಗುವುದು.

ಮಹಿಳೆಯರ ಆರೋಗ್ಯ ಸಮಸ್ಯೆಗಳಿಗೆ ಸಲಹೆ ನೀಡಲು ರಾಜ್ಯದಲ್ಲಿ 300 ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ಬಡ ಹಿರಿಯ ನಾಗರಿಕರಿಗೆ ಯೋಜನೆ ಅಡಿ ಉಚಿತ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ ಮತ್ತು ಕನ್ನಡಕ ಸೌಲಭ್ಯ ನೀಡಲು ಉದ್ದೇಶಿಸಲಾಗಿದೆ.

ಹುಬ್ಬಳಿಯಲ್ಲಿ ₹250 ಕೋಟಿ ವೆಚ್ಚದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಪ್ರಾದೇಶಿಕ ಹೃದ್ರೋಗ ಕೇಂದ್ರ ಹಾಗೂ ಬೆಳಗಾವಿಯಲ್ಲಿ ₹50 ಕೋಟಿ ವೆಚ್ಚದಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆಯ್ದ 10 ವೈದ್ಯಕೀಯ ವಿಜ್ಞಾನ ಸಂಸ್ಥೆಗಳಲ್ಲಿ ಕ್ಯಾನ್ಸರ್ ರೋಗಿಗಳಿಗೆ ಕಿಮೋಥೆರಪಿ ನೀಡುವ 'ಇನ್‌ಫ್ಯೂಷನ್ ಸೆಂಟರ್' ಸ್ಥಾಪಿಸಲು ಉದ್ದೇಶಿಸಲಾಗಿದೆ.

ಏಳು ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಗುವುದು ಎಂದು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ತುಮಕೂರಿನಲ್ಲಿ ₹20 ಕೋಟಿ ವೆಚ್ಚದಲ್ಲಿ ಟ್ರಾಮಾ ಕೇರ್ ಕೇಂದ್ರ ಸ್ಥಾಪಿಸಲು ಪ್ರಸ್ತಾಪಿಸಲಾಗಿದ್ದು, 2022-23ರಲ್ಲಿ ₹10 ಕೋಟಿ ಅನುದಾನ ಒದಗಿಸಲು ಮೀಸಲಿಡಲಾಗಿದೆ.

ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಾರಂಭಿಸಲು ಅನುವಾಗುವಂತೆ 200ಕ್ಕೂ ಹೆಚ್ಚು ಹಾಸಿಗೆಗಳ ಸಾಮರ್ಥ್ಯ ಇರುವ ಸರ್ಕಾರಿ ಆಸ್ಪತ್ರೆಗಳನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಅನುಮೋದನೆ ಪಡೆದು ಬೋಧನಾ ಆಸ್ಪತ್ರೆಗಳಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಈ ವರ್ಷ ತುಮಕೂರು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್ ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ.

'ಮುಖ್ಯಮಂತ್ರಿ ಆರೋಗ್ಯ ವಾಹಿನಿ' ಯೋಜನೆಯಡಿ ಮನೆ ಬಾಗಿಲಿಗೆ ವೈದ್ಯಕೀಯ ಸೇವೆ ಒದಗಿಸಲು ಬೀದರ್, ಚಾಮರಾಜನಗರ, ಹಾವೇರಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಂಚಾರಿ ಕ್ಲಿನಿಕ್ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಮುಖ್ಯಮಂತ್ರಿ ಸ್ವಕ್ಷೇತ್ರ ಶಿಗ್ಗಾಂವ ವ್ಯಾಪ್ತಿಯಲ್ಲಿರುವ ಸವಣೂರಿನಲ್ಲಿ ಹೊಸ ಆಯುರ್ವೇದ ಕಾಲೇಜು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

ಬೆಂಗಳೂರು ನಗರದ 4 ಭಾಗಗಳಲ್ಲಿ 500 ಹಾಸಿಗೆ ಸಾಮರ್ಥ್ಯವುಳ್ಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

## ಬಡವರಿಗೆ ವೈದ್ಯಕೀಯ ಶಿಕ್ಷಣ ಕಲ್ಪಿಸಲು ವಿಶೇಷ ಕ್ರಮ

- ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ 'ನೀಟ್' ಪರೀಕ್ಷೆಗೆ ತರಬೇತಿ
- ಸರ್ಕಾರಿ ಕೋಟಾದಡಿ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯುವ ಬಡ ವಿದ್ಯಾರ್ಥಿಗಳಿಗೆ ಬ್ಯಾಂಕ್‌ಗಳಿಂದ ಶೈಕ್ಷಣಿಕ ಸಾಲ ಒದಗಿಸಲು ನೆರವು.
- ಖಾಸಗಿ ವೈದ್ಯಕೀಯ ಕಾಲೇಜುಗಳ ವರ್ಗೀಕರಣ ಹಾಗೂ ಶುಲ್ಕ ನಿಯಂತ್ರಣ ಸಮಿತಿಯ ಮೂಲಕ ಶುಲ್ಕ ನಿಗದಿಪಡಿಸಲು ಕ್ರಮ

### ಅಪೌಷ್ಟಿಕತೆ ನಿವಾರಣೆಗೆ ಒತ್ತು

- ಪೌಷ್ಟಿಕ ಕರ್ನಾಟಕ ಯೋಜನೆಯಡಿ ₹93 ಕೋಟಿ ವೆಚ್ಚದಲ್ಲಿ ಪ್ರಾಯೋಗಿಕವಾಗಿ ರಾಜ್ಯದ 14 ಜಿಲ್ಲೆಗಳಲ್ಲಿ ಸಾರವರ್ಧಿತ ಅಕ್ಕಿ ವಿತರಣೆ
- ಬಾಲ್ಯವಿವಾಹ ಹಾಗೂ ಹೆಣ್ಣುಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸುವ ನಿಟ್ಟನಲ್ಲಿ, ಅಪೌಷ್ಟಿಕತೆ ನಿವಾರಿಸುವ 'ಸ್ಫೂರ್ತಿ' ಯೋಜನೆ ರಾಜ್ಯಾದ್ಯಂತ ವಿಸ್ತರಣೆ.

### ಆಶಾ: ಗೌರವ ಧನ ಹೆಚ್ಚಳ

- ಆಶಾ ಕಾರ್ಯಕರ್ತೆಯರ ಗೌರವ ಧನವನ್ನು ₹1000ಗಳಷ್ಟು ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ.
- ಉಚಿತ ಡಯಾಲಿಸಿಸ್ ಸೇವೆ ಬಲಪಡಿಸಲು ಉದ್ದೇಶಿಸಲಾಗಿದೆ. ಪ್ರತಿ ತಿಂಗಳಿಗೆ ಪ್ರಸ್ತುತ ನೀಡುತ್ತಿರುವ 30,000 ಡಯಾಲಿಸಿಸ್ ಸೈಕಲ್‌ಗಳನ್ನು 60,000 ಸೈಕಲ್‌ಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. ಇದಕ್ಕಾಗಿ ₹20 ಕೋಟಿ ಹೆಚ್ಚುವರಿ ಅನುದಾನ

## ಅಮೃತ ನಗರೋತ್ಥಾನ ಯೋಜನೆಗೆ ₹3,885 ಕೋಟಿ

**ಬೆಂಗಳೂರು:** ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯನ್ನು ಮುಂದಿನ ಎರಡು ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಬಜೆಟ್‌ನಲ್ಲಿ ₹3,885 ಕೋಟಿ ಅನುದಾನ ಒದಗಿಸಲಾಗಿದೆ. ನಗರಾಭಿವೃದ್ಧಿ ಇಲಾಖೆಗೆ ₹16,076 ಕೋಟಿ ನಿಗದಿಪಡಿಸಲಾಗಿದ್ದು, ಇದು ಒಟ್ಟು ಹಂಚಿಕೆಯಲ್ಲಿ ಶೇ 6ರಷ್ಟಾಗಿದೆ.

- ಕೇಂದ್ರದ 'ಅಮೃತ್ 2.0' ಯೋಜನೆಯಡಿ ಆಯ್ದ ನಗರಗಳಿಗೆ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರಾಜ್ಯಕ್ಕೆ ₹4,615 ಕೋಟಿ.
- ಸ್ವಚ್ಛ ಭಾರತ ಮಿಷನ್-2.0 ಅನುಷ್ಠಾನಕ್ಕೆ ಮುಂದಿನ 5 ವರ್ಷಗಳ ಅವಧಿಗೆ ಕೇಂದ್ರದಿಂದ ₹2,245 ಕೋಟಿ.



- ಶರಾವತಿ ಸಂಕೀರ್ಣದಲ್ಲಿ ಅಂದಾಜು ₹5,391 ಕೋಟಿ ವೆಚ್ಚದಲ್ಲಿ ಕೆಪಿಸಿಎಲ್‌ನಿಂದ 2 ಸಾವಿರ ಮೆಗಾವಾಟ್ ಸಾಮರ್ಥ್ಯದ ಭೂಗರ್ಭ ವಿದ್ಯುತ್ ಕೇಂದ್ರ ಸ್ಥಾಪನೆ.
- ಕೆಪಿಟಿಸಿಎಲ್‌ನಿಂದ 64 ಹೊಸ ಉಪಕೇಂದ್ರಗಳ ಸ್ಥಾಪನೆ.
- ಗ್ರೀನ್ ಹೈಡ್ರೋಜನ್ ನೀತಿ ರೂಪಿಸಲು ಚಿಂತನೆ.
- 8 ಜಿಲ್ಲೆಗಳಲ್ಲಿ ಸುಮಾರು 5 ಸಾವಿರ ಮೆಗಾವಾಟ್ ಸಾಮರ್ಥ್ಯದ ಹೈಬ್ರಿಡ್ ಪಾರ್ಕ್ ಸ್ಥಾಪನೆ ಕಾರ್ಯಸಾಧ್ಯತೆ ಕುರಿತು ಪರಿಶೀಲನೆ.

## ಹೆದ್ದಾರಿ ಮತ್ತು ರೈಲು ಮಾರ್ಗ ಅಭಿವೃದ್ಧಿಗೆ ಒತ್ತು



- ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ-4, ಘಟ್ಟ-2ರಡಿ ಒಟ್ಟು 2,275 ಕಿ.ಮೀ. ರಾಜ್ಯ ಹೆದ್ದಾರಿ ಅಭಿವೃದ್ಧಿಗೆ ₹3,500 ಕೋಟಿ.
- 1,008 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳ ಮರುಡಾಂಬರೀಕರಣಕ್ಕೆ ₹440 ಕೋಟಿ.
- ₹927 ಕೋಟಿ ವೆಚ್ಚದ ಧಾರವಾಡ-ಕಿತ್ತೂರು-ಬೆಳಗಾವಿ ನೂತನ ರೈಲು ಮಾರ್ಗ ಯೋಜನೆ ಅನುಷ್ಠಾನಕ್ಕೆ ಕ್ರಮ.
- ಅಂದಾಜು ₹640 ಕೋಟಿ ವೆಚ್ಚದ 55 ಕಿ.ಮೀ.ಉದ್ದದ ಗದಗ-ಯಲವಿಗಿ ನೂತನ ರೈಲು ಮಾರ್ಗ ಯೋಜನೆಗಾಗಿ ಕೇಂದ್ರಕ್ಕೆ ಪ್ರಸ್ತಾವನೆ.
- ಚೆನ್ನೈ-ಬೆಂಗಳೂರು-ಮೈಸೂರು ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆ ಅನುಷ್ಠಾನಕ್ಕೆ ಕೇಂದ್ರದ ಸಹಯೋಗ.
- ರಾಷ್ಟ್ರೀಯ ಹೆದ್ದಾರಿ ಅಕ್ಕಪಕ್ಕದ ನದಿಗಳ ಹೂಳೆತ್ತಲು ಮತ್ತು ಹೊಸ ಕೆರೆ ನಿರ್ಮಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಹಭಾಗಿತ್ವದಲ್ಲಿ ಹೊಸ ಯೋಜನೆ.
- ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಆನೆ ಹಾವಳಿ ತಡೆಯಲು ₹100 ಕೋಟಿ ವೆಚ್ಚದಲ್ಲಿ ರೈಲುಹಳಿ ತಡೆಗೋಡೆ ನಿರ್ಮಾಣ.

## ರಾಯಚೂರಿನಲ್ಲಿ ವಿಮಾನ ನಿಲ್ದಾಣ

- ರಾಯಚೂರಿನಲ್ಲಿ ₹186 ಕೋಟಿ ವೆಚ್ಚದಲ್ಲಿ ಗ್ರೀನ್-ಫೀಲ್ಡ್ ವಿಮಾನ ನಿಲ್ದಾಣ.
- ದಾವಣಗೆರೆ ಹಾಗೂ ಕೊಪ್ಪಳದಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಕಾರ್ಯಸಾಧ್ಯತಾ ವರದಿ ತಯಾರಿ.
- ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ.



# 'ಅಸಮಾನತೆ ನಿವಾರಣೆಗೆ ಪೂರಕವಾದ ಬಜೆಟ್'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಈ ಬಾರಿಯ ಬಜೆಟ್ ರಾಜ್ಯದಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ನಿವಾರಣೆಗೆ ಪೂರಕವಾಗಿದೆ. ತಮ್ಮ ಸರ್ಕಾರ ದಿಟ್ಟ ಗುರಿಯೊಂದಿಗೆ ಎಲ್ಲರನ್ನೂ ಒಳಗೊಳ್ಳುವ ಬಜೆಟ್ ಮಂಡಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಬಜೆಟ್ ಮಂಡನೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದು ಸಂಪೂರ್ಣವಾಗಿ ವಾಸ್ತವಿಕ ನೆಲೆಗಟ್ಟಿನಲ್ಲಿ ರೂಪಿಸಿದ ಬಜೆಟ್. ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದ ಶೇ 3.5ರಷ್ಟು ಸಾಲ ಪಡೆಯುವ ಅವಕಾಶ ಇತ್ತು. ಆದರೆ, ವಿತ್ತೀಯ ಶಿಸ್ತು ಕಾಪಾಡುವ ಉದ್ದೇಶದಿಂದ ಶೇ 3.26ರಷ್ಟು ಸಾಲವನ್ನು ಮಾತ್ರ ಪಡೆಯುವ ತೀರ್ಮಾನ ಮಾಡಲಾಗಿದೆ. ರಾಜಸ್ವ ಕೊರತೆಯನ್ನೂ ಕಡಿಮೆ ಮಾಡಲಾಗಿದೆ' ಎಂದರು.ಇದೇಮೊದಲಬಾರಿಗೆನೈಸರ್ಗಿಕಅಸಮತೋಲನನಿವಾರಣೆಗೆ ಪೂರಕವಾಗಿ 'ಪರಿಸರ ಬಜೆಟ್' ರೂಪಿಸಲಾಗಿದೆ. ಇದು ತಮ್ಮ ಸರ್ಕಾರ ಹೊಂದಿರುವ ಸೂಕ್ಷ್ಮತೆಗೆ ಸಾಕ್ಷಿ. ಹೆಚ್ಚು ಜನರನ್ನು ತಲುಪುವಂತಹ ಆರೋಗ್ಯ ಸೇವೆಗಳಿಗೂ ಪ್ರಾಧಾನ್ಯ ನೀಡಲಾಗಿದೆ ಎಂದು ಹೇಳಿದರು.

### 'ನೌಕರರ ವೇತನ ಪರಿಷ್ಕರಣೆ: ಈ ವರ್ಷದಲ್ಲೇ ಕ್ರಮ'

'ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಈ ವರ್ಷದಲ್ಲೇ ಕ್ರಮ ಕೈಗೊಳ್ಳಲಾಗುವುದು' ಎಂದು ಬೊಮ್ಮಾಯಿ ಹೇಳಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ನಮ್ಮ ನಾಯಕರಾದ ಬಿ.ಎಸ್. ಯಡಿಯೂರಪ್ಪ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರತಿನಿಧಿಗಳಿಗೆ ಈಗಾಗಲೇ ಭರವಸೆ ನೀಡಿದ್ದೇನೆ' ಎಂದರು

'ಕಾಂಗ್ರೆಸ್‌ನವರಿಗೆ ಕೇವಲ ರಾಜಕಾರಣ ಮಾಡುವುದು ಗೊತ್ತು. ಮೇಕೆದಾಟು ಯೋಜನೆಗೆ ಬಾಕಿ ಇರುವ ಅನುಮತಿಗಳು ಶೀಘ್ರದಲ್ಲೇ ದೊರಕುವ ವಿಶ್ವಾಸವಿದೆ. ಈ ಕಾರಣದಿಂದಾಗಿಯೇ ₹ 1,000 ಕೋಟಿ ಒದಗಿಸಲಾಗಿದೆ' ಎಂದರು.

* * *

ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ ವಲಯಗಳಿಗೆ ನಿಗದಿ ಮಾಡಿರುವ ಮೊತ್ತವು 2020-21ನೇ ಸಾಲಿಗೆ ಹೋಲಿಸಿದರೆ ಶೇ 29ರಷ್ಟು, 2021-22ನೇ ಸಾಲಿನ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಶೇ 23ರಷ್ಟು ಕಡಿಮೆ. ಕೋವಿಡ್ ಸಾಂಕ್ರಾಮಿಕವನ್ನು ಗಮನದಲ್ಲಿ ಇಟ್ಟುಕೊಂಡು, ಆರೋಗ್ಯಸೇವಾ ಮೂಲಸೌಕರ್ಯ ಹೆಚ್ಚಿಸಲು ಬಜೆಟ್‌ನಲ್ಲಿ ಆದ್ಯತೆ ಕೊಡಬೇಕಾಗಿತ್ತು.

**ಸಾರ್ಥಕ್ ಪ್ರಧಾನ್,** ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನ ಅಸೋಸಿಯೇಟ್ ಫೆಲೊ, ಬೆಂಗಳೂರು

ಮೂಲಸೌಕರ್ಯ ಅಭಿವೃದ್ಧಿ, ರೈತರು, ಮಹಿಳೆಯರು, ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಅತಿಸಣ್ಣ, ಸಣ್ಣ ಕೈಗಾರಿಕೆಗಳ ಪುನರುಜ್ಜೀವನಕ್ಕೆ ಕೈಗಾರಿಕೆಗಳು ಭರಿಸಬೇಕಿರುವ ಪರವಾನಗಿ ಶುಲ್ಕ, ಇತರ ತೆರಿಗೆಗಳ ಕಡಿತ ನಿರೀಕ್ಷಿಸಿದ್ದೆವು. ಜನಸಾಮಾನ್ಯರ ಮೇಲೆ ಹೆಚ್ಚಿನ ಹೊರೆ ಹಾಕದಿರುವುದು ಸಂತಸದ ವಿಷಯ.

**ಡಾ.ಐ.ಎಸ್. ಪ್ರಸಾದ್,**
ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷ

ಇದು ಬಸವರಾಜ ಬೊಮ್ಮಾಯಿ ಅವರ ಮೊದಲ ಹಾಗೂ ಕೊನೆಯ ಬಜೆಟ್. ಚುನಾವಣೆ ಪ್ರಣಾಳಿಕೆಯನ್ನು ಬಜೆಟ್‌ನಲ್ಲಿ ಹೇಳಿದ್ದಾರೆ. ಮುಖ್ಯಮಂತ್ರಿಯಾದವರು ಬಜೆಟ್ ಅನ್ನು ಜನರ ಮುಂದಿಡುವಾಗ ಸ್ಫೂರ್ತಿ, ದೂರದೃಷ್ಟಿ, ಎಲ್ಲ ವರ್ಗದ ಜನರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಆತ್ಮವಿಶ್ವಾಸ ಇರಬೇಕು. ಆ ಆತ್ಮಬಲವೇ ಅವರಲ್ಲಿ ಕಾಣಲಿಲ್ಲ

**ಡಿ.ಕೆ. ಶಿವಕುಮಾರ್,**
ಕೆಪಿಸಿಸಿ ಅಧ್ಯಕ್ಷ

ಬಜೆಟ್‌ನಲ್ಲಿ ವಿಶೇಷತೆ ಏನೂ ಇಲ್ಲ. ಈಗಾಗಲೇ ಇದ್ದ ಕಾರ್ಯಕ್ರಮಗಳನ್ನೇ ಮುಂದುವರಿಸಲಾಗಿದೆ. ಎಸ್‌ಸಿ, ಎಸ್‌ಟಿ ವಿಶೇಷ ಘಟಕ ಯೋಜನೆಯಡಿ ಕಳೆದ ಸಾಲಿನ ಹಣವೇ ಖರ್ಚಾಗಿಲ್ಲ. ನಿಗದಿ ಮಾಡಲಾಗುತ್ತದೆ, ಬಿಡುಗಡೆ ಮಾಡುವುದಿಲ್ಲ. ಪಶ್ಚಿಮ ಘಟ್ಟ ಪ್ರದೇಶದಲ್ಲೂ ಪ್ರವಾಸೋದ್ಯಮ ಅಭಿವೃದ್ಧಿಗೆ ಅವಕಾಶ ಇತ್ತು. ಅದನ್ನು ಮಾಡಿಲ್ಲ.

**ಎಚ್.ಕೆ.ಕುಮಾರಸ್ವಾಮಿ,**
ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ



ಶಿಕ್ಷಣದ ಮೂಲಕ ಅಭಿವೃದ್ಧಿ ಸಾಧ್ಯ ಎಂಬುದು ಬಜೆಟ್‌ನ ಪ್ರಮುಖ ಆಶಯ. ಕಳೆದ ಸಾಲಿನ ಬಜೆಟ್‌ಗಿಂತ ಶೇ 7.7ರಷ್ಟು ಹೆಚ್ಚು ಮೊತ್ತ ನೀಡಲಾಗಿದ್ದು, ಶಿಕ್ಷಣ- ಉದ್ಯೋಗ- ಸಬಲೀಕರಣಕ್ಕೆ ಆದ್ಯತೆ ಸಿಗಲಿದೆ. ರೈತರ ಆದಾಯ ದ್ವಿಗುಣಗೊಳಿಸುವ ಸಂಕಲ್ಪ ಬಲ ಮತ್ತು ವಿಶೇಷ ಉಪಕ್ರಮಗಳೂ ಇವೆ

**ನಳಿನ್ ಕುಮಾರ್ ಕಟೀಲ್,**
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

# ರಾಜ್ಯ ಬಜೆಟ್ 2022-23

## ಹೊಸ ಯೋಜನೆಗಳು

1. 'ರೈತ ಶಕ್ತಿ' ಯೋಜನೆ ₹ **600** ಕೋಟಿ
2. 'ಕ್ಷೀರ ಸಮೃದ್ಧಿ ಬ್ಯಾಂಕ್' ಸ್ಥಾಪನೆ ₹ **260** ಕೋಟಿ
3. ರೈತರಿಗಾಗಿ 'ಯಶಸ್ವಿನಿ' ಆರೋಗ್ಯ ಯೋಜನೆ ₹ **300** ಕೋಟಿ

ಮೇಕೆದಾಟು ಯೋಜನೆಗೆ ಬಜೆಟ್‌ನಲ್ಲಿ ಬಿಜೆಪಿ ಸರ್ಕಾರ ₹1,000 ಕೋಟಿ ಕಾಯ್ದಿರಿಸಿದೆ. ಕಣ್ಕಟ್ಟು, ಕಪಟ, ಇಬ್ಬಗೆಯ ನೀತಿಯಿಂದ ಈ ಯೋಜನೆ ಅನುಷ್ಠಾನಗೊಳಿಸುವುದು ಅಸಾಧ್ಯ

**ರಣದೀಪ್ ಸಿಂಗ್ ಸುರ್ಜೇವಾಲ,**
ರಾಜ್ಯ ಕಾಂಗ್ರೆಸ್ ಉಸ್ತುವಾರಿ

### ಇಲಾಖಾವಾರು ಅನುದಾನ ಹಂಚಿಕೆ (₹ ಕೋಟಿಗಳಲ್ಲಿ)



- ನಗರಾಭಿವೃದ್ಧಿಗೆ 2021–22ನೇ ಸಾಲಿನಲ್ಲಿ ಒಟ್ಟು ₹27,386 ಕೋಟಿ ಅನುದಾನ ನೀಡಲಾಗಿತ್ತು. ಈ ಬಜೆಟ್‌ನಲ್ಲಿ ಅನುದಾನದ ಮೊತ್ತವು ₹16,076 ಕೋಟಿಗಳಿಗೆ ಕುಸಿದಿದೆ
- ಇಂಧನ ಇಲಾಖೆಗೆ ಹಿಂದಿನ ಬಜೆಟ್‌ನಲ್ಲಿ ₹16,515 ಕೋಟಿ ಅನುದಾನ ನೀಡಲಾಗಿತ್ತು. ಅದು ಈ ಬಜೆಟ್‌ನಲ್ಲಿ ₹12,655 ಕೋಟಿಗೆ ಕುಸಿದಿದೆ
- ಜಲ ಸಂಪನ್ಮೂಲ ಇಲಾಖೆಗೆ 2021–22ನೇ ಸಾಲಿನಲ್ಲಿ ₹21,181 ಕೋಟಿ ನೀಡಲಾಗಿತ್ತು. ಈ ಬಾರಿ ಅನುದಾನದ ಮೊತ್ತ ₹20,601 ಕೋಟಿಗೆ ಕುಸಿದಿದೆ

### ರೂಪಾಯಿ ಜಮೆ (ಪೈಸೆಗಳಲ್ಲಿ)



### ರೂಪಾಯಿ ವೆಚ್ಚ (ಪೈಸೆಗಳಲ್ಲಿ)



# ಬಲವಾಗಬೇಕಿತ್ತು ಕೃಷಿ ಬಿಕ್ಕಟ್ಟಿನ ನಿರ್ವಹಣೆ

**ವಿಶ್ಲೇಷಣೆ**

**ಡಾ. ಪ್ರಕಾಶ ಭಟ್**

**ಬಜೆಟಿಂಗ್ ಪ್ರತಿ** ವರ್ಷದ ಪ್ರಕ್ರಿಯೆಯಾದರೂ ನಿರ್ವಾತದಲ್ಲಿ ನಡೆಯುವಂತಹದಲ್ಲ. ಹಿಂದಿನ ವರ್ಷದ ಬಜೆಟ್, ಅದನ್ನಾಧರಿಸಿದ ಖರ್ಚು, ಖರ್ಚಿನಿಂದಾದ ಸಾಧನೆ ಮತ್ತು ಅವುಗಳಿಂದಾದ ಧನಾತ್ಮಕ ಪ್ರಭಾವಗಳು ಗಣನೆಗೆ ಬರುತ್ತವೆ. ಹಿಂದಿನ ಆರ್ಥಿಕ ವರ್ಷದಲ್ಲಿ ಯಾವ ಚಟುವಟಿಕೆಗಳೆಲ್ಲ ಗೆದ್ದವು? ಯಾವು ಸೋತವು? ಹೊಸ ಸನ್ನಿವೇಶ ಬೇಡುವ ಹೊಸ ಚಟುವಟಿಕೆಗಳ ನೀತಿಗಳು ಯಾವುವು?

ಇವೆಲ್ಲವು ಬಜೆಟಿಂಗ್ ಪ್ರಕ್ರಿಯೆಗೆ ಒಳಸುಳಿಗಳಾಗಬೇಕು. ಇವೆಲ್ಲವನ್ನು ಆಧರಿಸಿ, ಪರಾಮರ್ಶಿಸಿ ಈ ವರ್ಷದ ಬಜೆಟ್ ಸಿದ್ಧವಾಗುತ್ತದೆ. ಆರ್ಥಿಕ ಹಾಗೂ ಭೌತಿಕ ಗುರಿಗಳ ಹೊಂದಾಣಿಕೆಯನ್ನು ಬಜೆಟ್‌ನಲ್ಲಿ ಸಾಧಿಸಬೇಕಾಗಿರುವುದರಿಂದ ಯಾವ ಚಟುವಟಿಕೆಗೆ ಎಷ್ಟು ಹಣ ಎನ್ನುವುದರ ನಿರ್ಣಯಕ್ಕೂ ಹಿಂದಿನ ಅನುಭವವೇ ಮಾರ್ಗದರ್ಶಿಯಾಗಿರುತ್ತದೆ.

ರಾಜ್ಯದ 2022–23ರ ಬಜೆಟ್ ಗಮನಿಸಿದಾಗ ಈ ಎಲ್ಲವನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ ಎಂಬ ಅನುಮಾನ ಬರುವುದು ಹೌದು. ಗ್ರಾಮೀಣಾಭಿವೃದ್ಧಿ, ಗ್ರಾಮೀಣ ಉದ್ಯೋಗ ಹಾಗೂ ಕೃಷಿ ವಿಭಾಗಗಳನ್ನು ಗಮನಿಸಿದಲ್ಲಿ ಹಲವು ಕ್ರಮಗಳನ್ನು ಬಜೆಟ್ ಸೂಚಿಸುವುದು ಕಾಣುತ್ತದೆ. ಚುನಾವಣೆ ಮುಂದಿರುವಾಗ ಬಜೆಟ್ ಮಂಡಿಸುವಾಗ ಒಂದು ಕಣ್ಣು ಆ ಕಡೆಗೂ ಇರುವುದು ಸಹಜ.

ಒಟ್ಟು ವೆಚ್ಚದ ₹2,65,730 ಕೋಟಿಯಲ್ಲಿ ₹33,700 ಕೋಟಿ ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಕೊಟ್ಟಿರುವುದು ಈಗಿನ ಕೃಷಿ ಸಂದರ್ಭದಲ್ಲಿ ಕಡಿಮೆಯೇ. ಮಹಿಳೆಯರ ಸಬಲೀಕರಣ (₹ 43,183 ಕೋಟಿ) ಹಾಗೂ ಮಕ್ಕಳ ಅಭ್ಯುದಯ (₹ 40,944 ಕೋಟಿ) ನೀಡಿರುವುದನ್ನು ಗಮನಿಸಿದರೆ ಕೃಷಿ ಹಾಗೂ ಪೂರಕ ಚಟುವಟಿಕೆಗಳಿಗೆ ದೊರೆತ ಅನುದಾನದ ಕೊರತೆ ಸ್ಪಷ್ಟವಾಗಬಲ್ಲದು.

ಕೃಷಿ ಯಂತ್ರೋಪಕರಣಕ್ಕೆ 'ರೈತ ಶಕ್ತಿ' ಯೋಜನೆಯಲ್ಲಿ ಪ್ರತಿ ಎಕರೆಗೆ ನೀಡುವ ಡೀಸೆಲ್ ಸಹಾಯಧನ ಕೃಷಿಯ ಈಗಿನ ಸಮಸ್ಯೆಗೆ ಉತ್ತರವಾಗಿ ಬಂದದ್ದೇನೊ ಹೌದು. ಅದನ್ನು ಹೇಗೆ ನಿರ್ವಹಿಸಲಾಗುತ್ತದೆ ಎನ್ನುವುದು ಸ್ಪಷ್ಟವಿಲ್ಲ. ಈಗ ಇರುವ ಕೃಷಿ ಯಂತ್ರಧಾರೆಯನ್ನು ಹೋಬಳಿಗಳಿಗೆ ವಿಸ್ತರಿಸಿರುವುದು ಸ್ವಾಗತಾರ್ಹ. ಕೃಷಿಕರಿಗೆ ನೀಡುವ ಬಡ್ಡಿ ರಿಯಾಯಿತಿ ಸಾಲ ಸರಿಯಾಗಿ ನಿರ್ವಹಿಸಿದಲ್ಲಿ ಉಪಯುಕ್ತವಾದೀತು.

ಇಂದಿನ ಪ್ಯಾಂಡೆಮಿಕ್ ಸನ್ನಿವೇಶದಲ್ಲಿ ಕೋವಿಡ್ ನಂತರದ ಆರೋಗ್ಯ ನಿರ್ವಹಣೆ ಕಷ್ಟವಾಗುತ್ತಿರುವಾಗ ಯಶಸ್ವಿನಿ ಯೋಜನೆಯನ್ನು 'ಪರಿಷ್ಕೃತ' ರೂಪದಲ್ಲಿ ಅನುಷ್ಠಾನ ಮಾಡಲು ₹300 ಕೋಟಿ ಅನುದಾನ ನೀಡಿರುವುದು ಸ್ವಾಗತಾರ್ಹ. ಆದರೆ, ಪರಿಷ್ಕರಣೆ ಮಾಡಿರುವುದೇನು? ಅನುದಾನ ಇಷ್ಟು ಎಂದು ಹೇಗೆ ನಿರ್ಣಯಿಸಲಾಯಿತು ಎಂಬುದು ಸ್ಪಷ್ಟವಿಲ್ಲದೆ ಹೆಚ್ಚಿನದನ್ನು ಹೇಳಲು ಸಾಧ್ಯವಿಲ್ಲ.

ಹಾಲು ಉತ್ಪಾದಕರಿಗಾಗಿ ಕ್ಷೀರ ಸಮೃದ್ಧಿ ಬ್ಯಾಂಕ್ ಸ್ಥಾಪನೆಯ ಪ್ರಸ್ತಾಪವೂ ಬಜೆಟ್‌ನಲ್ಲಿದೆ. ಇದರಲ್ಲಿ ರಾಜ್ಯ ಸರ್ಕಾರ ₹100 ಕೋಟಿ ಷೇರು ಬಂಡವಾಳ ತೊಡಗಿಸಿರುವುದರಿಂದ ಸಂಕಷ್ಟದಲ್ಲಿರುವ ಹಾಲು ಉತ್ಪಾದಕರಿಗೆ ನೆರವಾಗಬಹುದು. ಗೋಶಾಲೆಗಳ ಸಾಧಕ–ಬಾಧಕದ ಚರ್ಚೆ ಇನ್ನೂ ನಡೆಯುತ್ತಿದೆಯಾದರೂ ಸರ್ಕಾರ ಅದಕ್ಕೆ ₹50 ಕೋಟಿ ಅನುದಾನ ಮೀಸಲಿಟ್ಟಿದೆ. ಹಿಂದಿನ ವರ್ಷದ ಬಜೆಟ್‌ನಲ್ಲಿ ಏನು ಸಾಧನೆಯಾಗಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಇಷ್ಟಾದರೂ ಗೋವುಗಳ ದತ್ತು ಪ್ರೋತ್ಸಾಹ ಹೊಸ ವಿಚಾರ ಹೌದು. ಇದು ದಕ್ಷ ರೀತಿಯಲ್ಲಿ ಜಾರಿಯಾಗಬೇಕು. ಅದಕ್ಕೆ ಅವಶ್ಯ ವ್ಯವಸ್ಥೆಯನ್ನು ಸರ್ಕಾರ ಯೋಚಿಸಿ, ಅನುಷ್ಠಾನ ಮಾಡಬೇಕು.

ಕೆರೆಗಳ ಅಭಿವೃದ್ಧಿಯೂ ಒಳ್ಳೆಯ ವಿಚಾರ. ಆದರೆ, ರಾಜ್ಯದಲ್ಲಿ ಇಲ್ಲಿಯವರೆಗಿನ ದಾಖಲೆಯೇನೂ ಚೆನ್ನಾಗಿಲ್ಲ. ಇದನ್ನು ಯಾವ ರೀತಿ ಜಾರಿಗೊಳಿಸಬೇಕು ಎಂಬ ಅನುಷ್ಠಾನ ನೀತಿಯು ಹಿಂದಿನ ಸಫಲತೆ–ವಿಫಲತೆಗಳನ್ನಾಧರಿಸಿ ಸಿದ್ಧವಾಗಬೇಕು. ಮಳೆ ನೀರಿನ ದಕ್ಷ ಬಳಕೆಯ ಕುರಿತು ಬಜೆಟ್ ಪ್ರಸ್ತಾಪಿಸುವ ಜಲಾಯನ ಅಭಿವೃದ್ಧಿ ಯೋಜನೆಗಳನ್ನು ಮೀರಿ ಪ್ರತಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಮಳೆ ನೀರಿನ ಸಂರಕ್ಷಣೆ, ವೃಕ್ಷಾರೋಪಣ ಬಗ್ಗೆ ಕಾರ್ಯಸೂಚಿಬೇಕಿತ್ತು. ಇಂದಿನ ಹವಾಮಾನ ಬದಲಾವಣೆ ದಿನಗಳಲ್ಲಿ ಗ್ರಾಮ ಮಟ್ಟದಲ್ಲಿ ಈ ಕ್ರಮಗಳ ಜಾರಿ, ಸಮುದಾಯ ಭಾಗವಹಿಸುವುದು ಒಳ್ಳೆಯ ಕಾರ್ಯಕ್ರಮವಾಗಬಹುದಿತ್ತು. ಈ ವಿಷಯದಲ್ಲಿ ಸರ್ಕಾರ ಇನ್ನೊಂದು ವರ್ಷ ಕಳೆದುಕೊಂಡಿತು. ಜಾಗತಿಕ ತಾಪಮಾನ ಬಹುದೊಡ್ಡ ಸಮಸ್ಯೆಯೆಂಬುದು ಸರ್ಕಾರಕ್ಕೆ ಮನದಟ್ಟಾದಂತಿಲ್ಲ.

ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳ ಅಭಿವೃದ್ಧಿಯ ಗುರಿ ಸಾಧನೆಗೆ ಕೊಟ್ಟಿರುವ ₹1,000 ಕೋಟಿಯಿಂದ ಆ ತಾಲ್ಲೂಕುಗಳ ಶಿಕ್ಷಣ, ಆರೋಗ್ಯ, ಅಂಗನವಾಡಿಗಳೆಲ್ಲವೂ ಉದ್ದೇಶಿಸಿದ ಅಭಿವೃದ್ಧಿ ಕಾಣಲೆಂದು ಆಶಿಸಬಹುದು. ಕರ್ನಾಟಕ ಅಪೌಷ್ಟಿಕತೆ ನಿವಾರಣೆಯಲ್ಲಿ ಹಿಂದೆಯೇ ಇರುವುದರಿಂದ ಸಾಮಾನ್ಯ ಅಪೌಷ್ಟಿಕತೆಯ ಮಕ್ಕಳ ಸೃಷ್ಟಿ ಹಾಗೂ ಕ್ಷೀರಭಾಗ್ಯ ಯೋಜನೆಯ ಸೌಲಭ್ಯ ಕೊಟ್ಟಿರುವುದು ಮಕ್ಕಳು ಸಾಮಾನ್ಯ ಅಪೌಷ್ಟಿಕತೆಯಿಂದ ತೀರ ಅಪೌಷ್ಟಿಕತೆಗೆ ಜಾರದಂತೆ ತಡೆಯಲು ಸಹಾಯಕವಾಗಬಹುದು.

(ಲೇಖಕರು: ಕೃಷಿ ತಜ್ಞ, ಪರಿಸರವಾದಿ)

## ಎಲ್ಲಿ, ಏನು, ಎಷ್ಟು?

- ಬಡ್ಡಿ ರಿಯಾಯಿತಿ ಯೋಜನೆಯಡಿ ಈ ಸಾಲಿನಲ್ಲಿ 33 ಲಕ್ಷ ರೈತರಿಗೆ ₹ 24 ಸಾವಿರ ಕೋಟಿ ಸಾಲ ವಿತರಣೆ
- ಕೆಪೆಕ್ ಮೂಲಕ ಕೃಷಿ ಉತ್ಪನ್ನಗಳ ಕೊಯ್ಲಿನೋತ್ತರ ನಿರ್ವಹಣೆ, ಮಾರಾಟ, ರಫ್ತಿಗಾಗಿ ₹ 50 ಕೋಟಿ
- ಆಳ ಸಮುದ್ರ ಮೀನುಗಾರಿಕೆಗೆ ನೂತನ 'ಮತ್ಸ್ಯ ಸಿರಿ' ಯೋಜನೆ.
- ಎಲ್ಲ ಜಿಲ್ಲೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಮಿನಿ ಆಹಾರ ಪಾರ್ಕ್‌ಗಳ ಸ್ಥಾಪನೆ
- ವಿಜಯಪುರ ಜಿಲ್ಲೆ ತೊರವಿಯಲ್ಲಿ ₹35 ಕೋಟಿ ವೆಚ್ಚದಲ್ಲಿ ಶೈತ್ಯಾಗಾರ ಸ್ಥಾಪನೆ
- ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಮಾರಲಾಗುವ ಪ್ರತಿ ಟನ್ ದ್ವಿತಳಿ ರೇಷ್ಮೆಗೂಡಿಗೆ ₹10 ಸಾವಿರ ಪ್ರೋತ್ಸಾಹಧನ
- 100 ನೂತನ ಪಶು ಚಿಕಿತ್ಸಾಲಯಗಳ ಆರಂಭ
- ಹಿರೇಕೆರೂರಿನಲ್ಲಿ ಗೋವಿನ ಜೋಳ ಸಂಶೋಧನಾ ಕೇಂದ್ರ ಸ್ಥಾಪನೆ
- ಆಕಸ್ಮಿಕವಾಗಿ ಮರಣ ಹೊಂದುವ ಕುರಿ, ಮೇಕೆ ಸಾಕಣೆದಾರರು, ವಲಸೆ ಕುಟುಂಬಕ್ಕೆ ₹5 ಲಕ್ಷ ವಿಮಾ ಸೌಲಭ್ಯ
- ಜಲಜೀವನ್ ಮಿಷನ್ ಯೋಜನೆಯಡಿ 2022–23 ನೇ ಸಾಲಿಗೆ ₹7,000 ಕೋಟಿ
- ಕಲ್ಯಾಣ ಕರ್ನಾಟಕದ ಪ್ರದೇಶಾಭಿವೃದ್ಧಿ ಮಂಡಳಿಗೆ ₹3,000 ಕೋಟಿ
- ಗ್ರಾಮ ಒನ್ ಯೋಜನೆ ಎಲ್ಲಾ ಜಿಲ್ಲೆಗಳಿಗೂ ವಿಸ್ತರಣೆ
- ಕಲಬುರಗಿ, ಯಾದಗಿರಿ ಜಿಲ್ಲೆಗಳಲ್ಲಿ ಬೆಳೆಯುವ ಭೌಗೋಳಿಕ ಸೂಚ್ಯಂಕ ಹೊಂದಿದ ತೊಗರಿಬೇಳೆ ಭೀಮಾ ಪಲ್ಸ್ ಬ್ರಾಂಡ್ ಅಡಿ ಮಾರಾಟ
- ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟೆ ನಿರ್ಮಿಸಿ ಕೃಷಿ ಮತ್ತು ಕುಡಿಯುವ ನೀರಿನ ಉದ್ದೇಶಕ್ಕೆ ಬಳಸಲು ಮೊದಲ ಹಂತದ ಯೋಜನೆಗೆ ₹ 500 ಕೋಟಿ

## 'ಅವಾಸ್ತವಿಕ, ಅಸಾಧ್ಯಗಳ ಪ್ರಸ್ತಾಪ'

**ರಾಜ್ಯದ** ಸಮಗ್ರ, ಸಾಮಾಜಿಕ, ಆರ್ಥಿಕ ಅಭಿವೃದ್ಧಿ, ದುರ್ಬಲ ವರ್ಗದವರ ರಕ್ಷಣೆ ಮತ್ತು ಏಳಿಗೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಕೃಷಿ, ಕೈಗಾರಿಕಾ, ಸೇವಾ ವಲಯಗಳಲ್ಲಿ ಜನರನ್ನು ಪಾಲುದಾರರಾಗಿ ಮಾಡುವುದು, ಹೊಸ ಚಿಂತನೆ, ಹೊಸ ಚೈತನ್ಯ, ಹೊಸ ಮುನ್ನೋಟದೊಂದಿಗೆ ನವ ಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣ ಎಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪಂಚ ಸೂತ್ರಗಳಿಗೆ ಈ ಬಜೆಟ್ ತದ್ವಿರುದ್ಧವಾಗಿದೆ. ಬಜೆಟ್‌ನಲ್ಲಿ ಅವಾಸ್ತವಿಕ ಮತ್ತು ಅಸಾಧ್ಯ ಕೆಲಸಗಳನ್ನು ಪ್ರಸ್ತಾಪಿಸಿದ್ದಾರೆ. ನಮ್ಮ ಸರ್ಕಾರದ ಆಡಳಿತದಲ್ಲಿ ರಾಜಸ್ವ ಉಳಿಕೆ ಬಜೆಟ್ ಇತ್ತು. ಬಿಜೆಪಿ ಬಂದ ಮೇಲೆ ರಾಜಸ್ವ ಕೊರತೆಯು ಆರಂಭವಾಗಿದೆ. ಇದು ನಮ್ಮ ಮತ್ತು ಬಿಜೆಪಿ ಸರ್ಕಾರದ ನಡುವಿನ ವ್ಯತ್ಯಾಸ. ಈಗ ರಾಜಸ್ವ ಕೊರತೆ ಇರುವುದರಿಂದ ಸಾಲ ಪಡೆದು ಅಭಿವೃದ್ಧಿ ಕಾರ್ಯಗಳು ಮತ್ತು ಆಸ್ತಿ ಸೃಜನೆಗೆ ಹಣ ಖರ್ಚು ಮಾಡುವಂತಾಗಿದೆ.

ಬಿಜೆಪಿ ಸರ್ಕಾರ ಜನರಿಗೆ ಟೋಪಿ ಹಾಕುವ ಕೆಲಸ ಮಾಡು ತ್ತಿದೆ. ಬಹಳಷ್ಟು ಇಲಾಖೆಗಳಿಗೆ 2018ರಲ್ಲಿ ಕೊಟ್ಟಷ್ಟು ಹಣವನ್ನೂ ಕೊಟ್ಟಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದವರ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಪಿ, ಟಿಎಸ್‌ಪಿ ಯೋಜನೆಗೆ ನಾವು ಹಣ ಮೀಸಲಿಡುತ್ತಿದ್ದೆವು. ಬಜೆಟ್ ಗಾತ್ರ ಹೆಚ್ಚಿದಂತೆ ಈ ಯೋಜನೆಗೆ ಅನುದಾನ ಹೆಚ್ಚಾಗಿಲ್ಲ

**ಸಿದ್ದರಾಮಯ್ಯ**
ವಿಧಾನಸಭೆ ವಿರೋಧ ಪಕ್ಷದ ನಾಯಕ

## 'ನಿರುದ್ಯೋಗದ ಬಗ್ಗೆ ಚಕಾರವಿಲ್ಲ'

ಕೋವಿಡ್ ಪರಿಸ್ಥಿತಿಯಿಂದಾಗಿ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಇದರಿಂದ ಜನರನ್ನು ಪಾರುಮಾಡುವ ಕುರಿತು ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ಚಕಾರ ಎತ್ತಿಲ್ಲ. ಯುವಜನರು ಕೆಲಸಕ್ಕಾಗಿ ಅಲೆದಾಡುತ್ತಿದ್ದಾರೆ. ಇದಕ್ಕೆ ಪರಿಹಾರ ಕ್ರಮಗಳನ್ನು ಪ್ರಕಟಿಸಬಹುದು ಎಂದು ನಿರೀಕ್ಷಿಸಿದ್ದೆ. ಜನರೂ ಇದನ್ನೇ ನಿರೀಕ್ಷಿಸಿದ್ದರು. ಆದರೆ, ಮುಖ್ಯಮಂತ್ರಿಯವರು ಮೌನ ತಾಳಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಬಿಗಡಾಯಿಸುವ ಸಾಧ್ಯತೆ ಇದೆ. ರಾಜ್ಯದಲ್ಲಿ ಕೋವಿಡ್‌ನಿಂದ ಆಗಿರುವ ಅನಾಹುತವನ್ನು ಸರಿಪಡಿಸುವ ಕುರಿತಂತೆ ಮುಖ್ಯಮಂತ್ರಿಯವರು ಯೋಚಿಸಿಯೇ ಇಲ್ಲ. ಆದರೆ, ಸಂಕಷ್ಟ ಕಾಲದಲ್ಲೂ ಹೆಚ್ಚು ಆದಾಯವನ್ನು ಅವರು ನಿರೀಕ್ಷಿಸಿದ್ದಾರೆ.

ಬಜೆಟ್ ಅನ್ನು ವಲಯವಾರು ವಿಂಗಡಿಸಿ, 'ಮಿಕ್ಸರ್ ಗ್ರೈಂಡರ್'ನಲ್ಲಿ ಹಾಕಿ ರುಬ್ಬಿದಂತೆ ಮಾಡಿದ್ದಾರೆ. ಯಾರಿಗೂ ಏನೂ ಕಾಣದಂತೆ ಆಗಿದೆ. ಮೀಸಲು ಅರಣ್ಯ ಪ್ರದೇಶ 'ಜಾರಕ್ ಬಂಡೆ'ಯಲ್ಲಿ ಉದ್ಯಾನ ನಿರ್ಮಿಸುವಂತಹ ಬಾಲಿಶ ಯೋಜನೆಗಳೇ ತುಂಬಿವೆ. ಕಾಂಗ್ರೆಸ್‌ನವರನ್ನು ಖುಷಿಪಡಿಸಲು ಮೇಕೆದಾಟು ಯೋಜನೆಗೆ ₹ 1,000 ಕೋಟಿ ಘೋಷಿಸಿರಬಹುದು.'

**ಎಚ್.ಡಿ. ಕುಮಾರಸ್ವಾಮಿ,**
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕೃಷಿ ಮತ್ತು ಪೂರಕ ವಲಯಕ್ಕೆ ₹33,700 ಕೋಟಿ ಅನುದಾನ ● ಸಣ್ಣ, ಅತಿ ಸಣ್ಣ ರೈತರಿಗೆ ಹೆಚ್ಚಿನ ಒತ್ತು

# 'ಅನ್ನದಾತ'ರಿಗೆ ಶಕ್ತಿ ತುಂಬುವ ಕಸರತ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎರಡು–ಮೂರು ವರ್ಷಗಳ ನಿರಂತರ ಅತಿವೃಷ್ಟಿ, ಕೋವಿಡ್ ಪರಿಸ್ಥಿತಿ ಮತ್ತು ಲಾಕ್‌ಡೌನ್ ಆರ್ಥಿಕ ಸಂಕಷ್ಟದಿಂದ ಬಸವಳಿದಿರುವ 'ಅನ್ನದಾತ'ರಿಗೆ ಶಕ್ತಿ ತುಂಬುವ ಪ್ರಯತ್ನ ನಡೆದಿದೆ. ವಿಶೇಷವಾಗಿ ಕೃಷಿ ವಲಯದ ದೊಡ್ಡ ಸಮುದಾಯವಾಗಿರುವ ಸಣ್ಣ, ಅತಿ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರ ಮೇಲೆ ಗಮನ ಕೇಂದ್ರೀಕರಿಸಿರುವುದು ನಿಚ್ಚಳವಾಗಿದೆ.

ಸಾಲ ಸೌಲಭ್ಯ, ಯಂತ್ರೋಪಕರಣಗಳ ಹೆಚ್ಚಿನ ಬಳಕೆಗೆ ಪ್ರೋತ್ಸಾಹ ಮತ್ತು ಸಹಾಯಧನ, ತೋಟಗಾರಿಕೆ ಮತ್ತು ಸಾವಯವ ಉತ್ಪನ್ನಗಳು, ಹೈನುಗಾರಿಕೆ, ರೇಷ್ಮೆ ಕೃಷಿಕರಿಗೂ ಆದ್ಯತೆ ನೀಡಲಾಗಿದೆ.

'ರೈತರ ಆದಾಯವನ್ನು ದ್ವಿಗುಣಗೊಳಿಸುವ ದಿಸೆಯಲ್ಲಿ ನಿರ್ದಿಷ್ಟ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಕೃಷಿ ಕ್ಷೇತ್ರದ ಸುಧಾರಣೆಗಾಗಿ ಮತ್ತು ಕೃಷಿಯನ್ನು ಲಾಭದಾಯಕವಾಗಿಸಲು ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್, ನೀರಾವರಿ ಸೌಲಭ್ಯ, ರಿಯಾಯಿತಿ ದರದಲ್ಲಿ ಬೀಜ, ಗೊಬ್ಬರ, ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ, ಪಿಎಂ ಕಿಸಾನ್ ಸಹಾಯಧನ ಹಲವು ಸೌಲಭ್ಯ ಒದಗಿಸಲಾಗಿದೆ. ಇದು ಆತ್ಮನಿರ್ಭರ ಭಾರತ ನಿರ್ಮಾಣದ ಆಶಯಕ್ಕೆ ಪೂರಕವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಈ ಮೂಲಕ ಕೃಷಿ ವಲಯದ ದೊಡ್ಡ ಸಮುದಾಯವನ್ನು ತಲುಪಿ, 'ಮತದ ಬುಟ್ಟಿ'ಯನ್ನು ಭದ್ರಪಡಿಸುವ ಚಾಣಕ್ಷತನವನ್ನು ತೋರಿದ್ದಾರೆ.

ಕೃಷಿ ಉತ್ಪಾದಕತೆ ಹೆಚ್ಚಿಸಲು ಯಂತ್ರಗಳ ಬಳಕೆಯನ್ನು ಪ್ರೋತ್ಸಾಹಿಸಲು 'ರೈತ ಶಕ್ತಿ' ಯೋಜನೆ ಪ್ರಸ್ತಾಪಿಸಲಾಗಿದೆ.

ನೈಸರ್ಗಿಕ ಕೃಷಿ ಪದ್ಧತಿಯನ್ನು ಇನ್ನಷ್ಟು ಪ್ರದೇಶಕ್ಕೆ ವಿಸ್ತರಿಸುವುದು, ರೈತರ ಮಕ್ಕಳಿಗೆ ಕೃಷಿ ಶಿಕ್ಷಣ ನೀಡಲು ಬಳ್ಳಾರಿ ಜಿಲ್ಲೆಯ ಹಗರಿ ಮತ್ತು ಬೆಳಗಾವಿ ಅಥಣಿಯಲ್ಲಿ ಹೊಸ ಕೃಷಿ ಕಾಲೇಜುಗಳ ಆರಂಭ, ಬೆಳೆಗಳಿಗೆ ಉತ್ತಮ ಬೆಲೆ ತಂದು ಕೊಡುವ ನಿಟ್ಟನಲ್ಲಿ ಭೌಗೋಳಿಕ ಸೂಚ್ಯಂಕ ಹೊಂದಿರುವ ತೊಗರಿಬೇಳೆಯನ್ನು 'ಭೀಮಾ ಪಲ್ಸ್' ಮತ್ತು ಕೊಡಗು ಹಾಗೂ ಜಾಂಬೋಟ ಜೇನು ತುಪ್ಪವನ್ನು ಬ್ರಾಂಡ್ ಅಡಿ ಮಾರಾಟಕ್ಕೆ ವ್ಯವಸ್ಥೆ. ಮಹಿಳೆಯರಿಗೆ ಪ್ರೋತ್ಸಾಹ ನೀಡಲು ಕೃಷಿ ಪ್ರಶಸ್ತಿ, ಕೃಷಿ ಪಂಡಿತ ಪ್ರಶಸ್ತಿ ನೀಡುವ ಪ್ರಸ್ತಾವನೆ ಇದೆ.

ಹೈನುಗಾರಿಕೆ, ತೋಟಗಾರಿಕೆ, ಕುರಿ, ಕೋಳಿ, ಹಂದಿ ಸಾಕಣೆ, ರೇಷ್ಮೆ ಕೃಷಿಕರು, ಮೀನುಗಾರಿಕೆ ಹಲವು ಪ್ರೋತ್ಸಾಹಕ ಯೋಜನೆಗಳು ಮತ್ತು ಸಹಾಯಧನವನ್ನು ಪ್ರಕಟಿಸಲಾಗಿದೆ.

ವಲಸೆ ಕುರಿ–ಮೇಕೆ ಸಾಕಣೆದಾರರು ಪ್ರಾಕೃತಿಕ ವಿಕೋಪಗಳಲ್ಲಿ ಮತ್ತು ಅಸಹಜವಾಗಿ ಮರಣ ಹೊಂದಿದ ಸಂದರ್ಭದಲ್ಲಿ ₹ 5 ಲಕ್ಷ ವಿಮಾ ಭದ್ರತೆಯ ಸೌಲಭ್ಯ. ಆಕಸ್ಮಿಕ ಮರಣ ಹೊಂದಿದ 3–6 ತಿಂಗಳಿನ ಕುರಿ, ಮೇಕೆಗಳಿಗೆ ಅನುಗ್ರಹ ಯೋಜನೆಯಡಿ ನೀಡುವ ಪರಿಹಾರ ಧನ ₹2,500ರಿಂದ ₹3,500ಕ್ಕೆ ಹೆಚ್ಚಿಸಲಾಗಿದೆ.

## 'ಪುಣ್ಯಕೋಟಿ ದತ್ತು' ಯೋಜನೆ

ಗೋಶಾಲೆಗಳಲ್ಲಿ ಸಾರ್ವಜನಿಕರು ಮತ್ತು ಖಾಸಗಿ ಸಂಸ್ಥೆಗಳು ವಾರ್ಷಿಕ ₹11,000 ಮೊತ್ತಕ್ಕೆ ಗೋವು ದತ್ತು ಪಡೆಯುವುದನ್ನು ಪ್ರೋತ್ಸಾಹಿಸಲು 'ಪುಣ್ಯಕೋಟಿ ದತ್ತು ಯೋಜನೆ' ಪ್ರಕಟಿಸಲಾಗಿದೆ. ಅಲ್ಲದೆ ರಾಜ್ಯದಲ್ಲಿ ಗೋಶಾಲೆಗಳನ್ನು ಈಗಿರುವ 31ರಿಂದ 100ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ರಾಜ್ಯದ ಸ್ಥಳೀಯ ಗೋವು ತಳಿಗಳ ರಕ್ಷಣೆ ಮತ್ತು ಸಂತತಿ ವೃದ್ಧಿ ಯತ್ನವಾಗಿ ಕೆಎಂಎಫ್ ಮೂಲಕ 2,000 ಗೋ ತಳಿಯನ್ನು ಹಂಚಿಕೆ ಮಾಡಲಾಗುವುದು.

**ಗೋ ಮಾತಾ ಸಹಕಾರ ಸಂಘ:** ಗೋಶಾಲೆಗಳ ತ್ಯಾಜ್ಯವನ್ನು ಪರಿಸರ ಸ್ನೇಹಿ ಉತ್ಪನ್ನಗಳಾಗಿಸಲು ಆರ್ಥಿಕ ನೆರವು, ಗೋ ಉತ್ಪನ್ನಗಳ ಮಾರಾಟಕ್ಕಾಗಿ 'ಗೋಮಾತಾ ಸಹಕಾರ ಸಂಘ'ವನ್ನು ಸ್ಥಾಪಿಸಲಾಗುವುದು. ಗೋ ಉತ್ಪನ್ನಗಳ ತಾಂತ್ರಿಕತೆ ಮತ್ತು ಪ್ರಮಾಣೀಕರಣದ ಅಭಿವೃದ್ಧಿಗಾಗಿ ಪಶುವಿಶ್ವವಿದ್ಯಾಲಯದಲ್ಲಿ ಒಂದು ಸಂಶೋಧನಾ ಕೋಶ ಸ್ಥಾಪಿಸಲಾಗುವುದು. ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ಪೂರಕವಾಗಿ ಇವುಗಳನ್ನು ಆರಂಭಿಸಲಾಗಿದೆ.

ಹಾಲು ಉತ್ಪಾದಕರಿಗೆ ಸಾಲ ಸೌಲಭ್ಯ ನೀಡಲು 'ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್' ಸ್ಥಾಪಿಸಲಿದ್ದು, ಇದಕ್ಕಾಗಿ ಕೆಎಂಎಫ್, ಜಿಲ್ಲಾ ಹಾಲು ಒಕ್ಕೂಟಗಳು ₹ 260 ಕೋಟಿ ಮತ್ತು ರಾಜ್ಯ ಸರ್ಕಾರ ₹100 ಕೋಟಿ ನೀಡಲಿವೆ.

## ಕಾಳಿ ನದಿ ತಿರುವು ಯೋಜನೆ

**ಪಶ್ಚಿಮಘಟ್ಟದಲ್ಲಿ** ಹರಿಯುವ ಕಾಳಿನದಿಯ ನೀರು ಬಳಸಿ ಉತ್ತರ ಕರ್ನಾಟಕದ 5 ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸಲು ಯೋಜನೆ ರೂಪಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.ಇದು ಚರ್ಚೆಗೆ ಕಾರಣವಾಗಲಿದೆ.

ಪ್ರಮುಖ ನೀರಾವರಿ ಯೋಜನೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ ₹5,000 ಕೋಟಿ, ಕಳಸಾ–ಬಂಡೂರಿ ₹1,000 ಕೋಟಿ, ಭದ್ರಾ ಮೇಲ್ದಂಡೆ ಯೋಜನೆ ₹3,000 ಕೋಟಿ, ಎತ್ತಿನ ಹೊಳೆ ಯೋಜನೆ ₹1,000 ಕೋಟಿ, ನವಲೆ ಸಮತೋಲನಾ ಜಲಾಶಯ ₹1,000 ಕೋಟಿ ಅನುದಾನ ಪ್ರಕಟಿಸಲಾಗಿದೆ.

**ನಲ್ಲಿ ಸಂಪರ್ಕಕ್ಕೆ ₹7,000 ಕೋಟಿ:** ಜಲ್ ಜೀವನ್ ಮಿಷನ್ ಅಡಿ ಈವರೆಗೆ 21.28 ಲಕ್ಷ ಮನೆಗಳಿಗೆ ₹3592 ಕೋಟಿ ವೆಚ್ಚದಲ್ಲಿ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. 2022–23ನೇ ಸಾಲಿನಲ್ಲಿ ಇನ್ನೂ 25 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲು ₹7000 ಕೋಟಿ ವೆಚ್ಚ ಮಾಡಲಾಗುವುದು. ಪಂಚಾಯಿತಿ ಆರೋಗ್ಯ ಯೋಜನೆಯನ್ನು ಇನ್ನೂ 3,146 ಗ್ರಾಮ ಪಂಚಾಯಿತಿಗಳಿಗೆ ವಿಸ್ತರಿಸಲು ತೀರ್ಮಾನಿಸಲಾಗಿದೆ.

33 ಸಾವಿರ ಕೆರೆಗಳನ್ನು ಸರ್ವೆಮಾಡಿಸಿ, ಮೊದಲ ಹಂತದಲ್ಲಿ 1,000 ಕೆರೆಗಳನ್ನು ಗುರುತಿಸಿ ತಲಾ ₹10 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಇದಕ್ಕೆ ₹100 ಕೋಟಿ ಅನುದಾನ ನೀಡಲಾಗಿದೆ.

## ರೈತರಿಗಾಗಿ ಮತ್ತೆ 'ಯಶಸ್ವಿನಿ' ಜಾರಿ

**ಬೆಂಗಳೂರು:** ರೈತರ ಬಹು ದಿನಗಳ ಬೇಡಿಕೆಯಾದ 'ಯಶಸ್ವಿನಿ' ಯೋಜನೆಯನ್ನು ಪರಿಷ್ಕರಿಸಿ ಮರು ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ.

ಈ ಯೋಜನೆಯಿಂದ ರೈತ ಕುಟುಂಬಗಳಿಗೆ ಅತ್ಯುತ್ತಮ ವೈದ್ಯಕೀಯ ಸೌಲಭ್ಯಗಳು ಲಭಿಸಲಿದೆ. ಈ ಉದ್ದೇಶಕ್ಕಾಗಿ ₹ 300 ಕೋಟಿ ಒದಗಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.

**ತಾಳೆಗೆ ಪ್ರೋತ್ಸಾಹ:** 'ರಾಷ್ಟ್ರೀಯ ಖಾದ್ಯ ತೈಲಗಳು–ತಾಳೆ ಎಣ್ಣೆ ಅಭಿಯಾನ'ದಡಿ ತಾಳೆ ಬೆಳೆಯುವ ಪ್ರದೇಶದ ವ್ಯಾಪ್ತಿಯನ್ನು ಐದು ವರ್ಷಗಳಲ್ಲಿ 25 ಸಾವಿರ ಹೆಕ್ಟೇರ್‌ಗಳಷ್ಟು ಹೆಚ್ಚಿಸುವ ಗುರಿ ಇದ್ದು, ಇದಕ್ಕಾಗಿ ₹35 ಕೋಟಿ ಅನುದಾನ ನಿಗದಿ ಮಾಡಲಾಗಿದೆ.

ತೋಟಗಾರಿಕೆಯಲ್ಲಿ ವಿನೂತನ ತಂತ್ರಜ್ಞಾನ ಅಳವಡಿಕೆ, ಯಂತ್ರೋಪಕರಣಗಳ ಬಳಕೆಗೆ ₹25 ಕೋಟಿ ಅನುದಾನ ನೀಡಲಾಗಿದೆ. ಸಾಂಬಾರ ಪದಾರ್ಥಗಳ ಗುಣಮಟ್ಟ ವೃದ್ಧಿಗೆ ಬ್ಯಾಡಗಿಯಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಲು ಉದ್ದೇಶಿಸಿದೆ.

## ಉತ್ತರ ಕರ್ನಾಟಕಕ್ಕೆ ಮಲತಾಯಿ ಧೋರಣೆ

ಉತ್ತರ ಕರ್ನಾಟಕದ ಮಹತ್ವಾಕಾಂಕ್ಷಿ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳಿಸಲು ಗರಿಷ್ಠ ₹1 ಲಕ್ಷ ಕೋಟಿ ಅನುದಾನದ ಅಗತ್ಯವಿದೆ. ಎಲ್ಲ ಗೊತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ಕೇವಲ ₹ 5 ಸಾವಿರ ಕೋಟಿ ನೀಡಿರುವುದು ನಿರಾಸೆ ಮೂಡಿಸಿದೆ. ಆಲಮಟ್ಟಿ ಜಲಾಶಯವವನ್ನು 524 ಮೀಟರ್‌ಗೆ ಎತ್ತರಿಸಲು 20 ಹಳ್ಳಿಗಳ ಸ್ಥಳಾಂತರ ಆಗಬೇಕು. ಈ ಹಣದಲ್ಲಿ ಒಂದು ಹಳ್ಳಿ ಸ್ಥಳಾಂತರವೂ ಕಷ್ಟ. ಬಜೆಟ್‌ನಲ್ಲಿ ಉತ್ತರ ಕರ್ನಾಟಕಕ್ಕೆ ಮಲತಾಯಿ ಧೋರಣೆ ಅನುಸರಿಸಲಾಗಿದೆ.

**ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ,**
ನೀರಾವರಿ ತಜ್ಞ, ಸಂಶೋಧಕ,
ವಿಜಯಪುರ

## ಅಂಕಿ ಅಂಶಗಳೇ ಆದ್ಯತೆ ತಿಳಿಸುತ್ತವೆ

ಕೋಟ್ಯಂತರ ಜನರು ತೊಡಗಿಸಿಕೊಂಡಿರುವ ಕೃಷಿಗೆ ₹33,700 ಕೋಟಿ, ಮೆಟ್ರೊಗೆ ₹ 16 ಸಾವಿರ ಕೋಟಿ ಹಂಚಿಕೆ ಯಾಗಿದೆ. ಸರ್ಕಾರದ ಆದ್ಯತೆಯನ್ನು ಈ ಅಂಕಿಗಳೇ ಹೇಳುತ್ತವೆ. ರೈತರ ಮೂಲಸಮಸ್ಯೆಗಳಿಗೆ ಪರಿಹಾರದ ಪ್ರಸ್ತಾಪವಿಲ್ಲ. ಬೆಲೆ ಭದ್ರತೆಯ ಬಗ್ಗೆ ಮಾತನಾಡಿಲ್ಲ. ರೈತರ ಆದಾಯ ದ್ವಿಗುಣ ಮಾಡುತ್ತೇವೆ ಎಂದಿರುವ ಮುಖ್ಯಮಂತ್ರಿ ಪೂರಕ ಕಾರ್ಯಕ್ರಮಗಳನ್ನು ಉಲ್ಲೇಖಿಸಿಲ್ಲ. 'ರೈತ ಶಕ್ತಿ' ಯೋಜನೆಯಡಿ ಎಕರೆಗೆ ₹ 250 ತೆ ಡೀಸೆಲ್ ಅನುದಾನದಿಂದ ಹೆಚ್ಚು ಪ್ರಯೋಜನವಿಲ್ಲ. ಹರಿಯಾಣದ ಮಾದರಿಯಲ್ಲಿ ಕಿಸಾನ್ ಪೆಟ್ರೋಲ್ ಬಂಕ್ ಸ್ಥಾಪನೆ ಆದರಷ್ಟೇ ಅನುಕೂಲ. ಯಶಸ್ವಿನಿ ಯೋಜನೆಗೆ ಜಮೀನು ರಹಿತ ರೈತರು, ರೈತ ಮಹಿಳೆಯರನ್ನೂ ಸೇರಿಸಬೇಕು.

**ಚುಕ್ಕಿ ನಂಜುಂಡಸ್ವಾಮಿ,** ಕಾರ್ಯಾಧ್ಯಕ್ಷೆ
ರೈತಸಂಘ–ಹಸಿರುಸೇನೆ, ಚಾಮರಾಜ ನಗರ

## ಫ್ಯಾಷನ್ ಆಗಿರುವ ಹಣ ಘೋಷಣೆ



ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ ₹ 3 ಸಾವಿರ ಕೋಟಿ ಮೀಸಲಿಡಲಾಗಿದೆ. ಕೇಂದ್ರ ಸರ್ಕಾರ ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಿ ₹ 12 ಸಾವಿರ ಕೋಟಿ ಘೋಷಿಸಿತ್ತು. ಹೀಗೆ ಹಣ ಘೋಷಿಸುವುದು ಸರ್ಕಾರಗಳಿಗೆ ಫ್ಯಾಷನ್ ಆಗಿದೆ. ಆದರೆ, ಘೋಷಿಸಿದ್ದನ್ನು ಆಯಾ ವರ್ಷದಲ್ಲೇ ಬಳಸುವ ಇಚ್ಛಾಶಕ್ತಿ ತೋರುವುದಿಲ್ಲ. ತುಂಗಾ ಜಲಾಶಯದಿಂದ 29.5 ಟಿಎಂಸಿ ಅಡಿ ನೀರು ಲಿಫ್ಟ್ ಮಾಡಲು ಆದ್ಯತೆ ನೀಡಬೇಕು. ದಶಕಗಳು ಕಳೆದರೂ ತುಂಗಾದಿಂದ ಭದ್ರಾ ಜಲಾಶಯಕ್ಕೆ ನೀರು ಹರಿಯದೆ ಅಚ್ಚುಕಟ್ಟುದಾರರ ಮಧ್ಯೆಯೇ ಸಂಘರ್ಷಕ್ಕೆ ದಾರಿಯಾಗಿದೆ. ಕೆರೆಗಳ ತುಂಬಿಸುವ ಯಾವ ಕಾಮಗಾರಿಗೆ ಹಣ ಬಳಸಲಾಗುತ್ತದೆ ಎಂದು ಸ್ಪಷ್ಟತೆ ಇಲ್ಲ.

**ಎಚ್.ಆರ್. ಬಸವರಾಜಪ್ಪ,**
ರೈತ ಮುಖಂಡ, ಶಿವಮೊಗ್ಗ

## ಗ್ರಾಮೀಣ ಮಹಿಳೆಯ ಸಬಲೀಕರಣ ಪ್ರಸ್ತಾಪವಿಲ್ಲ

ಕೃಷಿ ಯಂತ್ರೋಪಕರಣ ಬಳಕೆಗೆ ಎಕರೆಗೆ ₹ 250 ಸಹಾಯಧನ ನೀಡುವ 'ರೈತ ಶಕ್ತಿ' ಯೋಜನೆಯ ಘೋಷಣೆಯಿಂದ ಅತಿಸಣ್ಣ, ಸಣ್ಣ ರೈತರಿಗೆ ಅನುಕೂಲ. ಎರಡು ಕಡೆ ಕೃಷಿ ವಿ.ವಿ ಸ್ಥಾಪನೆಯಿಂದ ಕೃಷಿ ಅಧ್ಯಯನ, ಸಂಶೋಧನೆಗೆ ಮತ್ತಷ್ಟು ಆದ್ಯತೆ ಸಿಗಲಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾವಿರ ಕೆರೆಗಳ ಅಭಿವೃದ್ಧಿಗೆ ₹ 100 ಕೋಟಿ ಘೋಷಣೆಯೂ ಒಳ್ಳೆಯ ಬೆಳವಣಿಗೆ. ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ಪಡೆಯುವ ಪ್ರಸ್ತಾಪವು ನೀರಾವರಿ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಸಹಕಾರಿಯಾಗಲಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ನಿರ್ದಿಷ್ಟ ಯೋಜನೆಯ ಪ್ರಸ್ತಾಪ ಇಲ್ಲದಿರುವುದು ಕೊರತೆಯಾಗಿದೆ.

**ಡಾ.ಕೆ.ಕಲಾವತಿ**
ಸಹ ಪ್ರಾಧ್ಯಾಪಕಿ, ವಾಣಿಜ್ಯ ವಿಭಾಗ
ಐಡಿಎಸ್‌ಜಿ ಕಾಲೇಜು, ಚಿಕ್ಕಮಗಳೂರು

## ಜಿಲ್ಲೆಗೊಂದು ಕೃಷಿ ಕಾಲೇಜು ನೀಡಬೇಕಿತ್ತು

'ಯಶಸ್ವಿನಿ' ಯೋಜನೆ ಪುನರಾರಂಭಿಸಿದ್ದು ಸ್ವಾಗತಾರ್ಹ. ತೊಗರಿಬೇಳೆಯನ್ನು 'ಭೀಮಾ ಪಲ್ಸ್' ಹೆಸರಿನಲ್ಲಿ ಬ್ರ್ಯಾಂಡ್ ರೂಪದಲ್ಲಿ ಮಾರಾಟ ಮಾಡುವುದು ಹಾಗೂ ವಿಜಯಪುರದಲ್ಲಿ ಅತ್ಯಾಧುನಿಕ ದ್ರಾಕ್ಷಾರಸ ಶೈತ್ಯಾಗಾರ ನಿರ್ಮಾಣ ಸ್ವಾಗತಾರ್ಹ. ಆದರೆ, ರಾಜ್ಯದಲ್ಲಿ ಒಂದು ಸೆಕೆಂಡರಿ ಕೃಷಿ ವಿಶ್ವವಿದ್ಯಾಲಯ ಹಾಗೂ ಬಳ್ಳಾರಿ ಜಿಲ್ಲೆಗೆ ಪ್ರತ್ಯೇಕ ಕೃಷಿ ಕಾಲೇಜು ಸ್ಥಾಪನೆ ಅನಗತ್ಯ. ಬದಲಿಗೆ ಪ್ರತಿ ಜಿಲ್ಲೆಗೆ ಒಂದು ಕೃಷಿ ಕಾಲೇಜು ನೀಡಬೇಕಿತ್ತು. ಹೋಬಳಿ ಮಟ್ಟದಲ್ಲಿ ಕೃಷಿ ಡಿಪ್ಲೊಮಾ ಕೋರ್ಸ್ ಶಿಕ್ಷಣ ನೀಡಲುಒತ್ತು ನೀಡಿದ್ದರೆ ಹೊಸ ತಲೆಮಾರು ಜಮೀನಿನತ್ತ ಮರಳಲು ಉತ್ತೇಜನ ನೀಡಿದಂತಾಗುತ್ತಿತ್ತು.

**ಸಿದ್ರಾಮಪ್ಪ ಪಾಟೀಲ ದಂಗಾಪುರ,**
ಅಧ್ಯಕ್ಷ, ಜಿಲ್ಲಾ ಕೃಷಿಕ ಸಮಾಜ,
ಕಲಬುರಗಿ

## ಕೊಟ್ಟಿರುವ ಅನುದಾನ ಸಾಲದು

ಎತ್ತಿನಹೊಳೆ, ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗಳಿಗೆ ಬಜೆಟ್‌ನಲ್ಲಿ ಮೀಸಲಿಟ್ಟಿರುವ ಅನುದಾನ ಯಾವುದಕ್ಕೂ ಸಾಲದು. ಬೃಹತ್ ಯೋಜನೆಗಳಿಗೆ ದೊಡ್ಡ ಪ್ರಮಾಣದಲ್ಲಿ ಹಣ ನೀಡಬೇಕಿತ್ತು. ಎತ್ತಿನಹೊಳೆ ಯೋಜನೆಗೆ ಕನಿಷ್ಠ ₹ 10 ಸಾವಿರ ಕೋಟಿ ಒದಗಿಸಬೇಕಿತ್ತು. ಹೀಗೆ ಅನುದಾನ ಹಂಚಿಕೆಯಾದರೆ ಯೋಜನೆ ಮುಗಿಸಲು 15 ವರ್ಷ ಬೇಕಾಗುತ್ತವೆ. ಯೋಜನೆಯ ಅಂದಾಜು ವೆಚ್ಚ ಸುಮಾರು ₹10 ಸಾವಿರ ಕೋಟಿ ಆಗಿತ್ತು. ಯೋಜನೆ ಮುಗಿಯುವ ಹೊತ್ತಿಗೆ ₹ 30 ಸಾವಿರ ಕೋಟಿ ದಾಟಬಹುದು. ಇಷ್ಟು ಕಡಿಮೆ ಹಣ ಸಾಕಾಗದು.

**ವೇದಾನಂದಮೂರ್ತಿ**
ನೀರಾವರಿ ತಜ್ಞ, ತುಮಕೂರು

ಪ್ರಜಾವಾಣಿ

**ಹೊಸ ಯೋಜನೆಗಳು**

1. ನಾಲ್ಕು ಕಡೆ ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ
2. ನಾಲ್ಕು ಜಿಲ್ಲೆಗಳಲ್ಲಿ ನಾರಾಯಣ ಗುರು ವಸತಿ ಶಾಲೆ

# ರಾಜ್ಯ ಬಜೆಟ್ 2022-23

> ಹಿಂದುಳಿದ ವರ್ಗಗಳ ಪಾಲಿಗೆ ಒಳಿತು ಮಾಡುವ ಗುಣಲಕ್ಷಣ ಗಳನ್ನು ಬಜೆಟ್ ಒಳಗೊಂಡಿಲ್ಲ. ಶಿಕ್ಷಣ, ಮೂಲ ಸೌಕರ್ಯಗಳ ಅಭಿವೃದ್ಧಿ, ಪ್ರಜಾಸತ್ತಾತ್ಮಕ ಹಾಗೂ ಅಭಿವೃದ್ಧಿ ಆಶಯಗಳಿಗೆ ಪೂರಕವಾದ ಕ್ರಮಗಳನ್ನು ಬಜೆಟ್ ಹೊಂದಿಲ್ಲ
>
> **ಎಣ್ಣೆಗೆರೆ ಆರ್. ವೆಂಕಟರಾಮಯ್ಯ,** ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ

## ಎಲ್ಲರಿಗೂ ಅನುದಾನ ಹಂಚಿಕೆ

**'ಎಲ್ಲಾ ದುರ್ಬಲ ವರ್ಗದ ಜನರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಏಳಿಗೆಯಾಗಬೇಕು ಎಂಬ ಉದ್ದೇಶದಿಂದ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಿದೆ' ಎಂದು ಮುಖ್ಯಮಂತ್ರಿ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಈ ಎಲ್ಲಾ ಅಗತ್ಯಗಳನ್ನು ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ಎಂದು ಒಂದು ಪ್ರತ್ಯೇಕ ವಲಯವಾಗಿ ಗುರುತಿಸಲಾಗಿದೆ. ಎಲ್ಲಾ ಯೋಜನೆಗಳು, ಎಲ್ಲಾ ಇಲಾಖಾವಾರು ವೆಚ್ಚವನ್ನು ಒಟ್ಟುಗೂಡಿಸಿ ಈ ವಲಯಕ್ಕೆ ₹68,479 ಕೋಟಿಗೂ ಹೆಚ್ಚು ಅನುದಾನವನ್ನು ಮೀಸಲಿರಿಸಲಾಗಿದೆ**

**₹800 ಕೋಟಿ** ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳ ವ್ಯಾಪ್ತಿಯ ವಿವಿಧ ಅಭಿವೃದ್ಧಿ ನಿಗಮಗಳ ಮೂಲಕ ಹಲವು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮೀಸಲಿರಿಸಿದ ಅನುದಾನ

**₹750 ಕೋಟಿ** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ 100 'ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿನಿಲಯ'ಗಳು ಮತ್ತು 10 ಕ್ರೈಸ್ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಮೀಸಲಿರಿಸಿದ ಅನುದಾನ

**₹400 ಕೋಟಿ** ದೇವರಾಜ ಅರಸು ಅಭಿವೃದ್ಧಿ ನಿಗಮದ ಮೂಲಕ ಹಿಂದುಳಿದ ಮತ್ತು ಅತೀ ಹಿಂದುಳಿದ ಸಮುದಾಯಗಳ (ತಿಗಳ, ಮಾಳಿ, ಮಾಳಿ ಮಾಲಗಾರ, ಕುಂಬಾರ, ಯಾದವ, ದೇವಾಡಿಗ, ಸಿಂಪಿ, ಕ್ಷತ್ರಿಯ, ಮೇದಾರ, ಕುಂಚಿ, ಕುರ್ಮ, ಪಿಂಜಾರ/ನದಾಫ್, ಕುರುಬ, ಬಲಿಜ, ಈಡಿಗ, ಹಡಪದ ಸಮುದಾಯ) ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳ ಅಡಿ ಮೀಸಲಿರಿಸಿದ ಅನುದಾನ

**₹250** ಕೋಟಿ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತ ಮತ್ತು ಇತರೆ ವರ್ಗದ ಮಕ್ಕಳಲ್ಲಿ ಉನ್ನತ ವಿದ್ಯಾಭ್ಯಾಸ ಪ್ರೋತ್ಸಾಹಿಸಲು ನೂತನ, 'ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ' ಯೋಜನೆ ಆರಂಭಕ್ಕೆ ಮೀಸಲಿರಿಸಿದ ಅನುದಾನ. ಯೋಜನೆ ಅಡಿ ಬೆಳಗಾವಿ, ಮೈಸೂರು, ಕಲಬುರಗಿ, ಮಂಗಳೂರು ಮತ್ತು ಹುಬ್ಬಳಿ–ಧಾರವಾಡದಲ್ಲಿ ತಲಾ 1,000 ಹಾಸಿಗೆ ಸಾಮರ್ಥ್ಯದ ವಿದ್ಯಾರ್ಥಿನಿಲಯ ನಿರ್ಮಾಣ

**₹165 ಕೋಟಿ** 50 ಕನಕದಾಸ ವಿದ್ಯಾರ್ಥಿನಿಲಯಗಳಿಗೆ ಸುಸಜ್ಜಿತ ಕಟ್ಟಡಗಳನ್ನು ನಿರ್ಮಾಣ ಮಾಡಲು ಮೀಸಲಿರಿಸಿದ ಅನುದಾನ

**₹100 ಕೋಟಿ** ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ಘೋಷಿಸಿರುವ ಅನುದಾನ

**₹100** ಕೋಟಿ: ಒಕ್ಕಲಿಗರ ಅಭಿವೃದ್ಧಿ ನಿಗಮಕ್ಕೆ ಘೋಷಿಸಿರುವ ಅನುದಾನ

**₹50 ಕೋಟಿ** ಮರಾಠಾ ಅಭಿವೃದ್ಧಿ ನಿಗಮಕ್ಕೆ ಘೋಷಿಸಿರುವ ಅನುದಾನ

**₹50 ಕೋಟಿ** ರಾಜ್ಯದ ಕ್ರೈಸ್ತ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಮೀಸಲಿರಿಸಿದ ಅನುದಾನ

**₹50 ಕೋಟಿ** ಜೈನ, ಸಿಖ್ ಮತ್ತು ಬೌದ್ಧ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಮೀಸಲಿರಿಸಿದ ಅನುದಾನ

## ಸಾಹಿತ್ಯ ಸಮ್ಮೇಳನಕ್ಕೆ ₹20 ಕೋಟಿ

- ಮುಖ್ಯಮಂತ್ರಿ ತವರು ಜಿಲ್ಲೆ ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ₹ 20 ಕೋಟಿ ಅನುದಾನ ಘೋಷಣೆ.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರಿನಲ್ಲಿರುವ ಕರ್ನಾಟಕ ಕಲಾಗ್ರಾಮ ಅಭಿವೃದ್ಧಿ.
- ರಾಜ್ಯ ಮಟ್ಟದಲ್ಲಿ ಯಕ್ಷಗಾನ ಸಮ್ಮೇಳನ ಆಯೋಜನೆ.
- ಯೋಗಿನಾರೇಯಣ ಯತೀಂದ್ರರ ಜಯಂತಿಯನ್ನು ರಾಜ್ಯ ಸರ್ಕಾರದ ವತಿಯಿಂದ ಪ್ರತಿ ವರ್ಷ ಮಾ.27ಕ್ಕೆ ಆಚರಣೆ.
- ಸಾಹಿತಿಗಳಾದ ಡಾ. ಸಿದ್ಧಲಿಂಗಯ್ಯ, ಎಂ. ಚಿದಾನಂದಮೂರ್ತಿ, ಚಂದ್ರಶೇಖರ ಪಾಟೀಲ ಹಾಗೂ ಚೆನ್ನವೀರ ಕಣವಿ ಅವರ ಅಮೂಲ್ಯ ಸಾಹಿತ್ಯಗಳನ್ನು ಉಳಿಸಲು ವಿಶೇಷ ಯೋಜನೆ.
- ಹಾವೇರಿಯಲ್ಲಿ ₹ 2 ಕೋಟಿ ವೆಚ್ಚದಲ್ಲಿ ಡಾ. ಮಹಾದೇವ ಬಣಕಾರರ ಸಾಂಸ್ಕೃತಿಕ ಭವನ ನಿರ್ಮಾಣ.
- ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅರೆಭಾಷೆ ಸಂಶೋಧನಾ ಕೇಂದ್ರ ಸ್ಥಾಪನೆ.
- ಕಾಸರಗೋಡಿನಲ್ಲಿ ಕಯ್ಯಾರ ಕಿಞ್ಞಣ್ಣ ರೈ ಅವರ ಹೆಸರಿನಲ್ಲಿ ಹಾಗೂ ಅಕ್ಕಲಕೋಟೆಯಲ್ಲಿ ಜಯದೇವಿತಾಯಿ ಲಿಗಾಡೆ ಅವರ ಹೆಸರಿನಲ್ಲಿ ಮತ್ತು ಗೋವಾದಲ್ಲಿ ಕನ್ನಡ ಭವನ ನಿರ್ಮಾಣ.

## ಹಿಂದುತ್ವಕ್ಕೆ ಒತ್ತು, ಅಂಬೇಡ್ಕರ್ ಪ್ರಜ್ಞೆಗೆ ಕುತ್ತು

**ವಿಶ್ಲೇಷಣೆ**

**ವಿಕಾಸ ಮೌರ್ಯ**

**ದೂರದ ಬೆಟ್ಟ** ನುಣ್ಣಗೆ ಹೇಗೋ ಸರ್ಕಾರ ಮಂಡಿಸುವ ಬಜೆಟ್ಟುಗಳೂ ಹಾಗೆಯೇ ಇರುತ್ತವೆ. ಪರಿಶಿಷ್ಟರ ಉಪಯೋಜನೆ ಮೀಸಲು ಹಣದ ವಿಚಾರಕ್ಕೆ ಬಂದಾಗ ಈ ಮಾತು ಸದಾ ಸತ್ಯವಾಗಿರುತ್ತದೆ. ದಲಿತರ ಮೀಸಲು ಹಣ ಎದುರಿಸುವ ನಾಲ್ಕು ಮುಖ್ಯ ಸಮಸ್ಯೆಗಳಿವು: 1. ಬಜೆಟ್ಟಿನ ಯೋಜನಾ ಗಾತ್ರದ ಶೇ 24.01 ರಷ್ಟು ಅನುದಾನ ಮೀಸಲಿಡುವುದಿಲ್ಲ. 2.ಮೀಸಲಿಟ್ಟ ಕಡಿಮೆ ಅನುದಾನದಲ್ಲಿ ಸಂಪೂರ್ಣ ಹಣ ಬಿಡುಗಡೆಗೊಳಿಸುವುದಿಲ್ಲ. 3. ಬಿಡುಗಡೆಗೊಳಿಸಿದ ಅನುದಾನದಲ್ಲಿ ಅರ್ಧದಷ್ಟನ್ನೂ ಖರ್ಚು ಮಾಡುವುದಿಲ್ಲ. 4. ಖರ್ಚು ಮಾಡಿದ ಬಿಡಿಗಾಸಿನಲ್ಲೂ ಸಹ ದಲಿತರಿಗೆ ನೇರವಾಗಿ ಉಪಯೋಗವಾಗುವ ಯೋಜನೆಗಳಿಗೆ ಬಳಸುವುದಿಲ್ಲ.

ವರ್ಷದಿಂದ ವರ್ಷಕ್ಕೆ ಬಜೆಟ್ ಗಾತ್ರ ಹೆಚ್ಚಾಗುತ್ತಲೇ ಬಂದಿದೆ. ಆದರೆ 2018-19ನೇ ಸಾಲಿನಿಂದ ಪರಿಶಿಷ್ಟರಿಗೆ ಮೀಸಲಿಡುವ ಹಣ ಕಡಿಮೆಯಾಗುತ್ತ ಬಂದಿದೆ. ಕಳೆದ ವರ್ಷ ಪರಿಶಿಷ್ಟರ ಉಪಯೋಜನೆಗೆ ಮೀಸಲಿರಿಸಿದ್ದ ಅನುದಾನ ₹26,005ಕೋಟಿ. ಅದರಲ್ಲಿ ಬಿಡುಗಡೆಗೊಳಿಸಿದ ಹಣ ಕೇವಲ 16,450 ಕೋಟಿ. ಅಂದರೆ ₹9,555 ಕೋಟಿಯಷ್ಟು ಹಣವನ್ನು ಬಿಡುಗಡೆಗೊಳಿಸಿಲ್ಲ. ಖರ್ಚು ಮಾಡಿದ ಹಣದಲ್ಲಿ ನೇರವಾಗಿ ದಲಿತರಿಗೆ ತಲುಪುವ ಮಾನವ ಅಭಿವೃದ್ಧಿಗೆ ಬಳಸಿರುವುದು ₹4,128 ಕೋಟಿಯಾದರೆ ಮೂಲಸೌಕರ್ಯಗಳ ಹೆಸರಲ್ಲಿ ದಲಿತರಿಗೆ ನೇರವಾಗಿ ಉಪಯೋಗವಲ್ಲದ ಕಾರ್ಯಗಳಿಗೆ ಬಳಸಿರುವ ಹಣ ₹6,670 ಕೋಟಿ. ಕಳೆದ ಸಾಲಿನಲ್ಲಿ ಕಾಯ್ದೆಯ '7ಡಿ' ಸೆಕ್ಷನ್ ಬಳಸಿಕೊಂಡು ದಲಿತರ ಹಣವನ್ನು ಇತರೆ ಕಾರ್ಯಗಳಿಗೆ ಬಳಸಿದೆ. ಅತ್ಯಂತ ದುಃಖಕರ ಸಂಗತಿಯೆಂದರೆ ಸುಮಾರು 25 ಇಲಾಖೆಗಳ 47 ಯೋಜನೆಗಳಿಗೆ ಮೀಸಲಿರಿಸಿದ್ದ ಹಣದಲ್ಲಿ ಒಂದು ರೂಪಾಯಿಯನ್ನೂ ಖರ್ಚು ಮಾಡದೇ ₹1,744 ಕೋಟಿಗಳನ್ನು ಸರ್ಕಾರಕ್ಕೆ ಹಿಂದಿರುಗಿಸಿರುವುದು. ಇದು ಕಳೆದ ವರ್ಷದ ದಲಿತರ ಮೀಸಲು ಹಣದ ಹಣೆಬರಹ.

ಈ ವರ್ಷದ ಬಜೆಟ್ಟಿನಲ್ಲಿ 2023ರ ಚುನಾವಣೆಯ ಘಾಟು ಮುಖಕ್ಕೆ ಹೊಡೆಯುತ್ತಿದೆ. ಲಿಂಗಾಯತ ಮಠಗಳನ್ನು ಕೈ ಬಿಟ್ಟು ದಲಿತರ ಮಠಗಳಿಗೆ ವಿಶೇಷ ಸೌಲಭ್ಯ ನೀಡುವುದಾಗಿ ಹೇಳಲಾಗಿದೆ. ಆದರೆ ನಿರ್ದಿಷ್ಟವಾಗಿ ಹಣ ಹಂಚಿಕೆಯಾಗಿಲ್ಲ. ದುರ್ಬಲ ವರ್ಗದ ಮಕ್ಕಳಿಗಾಗಿ ಚಾತುರ್ವರ್ಣ ಪದ್ಧತಿಯ ಸಮರ್ಥಕರಾದ ದೀನದಯಾಳ್ ಉಪಾಧ್ಯಾಯ ಹೆಸರಿನಲ್ಲಿ ವಸತಿ ಶಾಲೆಯನ್ನು ತೆರೆಯಲು ₹ 250 ಕೋಟಿ ನೀಡಲಾಗಿದೆ. ದಲಿತ ಪ್ರಜ್ಞೆಯ ಬದಲಾಗಿ ಹಿಂದುತ್ವ ಪ್ರಜ್ಞೆಯ ಪರವಾಗಿದ್ದೇವೆ ಎಂದು ಸರ್ಕಾರ ಪರೋಕ್ಷವಾಗಿ ಹೇಳುತ್ತಿದೆ. ದಲಿತರ ಶಿಕ್ಷಣಕ್ಕೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಕುದ್ಮುಲ್ ರಂಗರಾವ್, ಗೋಪಾಲಸ್ವಾಮಿ ಅಯ್ಯಂಗಾರ್, ತಲಕಾಡು ರಂಗೇಗೌಡರು ಅಥವಾ ಜಗಜೀವನ್ ರಾಮ್ ಅವರ ಹೆಸರಿಟ್ಟಿದ್ದರೆ ದಲಿತರು ಖುಷಿ ಪಡುತ್ತಿದ್ದರು.

ಅಂಬೇಡ್ಕರ್ ಅವರು ಕರ್ನಾಟಕದಲ್ಲಿ ಭೇಟಿ ನೀಡಿರುವ ಪ್ರಮುಖ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದಾಗಿ ಹೇಳಲಾಗಿದೆ. ಆದರೆ ಹಣ ನಿಗದಿ ಮಾಡಿಲ್ಲದಿರುವುದರಿಂದ ಕಾಗದದ ಮೇಲೆಯೇ ಉಳಿಯುವ ಎಲ್ಲಾ ಸಾಧ್ಯತೆಗಳೂ ಇವೆ. ಅಸ್ಪೃಶ್ಯತೆಯ ವಿರುದ್ಧ ಜಾಗೃತಿ ಮೂಡಿಸಲು 'ವಿನಯ ಸಾಮರಸ್ಯ ಯೋಜನೆ' ಯನ್ನು ರೂಪಿಸಲಾಗಿದೆ. ನಿಜವೆಂದರೆ ಕಳೆದ ವರ್ಷ ದಲಿತರ ಮೇಲೆ 2327 ದೌರ್ಜನ್ಯಗಳನ್ನು ಎಸಗಲಾಗಿದೆ. 2020ನೇ ವರ್ಷಕ್ಕೆ ಹೋಲಿಸಿಕೊಂಡರೆ ಶೇ 45 ರಷ್ಟು ಹೆಚ್ಚಾಗಿದೆ. ಆದರೆ ಶಿಕ್ಷೆ ನೀಡಿದ ಪ್ರಮಾಣ ಶೇ 5 ಕ್ಕಿಂತಲೂ ಕಡಿಮೆ. ಹಾಗಾಗಿ ಅಸ್ಪೃಶ್ಯತೆ ಪಿಡುಗನ್ನು ಕಡಿಮೆಗೊಳಿಸಲು ಅಟ್ರಾಸಿಟಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಿದೆ. ಜಾತಿವಿರೋಧಿ ಮನಸ್ಸುಗಳನ್ನು ಜಾಗೃತಗೊಳಿಸಬೇಕಿದೆ.

ಗಂಗಾ ಕಲ್ಯಾಣ ಯೋಜನೆಗೆ ಈ ವರ್ಷ ಕೇವಲ ₹ 500 ಕೋಟಿ ನೀಡಿರುವ ಸರ್ಕಾರ ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ಉಳಿದಿದ್ದ ₹625 ಕೋಟಿ ಹಣ ಸೇರಿಸಿ ₹ 1,115 ಕೋಟಿ ಎಂದು ಹೇಳುತ್ತಿದೆ.

ಬೃಹತ್ ಸಂಖ್ಯೆಯಲ್ಲಿರುವ ಅತಿ ಹಿಂದುಳಿದ ಜಾತಿಗಳ ಅಭಿವೃದ್ಧಿಗೆ ಕೇವಲ ₹400 ಕೋಟಿ ನೀಡಿ ಹಿಂದಿನ ವರ್ಷದಂತೆ ಮತ್ತೆ ಅನ್ಯಾಯವೆಸಗಲಾಗಿದೆ. ಒಕ್ಕಲಿಗ, ಲಿಂಗಾಯತ ಹಾಗೂ ಮರಾಠ ಸಮುದಾಯಗಳ ಅನುದಾನಕ್ಕೆ ಹೋಲಿಸಿಕೊಂಡರೆ ಕನಿಷ್ಠ ₹1000 ಕೋಟಿಯನ್ನಾದರೂ ನೀಡಬೇಕಿತ್ತು. ಒಟ್ಟಾರೆ ಇದು ಚುನಾವಣಾ ಪೂರ್ವ ಬಜೆಟ್. ಮುಂದಿನ ವರ್ಷ ಬಜೆಟ್ ಅನುಷ್ಠಾನವನ್ನು ವಿಶ್ಲೇಷಿಸಲು ಕುಳಿತಾಗ ಬರಿ ನಿರಾಶೆಯೇ ಕಾದಿರುತ್ತದೆ.

ದಲಿತ ಸಂಘಟನೆಗಳ ಬಹುಕಾಲದ ಬೇಡಿಕೆಯಾಗಿದ್ದ ಸಾವಿತ್ರಿ ಬಾಯಿ ಫುಲೆ ಅವರ ಹೆಸರಿನಲ್ಲಿ ಆದರ್ಶ ಶಿಕ್ಷಕ/ಶಿಕ್ಷಕಿ ಪ್ರಶಸ್ತಿ ನೀಡುವುದಾಗಿ ಘೋಷಿಸಿರುವುದು ಸಮಾಧಾನದ ಸಂಗತಿ.

ಲೇಖಕ: ಸಾಮಾಜಿಕ ವಿಶ್ಲೇಷಕ

## ಕೆಎಸ್‌ಆರ್‌ಪಿ ಮಹಿಳಾ ಪೊಲೀಸರ ಮತ್ತೊಂದು ಕಂಪನಿ

**ಬೆಂಗಳೂರು:** ಕರ್ನಾಟಕ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಮಹಿಳಾ ಪೊಲೀಸರ ಹೊಸ ಕಂಪನಿ ಪ್ರಾರಂಭಿಸಲು ನಿರ್ಧರಿಸಲಾಗಿದೆ.

ಕೆಎಸ್‌ಆರ್‌ಪಿಗೆ 2015–16ರಲ್ಲಿ ಮೊದಲ ಬಾರಿಗೆಮಹಿಳೆಯರನ್ನುನೇಮಿಸಿಕೊಂಡುಬೆಳಗಾವಿಯಲ್ಲಿ ಮೊದಲ ಕಂಪನಿ ಆರಂಭಿಸಲಾಗಿತ್ತು. ನಂತರ, ಬೆಂಗಳೂರಿನಲ್ಲಿ ಮಹಿಳಾ ಸಿಬ್ಬಂದಿಯ ಎರಡನೇ ಕಂಪನಿ ತೆರೆಯಲಾಗಿದೆ. ಇದೀಗ ಮೂರನೇ ಕಂಪನಿ ಪ್ರಾರಂಭಿಸಲು ತೀರ್ಮಾನಿಸಿದೆ. ಒಂದೊಂದು ಕಂಪನಿಯಲ್ಲಿ 143 ಮಹಿಳಾ ಸಿಬ್ಬಂದಿ ಇರಲಿದ್ದಾರೆ.

ಪ್ರಕೃತಿ ವಿಕೋಪ ಸಂದರ್ಭದಲ್ಲಿ ತುರ್ತು ಕಾರ್ಯಾಚರಣೆ ನಡೆಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ನೆರವಿನಲ್ಲಿ ದಾವಣಗೆರೆಯಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ಕಂಪನಿ ಪ್ರಾರಂಭಿಸಲಾಗುತ್ತಿದೆ. ಅಪರಾಧ ಪ್ರಕರಣಗಳ ಸಾಕ್ಷ್ಯಗಳನ್ನು ಪರೀಕ್ಷಿಸಲು ಹುಬ್ಬಳ್ಳಿ ಹಾಗೂ ಬಳ್ಳಾರಿಯಲ್ಲಿ ಹೊಸದಾಗಿ ಅತ್ಯಾಧುನಿಕ ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯ ತೆರೆಯುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಪೊಲೀಸ್ ಗೃಹ ಯೋಜನೆಯಡಿ ರಾಜ್ಯದಲ್ಲಿ 2ನೇ ಹಂತದಲ್ಲಿ ₹ 2 ಸಾವಿರ ಕೋಟಿ ವೆಚ್ಚದಲ್ಲಿ 10,034 ವಸತಿಗೃಹ ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕಾಗಿ, ಪ್ರಸಕ್ತ ಬಜೆಟ್‌ನಲ್ಲಿ ₹ 250 ಕೋಟಿ ಒದಗಿಸಲಾಗಿದೆ. ರಾಜ್ಯದ 3 ಲಕ್ಷ ಹೆಣ್ಣು ಮಕ್ಕಳಿಗೆ ಸ್ವಯಂರಕ್ಷಣೆ ತರಬೇತಿ ನೀಡಲು ಉದ್ದೇಶಿಸಲಾಗಿದೆ.

ಎಸ್‌ಸಿ, ಎಸ್‌ಟಿ ಮಹಿಳೆಯರಿಗೆ ಉದ್ಯಮಶೀಲತಾ ತರಬೇತಿ • ಜಿಲ್ಲೆಗೊಂದು ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ

# ಪರಿಶಿಷ್ಟರಿಗೆ ಹೆಚ್ಚು; ಒಬಿಸಿ ಪಾಲು ಕಡಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಜೆಟ್ ಗಾತ್ರಕ್ಕೆ ಅನುಸಾರವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅನುದಾನದಲ್ಲಿ ಹೆಚ್ಚಳವಾಗಿದೆ. ಆದರೆ, ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮೀಸಲಿಡುತ್ತಿದ್ದ ಅನುದಾನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕತ್ತರಿ ಹಾಕಿದ್ದಾರೆ.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನದ ಮೊತ್ತವನ್ನು ₹ 28,234 ಕೋಟಿಗೆ ಹೆಚ್ಚಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ 2,229 ಕೋಟಿಗಳಷ್ಟು ಹೆಚ್ಚಳ ಮಾಡಲಾಗಿದೆ. ಅದರ ಜತೆಯಲ್ಲೇ ಸಮಾಜ ಕಲ್ಯಾಣ ಇಲಾಖೆಯ ವೇತನ ಮತ್ತು ಆಡಳಿತ ವೆಚ್ಚಕ್ಕಾಗಿ ಪ್ರತ್ಯೇಕವಾಗಿ ₹ 598 ಕೋಟಿ ಒದಗಿಸಲಾಗಿದೆ.

ಸಂವಿಧಾನ ನಿರ್ಮಾತೃ ಡಾ.ಬಿ.ಆರ್. ಅಂಬೇಡ್ಕರ್ ರಾಜ್ಯದಲ್ಲಿ ಭೇಟಿನೀಡಿರುವ ಪ್ರಮುಖ ಸ್ಥಳಗಳನ್ನು ಅಭಿವೃದ್ಧಿಪಡಿಸಲು ವಿಶೇಷ ಯೋಜನೆ ರೂಪಿಸುವುದಾಗಿ ಘೋಷಿಸಲಾಗಿದೆ. ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ನಿಗಮಗಳಿಗೆ ₹ 800 ಕೋಟಿ ನೀಡಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಶಿಕ್ಷಣ ಹಾಗೂ ಉದ್ಯೋಗಕ್ಕೆ ಒತ್ತು ನೀಡುವ ಯೋಜನೆಗಳಿಗೆ ಬಜೆಟ್‌ನಲ್ಲಿ ಪ್ರಾಧಾನ್ಯತೆ ನೀಡಲಾಗಿದೆ. ಈ ಸಮುದಾಯಗಳ 300 ಮಹಿಳಾ ಪದವೀಧರರಿಗೆ ಬೆಂಗಳೂರಿನ ಐಐಎಂ ಸಂಸ್ಥೆಯಲ್ಲಿ ಉದ್ಯಮಶೀಲತಾ ತರಬೇತಿ ನೀಡುವುದು, ವಿದ್ಯುತ್ ಚಾಲಿತ ತ್ರಿಚಕ್ರ ವಾಹನಗಳ ಖರೀದಿಗೆ ₹50,000 ಸಹಾಯಧನ ವಿತರಣೆ, ವಸತಿ ನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಸಿಕ ಭೋಜನ ವೆಚ್ಚದಲ್ಲಿ ಹೆಚ್ಚಳ ಇವೆಲ್ಲವೂ ಇದರಲ್ಲಿ ಸೇರಿವೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ವರ್ಗದ ಮಕ್ಕಳಿಗಾಗಿ ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1,000 ವಿದ್ಯಾರ್ಥಿಗಳ ಸಾಮರ್ಥ್ಯದ 'ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ' ಸ್ಥಾಪಿಸುವ ಘೋಷಣೆ ಬಜೆಟ್‌ನಲ್ಲಿದೆ. ಇದಕ್ಕಾಗಿ ₹ 250 ಕೋಟಿ ವೆಚ್ಚ ಮಾಡಲಾಗುತ್ತದೆ.

### ಅನುದಾನ ಕಡಿತ

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಹಿಂದುಳಿದ ಹಾಗೂ ಅತಿ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗಾಗಿ ಯೋಜನೆಗಳ ಅನುಷ್ಠಾನಕ್ಕೆ ನೀಡುತ್ತಿದ್ದ ಅನುದಾನದಲ್ಲಿ ₹ 100 ಕೋಟಿ ಕಡಿತ ಮಾಡಲಾಗಿದೆ. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಕಳೆದ ವರ್ಷ ₹ 500 ಕೋಟಿ ಒದಗಿಸಲಾಗಿತ್ತು. ಈ ಬಾರಿ ಅದನ್ನು ₹ 400 ಕೋಟಿಗೆ ಇಳಿಸಲಾಗಿದೆ.

ವೀರಶೈವ ಲಿಂಗಾಯತ ಮತ್ತು ಒಕ್ಕಲಿಗ ಅಭಿವೃದ್ಧಿ ನಿಗಮಗಳಿಗೆ ತಲಾ ₹ 100 ಕೋಟಿ ಅನುದಾನ ಒದಗಿಸುವ ಮೂಲಕ ಈ ಬಾರಿಯೂ ಎರಡೂ ಸಮುದಾಯಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಮರಾಠಾ ಅಭಿವೃದ್ಧಿ ನಿಗಮಕ್ಕೆ ₹ 50 ಕೋಟಿ ಒದಗಿಸಲಾಗಿದೆ.

ಹಿಂದುಳಿದ ವರ್ಗಗಳಿಗೆ ಸೇರಿದ 25,000 ವಿದ್ಯಾರ್ಥಿಗಳಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡುವ 'ಅಮೃತ ಮುನ್ನಡೆ' ಯೋಜನೆ ಬಜೆಟ್‌ನಲ್ಲಿದೆ. ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಮೂಲಕ 50,000 ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಯೋಜನೆಯನ್ನೂ ಪ್ರಕಟಿಸಲಾಗಿದೆ. ಆದರೆ, ಎರಡೂ ಯೋಜನೆಗಳಿಗೆ ಅನುದಾನ ಒದಗಿಸಿಲ್ಲ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಮಾತನಾಡುವುದನ್ನು ಕಲಿಸುವ ತರಬೇತಿ ಯೋಜನೆಗಾಗಿ ₹ 5 ಕೋಟಿ ಒದಗಿಸಲಾಗಿದೆ.

ಬಿಲ್ಲವರು ಮತ್ತು ಈಡಿಗರು ಹೆಚ್ಚು ಸಂಖ್ಯೆಯಲ್ಲಿರುವ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನಾರಾಯಣ ಗುರುಗಳ ಸ್ಮರಣಾರ್ಥ ತಲಾ ಒಂದು 'ಶ್ರೀ ನಾರಾಯಣ ಗುರು ವಸತಿ ಶಾಲೆ' ಆರಂಭಿಸುವುದಾಗಿ ಘೋಷಿಸಲಾಗಿದೆ.

### ನೇಕಾರರಿಗೆ ನೆರವು ಹೆಚ್ಚಳ

ನೋಂದಾಯಿತ ಕೈಮಗ್ಗ ನೇಕಾರರಿಗೆ 'ನೇಕಾರರ ಸಮ್ಮಾನ್' ಯೋಜನೆಯಡಿಯಲ್ಲಿ ನೀಡಲಾಗುತ್ತಿದ್ದ ವಾರ್ಷಿಕ ಆರ್ಥಿಕ ನೆರವನ್ನು ₹2 ಸಾವಿರದಿಂದ ₹5 ಸಾವಿರಕ್ಕೆ ಹೆಚ್ಚಿಸಲಾಗಿದೆ.

ನೇಕಾರರು ಎದುರಿಸುತ್ತಿರುವ ಬಂಡವಾಳ ಕೊರತೆ ನೀಗಿಸಲು ರಾಜ್ಯದ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕ್‌ಗಳ ಮೂಲಕ ಪಡೆಯುವ ಸಾಲದ ಮೇಲೆ ಸರ್ಕಾರ ಶೇ 8ರಷ್ಟು ಬಡ್ಡಿ ಸಹಾಯಧನ ನೀಡಲು ತೀರ್ಮಾನಿಸಿದೆ. ನೇಕಾರರ ಮಕ್ಕಳು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಲು ವಿದ್ಯಾರ್ಥಿ ವೇತನ ನೀಡಲು ಉದ್ದೇಶಿಸಲಾಗಿದೆ. ಜತೆಗೆ, ಪೌರ ಕಾರ್ಮಿಕರಿಗೆ ಮಾಸಿಕ ₹2 ಸಾವಿರ ಸಂಕಷ್ಟ ಭತ್ಯೆ ನೀಡಲು ಪ್ರಸ್ತಾಪಿಸಲಾಗಿದೆ. ದುರ್ಬಲ ವರ್ಗದವರು ಉದ್ಯಮಶೀಲರಾಗುವುದನ್ನು ಉತ್ತೇಜಿಸಲು ಕೆಐಎಡಿಬಿ ಅಥವಾ ಕೆಎಸ್‌ಎಸ್‌ಐಡಿಸಿ ಸಂಸ್ಥೆಗಳು ಸ್ಥಾಪಿಸುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿನ ಸಣ್ಣ ನಿವೇಶನಗಳಲ್ಲಿ ಈ ವರ್ಗದವರಿಗೆ ಆದ್ಯತೆ ನೀಡುವುದಾಗಿ ಪ್ರಕಟಿಸಲಾಗಿದೆ.

## ಹೆಚ್ಚುತ್ತಿದೆ ಸಾಲದ ಹೊರೆ



## ಕಾಶಿ ಯಾತ್ರೆಗೆ ₹5 ಸಾವಿರ ಸಹಾಯಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಮೂಲಕ ಪ್ರವಾಸೋದ್ಯಮದ ಬಲವರ್ಧನೆಯತ್ತ ಬಜೆಟ್‌ನಲ್ಲಿ ಚಿತ್ತ ಹರಿಸಲಾಗಿದೆ. ಪುಣ್ಯ ಕ್ಷೇತ್ರಗಳಿಗೆ ಪ್ರವಾಸ ಕೈಗೊಳ್ಳುವ ಭಕ್ತಾದಿಗಳಿಗೆ ಸಹಾಯಧನ ನೀಡುವ ಯೋಜನೆಗಳನ್ನು ಪ್ರಕಟಿಸಿರುವುದು ವಿಶೇಷವಾಗಿದೆ. ಕಾಶಿ ಯಾತ್ರೆ ಕೈಗೊಳ್ಳುವ ಸುಮಾರು 30 ಸಾವಿರ ಯಾತ್ರಾರ್ಥಿಗಳಿಗೆ ಸರ್ಕಾರದಿಂದ ತಲಾ ₹5 ಸಾವಿರ ಸಹಾಯಧನ ನೀಡುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಕಾಶಿ ವಿಶ್ವನಾಥ ಮಂದಿರ

### ಇತರ ಪ್ರಮುಖ ಅಂಶಗಳು

- ಹಂಪಿ-ಬಾದಾಮಿ-ಐಹೊಳೆ-ಪಟ್ಟದಕಲ್ಲು-ವಿಜಯಪುರ ಹಾಗೂ ಮೈಸೂರು-ಶ್ರೀರಂಗಪಟ್ಟಣ-ಬೇಲೂರು-ಹಳೆಬೀಡು ಪ್ರವಾಸಿ ವೃತ್ತಗಳ ಅಭಿವೃದ್ಧಿಗೆ ಕ್ರಮ.
- ಬೇಲೂರು, ಹಳೆಬೀಡು, ಸೋಮನಾಥಪುರ ಸೇರಿದಂತೆ ಇತರೆಡೆ ಇರುವ ಹೊಯ್ಸಳರ ಸ್ಮಾರಕಗಳನ್ನು ಪ್ರಸಕ್ತ ಸಾಲಿನಲ್ಲೇ ಯುನೆಸ್ಕೊ ವಿಶ್ವ ಪರಂಪರೆ ತಾಣಗಳಪಟ್ಟಿಗೆ ಸೇರಿಸಲು ಕ್ರಮ.
- ಜೋಗ ಜಲಪಾತದಲ್ಲಿ ಅಂದಾಜು ₹116 ಕೋಟಿ ವೆಚ್ಚದಲ್ಲಿ ಹೋಟೆಲ್ ಹಾಗೂ ರೋಪ್‌ವೇ ಅಭಿವೃದ್ಧಿ.
- ನಂದಿ ಬೆಟ್ಟದಲ್ಲಿ ₹93 ಕೋಟಿ ವೆಚ್ಚದಲ್ಲಿ ರೋಪ್‌ವೇ ನಿರ್ಮಾಣಕ್ಕೆ ಅನುಮೋದನೆ. ಉತ್ತರ ಕನ್ನಡ ಜಿಲ್ಲೆಯ ಯಾಣದಲ್ಲಿ ರೋಪ್‌ವೇ ನಿರ್ಮಾಣಕ್ಕೆ ಕ್ರಮ.
- ಕೊಪ್ಪಳದ ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ ₹100 ಕೋಟಿ.
- ಪರ್ವತ ಮಾಲಾ ಯೋಜನೆಯಡಿ ಚಾಮುಂಡಿ ಬೆಟ್ಟ ಹಾಗೂ ಮುಳ್ಳಯ್ಯನಗಿರಿಯ ದತ್ತಪೀಠದಲ್ಲಿ ರೋಪ್‌ವೇ ನಿರ್ಮಾಣಕ್ಕೆ ಕೇಂದ್ರಕ್ಕೆ ಪ್ರಸ್ತಾವನೆ.
- ಕಡಲತೀರದ ಪ್ರವಾಸೋದ್ಯಮ ಉತ್ತೇಜನಕ್ಕಾಗಿ ಸಿ.ಆರ್.ಜೆಡ್ ಮಾನದಂಡ ಸಡಿಲಿಸುವಂತೆ ಕೇಂದ್ರಕ್ಕೆ ಮನವರಿಕೆ ಮಾಡಿ ಅನುಮೋದನೆ ಪಡೆಯಲು ಕ್ರಮ.
- ತದಡಿ ಬಂದರಿನಲ್ಲಿ ಸಮಗ್ರ ಪರಿಸರ-ಪ್ರವಾಸೋದ್ಯಮ ಕೇಂದ್ರ ಅಭಿವೃದ್ಧಿ.
- ಬೀದರ್ ಹಾಗೂ ಕಲಬುರಗಿ ಕೋಟೆಗಳ ಪುನರುಜ್ಜೀವನಕ್ಕೆ ಕ್ರಮ.
- ರಾಜ್ಯದ ಸ್ಮಾರಕಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲು 'ಅಡಾಪ್ಟ್ ಮಾನುಮೆಂಟ್' ಯೋಜನೆ.
- ಶ್ರೀಶೈಲದಲ್ಲಿ ₹85 ಕೋಟಿ ವೆಚ್ಚದಲ್ಲಿ ಯಾತ್ರಿ ನಿವಾಸ ಸಂಕೀರ್ಣ ನಿರ್ಮಾಣ. ಮೊದಲ ಹಂತದ ಕಾಮಗಾರಿಗೆ ₹45 ಕೋಟಿ.
- ಪುಣ್ಯಕ್ಷೇತ್ರಗಳಿಗೆ ಕಡಿಮೆ ಖರ್ಚಿನಲ್ಲಿ ಪ್ರವಾಸ ಕೈಗೊಳ್ಳಲು ಕೆಎಸ್‌ಟಿಡಿಸಿ ವತಿಯಿಂದ ಕಾರ್ಯಕ್ರಮ.
- ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಕೊಲ್ಲೂರು, ಕಾಶಿ, ತಿರುಪತಿ, ಮಂತ್ರಾಲಯ ಸೇರಿ ಇತರೆ ಸ್ಥಳಗಳಿಗೆ ಪ್ಯಾಕೇಜ್ ಟ್ರಿಪ್ ಸೇವೆ.
- ಬೆಳಗಾವಿಯ ಹಿಡಕಲ್ ಅಣೆಕಟ್ಟು ಪ್ರದೇಶವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಿ ಪಕ್ಷಿಧಾಮ ಹಾಗೂ ಚಿಟ್ಟೆಗಳ ಉದ್ಯಾನ ಸ್ಥಾಪನೆ.
- ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯಾಗಿರುವ 400 ಪ್ರವಾಸಿ ಮಾರ್ಗದರ್ಶಿಗಳಿಗೆ ಮಾಸಿಕ ₹2 ಸಾವಿರ ಪ್ರೋತ್ಸಾಹ ಧನ. ಅವರಿಗೆ ಸಂವಹನ ಕೌಶಲ್ಯ ತರಬೇತಿ ನೀಡಲು ಕ್ರಮ.

## ಅಲ್ಪಸಂಖ್ಯಾತರಿಗೂ ಸಿಹಿ ಇಲ್ಲ

ಈ ಬಾರಿಯ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಳ ಅನುದಾನವನ್ನೂ ಕಡಿತ ಮಾಡಲಾಗಿದೆ. ಕಳೆದ ಬಾರಿ ಈ ಸಮುದಾಯಗಳಿಗೆ ₹ 1,700 ಕೋಟಿಗೂ ಹೆಚ್ಚು ಒದಗಿಸಲಾಗಿತ್ತು. ಈ ಬಾರಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನ ₹ 200 ಕೋಟಿ ದಾಟಿಲ್ಲ.

ಜಿಲ್ಲೆಗೊಂದು 'ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ' ಪ್ರಾರಂಭಿಸಲು ₹ 25 ಕೋಟಿ, ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ದಾಖಲಾತಿ ಹೆಚ್ಚಿಸಲು ₹ 10 ಕೋಟಿ ಒದಗಿಸಲಾಗಿದೆ.

ಡ್ರೋನ್ ಬಳಸಿ ವಕ್ಫ್ ಆಸ್ತಿಗಳ ಸರ್ವೆ, ಶಾಸ್ತ್ರೀಯ ಭಾಷೆಗಳ ಉತ್ಕೃಷ್ಟ ಕೃತಿಗಳನ್ನು ಉರ್ದು ಭಾಷೆಗೆ ಅನುವಾದಿಸುವುದು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ನೋಂದಾಯಿತರಾದ ಬೀದಿಬದಿ ವ್ಯಾಪಾರಿಗಳು, ತಳ್ಳು ಗಾಡಿ, ಹೂ ಮಾರಾಟಗಾರರು, ಆಟೊ ಚಾಲಕರಿಗೆ ನೆತವು ನೀಡುವುದಾಗಿ ಘೋಷಿಸಲಾಗಿದೆ. ಆದರೆ, ಈ ಯೋಜನೆಗಳಿಗೆ ಅನುದಾನ ಒದಗಿಸಿಲ್ಲ.

ಕ್ರೈಸ್ತ ಧರ್ಮೀಯರ ಸಮಗ್ರ ಅಭಿವೃದ್ಧಿಗೆ ₹ 50 ಕೋಟಿ ಒದಗಿಸಲಾಗಿದೆ. ಹಿಂದಿನ ವರ್ಷ ₹ 200 ಕೋಟಿ ನೀಡಲಾಗಿತ್ತು. ಜೈನ, ಸಿಖ್ ಮತ್ತು ಬೌದ್ಧ ಧರ್ಮೀಯರ ಅಭಿವೃದ್ಧಿ ಯೋಜನೆಗಳಿಗೆ ₹ 50 ಕೋಟಿ ಒದಗಿಸಲಾಗಿದೆ.

ಸಾಂದರ್ಭಿಕ ಚಿತ್ರ

## ಅಬಕಾರಿ: ₹29 ಸಾವಿರ ಕೋಟಿ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಅಬಕಾರಿ ಸುಂಕಗಳಿಂದ ವರಮಾನ ಸಂಗ್ರಹಿಸುವ ಗುರಿಯನ್ನು ₹ 29 ಸಾವಿರ ಕೋಟಿಗೆ ಹೆಚ್ಚಿಸಲಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ₹ 4,420 ಕೋಟಿ ಹೆಚ್ಚುವರಿ ನಿರೀಕ್ಷೆಯನ್ನು ಸರ್ಕಾರ ಮಾಡಿದೆ.

2021-22ನೇ ಸಾಲಿಗೆ ₹24,580 ಕೋಟಿ ವರಮಾನ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿತ್ತು. ಫೆಬ್ರುವರಿ ಅಂತ್ಯಕ್ಕೆ ₹23,726 ಕೋಟಿ ಸಂಗ್ರಹವಾಗಿದೆ. ನಿಗದಿತ ಗುರಿ ತಲುಪುವ ನಿರೀಕ್ಷೆ ಇದೆ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಅಬಕಾರಿ ಸುಂಕದ ದರಗಳನ್ನು ಕಳೆದ ಸಾಲಿನಲ್ಲಿ ಶೇ 6ರಷ್ಟು ಹೆಚ್ಚಿಸಲಾಗಿತ್ತು. ಈ ಬಾರಿ ಹೆಚ್ಚಳ ಮಾಡಲು ಪ್ರಸ್ತಾಪಿಸಿಲ್ಲ. ಆದರೂ ₹4,420 ಕೋಟಿ ಹೆಚ್ಚುವರಿ ವರಮಾನ ನಿರೀಕ್ಷೆ ಮಾಡಲಾಗಿದೆ. ಅದಕ್ಕೂ ಹಿಂದಿನ ವರ್ಷ ಅಂದರೆ 2020–21ನೇ ಸಾಲಿನಲ್ಲೂ ಸುಂಕದ ದರ ಶೇ 6ರಷ್ಟು ಹೆಚ್ಚಳವಾಗಿತ್ತು.

## ಅಂಗನವಾಡಿ: ಸೇವೆ ಆಧಾರದಲ್ಲಿ ಗೌರವಧನ ಹೆಚ್ಚಳ

ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುತ್ತಿರುವ ಮಾಸಿಕ ಗೌರವಧನವನ್ನು ಸೇವೆಯ ಆಧಾರದಲ್ಲಿ ಹೆಚ್ಚಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. 20 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ ₹ 1,500, 10ರಿಂದ 20 ವರ್ಷ ಸೇವೆ ಸಲ್ಲಿಸಿದವರಿಗೆ ₹ 1,250 ಮತ್ತು 10 ವರ್ಷಕ್ಕಿಂತ ಕಡಿಮೆಸೇವೆ ಸಲ್ಲಿಸಿದವರಿಗೆ ₹ 1,000 ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. ಅಲ್ಲದೆ, ಎನ್‌ಪಿಎಸ್ ಲೈಟ್ ಯೋಜನೆಯಿಂದ ವಂಚಿತರಾದ ಅಂಗನವಾಡಿ ಕಾರ್ಯಕರ್ತೆಯರಿಗೆ ₹ 50 ಸಾವಿರ ಮತ್ತು ಅಂಗನವಾಡಿ ಸಹಾಯಕರಿಯರಿಗೆ ₹ 30 ಸಾವಿರ ಇಡಿಗಂಟು ಪಾವತಿಸಲು ನಿರ್ಧರಿಸಲಾಗಿದೆ.

## ಜೂನಿಯರ್ ಬಾಕ್ಸಿಂಗ್: ಸೆಮಿಗೆ ಯಕ್ಷಿಕಾ, ವಿಧಿ

ನವದೆಹಲಿ (ಪಿಟಿಐ): ಭಾರತದ ಯಕ್ಷಿಕಾ ಹಾಗೂ ವಿಧಿ ಅವರು ಜೋರ್ಡಾನ್‌ನ ಅಮನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಮತ್ತು ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದಾರೆ. ಜೂನಿಯರ್ ಬಾಲಕಿಯರ 52 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಯಕ್ಷಿಕಾ ಅವರು ನೇಪಾಳದ ಸ್ವಸ್ತಿಕಾ ತಿರುವಾ ಎದುರು ಗೆದ್ದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು



ಶ್ರೀ ಪಿ.ಎಲ್. ನಂಜುಂಡ ಸ್ವಾಮಿ
ಜನನ: 14-07-1929 – ಮರಣ: 24-02-2022
ಅಗಲಿದ ಆತ್ಮಕ್ಕೆ ಶಾಂತಿ ಕೋರಲು ನಮ್ಮೊಂದಿಗೆ
ಕ್ರಿಯಾದಿಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.
06-03-2022 ಭಾನುವಾರ ಅಪರಾಹ್ನ 12:30
ಪೂರಿಗಾಲಿ ಗ್ರಾಮ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ
+91 9845185500 +91 8073011838

ವೈಕುಂಠ ಸಮಾರಾಧನೆ

ಶ್ರೀಮತಿ. ಕಲ್ಯಾಣಮ್ಮ
ಮರಣ: 23/2/2022
ದಿನಾಂಕ: 5-03-2022 ಶನಿವಾರ
ಸಮಯ: ಬೆಳಗ್ಗೆ 10.30 ಘಂಟೆಯಿಂದ
ಸ್ಥಳ: ನಂಗಲಿ ವೆಂಕಟಾಪುರ
ಇಂತಿ ದುಃಖತಪ್ತರಾದ
ಕುಟುಂಬವರ್ಗದವರು, ದೊಡ್ಡ ನೆಕ್ಕುಂದಿ, ಬೆಂಗಳೂರು.
Ⓒ94482 67157

### ಡೇವಿಸ್ ಕಪ್ ವಿಶ್ವ ಗುಂಪು ಒಂದರ ಪ್ಲೇ ಆಫ್‌ನ ಡೆನ್ಮಾರ್ಕ್ ಎದುರಿನ ಹಣಾಹಣಿಯಲ್ಲಿ ಜಯಭೇರಿ

# ರಾಮ್, ಯೂಕಿ ಮಿಂಚು: ಭಾರತ ಜಯಭೇರಿ

ಚೆಂಡನ್ನು ರಿಟರ್ನ್ ಮಾಡಲು ಮುಂದಾದ ಭಾರತದ ಯೂಕಿ ಭಾಂಬ್ರಿ –ಪಿಟಿಐ ಚಿತ್ರ

ಸರ್ವ್ ಮಾಡಿದ ರಾಮ್‌ಕುಮಾರ್ ರಾಮನಾಥನ್ –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಯೂಕಿ ಭಾಂಬ್ರಿ ಮತ್ತು ರಾಮ್‌ಕುಮಾರ್ ರಾಮನಾಥನ್ ಅವರು ಡೆಲ್ಲಿ ಜಿಮ್ಖಾನಾ ಕ್ರೀಡಾಂಗಣದಲ್ಲಿ ಶುಕ್ರವಾರ ಅಮೋಘ ಆಟದ ಮೂಲಕ ಮಿಂಚಿದರು. ಎದುರಾಳಿಗಳ ವಿರುದ್ಧ ನೇರ ಸೆಟ್‌ಗಳ ಜಯ ಸಾಧಿಸಿದ ಅವರು ಡೇವಿಸ್ ಕಪ್ ವಿಶ್ವ ಗುಂಪು ಒಂದರ ಪ್ಲೇ ಆಫ್‌ನಲ್ಲಿ ಡೆನ್ಮಾರ್ಕ್ ಎದುರು ಭಾರತಕ್ಕೆ 2-0ಯಿಂದ ಜಯ ಗಳಿಸಿಕೊಟ್ಟರು.

ಚೆಂಡು ಹೆಚ್ಚು ಪುಟಿದೇಳದ ಹಸಿರು ಅಂಗಣದಲ್ಲಿ ಡೆನ್ಮಾರ್ಕ್ ಆಟಗಾರರು ಪಾಯಿಂಟ್ ಗಳಿಸಲು ಪರದಾಡಿದರು. ಇದರ ಪರಿಪೂರ್ಣ ಲಾಭ ಪಡೆದುಕೊಂಡ ಭಾರತದ ಆಟಗಾರರು ನೇರ ಸೆಟ್‌ಗಳ ಗೆಲುವು ಸಾಧಿಸಿದರು. ರಾಮ್‌ಕುಮಾರ್ ರಾಮನಾಥನ್ 6-3, 6-2ರಲ್ಲಿ ಕ್ರಿಸ್ಟಿಯನ್ ಸಿಗ್ಸ್‌ಗಾರ್ಡ್ ಎದುರು ಗೆದ್ದರು.

ಯೂಕಿ ಭಾಂಬ್ರಿ 6-4, 6-4ರಲ್ಲಿ ಮಿಕೈಲ್ ಟಾಪೆಗಾರ್ಡ್ ವಿರುದ್ಧ ಜಯ ಗಳಿಸಿದರು. ಯೂಕಿ 2017ರ ನಂತರ ಇದೇ ಮೊದಲು ಡೇವಿಸ್ ಕಪ್‌ನಲ್ಲಿ ಆಡುತ್ತಿದ್ದಾರೆ.

ಡೆನ್ಮಾರ್ಕ್ ಎದುರಿನ ಹಣಾಹಣಿಯನ್ನು ಹಸಿರು ಅಂಗಣದಲ್ಲಿ ಆಯೋಜಿಸಲು ನಿರ್ಧರಿಸಿರುವುದು ಭಾರತಕ್ಕೆ ಅನುಕೂಲವೇ ಆಯಿತು. ಎರಡೂ ಪಂದ್ಯಗಳ ಪ್ರತಿ ಹಂತದಲ್ಲೂ ಡೆನ್ಮಾರ್ಕ್ ಆಟಗಾರರು ನೀರಸ ಆಟವಾಡಿದರು. ಶನಿವಾರ ನಡೆಯಲಿರುವ ಡಬಲ್ಸ್ ಪಂದ್ಯದಲ್ಲಿ ರೋಹನ್ ಬೋಪಣ್ಣ ಮತ್ತು ದಿವಿಜ್ ಶರಣ್ ಜೋಡಿ ಫ್ರೆಡೆರಿಕ್ ನೀಲ್ಸನ್-ಜೊಹಾನ್ಸ್ ಇಂಗಿಲ್ಡ್‌ಸೆನ್ ಅವರನ್ನು ಎದುರಿಸುವರು. ಈ ಪಂದ್ಯದಲ್ಲಿ ಗೆದ್ದರೆ ಭಾರತ ವಿಶ್ವ ಗುಂಪು-1ರಲ್ಲಿ ಆಡಲು ಅರ್ಹತೆ ಗಳಿಸಲಿದೆ. ನಂತರ ನಡೆಯಲಿರುವ ರಿವರ್ಸ್ ಸಿಂಗಲ್ಸ್ ಪಂದ್ಯಕ್ಕೆ ಮಹತ್ವ ಇರುವುದಿಲ್ಲ.

ಎರಡನೇ ಸೆಟ್‌ನಲ್ಲಿ 4-1ರ ಮುನ್ನಡೆ ಗಳಿಸಿದ್ದ ಯೂಕಿ ಅವರಿಗೆ ಎದುರಾಳಿ ಆಟಗಾರ ತಿರುಗೇಟು ನೀಡಿ ಹಿನ್ನಡೆಯನ್ನು 4-5ಕ್ಕೆ ಕುಗ್ಗಿಸಿದ್ದರು. ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಯೂಕಿ ಪಂದ್ಯದಲ್ಲಿ ಗೆಲುವು ನನ್ನದೇ ಎಂಬ ಭರವಸೆ ಇತ್ತು. ಆದ್ದರಿಂದ ಕೆಲವು ಪಾಯಿಂಟ್‌ಗಳನ್ನು ಕಳೆದುಕೊಂಡರೂ ಎದೆಗುಂದಲಿಲ್ಲ ಎಂದರು.

> ಡೇವಿಸ್ ಕಪ್ ಪಂದ್ಯಗಳಲ್ಲಿ ಚೆನ್ನಾಗಿ ಅಡುವುದಕ್ಕಿಂತ ಉತ್ತಮ ಪೈಪೋಟಿ ನೀಡುವ ಆಟಗಾರರು ಗೆಲ್ಲುತ್ತಾರೆ. ಇಂದು ನಾನು ಚೆನ್ನಾಗಿ ಕಾದಾಡಿದೆ, ಗೆದ್ದೆ.
>
> **ಯೂಕಿ ಭಾಂಬ್ರಿ** ಭಾರತದ ಆಟಗಾರ

> ಚೆನ್ನಾಗಿ ಸರ್ವ್ ಮಾಡಿದೆ. ತಂಡದ ಮತ್ತು ಪ್ರೇಕ್ಷಕರ ಬೆಂಬಲವೂ ನನಗೆ ಅನುಕೂಲವಾಯಿತು. ಕೆಲವು ಪಾಯಿಂಟ್ ಅನಿರೀಕ್ಷಿತವಾಗಿ ಬಂತು.
>
> **ರಾಮ್‌ಕುಮಾರ್ ರಾಮನಾಥನ್**

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಮೆ. ಗೋಲ್ಡನ್‌ಮಾರ್ಕ್ ಫರ್ಟಿಕೆಮ್ ಪ್ರೈ.ಲಿ., ಪ್ಲಾಟ್ ನಂ.229, ರೋಡ್ ನಂ.29, ವಸಂತನರಾಸಪುರ, ತುಮಕೂರು, ಕರ್ನಾಟಕ 572138 ಭಾರತ ಸರ್ಕಾರದ ಕೃಷಿ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಕೃಷಿ ಸಹಕಾರ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹೊರಡಿಸಿದ ದಿನಾಂಕ: 24ನೇ ಅಕ್ಟೋಬರ್ 2015ರ ಆದೇಶ ಸಂ. ಎಸ್.ಒ.2900(ಇ) ಮತ್ತು ದಿನಾಂಕ 30ನೇ ಡಿಸೆಂಬರ್ 2017ರ ತಿದ್ದುಪಡಿ ಮೇರೆಗೆ ಗೋಲ್ಡನ್‌ಮಾರ್ಕ್ ಫರ್ಟಿಕೆಮ್ ಪ್ರೈ.ಲಿ. ಕಂಪನಿಯು ಈ ಮೂಲಕ ತಿಳಿಸುವುದು ಏನೆಂದರೆ, ಕ್ ಂ ಪ್ ನಿ ಂ ್ ಂ ಕ್ ಳ್ ಗಿ ನ್ ವರ್ಗೀಕರಣಗಳನ್ನು ಹೊಂದಿರುವ 100% ನೀರಿನಲ್ಲಿ ಕರಗಬಲ್ಲ ರಸಗೊಬ್ಬರ ಮಿಶ್ರಣಗಳನ್ನು ಮಾರಾಟ ಮಾಡಲು ಉದ್ದೇಶಿಸಿರುತ್ತದೆ. (1) ಎನ್‌ಪಿಕೆ 13-40-13 ಒಟ್ಟು ನೈಟ್ರೋಜನ್ 13%, ಒಟ್ಟು ಫಾಸ್ಫೇಟ್ ಪಿ205 40% ಮತ್ತು ಒಟ್ಟು ಪೊಟ್ಯಾಷ್ ಕೆ20 13% (2) ಎನ್‌ಪಿಕೆ 18-18-18 ಒಟ್ಟು ನೈಟ್ರೋಜನ್ 18% , ಒಟ್ಟು ಫಾಸ್ಫೇಟ್ ಪಿ205 18% ಒಟ್ಟು ಪೊಟ್ಯಾಷ್ ಕೆ20 18% (3) ಎನ್‌ಪಿಕೆ 13-5-26 ಒಟ್ಟು ನೈಟ್ರೋಜನ್ 13% , ಒಟ್ಟು ಫಾಸ್ಫೇಟ್ ಪಿ205 5% ಮತ್ತು ಒಟ್ಟು ಪೊಟ್ಯಾಷ್ ಕೆ20 26% (4) ಎನ್‌ಪಿಕೆ 6-12-36 ಒಟ್ಟು ನೈಟ್ರೋಜನ್ 6% , ಒಟ್ಟು ಫಾಸ್ಫೇಟ್ ಪಿ205 12% ಮತ್ತು ಒಟ್ಟು ಪೊಟ್ಯಾಷ್ ಕೆ20 36% (5) ಎನ್‌ಪಿಕೆ 20-20-20 ಒಟ್ಟು ನೈಟ್ರೋಜನ್ 20% , ಒಟ್ಟು ಫಾಸ್ಫೇಟ್ ಪಿ205 20% ಮತ್ತು ಒಟ್ಟು ಪೊಟ್ಯಾಷ್ ಕೆ20 20% (6) ಎನ್‌ಪಿಕೆ 19-19-19 ಒಟ್ಟು ನೈಟ್ರೋಜನ್ 19% , ಒಟ್ಟು ಫಾಸ್ಫೇಟ್ ಪಿ205 19% ಮತ್ತು ಒಟ್ಟು ಪೊಟ್ಯಾಷ್ ಕೆ20 19% (7) ಝಿಂಕ್ ಫಾಸ್ಫೇಟ್ ಝಡ್‌ಎನ್ 19.4%, ಫಾಸ್ಫರಸ್ 12.9%, (8) ಎನ್‌ಪಿಕೆಜೆಡ್‌ಎನ್‌ಬಿ 12-0-42-0.7-0.3 ನೈಟ್ರೋಜನ್ 12%, ಒಟ್ಟು ಪೊಟ್ಯಾಷ್ ಕೆ20 42%, ಝಿಂಕ್ 0.7% ಮತ್ತು ಬೋರಾನ್ 0.3% (9) ಎನ್‌ಪಿಕೆ 12-32-14 19 ಒಟ್ಟು ನೈಟ್ರೋಜನ್ 12% , ಒಟ್ಟು ಫಾಸ್ಫೇಟ್ ಪಿ205 32% ಮತ್ತು ಒಟ್ಟು ಪೊಟ್ಯಾಷ್ ಕೆ20 14%, (10) ಯೂರಿಯಾ ಫಾಸ್ಫೇಟ್ ಜೊತೆಗೆ ಎಸ್‌ಒಪಿ 18-18-18 (11) ಎನ್‌ಪಿಕೆ 12-30-15 ನೈಟ್ರೋಜನ್ 12% , ಒಟ್ಟು ಫಾಸ್ಫೇಟ್ ಪಿ205 30% ಮತ್ತು ಒಟ್ಟು ಪೊಟ್ಯಾಷ್ ಕೆ20 15% (12) ಎನ್‌ಪಿಕೆಝಡ್‌ಎನ್ 7.6-23.5-7.6-3 ನೈಟ್ರೋಜನ್ 7.6% , ಒಟ್ಟು ಫಾಸ್ಫೇಟ್ ಪಿ205 23.5% ಮತ್ತು ಒಟ್ಟು ಪೊಟ್ಯಾಷ್ ಕೆ20 7.6% ಮತ್ತು ಝಿಂಕ್ ಜೆಡ್‌ಎನ್ 3.5% ಈ ಮೇಲಿನ ಎಲ್ಲಾ ದರ್ಜೆಗಳಲ್ಲಿ (1) ಶೇಕಡಾವಾರು ತೇವಾಂಶ ತೂಕದಲ್ಲಿ ಗರಿಶ: 0.5%, (2) ಒಟ್ಟು ಶೇಕಡವಾರು ಕ್ಲೋರೈಡ್, ತೂಕದಲ್ಲಿ ಗರಿಷ್ಠ 15%, (3) ಶೇಕಡವಾರು ಸೋಡಿಯಂ ಎನ್‌ಎಸಿಐ ತೂಕದಲ್ಲಿ, ಗರಿಷ್ಠ 0.5%, (4) ನೀರಿನಲ್ಲಿ ಕರಗದಿರುವ ವಸ್ತು ಶೇಕಡವಾರು, ತೂಕದಲ್ಲಿ ಗರಿಷ್ಠ 0.5%, (5) ಲೀಡ್ (ಪಿಬಿ) ಶೇಕಡವಾರು ತೂಕದಲ್ಲಿ, ಗರಿಷ್ಠ 0.003%, (6) ಕ್ಯಾಡ್ಮಿಯಂ (ಸಿಡಿ) ಶೇಕಡವಾರು ತೂಕದಲ್ಲಿ, ಗರಿಷ್ಠ 0.0025%, (7) ಅರ್ಸೆನಿಕ್ (ಎಎಸ್) ಶೇಕಡವಾರು ತೂಕದಲ್ಲಿ ಗರಿಷ್ಠ 0.01%.
ಉತ್ಪಾದನಾ ಘಟಕದ ವಿಳಾಸ:
ಮೆ. ಗೋಲ್ಡನ್‌ಮಾರ್ಕ್ ಫರ್ಟಿಕೆಮ್ ಪ್ರೈ.ಲಿ., ಪ್ಲಾಟ್ ನಂ.229,
ರೋಡ್ ನಂ.29, ವಸಂತನರಾಸಪುರ,
ತುಮಕೂರು, ಕರ್ನಾಟಕ 572138
Email:-goldenmarkfertchempvtltd@gmail.com
Web: www.goldenmarkseeds.com
ಫೋನ್: 8147226759

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ /ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ot 17800/- 68000/- 8884666597, 8884666594.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ-15000 to 28000 ಸಂಪರ್ಕಿಸಿರಿ 8904879948/ 8904879491

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002 .

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Out-Station

ಮಡಿಕೇರಿ ಮಾರ್ಕೆಟ್ ಹಿಂಭಾಗ ಹಿಲ್ ರಸ್ತೆಯಲ್ಲಿ ವಾಣಿಜ್ಯ ಗೃಹ ಉಪಯೋಗಕ್ಕೆ ಯೋಗ್ಯವಾದ ಎರಡು ಕಡೆ ರಸ್ತೆ ಇರುವ ಸೈಟ್ 100 x 100 ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ: 9448194499/ 9482241506

Flat

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

Farm House/ Land/ Resorts

Out-Station

ಮಡಿಕೇರಿ- ಮಂಗಳೂರು ಹೆದ್ದಾರಿ ರಸ್ತೆಗೆ ಹೊಂದಿಕೊಂಡಂತೆ, ಮಡಿಕೇರಿಯಿಂದ 5 ಕಿ.ಮೀ ನಲ್ಲಿ 3 ಎಕರೆ ಹೆದ್ದಾರಿಯ ಮೇಲುಗಡೆಗೆ ಕೂಡಲೇ ಮಾರಾಟಕ್ಕೆ ಇದೆ.ಸಂಪರ್ಕಿಸಿ:+91 9538023042 / 9448282113

ಕೃಷಿ ತೋಟ ಮಾರಾಟಕ್ಕಿದೆ. ಹೊನ್ನಾಳಿ ಹರಿಹರ ರಸ್ತೆಯ ಮಾಸಡಿ ಗ್ರಾಮದಲ್ಲಿ 5.2 ಎಕರೆ ತೆಂಗಿನ ತೋಟ ಮತ್ತು ಸುಸಜ್ಜಿತ ಎರಡು ಮನೆಗಳು ಮಾರಾಟಕ್ಕಿವೆ. ಆಸಕ್ತರು ಭೇಟಿ ಮಾಡಿ, ಮೊಬೈಲ್: 9448069340, 9148391640

Residential/ Commercial

Peenya

T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

Vidyaranyapura

ಮೂಡಲಪಾಳ್ಯ ಬೆಂಗಳೂರಿನಲ್ಲಿ 15 x 50 ಉತ್ತರ ದಿಕ್ಕಿಗಿರುವ ಮನೆ ಮಾರಾಟಕ್ಕಿದೆ.'ಎ' ಖಾತೆ ಬೆಲೆ 75 ಲಕ್ಷ ಸಂಪರ್ಕಿಸಿ: 8073670948

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ASTRO YATRA

ಓಂ ದುರ್ಗಾ ಅಂಜನ ಜ್ಯೋತಿಷ್ಯ ಮತ್ತು ವಾಸ್ತು ಕೇಂದ್ರ
OM DURGA ANJANAM ASTRO & VASTU CENTRE
ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್
ಯೋಗಿ. ಶ್ರೀದೇವಾನಂದನ್ ರವರಿಂದ
ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ, ಸುಖ ಶಾಂತಿ ನೆಮ್ಮದಿಗಾಗಿ, ಸಿರಿಸಂಪತ್ತು ಸ್ತ್ರೀ–ಪುರುಷ,ದಾಂಪತ್ಯ, ಮದುವೆ, ಸಂತಾನ, ಆರೋಗ್ಯಕ್ಕೆ ಬೇಕಾಗುವ ಸರ್ವಮನ ಇಚ್ಛ ಅತೀಘೋರ ನೀಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ, ಆಕರ್ಷಣ ಸಂಮ್ಮೋಹನ, ದುಷ್ಟಶಕ್ತಿಗಳು ಉದ್ಘಾಟನೆ, ಶತೃ ಸಂಬಂದಿತ ಮಾಟ ದೃಷ್ಟಿಶಾಪಗಳಿಗೆ ಇಂದೇ ಪರಿಹಾರಕ್ಕೆ ಸಂಪರ್ಕಿಸಿ.
8217437023 / 9845005009
#36, ಎಸ್.ವಿ ಕಾಂಪ್ಲೆಕ್ಸ್, ಅಗ್ರಹಾರ ದಾಸರಹಳ್ಳಿ, ಮಾಗಡಿ ರಸ್ತೆ, ಬೆಂ–40

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per Annum) Required Agents & DSA, 55000/- Salary & 4% Commission: 7495037212

Franchise

PMS COMPANY is inviting Franchise Partner and Channel Partner for every Pincode in Bangalore And Karnataka for Real Estate Activity. For details Call 9342335589 or visit @ office M.G.Road Bangalore.

ಭವಿಷ್ಯ

Astrology

ಸ್ತ್ರೀ-ವಶೀಕರಣ, ಪುರುಷ -ವಶೀಕರಣ, ಮಾಟ-ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ-ಭವಿಷ್ಯ, ಖಚಿತ- ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ : ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಬ್ರಹ್ಮಜ್ಞಾನ ಪಂಡಿತ ಶಂಕರ್ ಗುರೂಜಿ ಪ್ರಖ್ಯಾತ ವಾಸ್ತು ಜ್ಯೋತಿಷ್ಯರು ಪ್ರೀತಿಯಲ್ಲಿ ನಂಬಿ ಮೋಸ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರುಕಾಟ ಆಸ್ತಿಯಲ್ಲಿ ಕಿರಿಕಿರಿ ಪ್ರಯೋಗ ನಿಮ್ಮ ಜೀವನದ ಯಾವುದೇ ಕಠಿಣ ಹಾಗೂ ಗುಪ್ತ ಸಮಸ್ಯೆಗಳಿಗೆ ಸಂಪರ್ಕಿಸಿ 9845167316

||ಯಲ್ಲಮ್ಮ ದೇವಿ ಜ್ಯೋತಿಷ್ಯ ಪೀಠಂ||ವಶೀಕರಣ ಸ್ಪೆಷಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲಸಮಸ್ಯೆಗಳಿಗೆ ಪರಿಹಾರ.*ಅಸಾಧ್ಯವಾದದ್ದು ಇಲ್ಲಿ ಸಾಧ್ಯ*.9535883556

||ಉಚಿತ ಭವಿಷ್ಯ||: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಪವನ್‌ಭಟ್. 8095569819

ಪ್ರವಾಸ

Travel

22-03-2022 ಕಾಶಿ, ಪ್ರಯಾಗ್ ರಾಜ್, ಗಯಾ, 21-04-2022 ದೆಹಲಿ, ಆಗ್ರಾ, ಅಮೃತ್‌ಸರ್, ವೈಷ್ಣೋದೇವಿ, ಹರಿದ್ವಾರ, ಕಾಶಿ, ಗಯಾ,8-5-2022 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್. 26-6-2022 ಅಮರ್‌ನಾಥ್ ಯಾತ್ರೆ, ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತನಗರ) 9845035349, 9482435755

13.05.2022 12/16 ದಿನಗಳು ಸಿಮ್ಲಾ,ಕುಲುಮನಾಲಿ, ವೈಷ್ಣೋದೇವಿ,ಸಪ್ತಶಕ್ತಿಪೀಠಗಳು, 17.03.2022 3 ದಿನಗಳು ತಿರುನಲ್ಲಾರು,ನವಗ್ರಹ ದೇವಸ್ಥಾನ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809/ 9902433500

DH DECCAN HERALD
BOOK YOUR CLASSIFIEDS ONLINE
ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB
LOST
REAL ESTATE
NAME CHANGE
EDU
HEALTH
MATRI
AUTO
ASTRO
NOTICE
TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

### ರಣಜಿ ಟ್ರೋಫಿ: ಕರ್ನಾಟಕ ತಂಡದ ಬಿಗಿಹಿಡಿತ; ಪುದುಚೇರಿಗೆ ಕಠಿಣ ಹಾದಿ

# ಮನೀಷ್ ಪಾಂಡೆ ಶತಕದ ಭರಾಟೆ

ಪ್ರಜಾವಾಣಿ ವಾರ್ತೆ

ಮನೀಷ್ ಪಾಂಡೆ –ಪ್ರಜಾವಾಣಿ ಸಂಗ್ರಹ

ಚೆನ್ನೈ: ಎಸ್‌ಎನ್‌ಎನ್ ಕ್ರೀಡಾಂಗಣದಲ್ಲಿ ಗುರುವಾರ ದೇವದತ್ತ ಪಡಿಕ್ಕಲ್ ಅರ್ಭಟಕ್ಕೆ ಬಸವಳಿದಿದ್ದ ಪುದುಚೇರಿ ಬೌಲರ್‌ಗಳು ಶುಕ್ರವಾರ ಮನೀಷ್ ಪಾಂಡೆಯ ಶತಕದಾಟಕ್ಕೆ ಶರಣಾದರು.

ಇದರಿಂದಾಗಿ ಇಲ್ಲಿ ನಡೆಯುತ್ತಿರುವ ರಣಜಿ ಟೂರ್ನಿಯ ಸಿ ಗುಂಪಿನ ಮೂರನೇ ಪಂದ್ಯದಲ್ಲಿ ಎರಡನೇ ದಿನದಾಟದ ಕೊನೆಗೆ ಕರ್ನಾಟಕ ತಂಡವು ಬಿಗಿಹಿಡಿತ ಸಾಧಿಸಿದೆ.

ಪಾಂಡೆ (ಔಟಾಗದೆ 107; 161ಎ, 4X7, 6X3) ಶತಕದ ಬಲದಿಂದ ತಂಡವು ಮೊದಲ ಇನಿಂಗ್ಸ್‌ನಲ್ಲಿ 132.2 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 453 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಪುದುಚೇರಿ ತಂಡವು 18 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 52 ರನ್ ಗಳಿಸಿದೆ. ನಯನ್ ಕಂಗಯನ್ (ಬ್ಯಾಟಿಂಗ್ 24) ಮತ್ತು ಗೊನ್ನಬಟ್ಟುಲಾ ಚಿರಂಜೀವಿ (ಬ್ಯಾಟಿಂಗ್ 12) ಕ್ರೀಸ್‌ನಲ್ಲಿದ್ದಾರೆ.

ಮನೀಷ್ ಪಾಂಡೆ ಅರ್ಭಟ: ಮೊದಲ ದಿನದಾಟದಲ್ಲಿ ಎಡಗೈ ಬ್ಯಾಟರ್ ದೇವದತ್ತ ಅಮೋಘ ಶತಕದ ಬಲದಿಂದ ಕರ್ನಾಟಕವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 293 ರನ್ ಗಳಿಸಿತು. ಕ್ರೀಸ್‌ನಲ್ಲಿ ದೇವದತ್ತ ಮತ್ತು ಮನೀಷ್ ಉಳಿದಿದ್ದರು.

ಶುಕ್ರವಾರ ಬೆಳಿಗ್ಗೆ ರಣಜಿ ಟೂರ್ನಿಯಲ್ಲಿ ತಮ್ಮ ಮೊದಲ ಶತಕವನ್ನು ದ್ವಿಶತಕವನ್ನಾಗಿ ಪರಿವರ್ತಿಸಿಕೊಳ್ಳುವ ದೇವದತ್ತ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಪುದುಚೇರಿಯ ಬೌಲರ್ ಅಶಿತ್ ಬೌಲಿಂಗ್‌ನಲ್ಲಿ ದೇವದತ್ತ (178; 309ಎ) ಔಟಾದರು.

ಆದರೆ, ಪಾಂಡೆ ಏಕಾಗ್ರತೆಯನ್ನು ಕದಡುವ ಬೌಲರ್‌ಗಳ ಪ್ರಯತ್ನ ಸಫಲವಾಗಲಿಲ್ಲ. ಇನ್ನೊಂದು ಬದಿಯಲ್ಲಿ ವಿಕೆಟ್‌ಗಳು ಪತನವಾಗುತ್ತಿದ್ದರೂ ಮನೀಷ್ ಮಾತ್ರ ತಂಡದ ಮೊತ್ತ ಹೆಚ್ಚುವಂತೆ ನೋಡಿಕೊಂಡರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 21ನೇ ಶತಕ ದಾಖಲಿಸಿದರು.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ಬಿ.ಆರ್. ಶರತ್, ಶ್ರೇಯಸ್ ಗೋಪಾಲ್ ಮತ್ತು ಕೆ ಗೌತಮ್ ಅವರು ಹೆಚ್ಚು ಹೊತ್ತು ನಿಲ್ಲಲಿಲ್ಲ. ಸುಬೋಧ್ ಬಾಟಿ ಮತ್ತು ಅಶಿತ್ ಪರಿಣಾಮಕಾರಿ ಬೌಲಿಂಗ್ ಮಾಡಿದರು. ಆದರೆ, ಹೊಸ ಪ್ರತಿಭೆ ವಿದ್ಯಾಧರ್ ಪಾಟೀಲ (25; 42ಎ) ಒಂದಷ್ಟು ಚೇತರಿಕೆಯ ಆಟವಾಡಿದರು. ನಾಯಕ ಮನೀಷ್‌ಗೆ ಉತ್ತಮ ಜೊತೆ ನೀಡಿದರು. ಅಲ್ಲದೇ ಎರಡು ಅಮೋಘ ಸಿಕ್ಸರ್ ಕೂಡ ಬಾರಿಸಿದ ವಿದ್ಯಾಧರ್ ಗಮನ ಸೆಳೆದರು. ಎಂಟನೇ ವಿಕೆಟ್ ಜೊತೆಯಾಟದಲ್ಲಿ ಮನೀಷ್ ಮತ್ತು ವಿದ್ಯಾಧರ್ 56 ರನ್‌ಗಳನ್ನು ಸೇರಿಸಿದರು. ಕೊನೆಯಲ್ಲಿ 12 ರನ್‌ಗಳ ಕಾಣಿಕೆ ನೀಡಿದ ಪ್ರಸಿದ್ಧ ಕೃಷ್ಣ, ಇನಿಂಗ್ಸ್ ಡಿಕ್ಲೇರ್ ನಂತರ ಬೌಲಿಂಗ್‌ನಲ್ಲಿಯೂ ಮಿಂಚಿದರು. ಅವರು ಮತ್ತು ವಿದ್ಯಾಧರ್ ತಲಾ ಒಂದು ವಿಕೆಟ್ ಗಳಿಸಿದರು.

### ಸ್ಕೋರ್ ಕಾರ್ಡ್

**ಕರ್ನಾಟಕ ಮೊದಲ ಇನಿಂಗ್ಸ್ 8ಕ್ಕೆ 453 ಡಿಕ್ಲೇರ್ಡ್ (132.2 ಓವರ್‌ಗಳಲ್ಲಿ) (ಗುರುವಾರ 90 ಓವರ್‌ಗಳಲ್ಲಿ 3ಕ್ಕೆ293)**
ದೇವದತ್ತ ಸಿ ಕಾರ್ತಿಕ್ ಬಿ ಅಶಿತ್ 178 (309ಎ, 4X23, 6X2), ಮನೀಷ್ ಔಟಾಗದೆ 107 (161ಎ, 4X7, 6X3), ಶರತ್ ಸಿ ಅರವಿಂದ್ ಬಿ ಆಶಿತ್ 6 (9ಎ, 4X1), ಶ್ರೇಯಸ್ ಸಿ ಉದೇಶಿ ಬಿ ಭಾಟಿ 10 (22ಎ, 4X1), ಗೌತಮ್ ಎಲ್‌ಬಿಡಬ್ಲ್ಯು ಭಾಟಿ 0 (1ಎ), ವಿದ್ಯಾಧರ್ ಸಿ ಚಿರಂಜೀವಿ ಬಿ ಉದೇಶಿ 25 (42ಎ, 6X2), ಪ್ರಸಿದ್ಧ ಔಟಾಗದೆ 12 (20ಎ, 4X2).
**ಇತರೆ** (ಬೈ 6, ನೋಬಾಲ್ 2, ವೈಡ್ 5) 13
**ವಿಕೆಟ್ ಪತನ:** 4-323 (ದೇವದತ್ತ ಪಡಿಕ್ಕಲ್, 100.2), 5-239 (ಬಿ. ಆರ್.ಶರತ್, 102.5), 6-369 (ಶ್ರೇಯಸ್ ಗೋಪಾಲ್, 112.5), 7-369 (ಕೃಷ್ಣಪ್ಪ ಗೌತಮ್, 112.6), 8-425 (ವಿದ್ಯಾಧರ್ ಪಾಟೀಲ, 127.1)
**ಬೌಲಿಂಗ್:** ಸುಬೋಧ್ ಭಾಟಿ 26.3-5-92-2, ಸಾಗರ್ ತ್ರಿವೇದಿ 19.3-5-49-0, ಆಶಿತ್ ರಾಜೀವ್ 27.2-4-80-4, ಸಾಗರ್ ಉದೇಶಿ 47-7-177-2, ಪವನ್ ದೇಶಪಾಂಡೆ 7-0-33-0, ದಾಮೋದರನ್ ರೋಹಿತ್ 2-0-8-0, ಪಾರಸ್ ಡೋಗ್ರಾ 3-0-8-0

**ಪುದುಚೇರಿ ಮೊದಲ ಇನಿಂಗ್ಸ್ 2ಕ್ಕೆ 52 (18 ಓವರ್)**
ನಯನ್ ಬ್ಯಾಟಿಂಗ್ 24 (52ಎ, 4X4), ಕೋದಂಡಪಾಣಿ ಸಿ ಸಿದ್ಧಾರ್ಥ್ ಬಿ ವಿದ್ಯಾಧರ್ 13 (22ಎ, 4X2), ಉದೇಶಿ ಸಿ ಶರತ್ ಬಿ ಪ್ರಸಿದ್ಧ 2 (8ಎ), ಚಿರಂಜೀವಿ ಬ್ಯಾಟಿಂಗ್ 12 (26ಎ, 6X1)
**ಇತರೆ** (ಲೆಗ್‌ಬೈ 1) 1
**ವಿಕೆಟ್ ಪತನ:** 1-22 (ಕೋದಂಡಪಾಣಿ, 7.3), 2-31 (ಸಾಗರ್ ಉದೇಶಿ, 10.3)
**ಬೌಲಿಂಗ್:** ಪ್ರಸಿದ್ಧ ಕೃಷ್ಣ 7-2-23-1, ವಿದ್ಯಾಧರ್ ಪಾಟೀಲ 7-1-18-1, ವಿದ್ವತ್ ಕಾವೇರಪ್ಪ 2-1-1-0, ಶ್ರೇಯಸ್ ಗೋಪಾಲ್ 1-0-7-0, ಕೃಷ್ಣಪ್ಪ ಗೌತಮ್ 1-0-2-0

### ಉಕ್ರೇನ್ ಮೇಲೆ ಆಕ್ರಮಣ: ಬೆಲಾರೂಸ್‌ಗೂ ಅವಕಾಶವಿಲ್ಲ

# ಚಳಿಗಾಲದ ಪ್ಯಾರಾಲಿಂಪಿಕ್ಸ್ ಆರಂಭ

ಬೀಜಿಂಗ್ (ಎಪಿ): 2022ರ ಚಳಿಗಾಲದ ಒಲಿಂಪಿಕ್ಸ್‌ಗೆ ಶುಕ್ರವಾರ ರಷ್ಯಾ ಮತ್ತು ಬೆಲಾರೂಸ್ ಅಥ್ಲೀಟ್‌ಗಳಿಲ್ಲದೆ ಚಾಲನೆ ನೀಡಲಾಯಿತು. ಯುದ್ಧಭೂಮಿಯಿಂದ ತಪ್ಪಿಸಿಕೊಂಡು ಬಂದ ಉಕ್ರೇನ್ ತಂಡವು ಕೂಟದಲ್ಲಿ ಪಾಲ್ಗೊಂಡ ಸಂತಸ ಅನುಭವಿಸಿತು.

‘ಪ್ಯಾರಾಲಿಂಪಿಕ್ಸ್‌ನಲ್ಲಿ ನಾವು ಪಾಲ್ಗೊಳ್ಳುವಂತಾಗಿದ್ದು ಒಂದು ಪವಾಡ’ ಎಂದು ಉಕ್ರೇನ್ ಪ್ರತಿನಿಧಿಗಳ ಮುಖ್ಯಸ್ಥ ವಲೇರಿ ಸುಶ್ಕೆವಿಚ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಬೀಜಿಂಗ್‌ನಲ್ಲಿ ಚಳಿಗಾಲದ ಒಲಿಂಪಿಕ್ಸ್ ಮುಗಿದ ನಂತರ ಉಕ್ರೇನ್ ಮೇಲೆ ರಷ್ಯಾದ ಆಕ್ರಮಣವು ಜಗತ್ತನ್ನು ಬೆಚ್ಚಿಬೀಳಿಸಿದೆ. ಕ್ರೀಡಾ ಪ್ರಪಂಚವೂ ಇದಕ್ಕೆ ಹೊರತಾಗಿಲ್ಲ.

ರಷ್ಯಾ ಮತ್ತು ಬೆಲಾರೂಸ್ ಕ್ರೀಡಾಪಟುಗಳಿಗೆ ಪ್ಯಾರಾಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅನುಮತಿಸಲಾಗುವುದು ಎಂದು ಆಯೋಜಕರು ಆರಂಭದಲ್ಲಿ ಪ್ರಕಟಿಸಿದ್ದರು. ಆದರೆ ಕೂಟ ಆರಂಭಕ್ಕೆ ಒಂದು ದಿನ ಇರುವಂತೆಯೇ ಆದೇಶ ಹಿಂಪಡೆದಿದ್ದರು. ಕ್ರೀಡಾಗ್ರಾಮದಲ್ಲಿ ಉಂಟಾದ ಉದ್ವಿಗ್ನ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಎರಡೂ ದೇಶಗಳ ಕ್ರೀಡಾಪಟುಗಳನ್ನು ಹೊರಹಾಕಲಾಗಿದೆ ಎಂದು ಅವರು ಕಾರಣ ನೀಡಿದ್ದಾರೆ. ಉಕ್ರೇನ್ ತಂಡದ ಸದಸ್ಯರು ಬೀಜಿಂಗ್ ತಲುಪಲು ನಾಲ್ಕು ದಿನಗಳನ್ನು ತೆಗೆದುಕೊಂಡರು ಎಂದು ಶುಷ್ಕೆವಿಚ್ ಹೇಳಿದ್ದಾರೆ. ಪ್ರಯಾಣದ ಕೊನೆಯ ಎರಡು ದಿನಗಳಲ್ಲಿ ತಾನು ಬೆನ್ನುನೋವಿನಿಂದ ಬಳಲಿದ್ದೆ ಎಂದಿದ್ದಾರೆ.

‘ಬರ್ಡ್ಸ್ ನೆಸ್ಟ್’ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸಮಾರಂಭದೊಂದಿಗೆ ಪ್ಯಾರಾಲಿಂಪಿಕ್ಸ್‌ಗೆ ಚಾಲನೆ ನೀಡಲಾಯಿತು. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷ ಆಂಡ್ರ್ಯೂ ಪಾರ್ಸನ್ಸ್ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ವಿಶ್ವಕಪ್ ಫುಟ್‌ಬಾಲ್ ನಿಷೇಧದ ವಿರುದ್ಧ ಮೊಕದ್ದಮೆಗೆ ರಷ್ಯಾ ಸಿದ್ಧ: ವಿಶ್ವಕಪ್ ಫುಟ್‌ಬಾಲ್ ಪ್ಲೇಆಫ್ ಪಂದ್ಯಗಳಿಗೆ ಮುಂಚಿತವಾಗಿ ತನಗೆ ಅಂತರರಾಷ್ಟ್ರೀಯ ಫುಟ್‌ಬಾಲ್‌ನಿಂದ ನಿರ್ಬಂಧ ಹೇರಿದ್ದನ್ನು ಕ್ರೀಡಾ ನ್ಯಾಯಾಲಯದಲ್ಲಿ ಪ್ರಶ್ನಿಸಲು ರಷ್ಯಾ ಸಿದ್ಧತೆ ನಡೆಸಿದೆ.

## ನಡಿಗೆ ಸ್ಪರ್ಧೆ: ಭಾರತ ಮಹಿಳಾ ತಂಡಕ್ಕೆ ಕಂಚು

ಮಸ್ಕತ್ (ಪಿಟಿಐ): ಭಾರತದ ಭಾವನಾ ಜಾಟ್, ರವೀನಾ ಮತ್ತು ಮುನಿತಾ ಪ್ರಜಾಪತಿ ಅವರನ್ನೊಳಗೊಂಡ ಮಹಿಳಾ ತಂಡವು ವಿಶ್ವ ಅಥ್ಲೆಟಿಕ್ಸ್ ನಡಿಗೆ ಸ್ಪರ್ಧೆಯ 20 ಕಿಲೊ ಮೀಟರ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆಲ್ಲುವುದರೊಂದಿಗೆ ಶುಕ್ರವಾರ ಚಾರಿತ್ರಿಕ ಸಾಧನೆ ಮಾಡಿದೆ.

ವಿಶ್ವ ಚಾಂಪಿಯನ್‌ಷಿಪ್‌ನ ನಡಿಗೆ ಸ್ಪರ್ಧೆಯ ಮಹಿಳಾ ತಂಡ ವಿಭಾಗದಲ್ಲಿ ಭಾರತಕ್ಕೆ ಒಲಿದ ಮೊದಲ ಪದಕ ಇದು. ಚೀನಾ ಮತ್ತು ಗ್ರೀಸ್ ತಂಡಗಳು ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಜಯಿಸಿದವು.ರವೀನಾ ಅವರು 20 ಕಿ.ಮೀ. ಸ್ಪರ್ಧೆಯನ್ನು ಒಂದು ತಾಸು 40 ನಿಮಿಷ 22 ಸೆಕೆಂಡುಗಳಲ್ಲಿ ಮುಗಿಸಿದರು. ಟೋಕಿಯೊ ಒಲಿಂಪಿಯನ್ ಭಾವನಾ ಜಾಟ್ 1 ತಾಸು 43 ನಿಮಿಷ 8 ಸೆ. ಮತ್ತು ಮುನಿತಾ 1 ತಾಸು 45 ನಿ. 3 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಒಂದು ದೇಶದ ಅಥ್ಲೀಟ್‌ಗಳ ಒಟ್ಟಾರೆ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು ತಂಡದ ಪದಕಗಳನ್ನು ನಿರ್ಧರಿಸಲಾಗುತ್ತದೆ.

**ಅಮಿತ್ ಅನರ್ಹ:** 20 ವರ್ಷದೊಳಗಿನ ಪುರುಷರ 10 ಕಿ.ಮೀ. ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮಿತ್ ಖತ್ರಿ ಅವರು ನಾಲ್ಕನೇ ಬಾರಿ ಕೆಂಪು ಕಾರ್ಡ್ ಪಡೆದ ಕಾರಣ ಅನರ್ಹಗೊಳಿಸಲಾಯಿತು.

## ಪಾಕಿಸ್ತಾನದ ಇಮಾಮ್ ಶತಕ

ರಾವಲ್ಪಿಂಡಿ (ಎಎಫ್‌ಪಿ): ಮೂರು ವರ್ಷಗಳ ನಂತರ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದ ಎಡಗೈ ಬ್ಯಾಟರ್ ಇಮಾಮ್ ಉಲ್ ಹಕ್ ಅವರು ಬೌಲರ್‌ಗಳನ್ನು ದಿನವಿಡೀ ಕಾಡಿದರು. ಅವರ ಅಮೋಘ ಶತಕದ ಬಲದಿಂದ ಪಾಕಿಸ್ತಾನ ತಂಡ ಆಸ್ಟ್ರೇಲಿಯಾ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಹೆಜ್ಜೆ ಹಾಕಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ದಿನದಾಟದ ಅಂತ್ಯಕ್ಕೆ 90 ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು 245 ರನ್ ಗಳಿಸಿದೆ. ಇಮಾಮ್ ಉಲ್ ಹಕ್ 132 (271 ಎಸೆತ; 15 ಬೌಂಡರಿ, 2 ಸಿಕ್ಸರ್) ರನ್ ಗಳಿಸಿ ಅಜೇಯರಾಗಿ ಉಳಿದಿದ್ದು ಅರ್ಧಶತಕ ಗಳಿಸಿರುವ ಅಜರ್ ಅಲಿ (64; 165 ಎ, 4 ಎ, 1 ಸಿ) ಕೂಡ ಕ್ರೀಸ್‌ನಲ್ಲಿದ್ದಾರೆ.

**ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ, ಮೊದಲ ಇನಿಂಗ್ಸ್:** 90 ಓವರ್‌ಗಳಲ್ಲಿ 1 ವಿಕೆಟ್‌ಗೆ 245 (ಅಬ್ದುಲ್ ಶಫೀಕ್ 44, ಇಮಾನ್ ಉಲ್ ಹಕ್ ಬ್ಯಾಟಿಂಗ್ 132, ಅಜರ್ ಅಲಿ ಬ್ಯಾಟಿಂಗ್ 64; ನೇಥನ್ ಲಯನ್ 87ಕ್ಕೆ1).

## ಹಾಕಿ: ಪೋಸ್ಟಲ್‌ಗೆ ಮಣಿದ ಸಾಯ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿದ್ದಾಜಿದ್ದಿಯ ಪಂದ್ಯದ ಮೊದಲಾರ್ಧದಲ್ಲೂ ದ್ವಿತೀಯಾರ್ಧದಲ್ಲೂ ಗೋಲು ಗಳಿಸಿದ ಪೋಸ್ಟಲ್ ತಂಡ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಜಯ ಗಳಿಸಿತು.

ಎಫ್‌ಎಂಕೆಎಂಸಿ ಹಾಕಿ ಅರೆನಾದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ತಂಡವನ್ನು ಪೋಸ್ಟಲ್ 2-1ರಲ್ಲಿ ಮಣಿಸಿತು. ರಮೇಶ್ ಎಚ್.ಟಿ ಐದನೇ ನಿಮಿಷದಲ್ಲಿ ಮತ್ತು ಪೂವಣ್ಣ ಐ.ಎ 37ನೇ ನಿಮಿಷದಲ್ಲಿ ಗೋಲು ಗಳಿಸಿದರು. ಸಾಯ್‌ಗಾಗಿ 24ನೇ ನಿಮಿಷದಲ್ಲಿ ಸೂರ್ಯ ಚೆಂಡನ್ನು ಗುರಿ ಸೇರಿಸಿದರು.

ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಆ್ಯಂಡ್ ಸೆಂಟರ್ (ಎಂಇಜಿ) 4-1ರಲ್ಲಿ ಅಕೌಂಟೆಂಟ್ ಜನರಲ್ ಆಫೀಸ್ ಆ್ಯಂಡ್ ರಿಕ್ರಿಯೇಷನ್ ಕ್ಲಬ್ (ಎಜಿಒಆರ್‌ಸಿ) ಎದುರು ಜಯ ಗಳಿಸಿತು. ಎಂಇಜಿ ತಂಡದ ಪರ ದಿಶಾಂತ್ ಎಚ್.ಆರ್ (26ನೇ ನಿಮಿಷ), ದಿಲಾನ್ ಎಂ.ಪಿ (37ನೇ ನಿ), ಸುಬ್ಬಯ್ಯ ಸಿ.ಎ (43ನೇ ನಿ) ಮತ್ತು ಸುನಿಲ್ ಜಿ.ಎ (57ನೇ ನಿ) ಗೋಲು ಗಳಿಸಿದರು. ಸಾತ್ವಿಕ್ (34ನೇ ನಿ) ಎಜಿಒಆರ್‌ಸಿಗಾಗಿ ಏಕೈಕ ಗೋಲು ಗಳಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

# ಸ್ಪಿನ್ ಮಾಂತ್ರಿಕ ಶೇನ್ ವಾರ್ನ್ ನಿರ್ಗಮನ

**ಸಿಡ್ನಿ (ಎಎಫ್‌ಪಿ/ರಾಯಿಟರ್ಸ್):** ತಮ್ಮ ಮೊನಚಾದ ಸ್ಪಿನ್ ಎಸೆತಗಳ ಮೂಲಕ ಬ್ಯಾಟ್ಸ್‌ಮನ್‌ಗಳಿಗೆ ಅಚ್ಚರಿ ಮತ್ತು ಆಘಾತ ಮೂಡಿಸುತ್ತಿದ್ದ ಮೋಡಿಗಾರ, ಆಸ್ಟ್ರೇಲಿಯಾದ ಶೇನ್ ವಾರ್ನ್ (52) ಶುಕ್ರವಾರ ರಾತ್ರಿ ನಿಧನರಾದರು.

‘ಆಸ್ಟ್ರೇಲಿಯಾದ ನಿವೃತ್ತ ಲೆಗ್‌ಸ್ಪಿನ್ನರ್ ಶೇನ್ ಕೀತ್ ವಾರ್ನ್ ಥಾಯ್ಲೆಂಡ್‌ನ ಕೋ ಸೆಮ್ಯೈನಲ್ಲಿ ನಿಧನರಾದರು. ಅವರಿಗೆ ಹೃದಯಾಘಾತವಾಗಿದೆಯೆನ್ನಲಾಗಿದೆ. ತಮ್ಮ ವಿಲ್ಲಾ (ಬಂಗಲೆ) ದಲ್ಲಿ ಅವರಿದ್ದರು. ಶುಕ್ರವಾರ ಸಂಜೆ ಅವರು ನಿಸ್ತೇಜರಾದಾಗ, ವೈದ್ಯಕೀಯ ತಂಡವು ನೀಡಿದ ಚಿಕಿತ್ಸೆಗಳು ಫಲಕಾರಿಯಾಗಲಿಲ್ಲ’ ಎಂದು ವಾರ್ನ್ ಅವರ ಮ್ಯಾನೇಜ್‌ಮೆಂಟ್ ತಂಡವು ತಿಳಿಸಿದೆ.

‘ವಾರ್ನ್ ನಿಧನದ ವಿಷಯದ ಕುರಿತು ಖಾಸಗಿತನ ಕಾಪಾಡಲು ಅವರ ಕುಟುಂಬವು ಮನವಿ ಮಾಡಿದೆ. ಆದ್ದರಿಂದ ಉಳಿದ ವಿಷಯಗಳನ್ನು ನಂತರ ತಿಳಿಸಲಾಗುವುದು’ ಎಂದೂ ಮ್ಯಾನೇಜ್‌ಮೆಂಟ್ ತಿಳಿಸಿದೆ.

## ಲೆಗ್‌ಸ್ಪಿನ್ ಮಾಂತ್ರಿಕ

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಶೇನ್ ವಾರ್ನ್ 15 ವರ್ಷಗಳ ವಿಜೃಂಭಿಸಿದವರು. ಟೆಸ್ಟ್ ಕ್ರಿಕೆಟ್‌ನಲ್ಲಿ 708 ವಿಕೆಟ್‌ಗಳನ್ನು ಗಳಿಸಿದ್ದಾರೆ. ಅವರ ಕಾಲಘಟ್ಟದಲ್ಲಿ ವಿಶ್ವದ ಬೇರೆ ಬೇರೆ ಕ್ರಿಕೆಟ್ ತಂಡಗಳಲ್ಲಿ ಹಲವು ದಿಗ್ಗಜ ಬ್ಯಾಟ್ಸ್‌ಮನ್‌ಗಳು ಆಡುತ್ತಿದ್ದರು.

ಅದರಲ್ಲಿ ಸಚಿನ್ ತೆಂಡೂಲ್ಕರ್, ವಿವಿಎಸ್ ಲಕ್ಷ್ಮಣ್, ರಾಹುಲ್ ದ್ರಾವಿಡ್, ಇಂಗ್ಲೆಂಡ್‌ನ ಅಲಸ್ಟೇರ್ ಕುಕ್, ದಕ್ಷಿಣ ಆಫ್ರಿಕಾ ಜಾಕಸ್ ಕಾಲಿಸ್, ವೆಸ್ಟ್ ಇಂಡೀಸ್‌ನ ಬ್ರಯನ್ ಲಾರಾ, ಶಿವನಾರಾಯಣ ಚಂದ್ರಪಾಲ್, ಶ್ರೀಲಂಕೆಯ ಅರ್ಜುನ ರಣತುಂಗ, ಸನತ್ ಜಯಸೂರ್ಯ, ಅರವಿಂದ ಡಿಸಿಲ್ವಾ ಪ್ರಮುಖರು.

ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಟೆಸ್ಟ್ ವಿಕೆಟ್ ಗಳಿಸಿದವರ ಪಟ್ಟಿಯಲ್ಲಿ ಮುತ್ತಯ್ಯ ಮುರಳೀಧರನ್ (800) ಮೊದಲ ಸ್ಥಾನದಲ್ಲಿದ್ದರೆ, ವಾರ್ನ್ ಎರಡನೇ ಸ್ಥಾನದಲ್ಲಿದ್ದಾರೆ.

**ಶತಮಾನದ ಕ್ರಿಕೆಟಿಗ:** ವಿಶ್ವದ ಐವರು ಕ್ರಿಕೆಟಿಗರನ್ನು ಶತಮಾನದ ಶ್ರೇಷ್ಠ ಆಟಗಾರರು ಎಂದು ವಿಸ್ಡನ್ ಈಚೆಗೆ ಗೌರವಿಸಿದ್ದ ಪಟ್ಟಿಯಲ್ಲಿ ವಾರ್ನ್ ಕೂಡ ಇದ್ದರು. ಡೊನಾಲ್ಡ್ ಬ್ರಾಡ್ಮನ್, ಗ್ಯಾರಿಫೀಲ್ಡ್ ಸೋಬರ್ಸ್, ಜ್ಯಾಕ್ ಹಾಬ್ಸ್ ಮತ್ತು ವಿವ್ ರಿಚರ್ಡ್ಸ್ ಅವರೊಂದಿಗೆ ಶೇನ್ ಈ ಗೌರವ ಹಂಚಿಕೊಂಡಿದ್ದರು.

1999ರಲ್ಲಿ ಆಸ್ಟ್ರೇಲಿಯಾ ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದಾಗ ವಾರ್ನ್ ಕಾಣಿಕೆ ಮಹತ್ವದ್ದಾಗಿತ್ತು.

**ಉದ್ದೀಪನ ಮದ್ದಿನ ನಂಟು:** 2003ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ವಿಶ್ವಕಪ್ ಟೂರ್ನಿ ಸಂದರ್ಭದಲ್ಲಿ ವಾರ್ನ್ ಉದ್ದೀಪನ ಮದ್ದು ಸೇವಿಸಿ ಸಿಕ್ಕಿಬಿದ್ದಿದ್ದರು. ದೇಹತೂಕ ಇಳಿಸಿಕೊಳ್ಳಲು ಡೈರೆಟಿಕ್ಸ್ ಸೇವಿಸಿದ್ದು ಸಾಬೀತಾಗಿತ್ತು. ಆದ್ದರಿಂದ ಅವರನ್ನು ಟೂರ್ನಿಯಿಂದ ಹೊರಹಾಕಲಾಯಿತು.



## ದುಃಸ್ವಪ್ನವಾಗಿ ಕಾಡಿದ್ದ ಸಚಿನ್!

ಭಾರತದ ಸಚಿನ್ ತೆಂಡೂಲ್ಕರ್ ಮತ್ತು ಶೇನ್ ವಾರ್ನ್ ಅವರ ಮುಖಾಮುಖಿಯು ಯಾವಾಗಲೂ ರೋಚಕ ರಸದೌತಣವಾಗಿರುತ್ತಿತ್ತು.

ಆ ಕಾಲಘಟ್ಟದ ಇಬ್ಬರು ಶ್ರೇಷ್ಠ ಆಟಗಾರರಾಗಿದ್ದ ಇಬ್ಬರ ಜಿದ್ದಾಜಿದ್ದಿಯ ಹಲವು ಕಥೆಗಳಿವೆ. ಕೆಲವು ಪಂದ್ಯಗಳಲ್ಲಿ ಸಚಿನ್ ವಿಕೆಟ್ ಪಡೆಯವಲ್ಲಿ ವಾರ್ನ್ ಯಶಸ್ವಿಯಾಗಿದ್ದರು. ಆದರೆ, ಅವರ ಸ್ಪಿನ್ ತಂತ್ರಗಾರಿಕೆಯನ್ನು ಸಮರ್ಥವಾಗಿ ಅರಿತು ಆಡಿದ್ದ ಸಚಿನ್ ಪಾರಮ್ಯ ಸಾಧಿಸಿದ್ದರು. ಸಚಿನ್ ನನಗೆ ಕನಸಿನಲ್ಲಿ ಬರುತ್ತಾರೆ. ನನ್ನ ಎಸೆತಗಳನ್ನು ಬೌಂಡರಿಗಟ್ಟದಂತಾಗುತ್ತದೆಯೆಂದು ವಾರ್ನ್ ಹೇಳಿದ್ದಾಗಿ ಒಮ್ಮೆ ವರದಿಯಾಗಿತ್ತು. ಆದರೆ 2010ರಲ್ಲಿ ‘ಇದು ಸುಳ್ಳು. ನಾನದನ್ನು ತಿಳಿಹಾಸ್ಯವಾಗಿ ಹೇಳಿದ್ದೆ. ಸಚಿನ್ ಶ್ರೇಷ್ಠ ಆಟಗಾರ, ಅವರಿಗೆ ಬೌಲಿಂಗ್ ಮಾಡುವ ಸವಾಲನ್ನು ಆನಂದಿಸಿದ್ದೇನೆ. ಆದರೆ ಅವರೆಂದೂ ನನಗೆ ದುಃಸ್ವಪ್ನವಾಗಿ ಕಾಡಿರಲಿಲ್ಲ’ ಎಂದು ವಾರ್ನ್ ಹೇಳಿದ್ದರು.

ಐಪಿಎಲ್ ಪಂದ್ಯವೊಂದರಲ್ಲಿ ಶೇನ್ ವಾರ್ನ್ (ಎಡ) ಮತ್ತು ಸಚಿನ್ ತೆಂಡೂಲ್ಕರ್ –ಎಎಫ್‌ಪಿ ಚಿತ್ರ

**ಶತಮಾನದ ಎಸೆತ:** 1993ರ ಆ್ಯಷಸ್ ಸರಣಿಯಲ್ಲಿ ಶೇನ್ ವಾರ್ನ್ ಪ್ರಯೋಗಿಸಿದ ಸ್ಪಿನ್‌ಗೆ ಇಂಗ್ಲೆಂಡ್‌ನ ಮೈಕ್ ಗ್ಯಾಟಿಂಗ್ ಔಟಾಗಿದ್ದರು. ಅದನ್ನು ‘ಶತಮಾನದ ಎಸೆತ’ ಎಂದು ಗೌರವಿಸಲಾಗಿದೆ.

ಬಲಗೈ ಬ್ಯಾಟ್ಸ್‌ಮನ್ ಗ್ಯಾಟಿಂಗ್ ಅವರಿಗೆ ಹಾಕಿದ್ದ ಎಸೆತವು ಲೆಗ್‌ಸ್ಟಂಪ್‌ನಿಂದ ಹೊರಗೆ ನೆಲಸ್ಪರ್ಶ ಮಾಡಿ ಪುಟಿದೆದ್ದು ಅನೂಹ್ಯ ರೀತಿಯಲ್ಲಿ ತಿರುವು ಪಡೆದು ಆಫ್‌ಸ್ಟಂಪ್‌ಗೆ ಅಪ್ಪಳಿಸಿತು. ಆ ಕಾಲದ ಶ್ರೇಷ್ಠ ಬ್ಯಾಟರ್ ಗ್ಯಾಟಿಂಗ್ ಅವಾಕ್ಕಾದರು.

**ಐಪಿಎಲ್‌ನಲ್ಲಿ ಸಾಧನೆ:** ಐಪಿಎಲ್‌ನಲ್ಲಿ 2008ರಿಂದ 2011ರವರೆಗೆ ರಾಜಸ್ಥಾನ್ ರಾಯಲ್ಸ್ ತಂಡದಲ್ಲಿ ಆಡಿದ್ದರು. ಅವರ ನಾಯಕತ್ವದಲ್ಲಿ ತಂಡವು ಒಂದು ಬಾರಿ ಚಾಂಪಿಯನ್ ಕೂಡ ಆಗಿತ್ತು. ಆಟದಿಂದ ದೂರ ಸರಿದ ನಂತರವೂ ಐಪಿಎಲ್ ತಂಡಗಳಿಗೆ ಮೆಂಟರ್ ಆಗಿದ್ದರು. ಅಲ್ಲದೇ ಕ್ರಿಕೆಟ್ ವೀಕ್ಷಕ ವಿವರಣೆಗಾರರಾಗಿಯೂ ಕಾರ್ಯನಿರ್ವಹಿಸಿದ್ದರು.

## ದಿಗ್ಗಜ ವಿಕೆಟ್ ಕೀಪರ್ ರಾಡ್ನಿ ಮಾರ್ಷ್ ಅಸ್ತಂಗತ

**ಸಿಡ್ನಿ (ಎಪಿ):** ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ವಿಕೆಟ್‌ಕೀಪರ್ ರಾಡ್ನಿ ಮಾರ್ಷ್ (74) ಶುಕ್ರವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ಆಸ್ಟ್ರೇಲಿಯಾದ ವೇಗಿ ಡೆನಿಸ್ ಲಿಲಿ ಮತ್ತು ಕೀಪರ್ ಮಾರ್ಷ್ ಅವರ ಜೊತೆಯಾಟ ಕ್ರಿಕೆಟ್ ಜಗತ್ತಿನಲ್ಲಿ ಸುಪ್ರಸಿದ್ಧ. ಅವರಿಬ್ಬರೂ ತಂಡದಲ್ಲಿದ್ದ ಸಮಯದಲ್ಲಿ ಸ್ಕೋರ್ ಕಾರ್ಡಿನಲ್ಲಿ ಬಹುತೇಕ ‘ಕಾಟ್ ಮಾರ್ಷ್ ಬೌಲ್ಡ್ ಲಿಲ್ಲಿ’ ಎಂದು ಇರುತ್ತಿದ್ದದ್ದೇ ಹೆಚ್ಚು. ಇದನ್ನು ಕಾಮೆಂಟೇಟರ್‌ಗಳು ಮತ್ತು ಪ್ರೇಕ್ಷಕರು ಸ್ಲೋಗನ್‌ಗಳಾಗಿ ಬಳಸುತ್ತಿದ್ದರು.

1970 ರಿಂದ 1984ರ ಅವಧಿಯಲ್ಲಿ 96 ಟೆಸ್ಟ್‌ಗಳಲ್ಲಿ ಆಡಿದ್ದರು. 355 ಬಲಿಗಳನ್ನು ಪಡೆದಿದ್ದರು. ಅದರಲ್ಲಿ 95 ಲಿಲ್ಲಿ ಬೌಲಿಂಗ್‌ನಲ್ಲಿ ಪಡೆದಿದ್ದು. 92 ಏಕದಿನ ಪಂದ್ಯಗಳಲ್ಲಿಯೂ ಆಡಿದ್ದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ಶತಕ ದಾಖಲಿಸಿದ ಆಸ್ಟ್ರೇಲಿಯಾದ ಮೊದಲ ವಿಕೆಟ್‌ಕೀಪರ್ –ಬ್ಯಾಟರ್ ಹೆಗ್ಗಳಿಕೆಯೂ ಅವರದ್ದಾಗಿದೆ. ನಿವೃತ್ತಿಯ ನಂತರ ಅಕಾಡೆಮಿಯಲ್ಲಿ ಹಲವು ಆಟಗಾರರಿಗೆ ತರಬೇತಿ ನೀಡಿದ್ದರು.

2014ರಲ್ಲಿ ಆಸ್ಟ್ರೇಲಿಯಾದ ಆಯ್ಕೆ ಸಮಿತಿ ಮುಖ್ಯಸ್ಥರಾಗಿದ್ದರು. 1985ರಲ್ಲಿ ಸ್ಪೋರ್ಟ್ಸ್ ಆಸ್ಟ್ರೇಲಿಯಾದ ಹಾಲ್ ಆಫ್ ಫೇಮ್ ಗೌರವ ಗಳಿಸಿದ್ದರು. ಕಳೆದ ಕೆಲವು ದಿನಗಳಿಂದ ಅವರು ಅನಾರೋಗ್ಯಕ್ಕೆ ತುತ್ತಾಗಿದ್ದರು.

### ಅಂತರರಾಷ್ಟ್ರೀಯ ಕ್ರಿಕೆಟ್ ಸಾಧನೆ

| ಮಾದರಿ | ಪಂದ್ಯ | ಇನಿಂಗ್ಸ್ | ವಿಕೆಟ್ | ಶ್ರೇಷ್ಠ (ಇನಿಂಗ್ಸ್) | ಎಕಾನಮಿ | 5ವಿಕೆಟ್ |
|---|---|---|---|---|---|---|
| ಟೆಸ್ಟ್ | 145 | 273 | 708 | 71ಕ್ಕೆ8 | 2.65 | 37 |
| ಏಕದಿನ | 194 | 191 | 293 | 33ಕ್ಕೆ5 | 4.25 | 1 |
| ಟಿ20 | 73 | 32 | 70 | 21ಕ್ಕೆ4 | 7.27 | |

### ಪದಾರ್ಪಣೆ

| | | | |
|---|---|---|---|
| ಟೆಸ್ಟ್ | 2 ಜನವರಿ 1992 | ಭಾರತದ ವಿರುದ್ಧ | ಸಿಡ್ನಿ |
| ಏಕದಿನ | 24 ಮಾರ್ಚ್ 1993 | ನ್ಯೂಜಿಲೆಂಡ್ ವಿರುದ್ಧ | ಬೇಸಿನ್ ರಿಸರ್ವ್ |
| ಐಪಿಎಲ್ | 19 ಎಪ್ರಿಲ್ 2008 | ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ | ನವದೆಹಲಿ |

### ಕೊನೆ ಪಂದ್ಯ

| | | | |
|---|---|---|---|
| ಟೆಸ್ಟ್ | 2 ಜನವರಿ 2007 | ಇಂಗ್ಲೆಂಡ್ ವಿರುದ್ಧ | ಸಿಡ್ನಿ |
| ಏಕದಿನ | 10 ಜನವರಿ 2005 | ಏಷ್ಯಾ ಇಲೆವನ್ ವಿರುದ್ಧ | ಮೆಲ್ಬರ್ನ್ |
| ಐಪಿಎಲ್ | 20 ಮಾರ್ಚ್ 2011 | ಮುಂಬೈ ಇಂಡಿಯನ್ಸ್ ವಿರುದ್ಧ | ಮುಂಬೈ |

### ಆಡಿದ ತಂಡಗಳು

ಆಸ್ಟ್ರೇಲಿಯಾ, ಐಸಿಸಿ ವಿಶ್ವ ಇಲೆವನ್, ರಾಜಸ್ಥಾನ್ ರಾಯಲ್ಸ್, ವಿಕ್ಟೋರಿಯಾ, ಮೆಲ್ಬರ್ನ್ ಸ್ಟಾರ್ಸ್, ರೆಸ್ಟ್ ಆಫ್ ವಿಶ್ವ ಇಲೆವನ್, ಆಸ್ಟ್ರೇಲಿಯನ್ ಲೆಜೆಂಡ್ಸ್ ಇಲೆವನ್, ವಾರ್ನ್ ವಾರಿಯರ್ಸ್.

### ಐಪಿಎಲ್ ಸಾಧನೆ

| | |
|---|---|
| ಪಂದ್ಯ | 55 |
| ಇನಿಂಗ್ಸ್ | 54 |
| ವಿಕೆಟ್ | 57 |
| ಶ್ರೇಷ್ಠ | 21ಕ್ಕೆ4 |

ರಾಡ್ನಿ ಮಾರ್ಷ್ ಮತ್ತು ಶೇನ್ ವಾರ್ನ್

## ವಾರ್ನ್ ಮೊದಲ ವಿಕೆಟ್ ರವಿಶಾಸ್ತ್ರಿ

ಶೇನ್ ವಾರ್ನ್ ತಾವು ಭಾರತದ ವಿರುದ್ಧ ಪದಾರ್ಪಣೆ ಪಂದ್ಯದಲ್ಲಿ ದುಬಾರಿ ಬೌಲರ್ ಎನಿಸಿದ್ದರು. ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ 1992ರಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಭಾರತದ ಆರಂಭಿಕ ಬ್ಯಾಟರ್ ರವಿಶಾಸ್ತ್ರಿಯ ದ್ವಿಶತಕ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ಸಚಿನ್ ತೆಂಡೂಲ್ಕರ್ ಶತಕದ ಭರಾಟೆಯಲ್ಲಿ ವಾರ್ನ್ ಬಸವಳಿದಿದ್ದರು. 150 ರನ್‌ಗಳಿಗೆ ಒಂದು ವಿಕೆಟ್ ಗಳಿಸಿದ್ದರು. ಅವರ ಟೆಸ್ಟ್ ಜೀವನದ ಮೊದಲ ವಿಕೆಟ್ ರವಿಶಾಸ್ತ್ರಿಯಾಗಿದ್ದರು.

## ರಾಡ್ನಿ ಮಾರ್ಷ್‌ಗೆ ವಾರ್ನ್ ಸಂತಾಪ

ಶುಕ್ರವಾರ ಬೆಳಗಿನ ಜಾವ ನಿಧನರಾದ ಆಸ್ಟ್ರೇಲಿಯಾದ ರಾಡ್ನಿ ಮಾರ್ಷ್ ಅವರ ನಿಧನಕ್ಕೆ ಶೇನ್ ವಾರ್ನ್ ಸಂತಾಪ ಸೂಚಿಸಿ ಟ್ವೀಟ್ ಮಾಡಿದ್ದರು. ನನ್ನ ಗೆಳೆಯ ಮಾರ್ಷ್ ಮತ್ತು ಕ್ರಿಕೆಟ್ ಜಗತ್ತಿನ ದಿಗ್ಗಜ ವಿಕೆಟ್‌ಕೀಪರ್ ಮಾರ್ಷ್ ಅವರನ್ನು ಕಳೆದುಕೊಂಡಿದ್ದೇವೆ. ಹೋಗಿ ಬಾ ಗೆಳೆಯ ಎಂದು ವಾರ್ನ್ ಟ್ವೀಟ್ ಮಾಡಿದ್ದರು. ಆದರೆ ರಾತ್ರಿಯಷ್ಟೊತ್ತಿಗೆ ವಾರ್ನ್ ನಿಧನದ ಸುದ್ದಿ ಕ್ರಿಕೆಟ್ ಲೋಕಕ್ಕೆ ಬಂದೆರಗಿತು.

ಆಘಾತ, ತಲ್ಲಣ ಮತ್ತು ಶೋಕ.. ನಿಮ್ಮ ಅಗಲಿಕೆ ಸಹಿಸಲಾಗುತ್ತಿಲ್ಲ. ನೀವಿದ್ದ ಕಡೆ ಉಲ್ಲಾಸ ತುಂಬಿರುತ್ತಿತ್ತು. ಭಾರತ ಮತ್ತು ಭಾರತೀಯರಿಗಾಗಿ ನೀವು ವಿಶೇಷ ಪ್ರೀತಿ ಹೊಂದಿದ್ದಿರಿ. ಅದೇ ರೀತಿ ಭಾರತವು ನಿಮ್ಮನ್ನು ವಿಶೇಷ ಗೌರವದಿಂದ ಕಂಡಿದೆ.

**ಸಚಿನ್ ತೆಂಡೂಲ್ಕರ್**
ಭಾರತ ತಂಡದ ಮಾಜಿ ಕ್ರಿಕೆಟಿಗ

ನನ್ನ ಕ್ರಿಕೆಟ್ ಜೀವನದ ಮಹತ್ವದ ಅಧ್ಯಾಯ ವಾರ್ನ್. ಅವರ ಸ್ಪಿನ್ ಕಲೆಗಾರಿಕೆಯನ್ನು ಅತ್ಯಂತ ಸಮೀಪದಿಂದ ಕಣ್ತುಂಬಿಕೊಂಡ ಪುಣ್ಯವಂತ ನಾನು. ಆ ಮಾಂತ್ರಿಕಸದೃಶ ಎಸೆತಗಳಿಗೆ ಕೀಪಿಂಗ್ ಮಾಡಿದ್ದು ಈಗಲೂ ಪುಳಕ ಮೂಡಿಸುತ್ತದೆ.

**ಆ್ಯಡಂ ಗಿಲ್‌ಕ್ರಿಸ್ಟ್**
ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ

ಜೀವನ ಅನಿರೀಕ್ಷಿತ ಮತ್ತು ಚಂಚಲ. ನಮ್ಮ ಕ್ರೀಡೆಯ ದಿಗ್ಗಜನ ಅಗಲಿಕೆ ನಂಬಲು ಸಾಧ್ಯವೇ ಆಗುತ್ತಿಲ್ಲ. ಕ್ರೀಡಾಂಗಣದ ಹೊರಗೂ ಚೆನ್ನಾಗಿ ಪರಿಚಿತರಾಗಿದ್ದ ವ್ಯಕ್ತಿ. ಸಾರ್ವಕಾಲಿಕ ಶ್ರೇಷ್ಠ ಆಟಗಾರ. ಕ್ರಿಕೆಟ್ ಚೆಂಡಿಗೆ ಅದ್ಭುತ ತಿರುವು ನೀಡಿದ ಕಲಾವಿದ

**ವಿರಾಟ್ ಕೊಹ್ಲಿ**
ಭಾರತ ತಂಡದ ಆಟಗಾರ

## ಪ್ರಶಸ್ತಿಗೆ ಕರ್ನಾಟಕ, ಒಡಿಶಾ ಪೈಪೋಟಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಮಹಿಳೆಯರ ತಂಡ ಇಂಡಸ್‌ಇಂಡ್ ಬ್ಯಾಂಕ್ ಅಂಧ ಮಹಿಳೆಯರ ರಾಷ್ಟ್ರೀಯ ಕ್ರಿಕೆಟ್ ಟೂರ್ನಿಯಲ್ಲಿ ಫೈನಲ್‌ಗೆ ಪ್ರವೇಶಿಸಿದೆ. ಶನಿವಾರ ನಡೆಯುವ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಒಡಿಶಾ ತಂಡಕ್ಕೆ ಮುಖಾಮುಖಿಯಾಗಲಿದೆ.

ಶುಕ್ರವಾರ ಆಂಧ್ರ ತಂಡದ ವಿರುದ್ಧ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ 62 ರನ್‌ಗಳಿಂದ ಗೆದ್ದಿತು.

ಬೆಂಗಳೂರಿನ ಅಲ್ಟ್ರಾಯರ್ ಕ್ರಿಕೆಟ್ ಅಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡು,15 ಓವರ್‌ಗಳಲ್ಲಿ 7 ವಿಕೆಟ್‌ಗೆ 161 ರನ್ ಗಳಿಸಿತು. ಗುರಿ ಬೆನ್ನತ್ತಿದ ಆಂಧ್ರಪ್ರದೇಶ ತಂಡ 15 ಓವರ್‌ಗಳು ಮುಕ್ತಾಯಗೊಂಡಾಗ 2 ವಿಕೆಟ್ ನಷ್ಟಕ್ಕೆ 99 ರನ್ ಮಾತ್ರ ಗಳಿಸಲು ಸಾಧ್ಯವಾಯಿತು. ಕರ್ನಾಟಕದ ಜಯದಲ್ಲಿ ಗಂಗಾ (41 ರನ್), ವರ್ಷಾ ಯು. (32) ಮತ್ತು ಸುನೀತಾ (44 ರನ್) ಮಿಂಚಿದರು. ಆಂಧ್ರ ಪರ ರವಣಿ (ಔಟಾಗದೆ 30) ಮತ್ತು ಕೆ. ಲಲಿತಾ (28) ಆಟ ವ್ಯರ್ಥವಾಯಿತು.

ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಒಡಿಶಾ 15 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 187 ರನ್ ಬಾರಿಸಿತು. ದೊಡ್ಡ ಮೊತ್ತದ ಗುರಿ ಬೆನ್ನಟ್ಟಿದ ದೆಹಲಿ 11.2 ಓವರ್‌ಗಳಲ್ಲಿ 58 ರನ್‌ಗಳಿಗೆ ಆಲ್‌ಔಟ್ ಆಗಿ ಸೋಲೊಪ್ಪಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ : 15 ಓವರ್‌ಗಳಲ್ಲಿ 7 ವಿಕೆಟ್‌ಗೆ 161 (ಗಂಗಾ 41, ವರ್ಷಾ ಯು. 32, ಸುನಿತಾ ಔಟಾಗದೆ 44; ಲೊಲ್ಲ ವಂದನಾ 24ಕ್ಕೆ2). ಆಂಧ್ರ: 15 ಓವರ್‌ಗಳಲ್ಲಿ 2 ವಿಕೆಟ್‌ಗೆ 99 (ರವಣಿ ಔಟಾಗದೆ 30, ಕೆ. ಲಲಿತಾ 28; ವರ್ಷಾ ಯು . 19ಕ್ಕೆ1). ಫಲಿತಾಂಶ: ಕರ್ನಾಟಕ ತಂಡಕ್ಕೆ 62 ರನ್‌ಗಳ ಜಯ; ಒಡಿಶಾ: 15 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 187 (ರಚನಾ ಜನಾ ಔಟಾಗದೆ 82, ಝಿಲಿ ಬಿರುಹಾ ಔಟಾಗದೆ 93). ದೆಹಲಿ: 15 ಓವರ್‌ಗಳಲ್ಲಿ 58 (ಗುಲ್ಶನ್ 12; ಪ್ರಬತಿ ಆರ್ ಡಿ 21ಕ್ಕೆ1). ಫಲಿತಾಂಶ: ಒಡಿಶಾ ತಂಡಕ್ಕೆ 129 ರನ್‌ಗಳ ಜಯ.

ಪ್ರಶಸ್ತಿಯೊಂದಿಗೆ ಅರ್ಜುನ್ ಎರಿಗೈಸಿ– ಟ್ವಿಟರ್ ಚಿತ್ರ

## ಚೆಸ್: ಅರ್ಜುನ್ ರಾಷ್ಟ್ರೀಯ ಚಾಂಪಿಯನ್

**ಕಾನ್ಪುರ (ಪಿಟಿಐ):** ಗ್ರ್ಯಾಂಡ್‌ಮಾಸ್ಟರ್, ತೆಲಂಗಾಣದ ಅರ್ಜುನ್ ಎರಿಗೈಸಿ 58ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಪ್ರಶಸ್ತಿ ಜಯಿಸಿದ್ದಾರೆ.

ಟೈಬ್ರೇಕ್‌ನಲ್ಲಿ ತಮಿಳುನಾಡಿನ ಡಿ.ಗುಕೇಶ್ ಮತ್ತು ಪಿ. ಇನಿಯನ್ ಅವರನ್ನು ಅರ್ಜುನ್ ಹಿಂದಿಕ್ಕಿದರು. ಮೂವರು ಆಟಗಾರರು ತಲಾ 8.5 ಪಾಯಿಂಟ್ಸ್ ಕಲೆಹಾಕಿದ್ದರು. ಹೀಗಾಗಿ ಟೈಬ್ರೇಕ್ ಮೊರೆಹೋಗಲಾಗಿತ್ತು.

18 ವರ್ಷದ ಅರ್ಜುನ್‌ಗೆ ಇದು ಚೊಚ್ಚಲ ರಾಷ್ಟ್ರೀಯ ಸೀನಿಯರ್ ಕಿರೀಟ. 11 ಸುತ್ತುಗಳಲ್ಲಿ ಅವರು ಅಜೇಯರಾಗುಳಿದರು. ಗುಕೇಶ್ ಎರಡು ಮತ್ತು ಇನಿಯನ್ ಮೂರನೇ ಸ್ಥಾನ ಗಳಿಸಿದರು. ತಮಿಳುನಾಡಿದ ಅರವಿಂದ್ ಚಿದಂಬರಮ್ ನಾಲ್ಕನೇ ಸ್ಥಾನ ಪಡೆದರು.

ವಿಶೇಷ ಕ್ಯಾಪ್ ಸ್ವೀಕರಿಸಿದ ವಿರಾಟ್ ಕೊಹ್ಲಿ ಅವರು ಪತ್ನಿ ಅನುಷ್ಕಾ ಶರ್ಮಾ ಅವರೊಂದಿಗೆ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

## ಕೊಹ್ಲಿಗೆ 8 ಸಾವಿರ ರನ್

**ಮೊಹಾಲಿ (ಪಿಟಿಐ):** ಭಾರತ ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಅವರು ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ನಲ್ಲಿ 8 ಸಾವಿರ ರನ್ ಪೂರ್ಣಗೊಳಿಸಿದ ಬ್ಯಾಟರ್‌ಗಳ ಸಾಲಿಗೆ ಸೇರಿಕೊಂಡರು. ಪಂಜಾಬ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶ್ರೀಲಂಕಾ ವಿರುದ್ಧ ಶುಕ್ರವಾರ ಆರಂಭವಾದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 45 ರನ್ ಗಳಿಸುವ ಮೂಲಕ ಕೊಹ್ಲಿ ಈ ಸಾಧನೆ ಮಾಡಿದರು.

ಇದರೊಂದಿಗೆ ದೀರ್ಘ ಮಾದರಿಯ ಕ್ರಿಕೆಟ್‌ನಲ್ಲಿ 8 ಸಾವಿರ ರನ್ ಪೂರೈಸಿದ ಭಾರತದ ಆರನೇ ಮತ್ತು ಒಟ್ಟಾರೆ 33ನೇ ಬ್ಯಾಟರ್ ಎನಿಸಿದರು. ಸದ್ಯ ಅವರು 100 ಪಂದ್ಯಗಳ 169 ಇನಿಂಗ್ಸ್‌ಗಳಿಂದ ಒಟ್ಟು 8,007 ರನ್ ಗಳಿಸಿದ್ದಾರೆ.

ದಿಗ್ಗಜ ಆಟಗಾರರಾದ ಸಚಿನ್ ತೆಂಡೂಲ್ಕರ್ (15,921), ರಾಹುಲ್ ದ್ರಾವಿಡ್ (13,265), ಸುನಿಲ್ ಗವಾಸ್ಕರ್ (10,122), ವಿವಿಎಸ್ ಲಕ್ಷ್ಮಣ್ (8,781) ಮತ್ತು ವೀರೇಂದ್ರ ಸೆಹ್ವಾಗ್ (8,503) ಭಾರತ ಪರ ಎಂಟು ಸಾವಿರಕ್ಕಿಂತ ಹೆಚ್ಚು ರನ್ ಪೂರೈಸಿರುವ ಇನ್ನುಳಿದ ಬ್ಯಾಟರ್‌ಗಳು.

ವಿಶೇಷ ಕ್ಯಾಪ್ ಗೌರವ: ಟೆಸ್ಟ್ ಪಂದ್ಯಗಳ ‘ಶತಕ’ ಗಳಿಸಿದ ನೆನಪಿಗಾಗಿ ವಿರಾಟ್ ಕೊಹ್ಲಿ ಅವರಿಗೆ ಕೋಚ್ ರಾಹುಲ್ ದ್ರಾವಿಡ್ ವಿಶೇಷ ಕ್ಯಾಪ್ ನೀಡಿ ಗೌರವಿಸಿದರು. ಪತ್ನಿ ಅನುಷ್ಕಾ ಶರ್ಮಾ ಅವರೊಂದಿಗೆ ವಿರಾಟ್ ಈ ಗೌರವ ಸ್ವೀಕರಿಸಿದರು. ಈ ವೇಳೆ ಬಾಲ್ಕನಿಯಲ್ಲಿದ್ದ ಭಾರತ ನಿಯಂತ್ರಣ ಮಂಡಳಿ ಅಧ್ಯಕ್ಷ (ಬಿಸಿಸಿಐ) ಸೌರವ್ ಗಂಗೂಲಿ ಸೇರಿದಂತೆ ಪ್ರಮುಖ ಪದಾಧಿಕಾರಿಗಳು ಚಪ್ಪಾಳೆ ಮೂಲಕ ಕೊಹ್ಲಿಯನ್ನು ಅಭಿನಂದಿಸಿದರು.

### ಮೊಹಾಲಿ ಟೆಸ್ಟ್; ಮೊದಲ ದಿನವೇ ದೊಡ್ಡ ಮೊತ್ತ ಗಳಿಸಿದ ಭಾರತ ತಂಡ

# ರಿಷಭ್ ಪಂತ್ ಆರ್ಭಟಕ್ಕೆ ಲಂಕಾ ಸುಸ್ತು

**ಮೊಹಾಲಿ:** ವಿಕೆಟ್‌ಕೀಪರ್ –ಬ್ಯಾಟರ್ ರಿಷಭ್ ಪಂತ್ ಕೇವಲ ನಾಲ್ಕು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು. ಆದರೆ, ಶ್ರೀಲಂಕಾ ಎದುರು ಆರಂಭವಾದ ಟೆಸ್ಟ್ ಪಂದ್ಯದ ಮೊದಲ ದಿನವೇ ಭಾರತವು ದೊಡ್ಡ ಮೊತ್ತ ಗಳಿಸಲು ಕಾರಣರಾದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡವು 85 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 357 ರನ್ ಗಳಿಸಿತು. ಪಂಜಾಬ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶುಕ್ರವಾರ ಬೆಳಗಿನ ಅವಧಿಯಲ್ಲಿ ಆರಂಭಿಕ ಜೋಡಿ ಮಯಂಕ್ ಅಗರವಾಲ್, ರೋಹಿತ್ ಶರ್ಮಾ, ಹನುಮವಿಹಾರಿ ಮತ್ತು 100ನೇ ಟೆಸ್ಟ್ ಆಡುತ್ತಿರುವ ವಿರಾಟ್ ಕೊಹ್ಲಿ ಹಾಕಿದ ಅಡಿಪಾಯದ ಮೇಲೆ ರಿಷಭ್ ರನ್‌ಸೌಧ ನಿರ್ಮಿಸಿದರು.

ಎಡಗೈ ಬ್ಯಾಟರ್ ರಿಷಭ್ ಕ್ರೀಸ್‌ನಲ್ಲಿದ್ದಷ್ಟು ಹೊತ್ತು ರನ್‌ಗಳನ್ನು ಸೂರೆ ಮಾಡಿದರು. 97 ಎಸೆತಗಳಲ್ಲಿ 96 ರನ್ ಗಳಿಸಿದರು. ಅದರಲ್ಲಿ ಒಂಬತ್ತು ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಸಿಡಿಸಿದರು.

ಕೊಹ್ಲಿ (45 ರನ್) ಔಟಾದ ನಂತರ ಕ್ರೀಸ್‌ಗೆ ಬಂದ ರಿಷಭ್ ಬೌಲರ್‌ಗಳನ್ನು ದಂಡಿಸಲು ಆರಂಭಿಸಿದರು. ಆಗ ತಂಡವು 175 ರನ್‌ಗಳಿಗೆ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಸಾಧಾರಣ ಮೊತ್ತಕ್ಕೆ ಕುಸಿಯುವ ಆತಂಕ ಎದುರಾಗಿತ್ತು. ಆದರೆ, 24 ವರ್ಷದ ರಿಷಭ್ ಅವರ ಆತ್ಮವಿಶ್ವಾಸದ ಮುಂದೆ ಬೌಲರ್‌ಗಳ ಆಟ ನಡೆಯಲಿಲ್ಲ.

ಅಲ್ಲದೇ ಪರಿಪಕ್ವ ಮತ್ತು ತಾಳ್ಮೆಯನ್ನು ಮೇಳೈಸಿದ್ದ ಅವರ ಆಟದಿಂದಾಗಿ ರನ್‌ಗಳು ಸರಾಗವಾಗಿ ಹರಿದುಬಂದವು. ಚುರುಕಾಗಿ ಒಂಟಿ ರನ್‌ಗಳನ್ನು ಕದ್ದ ಅವರು, ಬೌಂಡರಿ ಬಾರಿಸುವಲ್ಲಿಯೂ ಹಿಂಜರಿಯಲಿಲ್ಲ. ರಕ್ಷಣಾತ್ಮಕ ಆಟಕ್ಕೆ ಅಂಟಿಕೊಳ್ಳದೇ ಚೆಂಡು ಇರುವುದೇ ದಂಡಿಸಲು ಎಂಬಂತೆ ಆಡಿದರು. 73 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಅವರು ತಮ್ಮ ಆಟದ ವೇಗವನ್ನು ಮತ್ತಷ್ಟು ಚುರುಕುಗೊಳಿಸಿದರು. ಲಂಕೆಯ ಸ್ಪಿನ್ನರ್‌ಗಳಾದ ಲಸಿತ್ ಎಂಬುಲದೆನಿಯಾ ಮತ್ತು ಧನಂಜಯ ಡಿಸಿಲ್ವಾ ಅವರನ್ನು ಮನಬಂದಂತೆ ದಂಡಿಸಿದರು. ಎಂಬುಲದಿನಿಯಾ ಹಾಕಿದ 76ನೇ ಓವರ್‌ನಲ್ಲಿ ರಿಷಭ್ ಎರಡು ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನು ಸಿಡಿಸಿದರು. ಅದರ ನಂತರ ಆಫ್‌ಸ್ಪಿನ್ನರ್ ಡಿಸಿಲ್ವಾ ಓವರ್‌ನಲ್ಲಿ ಒಂದು ಬೌಂಡರಿ ಮತ್ತು ಸಿಕ್ಸರ್ ಬಾರಿಸಿದರು. ಆದರೆ ಚಹಾ ವಿರಾಮದ ನಂತರ ಲಕ್ಮಲ್ ಬೌಲಿಂಗ್‌ನಲ್ಲಿ ರಿಷಭ್‌ಗೆ ಅದೃಷ್ಟ ಕೈಕೊಟ್ಟಿತು. ಶತಕದಂಚಿನಲ್ಲಿ ಔಟಾದರು.

**ವಿಹಾರಿ ಅರ್ಧಶತಕ: ವಿರಾಟ್ 45:** ಭಾರತ ತಂಡದಲ್ಲಿ ನಿರೀಕ್ಷೆಯಂತೆ ರೋಹಿತ್ ಮತ್ತು ಮಯಂಕ್ ಇನಿಂಗ್ಸ್ ಆರಂಭಿಸಿದರು. ಆದರೆ, ಈ ಪಂದ್ಯದಲ್ಲಿ ಶುಭಮನ್ ಗಿಲ್ ಅವರನ್ನು ಕಣಕ್ಕಿಳಿಸಲಿಲ್ಲ. ಆದರೆ, ಹನುಮವಿಹಾರಿ ಅವರನ್ನು ಮೂರನೇ ಕ್ರಮಾಂಕದಲ್ಲಿ ಆಡಿಸಿದ್ದು ಫಲ ನೀಡಿತು. ಅವರು 128 ಎಸೆತಗಳಲ್ಲಿ 58 ರನ್ ಗಳಿಸಿದರು.

100ನೇ ಟೆಸ್ಟ್ ಆಡಿದ ವಿರಾಟ್ ಕೊಹ್ಲಿ ಕೂಡ ಚೆಂದದ ಬ್ಯಾಟಿಂಗ್ ಮಾಡಿದರು. ಆದರೆ, 45 ರನ್ ಗಳಿಸಿದ್ದ ಅವರನ್ನು ಎಂಬುಲದೆನಿಯಾ ಕ್ಲೀನ್‌ಬೌಲ್ಡ್ ಮಾಡಿದರು. ವಿರಾಟ್ ನಿರಾಶೆಯಿಂದ ಪೆವಿಲಿಯನ್ ಕಡೆಗೆ ಹೆಜ್ಜೆ ಹಾಕಿದರು.

ರಿಷಭ್ ಪಂತ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ರವೀಂದ್ರ ಜಡೇಜ ಅವರ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

### ಸ್ಕೋರ್ ಕಾರ್ಡ್

**ಭಾರತ, ಮೊದಲ ಇನಿಂಗ್ಸ್ 6ಕ್ಕೆ 357 (85 ಓವರ್)**

ಮಯಂಕ್ ಎಲ್‌ಬಿಡಬ್ಲ್ಯು ಬಿ ಎಂಬುಲ್ದೇನಿಯಾ 33 (49ಎ, 4X5), ರೋಹಿತ್ ಸಿ ಲಕ್ಮಲ್ ಬಿ ಕುಮಾರ 29 (28ಎ, 4X6), ಹನುಮ ಬಿ ಫರ್ನಾಂಡೊ 58 (128ಎ, 4X5), ವಿರಾಟ್ ಬಿ ಎಂಬುಲ್ದೇನಿಯಾ 45 (76ಎ, 4X5), ರಿಷಭ್ ಬಿ ಲಕ್ಮಲ್ 96 (97ಎ, 4X9, 6X4), ಶ್ರೇಯಸ್ ಎಲ್‌ಬಿಡಬ್ಲ್ಯು ಬಿ ಡಿಸಿಲ್ವಾ 27 (48ಎ, 4X3), ಜಡೇಜ ಬ್ಯಾಟಿಂಗ್ 45 (82ಎ, 4X5), ಅಶ್ವಿನ್ ಬ್ಯಾಟಿಂಗ್ 10 (11ಎ, 4X2)

**ಇತರೆ** (ಲೆಗ್‌ಬೈ 5, ನೋಬಾಲ್ 9) 14

**ವಿಕೆಟ್ ಪತನ:** 1-52 (ರೋಹಿತ್ ಶರ್ಮಾ, 9.5), 2-80 (ಮಯಂಕ್ ಅಗರವಾಲ್, 18.3), 3-170 (ವಿರಾಟ್ ಕೊಹ್ಲಿ, 43.3), 4-175 (ಹನುಮ ವಿಹಾರಿ, 46.3), 5-228 (ಶ್ರೇಯಸ್ ಅಯ್ಯರ್, 61.1), 6-332 (ರಿಷಭ್ ಪಂತ್, 80.5)

**ಬೌಲಿಂಗ್:** ಸುರಂಗ ಲಕ್ಮಲ್ 16–1–63–1, ವಿಶ್ವ ಫರ್ನಾಂಡೊ 16–1–69–1, ಲಹಿರು ಕುಮಾರ 10.5–1–52–1, ಲಸಿತ್ ಎಂಬುಲ್ದೇನಿಯಾ 28–2–107–2, ಧನಂಜಯ್ ಡಿಸಿಲ್ವಾ 11–1–47–1, ಚರಿತ ಅಸಲಂಕ 3.1–0–14–0

### ವಾರಾಂತ್ಯದ ರೇಸ್

**ಮಲ್ಟಿಫೆಸೆಟೆಡ್ ಮತ್ತು ಸ್ಪೀಡ್‌ಸ್ಟರ್ ಗೆಲ್ಲುವ ನಿರೀಕ್ಷೆ**

2021-22ನೇ ಸಾಲಿನ ಟರ್ಫ್ ಇನ್ವಿಟೇಷನ್ ಕಪ್ ವಾರಾಂತ್ಯದ ರೇಸ್‌ಗಳು ಶನಿವಾರ ಚೆನ್ನೈನಲ್ಲಿ ಪ್ರಾರಂಭವಾಗಲಿದ್ದು ಜವಾರೇ ಲೂನಾವಾಲ ಸ್ಪ್ರಿಂಟರ್ಸ್ ಕಪ್ ಮತ್ತು ಫಾರ್ಮ್‌ಫೀಲ್ಡ್ ಸ್ಟೇಯರ್ಸ್ ಕಪ್ ಮೊದಲ ದಿನದ ಪ್ರಧಾನ ಆಕರ್ಷಣೆಯಾಗಿವೆ. ಮಲ್ಟಿಫೆಸೆಟೆಡ್ ಮತ್ತು ಸ್ಪೀಡ್‌ಸ್ಟರ್ ಕ್ರಮವಾಗಿ ಈ ರೇಸ್‌ಗಳನ್ನು ಗೆಲ್ಲುವ ನಿರೀಕ್ಷೆಯಿದ್ದು ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡತಿದೆ:

**1ನೇ ರೇಸ್:** ಮ್ಯಾಜಿಕ್ ಸರ್ಕಲ್ 1, ಶಾನೇ 7, ಡೆವಿಲ್ಸ್ ಮ್ಯಾಜಿಕ್ 6
**2ನೇ ರೇಸ್:** ಡೌಗ್ಲಾಸ್ 2, ಬ್ಲಾಸ್ಟ್ ಇನ್ ಕ್ಲಾಸ್ 8, ಏಂಜೆಲ್ ಲೈಟ್ 5
**3ನೇ ರೇಸ್:** ಬ್ಲ್ಯಾಕ್ ಕಾಫಿ 2, ಅಬ್ಸಿಡಿಯನ್ 4, ದಿ ಇನ್‌ಹೆರಿಟರ್ 13
**4ನೇ ರೇಸ್:** ಪ್ರಿನ್ಸೆಸ್ ಗ್ಲೋರಿಯಾ 3, ಲಾರ್ಡ್ ಫ್ರಾಂಕೆಲ್ 12, ವೆಲ್ಲಿಂಗ್ಟನ್ 6
**5ನೇ ರೇಸ್:** ನೈಟ್ ಇನ್ ಹೂವ್ಸ್ 8, ಎಲೆಕ್ಟ್ರಾ 2, ವಿಕ್ಟರಿ ಪರೇಡ್ 1
**6ನೇ ರೇಸ್:** ಮಲ್ಟಿಫೆಸೆಟೆಡ್ 7, ಕಾರ್ಫೆ ಕ್ಯಾಸ್ಲ್ 3, ಎನಿಗ್ಮಾ 8
**7ನೇ ರೇಸ್:** ಸ್ಪೀಡ್‌ಸ್ಟರ್ 10, ಥಿಯಾನ್ 8, ಮೈ ಒಪಿನಿಯನ್ 4
**8ನೇ ರೇಸ್:** ಟಾಪ್ ಡ್ಯಾನ್ಸರ್ 4, ಕೀ ಟು ದಿ ಪಾಯಿಂಟ್ 1, ಗ್ಯಾಂಗ್‌ಸ್ಟರ್ 10

**ಉತ್ತಮ ಬೆಟ್: ಡೌಗ್ಲಾಸ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ | 3ನೇ ಟ್ರಿಬಲ್ |
|---|---|---|---|
| 4,5,6,7,8 | 1,2,3 | 4,5,6 | 6,7,8 |

# ಹೆಯಲಿ ಶತಕ: ವೆಸ್ಟ್ ಇಂಡೀಸ್ ಶುಭಾರಂಭ

### ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ: ನ್ಯೂಜಿಲೆಂಡ್‌ಗೆ ನಿರಾಸೆ

**ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಎಎಫ್‌ಪಿ):** ಅಬ್ಬರದ ಶತಕ ದಾಖಲಿಸಿದ ಹೆಯಲಿ ಮ್ಯಾಥ್ಯೂಸ್ ಅವರಿಂದಾಗಿ ವೆಸ್ಟ್ ಇಂಡೀಸ್ ತಂಡವು ಶುಕ್ರವಾರ ಆರಂಭವಾದ ಮಹಿಳೆಯರ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆತಿಥೇಯ ನ್ಯೂಜಿಲೆಂಡ್ ಎದುರು ರೋಚಕ ಜಯ ದಾಖಲಿಸಿತು.

ಇಲ್ಲಿಯ ಬೇ ಓವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಮೂರು ರನ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸುವುದರೊಂದಿಗೆ ಶುಭಾರಂಭ ಮಾಡಿತು. ಟಾಸ್ ಗೆದ್ದ ನ್ಯೂಜಿಲೆಂಡ್ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಭರ್ಜರಿ ಆರಂಭ ಪಡೆದ ವೆಸ್ಟ್ ಇಂಡೀಸ್ ನಿಧಾನಗತಿಯ ಆಟಕ್ಕೆ ಮೊರೆ ಹೋದರೂ ಒಂಬತ್ತು ವಿಕೆಟ್ ಕಳೆದುಕೊಂಡು 259 ರನ್ ಗಳಿಸಿತು. ನ್ಯೂಜಿಲೆಂಡ್ ಮಹಿಳೆಯರು ಒಂದು ಎಸೆತ ಬಾಕಿ ಇರುವಂತೆಯೇ ಎಲ್ಲ ವಿಕೆಟ್ ಕಳೆದುಕೊಂಡು 256 ರನ್ ಗಳಿಸಿದರು. ಕಿವೀಸ್ ತಂಡದ ನಾಯಕಿ ಸೋಫಿ ಡಿವೈನ್ ಅವರ ಅಂದದ ಶತಕಕ್ಕೆ ಜಯ ಒಲಿಯಲಿಲ್ಲ.

ವೆಸ್ಟ್ ಇಂಡೀಸ್‌ನ ಡಿಯಾಂಡ್ರಾ ಡಾಟಿನ್ ಟೂರ್ನಿಯ ಮೊದಲ ವಿಕೆಟ್ ರೂಪದಲ್ಲಿ ಲೀ ತಾಹುಹು ಬೌಲಿಂಗ್‌ನಲ್ಲಿ ಜೆಸ್ ಕೆರ್‌ಗೆ ಕ್ಯಾಚ್ ನೀಡಿದರು. ಮಧ್ಯಮ ಕ್ರಮಾಂಕದಿಂದ ಆರಂಭಿಕ ಬ್ಯಾಟಿಂಗ್‌ಗೆ ಬಡ್ತಿ ಪಡೆದ ಹೆಯಲಿ (119, 128ಎ, 4X16, 6X1) ಚೊಚ್ಚಲ ಶತಕ ಸಿಡಿಸಿ ಮಿನುಗಿದರು. ಎರಡು ವಿಕೆಟ್ ಕೂಡ ಕಬಳಿಸಿದ ಅವರ ಆಲ್‌ರೌಂಡ್ ಆಟಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿಯೂ ಒಲಿಯಿತು.

ವೆಸ್ಟ್ ಇಂಡೀಸ್‌ಗೆ ಚೆಡೀನ್ ನೇಷನ್ (36) ಮತ್ತು ನಾಯಕಿ ಸ್ಟೆಫಾನಿ ಟೇಲರ್ (30) ಕಾಣಿಕೆ ನೀಡಿದರು. ಕಿವೀಸ್ ತಂಡದ ತಾಹುಹು (57ಕ್ಕೆ 3) ಉತ್ತಮ ಬೌಲಿಂಗ್ ಮಾಡಿದರು.

ಪ್ರವಾಸಿ ತಂಡದ ಇನಿಂಗ್ಸ್‌ಗೆ ಉತ್ತರವಾಗಿ ಡಿವೈನ್ ಶ್ರೇಷ್ಠ ಆಟವಾಡಿದರು. ಕಳಪೆ ಫೀಲ್ಡಿಂಗ್ ಲಾಭ ಪಡೆದ ಅವರು 117 ಎಸೆತಗಳಲ್ಲಿ ತಮ್ಮ ಆರನೇ ಶತಕ ಗಳಿಸಿದರು. ಆದರೆ 45ನೇ ಓವರ್‌ನಲ್ಲಿ ಅವರು ಚಿನೆಲ್ಲೆ ಹೆನ್ರಿ ಅವರಿಗೆ ವಿಕೆಟ್ ಒಪ್ಪಿಸಿದ ಬಳಿಕ ತಂಡ ಸಂಕಷ್ಟಕ್ಕೆ ಸಿಲುಕಿತು. ರನ್ ರೇಟ್ ಕುಸಿಯುತ್ತಾ ಸಾಗಿತು. ಕೇಟಿ ಮಾರ್ಟಿನ್ (44) ಮಾತ್ರ ಪ್ರತಿರೋಧ ತೋರಿದರು.

ಕೊನೆಯ ಓವರ್‌ನಲ್ಲಿ ಡಿಯಾಂಡ್ರಾ ಎರಡು ವಿಕೆಟ್ ಗಳಿಸಿದ್ದಲ್ಲದೆ ಒಂದು ರನೌಟ್‌ಗೂ ಕಾರಣರಾದರು. ಇದರೊಂದಿಗೆ ತಂಡಕ್ಕೆ ರೋಚಕ ಜಯದ ಸಿಹಿ ಉಣಬಡಿಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 259 (ಹೆಯಲಿ ಮ್ಯಾಥ್ಯೂಸ್ 119, ಸ್ಟೆಫಾನಿ ಟೇಲರ್ 30, ಶೆಮೇನ್ ಕ್ಯಾಂಪ್‌ಬೆಲ್ 20, ಚೆಡೀನ್ ನೇಷನ್ 36; ಲೀ ತಾಹುಹು 57ಕ್ಕೆ 3, ಜೆಸ್ ಕೆರ್ 43ಕ್ಕೆ 2, ಹನ್ನಾ ರೋವ್ 51ಕ್ಕೆ 1, ಅಮೇಲಿಯಾ ಕೆರ್ 33ಕ್ಕೆ 1). ನ್ಯೂಜಿಲೆಂಡ್: 49.5 ಓವರ್‌ಗಳಲ್ಲಿ 256 (ಸೋಫಿ ಡಿವೈನ್ 108, ಆ್ಯಮಿ ಸದರ್‌ವೈಟ್ 31, ಕೇಟಿ ಮಾರ್ಟಿನ್ 44, ಜೆಸ್ ಕೆರ್ 25; ಚಿನೆಲ್ಲೆ ಹೆನ್ರಿ 53ಕ್ಕೆ 1, ಹೈಲಿ ಮ್ಯಾಥ್ಯೂಸ್ 41ಕ್ಕೆ 2, ಶಕೇರಾ ಸೆಲ್ಮನ್ 37ಕ್ಕೆ 1, ಅನೀಸಾ ಮೊಹಮ್ಮದ್ 60ಕ್ಕೆ 2, ಡಿಯಾಂಡ್ರಾ ಡಾಟಿನ್ 2ಕ್ಕೆ 2). ಫಲಿತಾಂಶ: ವೆಸ್ಟ್ ಇಂಡೀಸ್ ತಂಡಕ್ಕೆ ಮೂರು ರನ್‌ಗಳ ಜಯ.

### ಇಂದಿನ ಪಂದ್ಯಗಳು

ಬಾಂಗ್ಲಾದೇಶ-ದಕ್ಷಿಣ ಆಫ್ರಿಕಾ, ಆರಂಭ: ಬೆಳಿಗ್ಗೆ 3.30
ಆಸ್ಟ್ರೇಲಿಯಾ- ಇಂಗ್ಲೆಂಡ್, ಆರಂಭ: ಬೆಳಿಗ್ಗೆ 6.30

ಸೆಕ್ಸ್ ಸಮಸ್ಯೆ
ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ, ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ಆಯುರ್ವೇದಿಕ್ ಪರಿಹಾರಕ್ಕಾಗಿ ಸತ್ಯ ಹಾಗೂ ಉಚಿತ ಸಲಹೆ ಪಡೆದುಕೊಳ್ಳಿ.
02262676816

Maruti Herbal
ಪ್ರತಿ ದಿನ ಮಾಲಿಷ್ ಮಾಡುವುದರಿಂದ ಪುರುಷರ ತಾಕತ್ತು ಮತ್ತು ಉತ್ಸಾಹವನ್ನು ಹೆಚ್ಚಿಸುತ್ತದೆ.
ಮಸಾಜ್ ಎಂದರೇನು?
ಇದು ಒತ್ತಡವನ್ನು ಕಡಿಮೆ ಮಾಡಲು, ವಿಶ್ರಾಂತಿಯನ್ನು ಹೆಚ್ಚಿಸಲು ಮತ್ತು ತಾಂತ್ರಿಕ ಬದಲಾವಣೆಗಳನ್ನು ಉತ್ತೇಜಿಸಲು ಇತಿಹಾಸದಿಂದ ತಿಳಿಯಲಾದ ವ್ಯಾಪಕ ಬಳಕೆಯ ಪ್ರಸಿದ್ಧವಾದ ವೈಜ್ಞಾನಿಕ ಆರೋಗ್ಯ ಕಾಳಜಿಯಾಗಿದೆ.
ಸ್ಟೇ-ಆನ್ ಮಸಾಜ್ ಆಯಿಲ್ ಎಂದರೇನು?
ಇದೊಂದು ಪರಿಣಾಮಕಾರಿತ್ವದೊಂದಿಗೆ ಮಸಾಜ್ ಪದ್ಧತಿಯನ್ನು ವರ್ಧಿಸುವಲ್ಲಿ ಸಹಾಯಕವಾಗುವಂತೆ ತೈಲದಲ್ಲಿ ಮಾಡಲಾದ ಉತ್ಕೃಷ್ಟವಾದ ಕಲೆಂಜಿ, ಗೊಖರು, ಅಶ್ವಗಂಧದಂತಹ 9 ಆಯುರ್ವೇದೀಯ ಮಿಶ್ರಿತ ಔಷಧಗಳನ್ನು ಹೊಂದಿ ದೆ.
ಸ್ಟೇ-ಆನ್ ಮಸಾಜ್ ಆಯಿಲ್‌ನೊಂದಿಗೆ ಮಸಾಜ್ ಮಾಡುವುದು ಹೇಗೆ?
ಮೊದಲು ಶರೀರದ ಆ ಭಾಗವನ್ನು ಉಗುರುಬೆಚ್ಚಗಿನ ನೀರಿನಲ್ಲಿ ತೊಳೆಯಿರಿ. ನಿಮ್ಮ ಅಂಗೈಯಲ್ಲಿ 5-6 ಹನಿಗಳಷ್ಟು ಸ್ಟೇ-ಆನ್ ಆಯಿಲ್ ತೆಗೆದುಕೊಳ್ಳಿ ಮತ್ತು ಬೆರಳ ತುದಿಗಳನ್ನು ಸ್ಪರ್ಶಿಸದೆ ನಿಮ್ಮ ದೇಹದ ಅಪೇಕ್ಷಿತ ಭಾಗದ ಮೇಲೆ ನಿಧಾನವಾಗಿ ಮಸಾಜ್ ಮಾಡಿ. ಉತ್ತಮ ಫಲಿತಾಂಶವನ್ನು ಪಡೆಯುವುದಕ್ಕಾಗಿ ನಿದ್ರೆ ಮಾಡುವ ಮೊದಲು ಪ್ರತಿದಿನ ಇದನ್ನು ಉಪಯೋಗಿಸಿ. ಹಿಂದೆಂದೂ ಇರದ ಅನುಭವವನ್ನು ಪಡೆಯಿರಿ.
ಉತ್ತಮ ನೆರವೇರಿಕೆಗಾಗಿ ಜಿನ್‌ಸೆಂಗ್‌ನೊಂದಿಗೆ ಎನರ್ಜಿ ಬೂಸ್ಟರ್ ಸ್ಟೇ-ಆನ್ ಪವರ್ ಕ್ಯಾಪ್ಸೂಲ್‌ಗಳನ್ನು ತೆಗೆದುಕೊಳ್ಳಿ.
ಕೇವಲ ಪುರುಷರ ಸಲುವಾಗಿ
ಸ್ಟೇ-ಆನ್ ಪವರ್ ಎಣ್ಣೆ
ಎಲ್ಲ ಔಷಧ ಅಂಗಡಿಗಳಲ್ಲಿ ಲಭ್ಯವಾಗಿದೆ
www.shreemarutiherbal.com